ಸಂಪುಟ - 10, ಸಂಚಿಕೆ- 02
PEER - REVIEWED JOURNAL
ISSN: 2320-9941
VOLUME: 10, ISSUE: 02

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ



ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

HTTPS://PRATHISPANDHA.WORDPRESS.COM/

INTERNET ARCHIVE

ಪ್ರತಿಸ್ಪಂದ
ಕೊಡು ಕೊಳ್ಳುವಿಕೆಯ ಸಂಕರ
PRATHISPANDA
An Exchange of Creative Impulse

ಸಂಪುಟ - 10, ಸಂಚಿಕೆ- 02
PEER - REVIEWED JOURNAL
ISSN: 2320-9941
VOLUME: 10, ISSUE: 02

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

PART - 1 ಭಾಗ - 1

HTTPS://PRATHISPANDHA.WORDPRESS.COM/

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 01, PART - 1
ಸಂಪುಟ: 10, ಸಂಚಿಕೆ 02, ಏಪ್ರಿಲ್ – ಜೂನ್ 2026
VOLUME: 10, ISSUE: 02, APRIL - JUNE 2026

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :
ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
ತೋಟದ ಮನೆ ನಂ 107(25)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು 572201
e-mail: prathispanda@gmail.com
website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು – ಕೆಂಕೆರೆ
ತುಮಕೂರು ಜಿಲ್ಲೆ, ಕರ್ನಾಟಕ

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

ಡಾ. ಗೋವಿಂದರಾಯ ಎಂ.
ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

ಡಾ. ರಾಘವೇಂದ್ರ ಎಚ್. ಎಂ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಮತ್ತು ವಕೀಲರು
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

Dr. Saraswati K. B.
Associate Professor, English Department
BMS Govt. First Grade College,
Huliyar - Kenkere
Tumkur District, Karnataka

Dr. M. Rangaswamy
Assistant Professor, Kannada Department
University Of Madras, Chenni, Tamil Nadu

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

Dr. Govindaraya M.
Professor, Kannada Department
Govt. First Grade College, Madhugiri
Tumkur District, Karnataka

Dr. Raghavendra H. M.
Associate Professor, English Department
Govt. First Grade College, Tumkur

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

Siddaramaiah D. M.
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

Ramu T. D.
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

Legal Advisor
Pruthvi Soori
Author and Advocate
High Court of Karnataka, Bengaluru

ಸಂಪಾದಕೀಯ...

ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಮುಖ್ಯನೆಲೆಯ ಗಮನಕ್ಕೆ ಇವತ್ತಿಗೂ ಬಾರದ ಅನೇಕ ಸಂಸ್ಕೃತಿಗಳಿವೆ. ಗಾಣಿಗರು, ಗಾಣಗಿತ್ತಿಯರು, ತಿಗಳ ಮಹಿಳೆಯರು ಗುರಿಕಾರರು, ಮೊಗವೀರರು, ಕೊರಗರು ಸಾಗಿಸುವ ಜೀವನ ವಿಧಾನಗಳ, ಅನ್ವೇಷಣೆಗಳ ಕಡೆಗೆ ಮುಖಮಾಡಿ ಯೋಚಿಸುತ್ತಿರುವ ಯುವ ಸಂಶೋಧಕರು ಹೇಳುವುದನ್ನು ಕೇಳಿಸಿಕೊಳ್ಳುವ ಸಮಯದಲ್ಲಿ ನಾವಿದ್ದೇವೆ. ಅಂತೆಯೇ ಭಾಷಾ ವೈವಿಧ್ಯತೆಗಳ ಬಗ್ಗೆ ಜನರ ಜೈವಿಕ ಚಟುವಟಿಕೆಗಳಲ್ಲಿ ಮನೋವ್ಯವಹಾರಗಳಲ್ಲಿ ಹಾಸುಹೊಕ್ಕಾಗಿರುವ ಅವರವರ ತಾಯ್ನುಡಿಯ ಬಗ್ಗೆ ಆಸಕ್ತಿ ತಾಳುತ್ತಿರುವುದು ಕುತೂಹಲಕರ.

ಈತರದ ಮುಖ್ಯ ನೆಲೆಯು ಕಾಣದ, ಕೇಳಿದ ಕಥೆಗಳು, ಆಚರಣೆಗಳು, ನಿಗೂಢ ಒಳಹುಗಳು ಹೊಸ ರೀತಿಯಲ್ಲಿ ಸಂಸ್ಕೃತಿಗಳನ್ನು ನೋಡುವ, ಗಮನಿಸುವ ಮಾರ್ಗಕ್ಕೆ ದಾರಿದೀಪಗಳು.

ಮುಖ್ಯ ನೆಲೆಯನ್ನು ಹೊರತುಪಡಿಸಿದ ಈ ಕಿರು ಜಾಡುಗಳು ಸಂಸ್ಕೃತಿಗಳ ಹೊಳೆಗೆ ಮಡುಗಟ್ಟಿರುವ ಅಜ್ಞಾನದ ಎಳೆಗಳನ್ನು ಗುರುತಿಸಿ, ಅಲುಗಾಡಿಸಿ ಎಚ್ಚರಿಸುವ ಕಾರ್ಯ ಮಾಡುತ್ತವೆ.

ಈ ಎಲ್ಲಾ ಸೂಕ್ಷ್ಮಗಳನ್ನು ಗಮನಿಸಿ, ನಮ್ಮ ನಡೆ – ನುಡಿ, ಆಹಾರ – ವಿಹಾರ, ವಿಚಾರಗಳಲ್ಲಿ ಬದಲಾವಣೆ ಕಾಣಿಸಿಕೊಳ್ಳುವುದರ ಮೂಲಕ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು ನಮ್ಮ ಆಸಕ್ತಿಯಾಗಿರಲಿ.

– ಡಾ. ಸರಸ್ವತಿ ಕೆ. ಬಿ.

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ಪರಿವಿಡಿ INDEX

1. ಭತ್ತದ ಕೃಷಿ ಅಭಿವೃದ್ಧಿಯಲ್ಲಿ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರದ ಪಾತ್ರ – **ಡಾ. ಮಂಜುನಾಥ** **1–18**

2. ತೇಜಸ್ವಿಯವರ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆ ಮತ್ತು ಪರಿಸರ ಸಂರಕ್ಷಣೆ – **ಕೃಷ್ಣಮೂರ್ತಿ. ಈ** **19–29**

3. ಸತ್ಯ ಶುದ್ಧ ಕಾಯಕದ ಶಿವಶರಣೆ ಸತ್ಯಕ್ಕ – **ಡಾ. ಚನ್ನಮ್ಮ ಎನ್. ಅಲ್ಲಾ** **30–34**

4. ಕೂಡ್ಲಿಗಿ ತಾಲೂಕಿನ ಪಾಳೆಯಗಾರರ ಕಾಲದ ಮಳೆಕೊಯ್ಲು ವ್ಯವಸ್ಥೆ – **ಡಾ. ವಿನಯ್‌ಕುಮಾರ ಕೆ** **35–52**

5. ಬಿ.ದುರ್ಗ ದರ್ಗಾ : ಸಾಂಸ್ಕೃತಿಕ ಅನನ್ಯತೆ – **ಡಾ. ರುಜುವಾನ್ ಕೆ.** **53–60**

6. ಕುವೆಂಪುರವರ 'ಜಲಗಾರ' ನಾಟಕ ಮತ್ತು ಮಾನವತಾವಾದ – **ಪ್ರೊ. ರೇಣುಕಮ್ಮ.ಜೆ** **61–68**

7. ಮಹಿಳಾ ಸಬಲೀಕರಣದಲ್ಲಿ ಕರ್ನಾಟಕ ಶಕ್ತಿ ಯೋಜನೆಯ ಪಾತ್ರ – **ಡಾ. ಮಂಜುನಾಥ** **69–79**

8. ಎನ್ನಿಚ್ಚೆಯೊಳ್ ಮೆಚ್ಚಿದಂತೆ ಬಾಳ್ವೆನ್ – **ಮಲ್ಲೇಶಪ್ಪ ಸಿದ್ರಾಂಪೂರ** **80–91**

9. 'ಜೈನ ವೈದ್ಯಕೀಯ ಪರಂಪರೆ' – ಒಂದು ಅವಲೋಕನ – **ಡಾ. ಗುರುಸ್ವಾಮಿ ಹಿರೇಮಠ** **92–98**

10. ನಾಮ ವಿಜ್ಞಾನ ಅಧ್ಯಯನದ ಸಾಧ್ಯತೆಗಳು – **ಡಾ. ನಟರಾಜು ಜೆ ಆರ್.** **99–108**

11. ಹೆಣ್ಣು, ಪ್ರೇಮ, ಕಾಮ ಮತ್ತು ಆತ್ಮರತಿಯ ಸಂಗಮ: ಒಲವಿನ ಕೈಬುಟ್ಟಿ – **ಡಾ. ಸೈಯದ್ ಮುಯಿನ್** **109–120**

12. ಇಹದಲ್ಲೇ ಪರಶಿವನ ದಿವ್ಯ ಕಾಣ್ಕೆ – 'ಜಾತ್ರೆಯಲ್ಲಿ ಶಿವ' – **ಎಂ. ಎನ್. ಅರ್ಚನ ತೇಜಸ್ವಿ** **121 –126**

13. ಭಗವಾನ್ ವೇದವ್ಯಾಸರು – ಪೆರುನ್ದೇವನಾರ್ – ಪಂಪ – **ಡಾ. ವಾಣಿಶ್ರೀ ಬಿ. ಎಂ.** **127–134**

14. ಬೆಂಕಿ ಬೆಡಗು ಕೃತಿಯ ಅನನ್ಯತೆ (ರಂಗಕಲಾವಿದೆ, ನಟಿ ಉಮಾಶ್ರೀಯವರ ಆತ್ಮಕಥೆ) **– ಡಾ. ರಾಧಾ ಎಸ್. ಆರ್.** **135–145**

15. ಸ್ತ್ರೀ ವ್ಯಕ್ತಿ ಪ್ರಜ್ಞೆಯ ಅಭಿವ್ಯಕ್ತಿಯ ಪ್ರತಿಫಲನ : ಮಾನವಿ **– ಷಣ್ಮುಖಪ್ಪ ಕೆ. ಎಚ್** **146–151**

16. ಶಿಶುನಾಳ ಶರೀಫರ ಎಲ್ಲಮ್ಮ ಕುರಿತ ಕಾವ್ಯ ಮೀಮಾಂಸೆ **– ಡಾ. ರವಿಶಂಕರ್ ಎ.ಕೆ.** **152–164**

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಭತ್ತದ ಕೃಷಿ ಅಭಿವೃದ್ಧಿಯಲ್ಲಿ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರದ ಪಾತ್ರ

1 **ಡಾ. ಮಂಜುನಾಥ**
ರಾಜೀವ್ ಗಾಂಧಿ ಪಂಚಾಯತ್ ರಾಜ್ ಫೆಲೋ
ತಾಲೂಕು ಪಂಚಾಯತ್, ಚಿಟಗುಪ್ಪಾ
ಚಿಟಗುಪ್ಪಾ ತಾಲೂಕು, ಬೀದರ ಜಿಲ್ಲೆ – ೫೮೫ ೪೧೨.
kannadamanju1996@gmail.com

ಕರ್ನಾಟಕದಲ್ಲಿ ಬರುವ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕನ್ನು ಪರಿಚಯ ಮಾಡಿ ಕೊಡುವಾಗ (ಎಲ್ಲ ಬರೆಹಗಳಲ್ಲಿ, ವಿಚಾರಗೋಷ್ಠಿಗಳಲ್ಲಿ ಮೊದಲಾದವುಗಳಲ್ಲಿ) ‘ಭತ್ತದ ನಾಡು ಗಂಗಾವತಿ ಅಥವಾ ಭತ್ತದ ಕಣಜ ಗಂಗಾವತಿ’ ಎಂಬ ಹೇಳಿಕೆಯೊಂದಿಗೆ ಶುರುಮಾಡುತ್ತಾರೆ. ಭತ್ತದ ಕೃಷಿಗಾಗಿಯೇ ಹೆಚ್ಚು ಪ್ರಾತಿನಿಧ್ಯ ನೀಡುವ ಪ್ರದೇಶ ಮತ್ತು ಅತೀ ಹೆಚ್ಚಾಗಿ ಭತ್ತವನ್ನು ಬೆಳೆಯುತ್ತಾರೆ ಎಂಬುದನ್ನು ಈ ಹೇಳಿಕೆಯಿಂದಲೇ ತಿಳಿಯಬಹುದಾಗಿದೆ. ದಿನಾಂಕ ೦೩.೧೨.೨೦೧೫ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ “ಗಂಗಾವತಿ ತಾಲೂಕಿನಲ್ಲಿ ೩೬,೧೫೫ ಹೆಕ್ಟೇರ್‌ನಲ್ಲಿ ಭತ್ತ ಬೆಳೆಯಲಾಗುತ್ತಿದೆ. ಒಂದು ಎಕರೆಗೆ ಗರಿಷ್ಟ ೩೫ ರಿಂದ ೩೮ ಕ್ವಿಂಟಲ್ ಭತ್ತ ಬೆಳೆಯಲಾಗುತ್ತದೆ. ಅದರಂತೆ ಈ ಬಾರಿ ೨೮ ಲಕ್ಷ ಕ್ವಿಂಟಲ್ ಭತ್ತ ಇಳುವರಿ ನಿರೀಕ್ಷೆ ಇದೆ’’ (https://www.deccanherald.com). ಎಂಬ ಸುದ್ದಿಯು ಕರ್ನಾಟಕದಲ್ಲಿ ಆಶ್ಚರ್ಯವನ್ನು ಹುಟ್ಟಿಸಿತು. ಮೇಲಿನ ಆ ಹೆಗ್ಗಳಿಕೆಗೆ ಮತ್ತು ಆಶ್ಚರ್ಯಕ್ಕೆ ಕಾರಣ ಈ ಪ್ರದೇಶದಲ್ಲಿ ಸ್ಥಾಪನೆಯಾದ ‘ಕೃಷಿ ಸಂಶೋಧನಾ ಕೇಂದ್ರ’ವು ಬಹು ಮುಖ್ಯ ಪಾತ್ರ ವಹಿಸಿದೆ. “ಈ ಕೇಂದ್ರದ ಪ್ರಮುಖ ಉದ್ದೇಶವು ಉತ್ತಮ ಗುಣಮಟ್ಟದ ಭತ್ತದ ತಳಿ ಬೀಜಗಳ ಉತ್ಪಾದನೆ, ಸಂಸ್ಕರಣೆ ಹಾಗೂ ಮಾರಾಟ ಮಾಡುವದಾಗಿರುತ್ತದೆ. ಕೇಂದ್ರದಲ್ಲಿ ಬಿಪಿಟಿ–೫೨೦೪, ಗಂಗಾವತಿ ಸೋನಾ,

ಆರ್‌ಪಿಬಯೋ–೨೨೬, ಜಿಜಿವಿ–೧೦೮೯, ಜಿಜಿವಿ–೧೧೦೯, ಗಂಗಾವತಿ ಎಮರ್ಜೆನ್ಸಿ ಎಮ್‌ಟಿಯು–೧೦೧೦, ಆರ್‌ಎನ್‌ಆರ್–೧೫೦೪೮ ಭತ್ತದ ತಳಿಗಳ ಮೂಲ, ಪ್ರಮಾಣಿಕೃತ ಹಾಗೂ ನಿಜಗುಣ ಬೀಜಗಳನ್ನು ಉತ್ಪಾದಿಸಿ ರೈತರಿಗೆ ಒದಗಿಸುತ್ತಿದೆ. ಕೇಂದ್ರವು ೨೦೧೭–೧೮ರಲ್ಲಿ ೧೦೦೦ ಕ್ವಿಂಟಲ್, ೨೦೧೮–೧೯ರಲ್ಲಿ ೧,೦೮೦ ಕ್ವಿಂಟಲ್ ಬೀಜೋತ್ಪಾದನೆ ಮಾಡಿ ರೈತರಿಗೆ ನೇರವಾಗಿ ಹಾಗೂ ಕೆ.ಎಸ್.ಎಸ್.ಸಿ., ಮೂಲಕ ಒದಗಿಸಲಾಗಿದೆ. ಸದರಿ ೨೦೧೯–೨೦ರಲ್ಲಿ ೧,೦೦೦ ಕ್ವಿಂಟಲ್ ಬೀಜೋತ್ಪಾದನೆ ಮಾಡಲಾಗುತ್ತಿದ್ದು ನೇರವಾಗಿ ರೈತರಿಗೆ ಕೊಡಲಾಗುತ್ತಿದೆ. ಕೇಂದ್ರದಲ್ಲಿ ಎರೆಹುಳು ಗೊಬ್ಬರ ಘಟಕವಿದ್ದು, ಗೊಬ್ಬರ ಹಾಗೂ ಹುಳುಗಳನ್ನು ರೈತರಿಗೆ ಒದಗಿಸಲಾಗುತ್ತಿದೆ”(https://uasraichur.edu.in). ಇಂತಹ ಅನೇಕ ಕೈಂಕಾರ್ಯಗಳನ್ನು ಮಾಡುತ್ತಾ ರೈತರ ಜೀವನ ಗುಣಮಟ್ಟವನ್ನು ಉತ್ತಮ ಪಡಿಸುತ್ತಿರುವ ಈ ಕೇಂದ್ರದ ಒಟ್ಟು ಸಾಧನೆಯಲ್ಲಿ ಅಭಿವೃದ್ಧಿಪಡಿಸಿದ ಭತ್ತದ ತಳಿಗಳನ್ನು ಕುರಿತು ತಿಳಿಸುವ ಉದ್ದೇಶವನ್ನು ಈ ಲೇಖನವು ಹೊಂದಿದೆ. ಅದಕ್ಕಾಗಿ ಇದುವರೆಗಿನ ಸಾಹಿತ್ಯ ಸಮೀಕ್ಷೆ, ಉದ್ದೇಶಗಳು, ವ್ಯಾಪ್ತಿ, ವೈಧಾನಿಕತೆ, ಫಲಿತಗಳು, ಪರಾಮರ್ಶನ ಸಾಹಿತ್ಯ ಮೊದಲಾದ ಅಂಶಗಳ ಮೂಲಕ ಲೇಖನದ ಒಟ್ಟು ಸಾರವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಪ್ರಾತಿನಿಧಿಕ ಪದಗಳು: **ಭತ್ತದ ಕೃಷಿ, ಕೃಷಿ ಸಂಶೋಧನಾ ಕೇಂದ್ರ ಗಂಗಾವತಿ, ರೈತರು, ಗಂಗಾವತಿ ಸೋನಾ (ಜಿ.ಜಿ.ವಿ–೦೫–೦೧), ಗಂಗಾವತಿ ಎಮರ್ಜೆನ್ಸಿ (ಐ.ಇ.ಟಿ–೧೯೨೫೧).**

ಇದುವರೆಗಿನ ಸಾಹಿತ್ಯ ಸಮೀಕ್ಷೆ

ಪ್ರಸ್ತುತ ಓದಿನ ಗ್ರಹಿಕೆಯ ಪ್ರಕಾರ ‘ಭತ್ತದ ಕೃಷಿ ಅಭಿವೃದ್ಧಿಯಲ್ಲಿ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರದ ಪಾತ್ರ’ ಎಂಬ ತಲೆಬರೆಹದಡಿಯಲ್ಲಿ ಇದುವರೆಗೂ ಯಾರು ಸಂಶೋಧನಾ ಬರವಣಿಗೆಯನ್ನು ಮಾಡಿರುವುದಿಲ್ಲ. ಕೃಷಿ ಸಂಶೋಧನಾ ಕೇಂದ್ರಯ ಹೊಸ ಆವಿಷ್ಕಾರಗಳ ಕುರಿತು ವಿಜಯ ಕರ್ನಾಟಕ, ವಿಜಯವಾಣಿ, ಪ್ರಜಾಪರ್ವ ವಾರ್ತೆ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇದಕ್ಕೆ ಹತ್ತಿರವೆನ್ನುವ ಒಂದು ಕವನ, ಮೂರು ಲೇಖನಗಳು ದೊರೆಯುತ್ತವೆ. ಅವು,

೧. ಮೊಹ್ಮದ್ ಇಬ್ರಾಹಿಂ ಅವರು ‘ಕೃಷಿ ಪ್ರದೀಪಿಕೆ ರೈತರ ಜ್ಞಾನ ಪತ್ರಿಕೆ’ಯ ಸಂಪುಟ ೨ ಸಂಚಿಕೆ ೪ರಲ್ಲಿ ‘ಗಂಗಾವತಿಯ ಸೋನಾ ರೈತರಿಗೊಂದು ಆಶಾಕಿರಣ’ ಎಂಬ ಕವನವನ್ನು ಬರೆದಿರುತ್ತಾರೆ. ಅದರಲ್ಲಿ ಈ ತಳಿ ವಿಶೇಷತೆಯನ್ನು ತಿಳಿಸುತ್ತಾ ಅದನ್ನು ಬೆಳೆಯುವ ಕ್ರಮದ ಕುರಿತು, ಬೇಸಾಯದಲ್ಲಿ ಬಳಸಬಹುದಾದ ಗೊಬ್ಬರಗಳ ಕುರಿತು, ಅದರ

ಅನುಕೂಲಗಳನ್ನು ಅಂತ್ಯ ಪ್ರಾಸವನ್ನು ಬಳಸಿಕೊಂಡು ಒಟ್ಟು ೨೩ ಸಾಲುಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

೨. ಮಹಾಂತ ಶಿವಯೋಗಯ್ಯ ಕೆ ಮತ್ತು ಬಸವರಾಜ ಶ ಲಕ್ಕುಂಡಿ ಇವರು 'ಕೃಷಿ ಪ್ರದೀಪಿಕೆ ರೈತರ ಜ್ಞಾನ ಪತ್ರಿಕೆ'ಯ ಸಂಪುಟ ೪ ಸಂಚಿಕೆ ೧ರಲ್ಲಿ 'ಸೋನಾಮಸೂರಿ ಭತ್ತದ ತಳಿಯ ಅಕ್ಕಿಯ ಗುಣಮಟ್ಟವನ್ನು ತಿಳಿಯುವುದು: ಏಕೆ? ಹೇಗೆ' ಎಂಬ ಲೇಖನದಲ್ಲಿ ಈ ತಳಿಯ ಭೌತಿಕ ಗುಣಧರ್ಮಗಳು, ರಾಸಾಯನಿಕ ಗುಣಧರ್ಮಗಳು ಮತ್ತು ಕಾಳಿನ ಗುಣಲಕ್ಷಣಗಳನ್ನು ತಿಳಿಸಿರುತ್ತಾರೆ.

೩. ಸಂತೋಷ, ವಿಶ್ವನಾಥ ಜೆ, ಆನಂದ ಎಸ್.ಆರ್, ವೀರೇಶ ಹೆಚ್ ಮತ್ತು ಬಾಲನಗೌಡರ್ ಎಸ್.ಆರ್ ಇವರು International Journal of Pure & Applied Bioscience, ೨೦೧೯, ೭(೩)ರಲ್ಲಿ 'Evaluation of Paddy (Oryza sativa L.) Varieties for Salt Tolerance in Saline Vertisols of Tungabhadra Project Command Area' ಎಂಬ ಲೇಖನದಲ್ಲಿ ಗಂಗಾವತಿಯ ಸಂಶೋಧನಾ ಕೇಂದ್ರವು ಆವಿಷ್ಕಾರ ಮಾಡಿದ ಜಿಜಿವಿ–೦೫–೦೧ ಭತ್ತದ ತಳಿಯ ಕುರಿತು ತಿಳಿಸಿರುತ್ತಾರೆ.

೦೪. ಯೋಗೇಶ ಜಿ.ಎಸ್, ಸುನೀಲ್ ಸಿ.ಎಂ, ಮೋಹನ್‌ಕುಮಾರ್ ಎ.ಬಿ, ಚಂದ್ರಕಲಾ ಹಣಗಿ, ರಜತ್ ಎಚ್.ಪಿ ಮತ್ತು ಅಭಿಷೇಕ್ ಪಿ.ಎಸ್ ಅವರು International Journal of Pure & Applied Bioscience, ೨೦೨೦, ೯(೧೧)ರಲ್ಲಿ 'Performance of Paddy Variety Gangavathi Sona under Kabini Command Area of Chamarajanagara District, Karnataka, India.' ಎಂಬ ಲೇಖನದಲ್ಲಿ 'ಚಾಮರಾಜನಗರ ಜಿಲ್ಲೆಯಲ್ಲಿ, ಯಳಂದೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲೂಕುಗಳನ್ನು ಒಳಗೊಂಡಿರುವ ಭೂಮಿಯಲ್ಲಿ ಗಂಗಾವತಿಯ ಸಂಶೋಧನಾ ಕೇಂದ್ರವು ಆವಿಷ್ಕಾರ ಮಾಡಿದ ಜಿಜಿವಿ–೦೫–೦೧ ಭತ್ತದ ತಳಿಯ ಬೆಳವಣಿಗೆಯಿಂದಾಗಿ ಆದ ಬದಲಾವಣೆ ಕುರಿತು ತಿಳಿಸಿರುತ್ತಾರೆ.

ಉದ್ದೇಶಗಳು

n ಭತ್ತದ ಕೃಷಿ ಅಭಿವೃದ್ಧಿಯಲ್ಲಿ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರದ ಮಹತ್ವದ ಕೊಡುಗೆಯನ್ನು ಶೋಧಿಸುವುದು ಮತ್ತು ಆವಿಷ್ಕರಿಸಿದ ಭತ್ತದ ತಳಿಗಳ ವಿಶೇಷತೆಯನ್ನು ತಿಳಿದುಕೊಳ್ಳುವುದು.

nಕೃಷಿ ಸಂಶೋಧನ ಕೇಂದ್ರದ ಸಂಶೋಧನಾ ಫಲವನ್ನು ರೈತರು ಹೇಗೆ ಸ್ವೀಕರಿಸುತ್ತಾರೆ ಮತ್ತು ಕೇಂದ್ರದ ಕುರಿತು ಅವರಿಗೆ ಇರುವ ತಿಳುವಳಿಕೆಯನ್ನು ಶೋಧಿಸುವುದು.

ವೈಧಾನಿಕತೆ

ಪ್ರಸಕ್ತ ಲೇಖನದ ತಾತ್ವಿಕತೆಯನ್ನು ಕಟ್ಟಿಕೊಡಲು ಅನುವಾಗುವಂತಹ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು 'ಸಂದರ್ಶನ ವಿಧಾನ, ಏಕವಿಷಯಕ ಅಧ್ಯಯನ ವಿಧಾನವನ್ನು' ಬಳಸಿಕೊಳ್ಳಲಾಗಿದೆ. ಆನುಷಂಗೀಕ ಮಾಹಿತಿಯನ್ನು ಪಡೆಯಲು ಸಾಹಿತ್ಯಿಕ ಆಕರಗಳಾದ ದಿನಪತ್ರಿಕೆಗಳು, ಮ್ಯಾಜಿನ್‌ಗಳು, ಪುಸ್ತಕಗಳನ್ನು ಪರಾಮರ್ಶಿಸಿ ವಿವರಣಾತ್ಮಕ ವಿಧಾನದ ಮೂಲಕ ಈ ಲೇಖನವನ್ನು ಸಿದ್ಧಪಡಿಸಲಾಗಿದೆ. ಈ ಲೇಖನದ ಮಾದರಿ ವಿಧಾನವು ಉದ್ದೇಶಿತ ಮಾದರಿಯನ್ನು ಒಳಗೊಂಡಿದ್ದು, ಉದ್ದೇಶಿತ ಮಾದರಿಯಲ್ಲಿ ಎರಡು ಗ್ರಾಮಗಳನ್ನು ತೆಗೆದುಕೊಳ್ಳಲಾಗಿದೆ. ಅದರಲ್ಲಿ ಆರಾಳ ಗ್ರಾಮವು ಗಂಗಾವತಿಯಿಂದ ೮ ಕಿ.ಮೀ ದೂರದಲ್ಲಿದ್ದರೆ ಮಲಕನಮರಡಿ ಗ್ರಾಮವು ೧೭ ಕಿ.ಮೀ ದೂರದಲ್ಲಿದೆ. ಕೃಷಿ ಸಂಶೋಧನ ಕೇಂದ್ರದ ಮಾಹಿತಿಯನ್ನು ಹತ್ತಿರವಿರುವ ರೈತರು ಮತ್ತು ದೂರವಿರುವ ಗ್ರಾಮದ ರೈತರು ಯಾವ ರೀತಿಯಲ್ಲಿ ಪಡೆದುಕೊಂಡಿರುತ್ತಾರೆ ಎಂಬುದನ್ನು ಗ್ರಹಿಸಲು ಈ ವಿಧಾನವನ್ನು ಬಳಸಲಾಗಿದೆ.

ಸಂಶೋಧನೆಯ ವ್ಯಾಪ್ತಿ

ಪ್ರಸ್ತುತ ಲೇಖನದ ರಚನೆಗಾಗಿ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರವನ್ನು ಮತ್ತು ಗಂಗಾವತಿಯ ಸುತ್ತಲಿನ ಹಳ್ಳಿಗಳಾದ ಆರಾಳ ಮತ್ತು ಮಲಕನಮರಡಿ ಗ್ರಾಮದ ಕೆಲವು ರೈತರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಭತ್ತ ಕೃಷಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೇಂದ್ರದ ಎಲ್ಲಾ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಕ್ಕೆ ತೆಗೆದುಕೊಳ್ಳದೆ ಕೇವಲ ಭತ್ತದ ಬಿಜೋತ್ಪಾದಕ ತಳಿಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಲೇಖನ ರಚಿಸಿದ ಕಾರಣಕ್ಕಾಗಿ ಇವುಗಳೇ ಈ ಸಂಶೋಧನಾ ವ್ಯಾಪ್ತಿಯನ್ನು ಸೂಚಿಸುತ್ತವೆ. ಈ ವ್ಯಾಪ್ತಿಗೆ ಅನುಗುಣವಾಗುವಂತೆ ಗಂಗಾವತಿಯ ಸಂಶೋಧನಾ ಕೇಂದ್ರವು ಆವಿಷ್ಕರಿಸಿದ ವಿವಿಧ ಭತ್ತದ ತಳಿಗಳಲ್ಲಿ ಒಟ್ಟು ೫ ತಳಿಗಳ ಕುರಿತ ಕೆಲವು ಮಾಹಿತಿಯನ್ನು ಈ ಮುಂದಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಭತ್ತದ ತಳಿ – ೧ : ಜಿಜಿವಿ –೦೫–೦೧ (ಗಂಗಾವತಿ ಸೋನ)

ಸವಳು ಭೂಮಿಗೆ ಸೂಕ್ತವಾದ ಮತ್ತು ವರ್ಷದ ಮೂರು ಹಂಗಾಮುಗಳಲ್ಲಿಯೂ ಬೆಳೆಯುವುದಕ್ಕೆ ಸೂಕ್ತವಾದ, ಅನೇಕ ರೋಗಗಳನ್ನು ತಡೆದುಕೊಳ್ಳುವ ನಿರೋಧಕ ಶಕ್ತಿಯನ್ನು ಹೊಂದಿರುವ ಗಂಗಾವತಿ ಸೋನಾ (ಜಿಜಿವಿ–೦೫–೦೧) ತಳಿಯ ಇಳುವರಿ ಸಾಮರ್ಥ್ಯವು

೬.೮ ಟನ್/ಹೆ. ಇದ್ದು, ೧೩೦–೧೩೫ ದಿನಗಳಲ್ಲಿ ಕಟಾವಿಗೆ ಬರುವ ವಿಶಿಷ್ಟ ರೈತಸ್ನೇಹಿ ಭತ್ತದ ತಳಿಯಾಗಿದೆ.

ಈ ತಳಿಯ ಉಗಮಕ್ಕೆ ಇರುವ ಕಾರಣ : ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ನೀರಾವರಿ ಇರುವ ಸುಮಾರು ೩ ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ. ಪ್ರತಿ ಹೆಕ್ಟೇರ್‌ಗೆ ಸುಮಾರು ೬ ಟನ್‌ಗಿಂತ ಹೆಚ್ಚಾಗಿದ್ದರೂ ಹಲವಾರು ಕಾರಣಗಳಿಂದ ಉತ್ಪಾದನೆ ಖರ್ಚು ಮಾತ್ರ ದುಬಾರಿಯಾಗುತ್ತಿದೆ. ಈ ಪ್ರದೇಶದಲ್ಲಿ ಈಗಾಗಲೆ, ಮುಂಗಾರು ಹಂಗಾಮಿನಲ್ಲಿ ಸೋನಾಮಸೂರಿ (ಬಿ.ಪಿ.ಟಿ–೫೨೦೪) ಹಾಗೂ ಬೇಸಿಗೆಯಲ್ಲಿ ಜೆ.ಜಿ.ಎಲ್–೧೭೯೬ ತಳಿಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಈ ತಳಿಗಳು ಒಂದೇ ಹಂಗಾಮಿಗೆ ಸೀಮಿತವಾಗಿದ್ದು, ಅನೇಕ ರೋಗ ಮತ್ತು ಕೀಟ ಬಾಧೆಗೆ ಬೇಗ ತುತ್ತಾಗುತ್ತಿದ್ದವು. ಇಂತಹ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರವು ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆಯಲ್ಲಿ ಸುಮಾರು ಐದು ವರ್ಷಗಳಲ್ಲಿ ಸಂಶೋಧನೆ ಮಾಡಿ ಎರಡು ಹಂಗಾಮಿಗೆ ಸೂಕ್ತವಾದ ಹೊಸ ತಳಿಯೊಂದನ್ನು ಅಭಿವೃದ್ಧಿಪಡಿಸಿತು. ಅದನ್ನು 'ಗಂಗಾವತಿ ಸೋನಾ' (ಜಿಜಿವಿ–೦೫–೦೧) ಎಂಬ ಹೆಸರಿನಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಿಂದ ೨೦೧೦ರಲ್ಲಿ ಬಿಡುಗಡೆ ಮಾಡಲಾಯಿತು. ಈ ತಳಿಯ ವಿಶೇಷ ಗುಣಗಳನ್ನು ಜೆ.ಪಿ.ಎಲ್–೧೭೯೮ ತಳಿ ಮತ್ತು ಸೋನಾಮಸೂರಿ (ಬಿ.ಪಿ.ಟಿ. ೫೨೦೪) ಜೊತೆಗೆ ತೌಲನಿಕವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಈ ತಳಿಯ ವಿಶೇಷತೆಗಳು

ವಿವರಗಳು	**ಗಂಗಾವತಿ ಸೋನಾ (ಜಿ.ಜಿ.ವಿ–೦೫–೦೧)**	**ಜೆ.ಪಿ.ಎಲ್–೧೭೯೮**	**ಸೋನಾಮಸೂರಿ (ಬಿ.ಪಿ.ಟಿ. ೫೨೦೪)**
ಸಸಿ ಅವಧಿ	೨೪–೨೮ ದಿನ	೨೮–೩೦ ದಿನ	೩೦–೩೫ ದಿನ
ನಾಟಿ ಸಮಯ	ಸುಗ್ಗಿ: ಜುಲೈ–ಆಗಸ್ಟ ತಿಂಗಳ ನಾಟಿಗೆ ಸೂಕ್ತ ಬೇಸಿಗೆ: ನವೆಂಬರ್‌ದಿಂದ – ಜನವರಿಯವರೆಗೆ	ಡಿಸೆಂಬರ್ ತಿಂಗಳ ನಾಟಿಗೆ ಸೂಕ್ತ	ಜುಲೈ ತಿಂಗಳ ನಾಟಿಗೆ ಸೂಕ್ತ
ಸಸಿಮಡಿಯಲ್ಲಿ ಬೆಳವಣಿಗೆ	ಸಸಿ ಬೇಗ ಬೆಳೆಯುತ್ತದೆ	ಸಸಿ ನಿಧಾನವಾಗಿ ಬೆಳೆಯುತ್ತದೆ.	ಸಸಿ ತುಂಬಾ ನಿಧಾನವಾಗಿ ಬೆಳೆಯುತ್ತದೆ.
ಹಂಗಾಮು	ಮುಂಗಾರು ಮತ್ತು ಬೇಸಿಗೆ ಎರಡಕ್ಕೂ ಸೂಕ್ತ	ಬೇಸಿಗೆಯಲ್ಲಿ ಮಾತ್ರ ಸೂಕ್ತ	ಮುಂಗಾರಿಗೆ ಮಾತ್ರ ಸೂಕ್ತ

ಗೊಬ್ಬರ	ಜೆ.ಜೆ.ಎಲ್–೧೭೯೮ ಮತ್ತು ಸೋನಾಮಸೂರಿಗಿಂತ ಶೇ. ೧೮ರಷ್ಟು ಕಡಿಮೆ ಆದರೆ ಶೇ.೧೨ರಷ್ಟು ಹೆಚ್ಚಿನ ಕಾಳಿನ ಇಳುವರಿ ಕೊಡುತ್ತದೆ	ಗಂಗಾವತಿ ಸೋನಾಗಿಂತ ೨ ಚೀಲ ಗೊಬ್ಬರ ಜಾಸ್ತಿ ತೆಗೆದುಕೊಳ್ಳುತ್ತದೆ.	ಗಂಗಾವತಿ ಸೋನಾಗಿಂತ ೨ ಚೀಲ ಗೊಬ್ಬರ ಜಾಸ್ತಿ ತೆಗೆದುಕೊಳ್ಳುತ್ತದೆ.
ನೀರು	ಹೆಚ್ಚಾದರೂ–ಕಡಿಮೆಯಾದರೂ ತಡೆದುಕೊಳ್ಳುವ ಶಕ್ತಿ ಇದೆ.	ಹೆಚ್ಚಾದರೂ–ಕಡಿಮೆಯಾದರೂ ತಡೆದುಕೊಳ್ಳುವ ಶಕ್ತಿ ಇರುವುದಿಲ್ಲ.	ಹೆಚ್ಚಾದರೂ–ಕಡಿಮೆಯಾದರೂ ತಡೆದುಕೊಳ್ಳುವ ಶಕ್ತಿ ಇರುವುದಿಲ್ಲ.
ರೋಗಬಾಧೆ	ಬೆಂಕಿ, ದುಂಡಾಣು ಅಂಗಮಾರಿ ಮತ್ತು ಎಲೆ ಕವಚಮುಚ್ಚೆ ರೋಗಕ್ಕೆ ಸಹನಾಶಕ್ತಿ ಹೊಂದಿದೆ.	ಬೆಂಕಿ, ದುಂಡಾಣು ಅಂಗಮಾರಿ ಮತ್ತು ಎಲೆ ಕವಚಮುಚ್ಚಿ ರೋಗಕ್ಕೆ ಬೇಗ ತುತ್ತಾಗುತ್ತದೆ.	ಬೆಂಕಿ ದುಂಡಾಣು ಅಂಗಮಾರಿ ಮತ್ತು ಎಲೆ ಕವಚಮುಚ್ಚೆ ರೋಗಕ್ಕೆ ಬೇಗ ತುತ್ತಾಗುತ್ತದೆ.
ಕೀಟಬಾಧೆ	ಕಂದು ಜಿಗಿ ಹುಳದ ಬಾಧೆ ತಡೆದುಕೊಳ್ಳುತ್ತದೆ.	ಕಂದು ಜಿಗಿ ಹುಳದ ಬಾಧೆ ತಡೆದುಕೊಳ್ಳುವುದಿಲ್ಲ	ಕಂದು ಜಿಗಿ ಹುಳದ ಬಾಧೆ ತಡೆದುಕೊಳ್ಳುವುದಿಲ್ಲ.
ಸವಳು ಮತ್ತು ಉಸುಳು ಜಮಿನಿಗೆ	ಸುಮಾರು ೩–೮ ಡಿ.ಎಸ್/ಮೀ ವರೆಗೆ ತಡೆದುಕೊಳ್ಳುವ ಶಕ್ತಿ ಹೊಂದಿರುತ್ತದೆ.	ಸವಳು ಜಮೀನಿನಲ್ಲಿ ಬೆಳೆಯಲು ಸೂಕ್ತವಲ್ಲ.	ಸವಳು ಜಮೀನಿನಲ್ಲಿ ಬೆಳೆಯಲು ಸೂಕ್ತವಲ್ಲ.
ಕಡಿಮೆ ಉಷ್ಣಾಂಶಕ್ಕೆ (ಹೆಚ್ಚಿನ ಚಳಿಗೆ)	ನೀರೋಧಕ ಶಕ್ತಿ ಹೊಂದಿದೆ.	ತಡೆದುಕೊಳ್ಳುವುದಿಲ್ಲ.	ತಡೆದುಕೊಳ್ಳುವುದಿಲ್ಲ.
ಅವಧಿ	೧೪೦–೧೪೫ ದಿನಗಳು	೧೪೦–೧೪೫ ದಿನಗಳು	೧೫೦–೧೫೫ ದಿನಗಳು
ಸರಾಸರಿ ಇಳುವರಿ (ಪ್ರತಿ ಎಕರೆಗೆ)	ಮುಂಗಾರು: ೨೬–೨೮ ಕ್ವಿಂ ಬೇಸಿಗೆ: ೨೮–೩೦ ಕ್ವಿಂ	ಬೇಸಿಗೆ: ೨೬–೨೮ ಕ್ವಿಂ	ಮುಂಗಾರು: ೨೪–೨೬
ಗಾಳಿ, ಮಳೆಗೆ	ನೆಲಕ್ಕೆ ಬೀಳುವುದು ಕಡಿಮೆ	ನೆಲಕ್ಕೆ ಬೀಳುತ್ತದೆ.	ನೆಲಕ್ಕೆ ಬೀಳುವುದು ಕಡಿಮೆ
ಬೀಜದ ಸುಪ್ತಾವಸ್ಥೆ	೧೫–೨೦ ದಿನ	೫–೭ ದಿನ	೫–೭ ದಿನ

ಕಾಳಿನ ಗುಣಮಟ್ಟಗಳು

ಗುಣಲಕ್ಷಣಗಳು	ಗಂಗಾವತಿ ಸೋನಾ (ಜಿ.ಜಿ.ಎ–೦೫–೦೧)	ಜೆ.ಪಿ.ಎಲ್–೧೭೯೮	ಸೋನಾಮಸೂರಿ (ಬಿ.ಪಿ.ಟಿ. ೫೨೦೪)
ಭೌತಿಕ ಗುಣಗಳು			
ಕಾಳಿನ ಗಾತ್ರ	ಮಧ್ಯಮ ಸಣ್ಣ	ಮಧ್ಯಮ ಸಣ್ಣ	ಮಧ್ಯಮ ಸಣ್ಣ
೧೦೦೦ ಕಾಳಿನ ತೂಕ ಗ್ರಾಂ	೧೫.೦	೧೬.೦	೧೫.೦
ಗಿರಣಿ ಕ್ಷಮತೆ ಪ್ರತಿಶತ	೭೧.೩	೫೯.೪	೬೯.೩
ಇಡಿ ಕಾಳು ಅಕ್ಕಿ ಪಡೆಯುವಿಕೆ (ಪ್ರತಿಶತ)	೫೬	೫೪	೪೬
ಕಾಳಿನ ಬಣ್ಣ	ಹಗುರ ಕಂದು	ಮಧ್ಯಮ ಕಂದು	ಹಗುರ ಕಂದು
ಉಡುಗೆ ಗುಣಸೂಚಕಗಳು			
ಉದ್ದ–ಅಗಲ ಅನುಪಾತ	೩.೩	೩.೬	೩.೪
ಉಬ್ಬುವಿಕೆ	೩.೫	೩.೬	೩.೪
ಅನ್ನದ ಬಣ್ಣ	ಕೆನೆ ಬಿಳಿ	ಕೆನೆ ಬಿಳಿ	ಶುಭ್ರ ಬಿಳಿ
ಜೈವಿಕ ರಾಸಾಯನಿಕ ಗುಣಸೂಚಕಗಳು			
ಸಾರಜನಕ (ಪ್ರತಿಶತ)	೦.೬೩೮	೦.೯೪೬	೦.೮೧೮
ಪಿಷ್ಟದ ಅಂಶ (ಪ್ರತಿಶತ)	೭೨	೭೬	೮೬

(ಆಧಾರ: ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆ, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ)

ಭತ್ತದ ತಳಿ – ೨ : ಗಂಗಾವತಿ ಎಮರ್ಜೆನ್ಸಿ (ಐ.ಇ.ಟಿ–೧೯೨೫೧)

ಅತಿ ಕಡಿಮೆ ಅವಧಿಯಲ್ಲಿ ಬೇಸಿಗೆ ಹಂಗಾಮಿನಲ್ಲಿ ಬೆಳೆಯುವುದಕ್ಕೆ ಸೂಕ್ತವಾದ, ಅನೇಕ ರೋಗಗಳನ್ನು ತಡೆದುಕೊಳ್ಳುವ ನಿರೋಧಕ ಶಕ್ತಿಯನ್ನು ಹೊಂದಿರುವ ಗಂಗಾವತಿ

ಎಮರ್ಜೆನ್ಸಿ (ಐ.ಇ.ಟಿ–೧೯೨೫೧) ತಳಿಯು ಸರಾಸರಿ ಪ್ರತಿ ಹೆಕ್ಟೇರಿಗೆ ೬.೦ ಟನ್ ಇಳುವರಿ ಕೊಡುವ ಸಾಮರ್ಥ್ಯ ಹೊಂದಿದೆ. ೧೧೫–೧೨೦ ದಿನಗಳಲ್ಲಿ ಮಾಗುವ ಈ ತಳಿಯು ಇಡ್ಲಿ ಮತ್ತು ದೋಸೆ ತಯಾರಿಕೆಗೆ ಸೂಕ್ತವಾಗಿದ್ದು, ವಿಶೇಷವಾಗಿ ಮಂಡಕ್ಕಿ ಮತ್ತು ಅವಲಕ್ಕಿಯನ್ನು ತಯಾರಿಸಲು ಬಳಕೆಯಾಗುತ್ತದೆ. ಇಂತಹ ವಿಶೇಷತೆ ಇರುವ ಗಂಗಾವತಿ ಎಮರ್ಜೆನ್ಸಿ (ಐ.ಇ.ಟಿ–೧೯೨೫೧) ತಳಿಯ ಹುಟ್ಟಿನ ಬಗೆಗಿನ ಕೆಲವು ಮಾಹಿತಿಯನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

ತುಂಗಭದ್ರ ಅಚ್ಚುಕಟ್ಟು ಪ್ರದೇಶದ ೩.೫ ಲಕ್ಷ ಹೇಕ್ಟರ್ ಪ್ರದೇಶದಲ್ಲಿ ಭತ್ತವನ್ನು ಹೇರಳವಾಗಿ ಬೆಳೆಯಲಾಗುತ್ತಿತ್ತು. ಮುಂಗಾರು ಹಂಗಾಮಿನಲ್ಲಿ ತುಂಗಭದ್ರಾ ಜಲಾಶಯದ ನೀರು ಹೆಚ್ಚು ಸಿಗುತ್ತಿರುವದರಿಂದ, ದೀರ್ಘಾವಧಿ ಭತ್ತದ ತಳಿಯಾದ ಬಿಪಿಟಿ–೫೨೦೪ ತಳಿಯನ್ನು ಶೇಕಡಾ ೯೫ರಷ್ಟು ವಿಸ್ತೀರ್ಣ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಇಲ್ಲಿಯೇ ಬೇಸಿಗೆಯ ಹಂಗಾಮಿನಲ್ಲಿ ಕಾಲುವೆಯಲ್ಲಿ ನೀರು ಸಿಗುವ ಅವಧಿ ಕಡಿಮೆ ಇರುವುದರಿಂದ (೧೨೦–೧೨೫ ದಿನಗಳು), ಅಲ್ಪಾವಧಿ ತಳಗಳಾದ ಕಾವೇರಿ ಸೋನಾ ಮತ್ತು ಇತರೆ ತಳಿಗಳನ್ನು ಈ ಪ್ರದೇಶದಲ್ಲಿ ಬೆಳೆಯುತ್ತಾರೆ. ಈ ತಳಿಗಳು ಹೆಚ್ಚಿಗೆ ಎತ್ತರವಾಗಿ ಬೆಳೆಯುವುದರಿಂದ ಮಳೆ ಮತ್ತು ಗಾಳಿಗೆ ನೆಲಕ್ಕೆ ಬೀಳುತ್ತಿರುವುದರಿಂದ ರೈತರು ತುಂಬಾ ನಷ್ಟ ಅನುಭವಿಸುತ್ತಿದ್ದರು. ಈ ಸಮಸ್ಯೆಯನ್ನು ತಿಳಿದ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರವು ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆಯಡಿಯಲ್ಲಿ ಸತತವಾಗಿ ಸುಮಾರು ಏಳು–ಎಂಟು ವರ್ಷಗಳ ಪರಿಶ್ರಮದಿಂದ ಗಂಗಾವತಿ ಎಮರ್ಜೆನ್ಸಿ (ಐ.ಇ.ಟಿ–೧೯೨೫೧) ತಳಿಯನ್ನು ಆವಿಷ್ಕರಿಸಿದರು. ಹೀಗೆ ಪರಿಹಾರಾತ್ಮಕವಾಗಿ ಹುಟ್ಟಿಕೊಂಡ ತಳಿಯ ವಿಶೇಷ ಗುಣಗಳನ್ನು 'ಇ.ಎಸ್–೧೮' ಭತ್ತದ ತಳಿಯ ಜೊತೆಗೆ ತೌಲನಿಕವಾಗಿ ಈ ಕೆಳಗಿಂತೆ ವಿವರಿಸಲಾಗಿದೆ,

ಗಂಗಾವತಿ ಎಮರ್ಜೆನ್ಸಿ (ಐ.ಇ.ಟಿ–೧೯೨೫೧) ತಳಿಯ ವಿಶೇಷತೆಗಳು

೧. ಅತಿ ಅಲ್ಪಾವಧಿ ತಳಿಯಾಗಿದ್ದು, ೧೧೦–೧೧೫ ದಿನಗಳಲ್ಲಿ ಮಾಗುತ್ತದೆ.

೨. ಬೇಸಿಗೆ ಹಂಗಾಮಿಗೆ ಸೂಕ್ತವಾದ ತಳಿಯಾಗಿದ್ದು, ಹೆಚ್ಚಿನ ಕಾಳಿನ ಇಳುವರಿ ಕೊಡುವಂತಹ ಸಾಮರ್ಥ್ಯ ಹೊಂದಿದೆ.

೩. ಮಧ್ಯಮ ಸಣ್ಣ ಕಾಳಿನ ಗಾತ್ರ ಹೊಂದಿದ್ದು, ಇಡ್ಲಿ ತಯಾರಿಕೆಗೆ ಸೂಕ್ತವಾಗಿದೆ.

೪. ಸ್ಥಳೀಯ ತಳಿಯಾದ ಇ.ಎಸ್.–೧೮ಕ್ಕಿಂತ (೪೭೪೪ ಕೆಜಿ/ಹೆ.) ಶೇಕಡಾ ೨೭ರಷ್ಟು ಹೆಚ್ಚಿನ ಇಳುವರಿ (೬೦೩೪ ಕೆಜಿ/ಹೆ.) ಕೊಡುವ ಸಾಮರ್ಥ್ಯ ಹೊಂದಿದೆ.

೫. ಮುಂಗಾರು ಹಂಗಾಮಿನಲ್ಲೂ ಕೂಡ ಬೆಳೆಯಬಹುದಾದ ತಳಿಯಾಗಿದ್ದು, ಸ್ಥಳೀಯ ತಳಿ ಇ.ಎಸ್.–೧೮ಗಿಂತ ಶೇಕಡಾ ೨೫ರಷ್ಟು ಅಧಿಕ ಇಳುವರಿ ಕೊಡುವ ಸಾಮರ್ಥ್ಯ ಹೊಂದಿದೆ.

೬. ಸರಾಸರಿ ಕಾಳಿನ ಇಳುವರಿ ಸಾಮರ್ಥ್ಯ ೨೬ ರಿಂದ ೨೮ ಕ್ವಿಂಟಾಲ್/ಎಕರೆಗೆ.

ಭೌತಿಕ ಗುಣಗಳು (ಐ.ಇ.ಟಿ–೧೯೨೫೧ ಗೆ ಇ.ಎಸ್–೧೮)

ತಳಿ	೧೦೦೦ ಕಾಳಿನ ತೂಕ ಗ್ರಾಂ	೧೦೦೦ ಭತ್ತದ ತೂಕ ಗ್ರಾಂ	ಗಿರಣಿ ಕ್ಷಮತೆ (%)	ಇಡಿ ಕಾಳು ಅಕ್ಕಿ ಪಡೆಯುವಿಕೆ (%)
ಐ.ಇ.ಟಿ–೧೯೨೫೧	೧೯	೧೨.೭	೭೨.೦೦	೬೪.೦೦
ಇ.ಎಸ್– ೧೮	೧೮	೧೧.೧	೬೭.೫೦	೫೯.೫೦

(ಆಧಾರ: ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆ ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ)

ಭತ್ತದ ತಳಿ – ೩ : ಜಿಎನ್‌ವಿ–೧೦–೮೯

ಕಡಿಮೆ ಸಮಯದಲ್ಲಿ ಅಧಿಕ ಇಳುವರಿಯನ್ನು ಬೆಳೆಯುವ ಭತ್ತಗಳ ಸಾಲಿನಲ್ಲಿ 'ಜಿ.ಎನ್.ಐ ೧೦–೮೯' ತಳಿಯು ಕೂಡ ಒಂದು. ಇದು ಮುಂಗಾರು ಹಂಗಾಮಿನಲ್ಲಿ ಬೆಳೆಯಲು ಸೂಕ್ತವಾದದು. ಜಿಜಿವಿ–೦೫–೦೧ ಮತ್ತು ಎನ್‌ಇಎಸ್–೦೭–೦೩ ತಳಿಗಳಿಂದ ಕ್ರಾಸ್ ಮಾಡಿ ಈ ಭತ್ತದ ತಳಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಇದು ಮಧ್ಯಮ ಗಾತ್ರದ ಅಕ್ಕಿ ತಳಿಯಾಗಿದ್ದು, ಬಿಪಿಟಿ–೫೨೦೪ ತಳಿಗಿಂತ ೨೫–೩೦ ದಿನ ಬೇಗನೆ ಕಟಾವಿಗೆ ಬರುತ್ತದೆ ಮತ್ತು ಬಿಪಿಟಿ–೫೨೦೪ಗಿಂತ ಶೇ.೧೬ರಷ್ಟು ಹೆಚ್ಚಿನ ಇಳುವರಿ ಕೊಡುತ್ತದೆ. ಈ ತಳಿಯು ಬೆಂಕಿ ರೋಗಕ್ಕೆ ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ. ಈ ತಳಿಯ ಇಳುವರಿ ಸಾಮರ್ಥ್ಯ ಪ್ರತಿ ಎಕರೆಗೆ ೨೫ ರಿಂದ ೩೦ ಕ್ವಿಂಟಾಲ್ ಇರುತ್ತದೆ. ಇಂತಹ ವಿಶೇಷತೆಯನ್ನು ಹೊಂದಿದ ಈ ತಳಿಯ ಉಗಮಕ್ಕೆ ಇರುವ ಕಾರಣಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಜಿಎನ್‌ವಿ–೧೦–೮೯ ಭತ್ತದ ತಳಿ ಬರುವುದಕ್ಕಿಂತ ಮುಂಚಿತವಾಗಿ ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಮುಂಗಾರು ಹಂಗಾಮಿನಲ್ಲಿ ನೀರು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿರುವ ಕಾರಣದಿಂದ ಈ ಭಾಗದ ರೈತರು ಶೇ. ೯೦ ಪ್ರತಿಶತ ಪ್ರದೇಶದಲ್ಲಿ ಭತ್ತದ ತಳಿಯಾದ ಬಿ.ಪಿ.ಟಿ–೫೨೦೪ನ್ನು ಬೆಳೆಯುತ್ತಿದ್ದರು. ಈ ತಳಿಯು ದೀರ್ಘಾವಧಿಯ ತಳಿಯಾಗಿದ್ದು (೧೪೦ ದಿನಗಳಿಗಿಂತ ಅಧಿಕ), ಇದು ಅನೇಕ ರೋಗಗಳಿಗೆ ತುತ್ತಾಗುತ್ತಿತ್ತು. ಅಷ್ಟೇ ಅಲ್ಲದೆ ಕಾರಣಾಂತರಗಳಿಂದ ಭತ್ತ ನಾಟಿ ಮಾಡುವುದು ತಡವಾದರೆ ಮುಂದೆ

ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಪೈರು ಹೂ ಬಿಟ್ಟು ಕಾಳುಕಟ್ಟುವ ಹಂತವನ್ನು ತಲುಪುತ್ತದೆ. ಆಗ ಚಳಿ ಹೆಚ್ಚಾದ ಕಾರಣದಿಂದ ಭತ್ತವು ಒತ್ತಡಕ್ಕೆ ಬಳಲುತ್ತಿತ್ತು. ಇದರಿಂದ ಕಾಳು ಜೊಳ್ಳಾಗುವ ಪ್ರಮಾಣವು ಅಧಿಕವಾಗಿ, ಅಂತಿಮವಾಗಿ ಇಳುವರಿಯು ಕಡಿಮೆಯಾಗುತ್ತಿತ್ತು. ಇದರಿಂದ ಇಲ್ಲಿನ ರೈತರಿಗೆ ತುಂಬಾ ನಷ್ಟವಾಗುತ್ತಿತ್ತು. ಈ ಸಮಸ್ಯೆಯನ್ನು ಗುರುತಿಸಿದ ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರವು ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆಯ ಮೂಲಕ ಸತತವಾಗಿ ಸಂಶೋಧನೆಗಳನ್ನು ಕೈಗೊಂಡು, ಅಲ್ಪಾವಧಿಯ (೧೧೫–೧೨೦ ದಿನಗಳು), ಮಧ್ಯಮ ಸಣ್ಣ ಕಾಳಿನ, ಅಧಿಕ ಇಳುವರಿ ನೀಡುವ, ಮುಂಗಾರು ಹಂಗಾಮಿಗೆ ಸೂಕ್ತವಾದ ಭತ್ತದ ಹೊಸ ತಳಿಯಾದ ಜಿ.ಎನ್.ವಿ. ೧೦–೮೯ನ್ನು ಅಭಿವೃದ್ಧಿಪಡಿಸಿದರು. ಹೀಗೆ ಅಭಿವೃದ್ಧಿಪಡಿಸಿದ ಈ ತಳಿಯ ವಿಶೇಷ ಗುಣಗಳನ್ನು ಸೋನಾಮಸೂರಿ ಬಿ.ಪಿ.ಟಿ–೫೨೦೪ ತಳಿಯ ಜೊತೆಗೆ ತೌಲನಿಕವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಜಿ.ಎನ್.ಐ ೧೦–೮೯ ಭತ್ತದ ತಳಿಯ ವಿಶೇಷತೆಗಳು

ಗುಣಲಕ್ಷಣಗಳು	ಜಿ.ಎನ್.ಐ ೧೦–೮೯ (ಐ.ಇ.ಟಿ.–೨೪೭೧೬)	ಸೋನಾಮಸೂರಿ ಬಿ.ಪಿ.ಟಿ–೫೨೦೪
ಅವಧಿ (ದಿನಗಳು)	೧೧೫–೧೨೦	೧೪೫–೧೫೦
ಗಿಡದ ಎತ್ತರ	ಮಧ್ಯಮ ಎತ್ತರ (೯೫–೧೦೦ ಸೇ.ಮೀ.)	ಮಧ್ಯಮ ಎತ್ತರ (೮೫–೯೫ ಸೇ.ಮೀ.)
ಕಾಳಿನ ಗಾತ್ರ	ಮಧ್ಯಮ ಸಣ್ಣ	ಮಧ್ಯಮ ಸಣ್ಣ
ರೋಗ ಬಾಧೆ	ಬೆಂಕಿ ರೋಗಕ್ಕೆ ಮಧ್ಯಮ ಸಹನಾ ಶಕ್ತಿಯನ್ನು ಹೊಂದಿದೆ	ಬೆಂಕಿ, ದುಂಡಾಣು ಅಂಗಮಾರಿ ಮತ್ತು ಎಲೆ ಕವಚ ಮಚ್ಚೆ ರೋಗಕ್ಕೆ ಬೇಗ ತುತ್ತಾಗುತ್ತದೆ
ಸರಾಸರಿ ಇಳುವರಿ ಮುಂಗಾರು ಹಂಗಾಮಿಗೆ (ಪ್ರತಿ ಎಕರೆಗೆ)	೨೮ ರಿಂದ ೩೦ ಕ್ವಿಂಟಾಲ್	೨೪ ರಿಂದ ೨೮ ಕ್ವಿಂಟಾಲ್

ಕಾಳಿನ ಗುಣಮಟ್ಟಗಳು

ಗುಣಲಕ್ಷಣಗಳು	ಜಿ.ಎನ್.ಐ. ೧೦–೮೯ (ಐ.ಇ.ಟಿ.–೨೪೭೧)	ಸೋನಾಮಸೂರಿ ಬಿ.ಪಿ.ಟಿ–೫೨೦೪
ಭೌತಿಕ ಗುಣಗಳು		
೧೦೦೦ ಕಾಳಿನ ತೂಕ ಗ್ರಾಂ	೧೬.೬	೧೫
ಗಿರಣಿ ಕ್ಷಮತೆ ಪ್ರತಿಶತ (Milling%)	೭೦	೬೯.೩
ಇಡಿ ಕಾಳು ಅಕ್ಕಿ ಪಡೆಯುವಿಕೆ (ಪ್ರತಿಶತ) ಹೆಚ್.ಆರ್.ಆರ್	೬೦.೬	೫೯

ಕಾಳಿನ ಬಣ್ಣ	ಹಗುರ ಕಂದು	ಹಗುರ ಕಂದು
ಕಾಳಿನ ಉದ್ದ	೫.೪೮	೪.೯೬
ಕಾಳಿನ ಅಗಲ	೧.೮೯	೧.೮೬
ಉದ್ದ–ಅಗಲ ಅನುಪಾತ (L/B ratio)	೨.೮೯	೨.೮೫
ಉಡುಗೆ ಗುಣಸೂಚಕಗಳು		
ಉಬ್ಬುವಿಕೆ (Swelling)	೩.೬	೩.೪
ಅನ್ನದ ಬಣ್ಣ	ಶುಭ್ರ ಬಿಳಿ	ಶುಭ್ರ ಬಿಳಿ
ರಾಸಾಯನಿಕ ಗುಣಸೂಚಕಗಳು		
ಅಮೈಲೋಸ್ (%) (Amylose Content)	೨೪.೨	೨೩.೬
Alkali Spread Value (ASV)	೫	೪

(ಆಧಾರ: ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆ ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ)

ಭತ್ತ ತಳಿ – ೪: ಆರ್.ಪಿ.ಬಯೋ–೨೨೬ / ಸುಧಾರಿತ ಸೋನಾಮಸೂರಿ (Improved BPT–೫೨೦೪)

"ಈ ಭತ್ತದ ತಳಿಯು ಬ್ಯಾಕ್ಟೀರಿಯಾ ಅಂಗಮಾರಿ ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದ್ದು, ೧೪೦ ರಿಂದ ೧೪೫ ದಿನಗಳಲ್ಲಿ ಕಟಾವಿಗೆ ಬರುತ್ತದೆ ಹಾಗೂ ಕಾಳಿನ ಗುಣಮಟ್ಟ ಮತ್ತು ಅಡಿಗೆ ಗುಣಮಟ್ಟ ಬಿಪಿಟಿ–೫೨೦೪ನಂತೆಯೇ ಇರುತ್ತದೆ. ಈ ತಳಿಯು ಶೇ. ೬.೭ರಷ್ಟು ಹೆಚ್ಚಿನ ಇಳುವರಿ ಕೊಡುತ್ತದೆ (ವಲಯ–೨ರಲ್ಲಿ) ಮತ್ತು ಶೇ. ೬.೫ ಹೆಚ್ಚಿನ ಇಳುವರಿ ವಲಯ–೩ರಲ್ಲಿ ಬಿಪಿಟಿ–೫೨೦೪ಗಿಂತ ಹೆಚ್ಚು ಇರುತ್ತದೆ. ಈ ತಳಿಯ ಇಳುವರಿ ಸಾಮರ್ಥ್ಯ ಪ್ರತಿ ಎಕರೆಗೆ ೨೫ ರಿಂದ ೩೦ ಕ್ವಿಂಟಾಲ್ ಇದ್ದು ವಲಯ ೨ ಮತ್ತು ೩ಕ್ಕೆ ಅಳವಡಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ"(https://uasraichur.karnataka.gov.in). ಇಂತಹ ವಿಶೇಷತೆಯನ್ನು ಹೊಂದಿದ ಈ ತಳಿಯ ಹುಟ್ಟುವಿಕೆ ಕುರಿತು ಈ ಕೆಳಗಿನಂತೆ ವಿವರಿಸಲಾಗಿದೆ.

ಉತ್ತರ ಕರ್ನಾಟಕದ ಅಚ್ಚುಕಟ್ಟು ಪ್ರದೇಶಗಳಾದ ತುಂಗಭದ್ರ ಮತ್ತು ಕೃಷ್ಣಾ ಮೇಲ್ದಂಡೆ ನೀರಾವರಿಯಲ್ಲಿ ಪ್ರದೇಶದಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಸುಮಾರು ೪.೮ ಲಕ್ಷ ಹೆಕ್ಟೇರ್‌ಗಳಲ್ಲಿ ಭತ್ತದ ವಿವಿಧ ತಳಿಗಳನ್ನು ಪ್ರತಿಶತ ಹೆಕ್ಟೇರಿಗೆ ಸುಮಾರು ೭ ಟನ್‌ಗಿಂತ ಹೆಚ್ಚು ಬೆಳೆಯುತ್ತಿದ್ದರು. ಇಲ್ಲಿ ನೀರು ಹೆಚ್ಚಾಗಿ ಸಿಗುವುದರಿಂದ ಮುಂಗಾರಿನಲ್ಲಿ ದೀರ್ಘಾವಧಿ ಭತ್ತದ ತಳಿಯಾದ ಸೋನಾಮಸೂರಿ (ಬಿಪಿಟಿ–೫೨೦೪) ತಳಿಯನ್ನು ಪ್ರತಿಶತ ೯೦ರಷ್ಟು ಪ್ರದೇಶವನ್ನು ಅತ್ಯಧಿಕವಾಗಿ ಬೆಳೆಯಲಾಗುತ್ತಿತ್ತು. ನಂತರದ ದಿನಗಳಲ್ಲಿ ಈ ತಳಿಯು ದುಂಡಾಣು ಅಂಗಮಾರಿ ರೋಗಕ್ಕೆ ಬಹುಬೇಗ ತುತ್ತಾಗಿ ಇಳುವರಿ ಪ್ರಮಾಣ ಪ್ರತಿಶತ ೨೫–೩೦ರಷ್ಟು ಗಣನೀಯವಾಗಿ ಕುಂಟಿತವಾಗಿತು. ಆಗ ಭಾರತೀಯ ಭತ್ತ ಸಂಶೋಧನಾ ಸಂಸ್ಥೆಯು ದುಂಡಾಣು ಅಂಗಮಾರಿ ರೋಗಕ್ಕೆ ನಿರೋಧಕತೆ ಹೊಂದಿರುವ ಘಿಚಿ೨೧, ಥಚಿ೧೩ ಮತ್ತು ಥಚಿ೫ ಎಂಬ ವಂಶವಾಹಿನಿಗಳನ್ನು (Genes) ಸೋನಾಮಸೂರಿ ತಳಿಯಲ್ಲಿ ಮಾರ್ಕರ್ ನೆರವಿನ ಆಯ್ಕೆ ತಂತ್ರಜ್ಞಾನದ ಸಹಾಯದಿಂದ (Marker Assisted Selection {ಎಂ.ಎ.ಎಸ್}) ಜೋಡಣೆ ಮಾಡಲಾಗಿದ್ದು, ಇದನ್ನು ಸುಧಾರಿತ ಸೋನಾಮಸೂರಿ (ಆರ್.ಪಿ. ಬಯೋ–೨೨೬) ಎಂದು ಹೆಸರಿಸಲಾಗಿದೆ. ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯಲ್ಲಿ ೪–೫ ವರ್ಷಗಳ ಸಂಶೋಧನಾ ಫಲಿತಾಂಶದಿಂದ ಸೋನಾಮಸೂರಿ (ಬಿಪಿಟಿ–೫೨೦೪) ಮತ್ತು ಸುಧಾರಿತ ಸೋನಾಮಸೂರಿ (ಆರ್.ಪಿ. ಬಯೋ–೨೨೬) ತಳಿಯನ್ನು ಹೋಲಿಸಿದಾಗ, ಸುಧಾರಿತ ಸೋನಾಮಸೂರಿ ತಳಿಯು ಕಾಳಿನ ಇಳುವರಿ ಸಾಮರ್ಥ್ಯ ಹೊಂದಿರುವುದು ಕಂಡು ಬಂದಿರುತ್ತದೆ ಮತ್ತು ಸುಧಾರಿತ ಸೋನಾಮಸೂರಿ ತಳಿಯು ೬ ರಿಂದ ೮ ದಿನಗಳ ಮುಂಚಿತವಾಗಿಯೇ ಮಾಗುತ್ತದೆ. ಈ ತಳಿಯು ದುಂಡಾಣು ಅಂಗಮಾರಿ ರೋಗಕ್ಕೆ ನಿರೋಧಕತೆ ಗುಣ ಹೊಂದಿರುವುದರಿಂದ ರೈತರು ಸಾಮಾನ್ಯವಾಗಿ ರೂ.೩,೫೦೦/– ಪ್ರತಿ ಎಕರೆಗೆ ಸಿಂಪರಣಾ ದ್ರಾವಣದ ಖರ್ಚನ್ನು ಉಳಿತಾಯ ಮಾಡುವುದಲ್ಲದೆ ಹೆಚ್ಚಿನ ಇಳುವರಿಯನ್ನು ಕೂಡಾ ಪಡೆಯಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ, ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರವು ೨೦೧೮ರಲ್ಲಿ ಆಯೋಜಿಸಲಾದ ಕ್ಷೇತ್ರೋತ್ಸವದಲ್ಲಿ ಕೇಸರಹಟ್ಟಿಯ ರೈತ ಶ್ರೀ. ರುದ್ರಪ್ಪ ಅವರು ಹೇಳಿರುವಂತೆ 'ಆರ್.ಪಿ. ಬಯೋ–೨೨೬/ಸುಧಾರಿತ ಸೋನಾಮಸೂರಿ (Improved (ಬಿಪಿಟಿ–೫೨೦೪) ತಳಿಯನ್ನು ಬೆಳೆದಿದ್ದರಿಂದ ಎಕರೆಗೆ ೪,೦೦೦–೫,೦೦೦ ರೂಪಾಯಿಗಳನ್ನು ಸಿಂಪರಣಾ ದ್ರಾವಣದಲ್ಲಿ ಉಳಿಸಲಾಯಿತು ಹಾಗೂ ಇದರ ಇಳುವರಿಯು ಬಿಪಿಟಿ–೫೨೦೪ ತಳಿಗೆ ಸಮನಾಗಿದ್ದು ಮತ್ತು ಒಂದು ವಾರ ಮುಂಚೆ ಮಾಗುವುದಾಗಿ ತಿಳಿಸಿರುತ್ತಾರೆ. ಈ ತಳಿಯ ವಿಶೇಷತೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಆರ್.ಪಿ. ಬಯೋ–೨೨೬ (ಸುಧಾರಿತ ಸೋನಾಮಸೂರಿ) ತಳಿಯ ಕಾಳಿನ ವಿಶೇಷತೆಗಳು

ಗುಣಲಕ್ಷಣಗಳು		ತಳಿಗಳು	
		ಸುಧಾರಿತ ನಾಮಸೂರಿ (Improved BPT-5204)	ಸೋನಾ ಮಸೂರಿ (ಬಿಪಿಟಿ – ೫೨೦೪)
ಅಡುಗೆ ಗುಣಸೂಚಕಗಳು			
ಕಾಳಿನ ಉದ್ದ (ಮೀ.ಮೀ.)	ಬೇಯಿಸುವ ಮುನ್ನ	೪.೪	೪.೮
	ಬೇಯಿಸಿದ ನಂತರ	೭.೬	೮.೨
ಕಾಳಿನ ಅಗಲ (ಮೀ.ಮೀ.)	ಬೇಯಿಸುವ ಮುನ್ನ	೧.೮	೧.೯೮
	ಬೇಯಿಸಿದ ನಂತರ	೨.೯	೩.೧
ಕಾಳಿನ ತೂಕ (ಗ್ರಾಂ)	ಕಚ್ಚಾ	೩೦	೩೦
	ಬೇಯಿಸಿದ್ದು	೧೦೮.೯	೧೧೩.೧
ಬೇಯಿಸುವ ಸಮಯ (ನಿಮಿಷ)		೧೩.೫	೧೪.೨
ಭೌತಿಕ ಗುಣಗಳು			
ಕಾಳಿನ ಗಾತ್ರ		ಮಧ್ಯಮ ಸಣ್ಣ	ಮಧ್ಯಮ ಸಣ್ಣ
೧೦೦೦ ಕಾಳಿನ ತೂಕ (ಗ್ರಾಂ)		೯.೮	೧೦.೫
ಗಿರಣಿ ಕ್ಷಮತೆ (ಪ್ರತಿಶತ)		೭೦.೧೭	೭೨.೨
ಕಾಳಿನ ಉದ್ದ–ಅಗಲ ಅನುಪಾತ		೨.೮೫	೨.೭೪
ರಾಸಾಯನಿಕ ಗುಣಗಳು			
ಅಮೈಲೋಸನ ಅಂಶ(ಪ್ರತಿಶತ)		೨೪.೮	೨೪.೫

(ಆಧಾರ: ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆ ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ)

ಭತ್ತ ತಳಿ – ೫: ಜಿಎನ್‌ವಿ–೧೧೦೯ (ಐಎಲ್‌ಟಿ ೨೩೯೫೭)

ಸವಳು ಸಹಿಷ್ಣು ಎಂಬ ಹೆಗ್ಗಳಿಕೆಯನ್ನು ಹೊಂದಿರುವ ಈ ಜಿಎನ್‌ವಿ–೧೧೦೯ ಭತ್ತದ ತಳಿಯು ಅನೇಕ ರೈತರ ಬದುಕಿಗೆ ಆಸರೆಯಾಗಿ ನಿಂತಿದೆ. ಈ ತಳಿಯ ವಿಶೇಷತೆಯನ್ನು ಕುರಿತು ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರದ ತಳಿ ವಿಜ್ಞಾನಿಗಳಾದ ಡಾ. ಮಹಾಂತ ಶಿವಯೋಗಯ್ಯ ಕೆ. ಅವರು ಹೇಳಿದ ಮಾತುಗಳ ಮೂಲಕ ತಿಳಿಯಬಹುದಾಗಿದೆ. “ಈ ತಳಿಯಿಂದ ಜಿ.ಎನ್.ವಿ–೧೧೦೯ (ಗಂಗಾವತಿ ಚುರುಮುರಿ) ತಳಿಯು ಮಂಡಕ್ಕಿ

ತಯಾರಿಸಲು ಬಳಸಬಹುದಾಗಿದೆ. ಸವಳು ಮಣ್ಣಿಗೆ ಸೂಕ್ತವಾದ ತಳಿಯಾಗಿದ್ದು ೧೩೦ ದಿನಗಳಲ್ಲಿ ಕಟಾವಿಗೆ ಬರುವುದು ಹಾಗೂ ಸಿಂಪರಣೆ ವೆಚ್ಚ ರಾಸಾಯನಿಕ ಗೊಬ್ಬರಗಳ ಬಳಕೆ ಕಡಿಮೆಯಿದ್ದು, ಮಾಗಿದ ಹಂತದಲ್ಲಿ ಕಾಳುಗಳು ಸಿಡಿಯುವುದಿಲ್ಲ. ಆದ್ದರಿಂದ ರೈತರು ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ಪಡೆಯಬಹುದೆಂದು ಹೇಳಿದರು"(ಪ್ರಜಾಪರ್ವ ವಾರ್ತೆ). ಮುಂಗಾರು ಹಂಗಾಮಿನಲ್ಲಿ ಬೆಳೆಯಬಹುದಾದ ಜಿ.ಎನ್.ವಿ ೧೧೧೯ (ಐಎಲ್‌ಟಿ ೨೩೯೫೭) ಭತ್ತದ ತಳಿಯು ಸರಾಸರಿ ಇಳುವರಿ ಒಂದು ಎಕರೆಗೆ ೨೮ ರಿಂದ ೩೦ ಕ್ವಿಂಟಲ್ ಫಸಲನ್ನು ನೀಡುತ್ತದೆ. ಇದರ ಇನ್ನೊಂದು ವಿಶೇಷತೆ ಎಂದರೆ ಉದ್ದ–ದಪ್ಪ ಗ್ರಾತವನ್ನು ಹೊಂದಿದ್ದು, ಮಂಡಾಳು ಮತ್ತು ಅವಲಕ್ಕಿಗೆ ಸೂಕ್ತವಾದ ತಳಿಯಾಗಿದೆ. ಇದು ಬೆಂಕಿ ರೋಗಕ್ಕೆ ಸಹನಾ ಶಕ್ತಿ ಹೊಂದಿದೆ.

ಸಂಶೋಧನಾ ಕೇಂದ್ರದ ಕುರಿತ ರೈತರ ಅಭಿಪ್ರಾಯಗಳು

ಪ್ರಸ್ತುತ ಸಂಶೋಧನೆಗಾಗಿ ಒಟ್ಟು ಎರಡು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಲ್ಲಿ ಏಕ ವಿಷಯಕ ಅಧ್ಯಯನಕ್ಕಾಗಿ ಎರಡು ಊರಲ್ಲಿ ತಲಾ ೪ ಒಟ್ಟು ೮ ರೈತರನ್ನು ಸಂದರ್ಶನ ಮಾಡಿರಲಾಗಿದೆ. ಅವರಲ್ಲಿ ಆರಾಳ ಗ್ರಾಮದ ಮಂಜುನಾಥ ನವಲಿ ಎಂಬುವವರ ಮತ್ತು ಮಲಕನಮರಡಿ ಗ್ರಾಮದ ಹನುಮನಗೌಡ ಅವರು ನೀಡಿರುವ ಮಾಹಿತಿಯನ್ನು ಅವರ ಮಾತಿನಂತೆಯೇ ಈ ಕೆಳಗಿನಂತೆ ದಾಖಲೀಕರಿಸಲಾಗಿದೆ.

ನನ್ನ ಹೆಸರು ಮಂಜುನಾಥ ನವಲಿ ಅಂತ ನಾನು ಕೃಷಿಯಲ್ಲಿ ಕಳೆದ ೮ ವರ್ಷಗಳಿಂದ ನಿರತನಾಗಿರುತ್ತೇನೆ. ಗಂಗಾವತಿಯ ಕೃಷಿ ಕೇಂದ್ರದ ಕುರಿತು ನನಗೆ ಸ್ವಲ್ಪ ತಿಳಿದಿದೆ. ಆಗಾಗ ಅಲ್ಲಿಗೆ ಹೋಗಿ ಬರುತ್ತೇನೆ. ಸುಮಾರು ಹತ್ತು ವರ್ಷಗಳ ಹಿಂದೆ ನಮ್ಮಲ್ಲಿ ಸಾಂಪ್ರದಾಯಿಕವಾದ ಭತ್ತದ ತಳಿಗಳನ್ನು ಬೆಳೆಯುತ್ತಿದ್ದರು. ನಾನು ಕೃಷಿಗೆ ಬಂದಾಗಿನಿಂದ ಗಂಗಾವತಿಯ ಕೇಂದ್ರದಿಂದ ಬಂದಿರುವ ಭತ್ತದ ತಳಿಗಳನ್ನು ಬೆಳೆಯುತ್ತಿದ್ದೇವೆ. ನಾವು ನೇರವಾಗಿ ಅಲ್ಲಿಗೆ ಹೋಗದೇ ಅಂಗಡಿಗಳಲ್ಲಿ ತೆಗೆದುಕೊಂಡು ಬಂದು ಬೇಸಾಯ ಮಾಡುತ್ತೀವಿ. ಮೊದಲು ತಮ್ಮ ಹಿರಿಕರು ಒಕ್ಕಲುತನ ಮಾಡುವಾಗ ಒಂದು ಎಕರೆಗೆ ಅಂದಾಜು ೨೦ ರಿಂದ ೨೫ ಚೀಲ ಭತ್ತ ಬೆಳಿತ್ತಿದ್ರು. ಇವತ್ತಿಗೆ ನಾವು ಅದೇ ಒಂದು ಎಕರೆಗೆ ೪೦–೪೫ ಕೆಲವೊಮ್ಮೆ ಸರಿಯಾಗಿ ಕೇರ್ ಮಾಡಿ ಬೆಳೆದರೆ ೫೦ ಚೀಲಗಟ್ಟಲೆ ಬೆಳಿತಿವಿ. ಇದಕ್ಕೆ ಕಾರಣ ಕೇಂದ್ರದಿಂದ ಬರುವ ಮಾಹಿತಿ. ಪ್ರತಿ ಸಲ ಅಲ್ಲಿಗೆ ಹೋಗಿ ಬೀಜ ತರುವುದಿಲ್ಲ ಬೆಳೆದ ಇಳುವರಿಯಲ್ಲಿಯೇ ಚೆನ್ನಾಗಿರುವ ಕಾಳುಗಳನ್ನು ತೆಗೆದಿಟ್ಟು ಮತ್ತೆ ಅವುಗಳನ್ನೆ ಬಿತ್ತುತ್ತೇವೆ. ಇತ್ತೀಚೆಗೆ ಕೇಂದ್ರದಿಂದ ಹೊಸ ತಳಿಗಳು ಬರುತ್ತಿವೆ. ಅವುಗಳನ್ನು ನಾವು ಏಕಾಯಕಿ ಬಿತ್ತುವುದಿಲ್ಲ ಒಂದೇರಡು ವರ್ಷ ತಡೆದು ಬೇರೆಯವರು ಬೆಳೆದುದನ್ನು ನೋಡಿದ ಮೇಲೆ ನಾವು ಅದನ್ನು ಬೆಳೆಯುತ್ತೇವೆ.

ನನ್ನ ಹೆಸರು ಹನುಮನಗೌಡ ಅಂತ ನಾನು ಕೃಷಿಯಲ್ಲಿ ಕಳೆದ ೧೧ ವರ್ಷಗಳಿಂದ ನಿರತನಾಗಿರುತ್ತೇನೆ. ಕಳೆದ ೫ ರಿಂದ ೬ ವರ್ಷದಲ್ಲಿ ನಮ್ಮ ಊರಿಗೆ ಕಾಲುವೆ ನೀರು ಬಂದಿದೆ. ಆಗಿನಿಂದ ನಾವು ಭತ್ತದ ಗದ್ದೆಗಳನ್ನು ಮಾಡಿಕೊಂಡಿದ್ದೇವೆ. ನಮಗೆ ಈ ಸಂಶೋಧನ ಕೇಂದ್ರದ ಬಗ್ಗೆ ಅಷ್ಟೇನೂ ತಿಳಿದಿಲ್ಲ. ನಾವು ಸಾಂಪ್ರದಾಯಿಕ ಭತ್ತದ ಕಾಳುಗಳನ್ನು ಬಳಸಿಕೊಂಡು ಬೆಳೆಗಳನ್ನು ಬೆಳಿತಿವಿ. ಇತ್ತೀಚಿಗೆ ನಮಗೆ ಕೇಂದ್ರ ಬಗ್ಗೆ ಸ್ವಲ್ಪ ಗೊತ್ತಾಗುತ್ತಿದೆ. ಅದರಲ್ಲಿ ಶಾಲೆ ಕಲಿತ ನಾವುಗಳು ಪತ್ರಿಕೆಯಲ್ಲಿ ಮತ್ತು ಮೊಬೈಲಿನಲ್ಲಿ ಬಂದ ಮಾಹಿತಿಯನ್ನು ತಿಳಿದು ನಮ್ಮೂರಲ್ಲಿ ಒಬ್ಬರೂ ಅಥವಾ ಇಬ್ಬರೂ ಆ ಕೇಂದ್ರಕ್ಕೆ ಹೋಗಿ ಮಾಹಿತಿ ಪಡೆಯುತ್ತಾರೆ. ಕರ್ನಾಟಕದ ಬೇರೆ ಬೇರೆ ಕಡೆಗೆ ಈ ಕೇಂದ್ರದ ತಳಿಗಳನ್ನು ಬೆಳೆಯುವುದನ್ನು ನೋಡಿ ಇತ್ತೀಚಿಗೆ ನಾವು ಒಂದು ಅಥವಾ ಎರಡು ಎಕರೆ ಗದ್ದೆಯಲ್ಲಿ ಗಂಗಾವತಿ ಎಮರ್ಜೆನ್ಸಿ, ಗಂಗಾವತಿ ಸೋನಾ ಬೇರೆ ಬೇರೆ ತಳಿಗಳನ್ನು ಬೆಳೆಯುತ್ತಿದ್ದೇವೆ. ಆ ತಳಿಗಳು ಚೆನ್ನಾಗಿ ಇಳುವರಿ ಕೊಡುತ್ತವೆ. ಹೀಗೆ ಹಂತ ಹಂತವಾಗಿ ಹೊಸ ಹೊಸ ತಳಿಗಳನ್ನು ಬೆಳೆಯಲು ಪ್ರಯತ್ನಿಸುತ್ತೇವೆ. ಈ ಕೇಂದ್ರದ ತಳಿಗಳನ್ನು ನಮ್ಮವರು ಅಷ್ಟಾಗಿ ನಂಬುತ್ತಿಲ್ಲ ಯಾಕಂದರೇ ಹಿರಿಯ ತಲೆಮಾರಿನವರಿಗೆ ಈ ತಳಿಗಳ ಕುರಿತು ತಿಳಿದಿರುವುದಿಲ್ಲ. ನಮ್ಮಂತ ಓದು ಬರಹ ಬರುವವರು ಆಧುನಿಕ ಕಾಲಕ್ಕೆ ತಕ್ಕಂತೆ ಬದಲಾಗಬೇಕೆಂಬ ಉದ್ದೇಶದಿಂದ ಈ ಕೇಂದ್ರದ ಬಗ್ಗೆ ತಿಳಿದು ಹೆಚ್ಚು ಅದರ ತಳಿಗಳನ್ನು ಬಳಸಿ ಬೆಳೆಯಲು ಆಸಕ್ತಿವಹಿಸುತ್ತೇವೆ.

ಫಲಿತಗಳು

೧. ಗಂಗಾವತಿಯ ಕೃಷಿ ಸಂಶೋಧನ ಕೇಂದ್ರವು ಆವಿಷ್ಕರಿಸಿದ ಜಿಜಿವಿ–೦೫–೦೧ (ಗಂಗಾವತಿ ಸೋನ) ತಳಿಯು ಈ ಮೊದಲು ಇರುವ ಭತ್ತದ ತಳಿಗಳಾದ ಜೆ.ಪಿ.ಎಲ್–೧೭೯೮ ಮತ್ತು ಸೋನಾಮಸೂರಿ (ಬಿ.ಪಿ.ಟಿ. ೫೨೦೪) ತಳಿಗಿಂತ ಉತ್ತಮವಾಗಿದೆ. ಇದು ಮುಂಗಾರಿನಲ್ಲಿ ೨೬–೨೮ ಕ್ವಿಂ ಮತ್ತು ಬೇಸಿಗೆಯಲ್ಲಿ ೨೮–೩೦ ಕ್ವಿಂ. ಇಳುವರಿಯನ್ನು ಕೊಡುವ ಮತ್ತು ಬೆಂಕಿ, ದುಂಡಾಣು ಅಂಗಮಾರಿ ಮತ್ತು ಎಲೆ ಕವಚಮಚ್ಚೆ ರೋಗಕ್ಕೆ ಸಹನಾಶಕ್ತಿ ಹೊಂದಿದ ತಳಿಯಾಗಿದೆ.

೨. ಇದೇ ಕೇಂದ್ರವು ಅಭಿವೃದ್ಧಿ ಪಡಿಸಿದ ಇನ್ನೊಂದು ತಳಿಯಾದ ಗಂಗಾವತಿ ಎಮರ್ಜೆನ್ಸಿ (ಐ.ಇ.ಟಿ–೧೯೨೫೧)ಯು ಇ.ಎಸ್–೧೮ ಭತ್ತದ ತಳಿಗಿಂತ ಉತ್ತಮವಾಗಿದ್ದು, ಪ್ರತಿ ಎಕರೆಗೆ ೨೬ ರಿಂದ ೨೮ ಕ್ವಿಂ. ಇಳುವರಿಯನ್ನು ನೀಡುತ್ತದೆ. ಇದು ವಿಶೇಷವಾಗಿ ಇಡ್ಲಿ, ದೋಸೆ, ಮಂಡಕ್ಕಿ ಮತ್ತು ಅವಲಕ್ಕಿಯನ್ನು ತಯಾರಿಸಲು ಸೂಕ್ತವಾದ ತಳಿಯಾಗಿದೆ.

೩. ಕೇಂದ್ರವು ಜಿಜಿವಿ–೦೫–೦೧ ಮತ್ತು ಎನ್‌ಇಎಸ್–೦೬–೦೩ ತಳಿಗಳಿಂದ ಕ್ರಾಸ್ ಮಾಡಿ ಅಭಿವೃದ್ಧಿಪಡಿಸಲಾದ 'ಜಿ.ಎನ್.ಐ ೧೦–೮೯' ಭತ್ತದ ತಳಿಯು ಸೋನಾಮಸೂರಿ

ಬಿ.ಪಿ.ಟಿ–೫೨೦೪ ತಳಿಗಿಂತ ಉತ್ತಮವಾಗಿದ್ದು, ಎಕರೆಗೆ ೨೮ ರಿಂದ ೩೦ ಕ್ವಿಂ. ಇಳುವರಿಯನ್ನು ನೀಡುತ್ತದೆ. ಇದು ಅಲ್ಪಾವಧಿಯ (೧೧೫–೧೨೦ ದಿನಗಳು), ಮಧ್ಯಮ ಸಣ್ಣ ಕಾಳಿನ, ಅಧಿಕ ಇಳುವರಿ ನೀಡುವ, ಮುಂಗಾರು ಹಂಗಾಮಿಗೆ ಸೂಕ್ತವಾದ ತಳಿಯಾಗಿದೆ.

೪. ಈ ಕೇಂದ್ರವು ಅಭಿವೃದ್ಧಿಪಡಿಸಿದ ಆರ್.ಪಿ. ಬಯೋ–೨೨೬ (ಸುಧಾರಿತ ಸೋನಾಮಸೂರಿ) ತಳಿಯು ಸೋನಾ ಮಸೂರಿ (ಬಿಪಿಟಿ–೫೨೦೪)ಗಿಂತ ಕಡಿಮೆ ಖರ್ಚಿನಲ್ಲಿ (ರೈತರು ಸಾಮಾನ್ಯವಾಗಿ ರೂ.೩,೫೦೦/– ಪ್ರತಿ ಎಕರೆಗೆ ಸಿಂಪರಣಾ ದ್ರಾವಣದ ಖರ್ಚನ್ನು ಉಳಿತಾಯ ಮಾಡಬಹುದಾಗಿದೆ) ಹೆಚ್ಚು ಲಾಭವನ್ನು ತರುವ ತಳಿಯಾಗಿದೆ.

೫. ಈ ಕೇಂದ್ರಕ್ಕೆ ಹತ್ತಿರವಿರುವ ಪ್ರದೇಶಗಳು ಇದರ ಸೌಲಭ್ಯಗಳನ್ನು ಪಡೆಯುತ್ತಿವೆ. ಅದರಿಂದ ಭತ್ತದ ಬೆಳೆಯಲ್ಲಿ ಪ್ರಗತಿಯನ್ನು ಸಾಗಿಸುತ್ತಿವೆ. ಆರಾಳ ಗ್ರಾಮದಲ್ಲಿ ಪಡೆದ ಮಾಹಿತಿಯ ಪ್ರಕಾರ ಈ ತಳಿಗಳು ಕಡಿಮೆ ರೋಗಗಳಿಗೆ ತುತ್ತಾಗುತ್ತವೆ ಮತ್ತು ಸರಿಯಾಗಿ ಬೇಸಾಯ ಮಾಡಿದರೆ ಒಂದು ಎಕರೆಗೆ ೪೦–೪೫ ಕ್ವಿಂ. ಇಳುವರಿಯನ್ನು ಪಡೆಯಬಹುದಾಗಿದೆ. ಪಾರಂಪರಿಕ ತಳಿಗಳು ಒಂದು ಎಕರೆಗೆ ೨೦–೨೫ ಕ್ವಿಂ. ಇಳುವರಿಯನ್ನ ಕೊಟ್ಟರೆ, ಈ ತಳಿಗಳು ಕನಿಷ್ಟ ೩೦ ಕ್ವಿಂ. ಆದರೂ ಇಳುವರಿಯನ್ನು ನೀಡುತ್ತವೆ.

೬. ಈ ಕೇಂದ್ರವು ಅಭಿವೃದ್ಧಿಪಡಿಸಿದ ಭತ್ತದ ತಳಿಗಳು ಕರ್ನಾಟಕದ ಕೆಲವು ಪ್ರದೇಶಗಳಿಗೆ ತಲುಪಿದರು ಗಂಗಾವತಿಯಿಂದ ೧೭ ಕಿ.ಮೀ ದೂರದಲ್ಲಿರುವ ಮಲಕನಮರಡಿ ಗ್ರಾಮದ ರೈತರಿಗೆ ತಲುಪಿಲ್ಲ. ಅಂದರೇ ಈ ಕೇಂದ್ರವು ಗ್ರಾಮೀಣ ರೈತರನ್ನು ತಲುಪುವ ಗುರಿಯು ನಿಧಾನಗತಿಯಲ್ಲಿದೆ ಎಂಬುದು ಅಧ್ಯಯನದ ಫಲಿತವಾಗಿದೆ.

ತಿಳುವಳಿಕೆದಾರರ ಪಟ್ಟಿ

ಕ್ರಸಂ	ಹೆಸರು	ವೃತ್ತಿ	ಸ್ಥಳ
೦೧	ಡಾ. ಮಾಹಾಂತ ಶಿವಯೋಗಯ್ಯ ಕೆ	ವಿಜ್ಞಾನಿಗಳು (ತಳಿಶಾಸ್ತ್ರ)	ಗಂಗಾವತಿ
೦೨	ಡಾ. ಮಸ್ತಾನ್ ರೆಡ್ಡಿ ಬಿ.ಜಿ.	ಮುಖ್ಯ ವಿಜ್ಞಾನಿ (ಬೇಸಾಯಶಾಸ್ತ್ರ)	ಗಂಗಾವತಿ
೦೩	ಡಾ. ಶ್ರೀಧರ ಡಿ	ವಿಜ್ಞಾನಿಗಳು (ತಳಿ ಅಭಿವೃದ್ಧಿ)	ಗಂಗಾವತಿ
೦೪	ಮಂಜುನಾಥ ನವಲಿ	ರೈತರು	ಆರಾಳ
೦೫	ರವಿಚಂದ್ರ ಬಿ ಕೆ	ಸಂಶೋಧನಾರ್ಥಿ	ಆರಾಳ
೦೬	ಲಿಂಗಪ್ಪ ಕಿಡದೂರು	ರೈತರು	ಆರಾಳ
೦೭	ಹನುಮನಗೌಡ	ಅತಿಥಿ ಉಪನ್ಯಾಸಕರು ಮತ್ತು ರೈತರು	ಮಲಕನಮರಡಿ
೦೮	ಶಿವಪುತ್ರ	ರೈತರು	ಮಲಕನಮರಡಿ
೦೯	ಶ್ರೀನಿವಾಸ	ರೈತರು	ಮಲಕನಮರಡಿ
೧೦	ದೇವರಾಜ	ರೈತರು	ಮಲಕನಮರಡಿ
೧೧	ವೀರೇಶ್ ಕಿಡದೂರು	ರೈತರು	ಆರಾಳ
೧೨	ಕುಬೇರ ಕನಕಗಿರಿ	ರೈತರು	ಆರಾಳ

ಪರಾಮರ್ಶನ ಸಾಹಿತ್ಯ :

1. ಉದಯವಾಣಿ ಪತ್ರಿಕೆ, 14.10.2019 (https://www.udayavani.com)
2. ಪ್ರಮೋದ ಕಟ್ಟಿ (ಸಂ), 2015, ಕೃಷಿ ಪ್ರದೀಪಿಕೆ ರೈತರ ಜ್ಞಾನ ಪತ್ರಿಕೆ ಸಂಪುಟ 2, ಸಂಚಿಕೆ 4, ಕೃಷಿ ವಿಶ್ವವಿದ್ಯಾಲಯ, ರಾಯಚೂರು.

3. ಪ್ರಮೋದ ಕಟ್ಟಿ (ಸಂ), 2017, ಕೃಷಿ ಪ್ರದೀಪಿಕೆ ರೈತರ ಜ್ಞಾನ ಪತ್ರಿಕೆ ಸಂಪುಟ 4, ಸಂಚಿಕೆ 1, ಕೃಷಿ ವಿಶ್ವವಿದ್ಯಾಲಯ, ರಾಯಚೂರು.

4 Santosh, Vishwanath, J., Anand, S.R., Veeresh, H. and Balanagoudar, S.R (2019). Evaluation of Paddy (Oryza sativa L.) Varieties for Salt Tolerance in Saline Vertisols of Tungabhadra Project Command Area. International Journal of Pure & Applied Bioscience, 7(3): 149-155.

5. Yogesh G. S., Sunil C. M., Mohankumar A. B., Chandrakala Hanagi, Rajath H. P., and Abhishek P. S., (2020). Performance of Paddy Variety Gangavathi Sona under Kabini Command Area of Chamarajanagara District, Karnataka, India., International Journal of Pure & Applied Bioscience, 9(11): 785-791.

6. https://uasraichur.karnataka.gov in

7. https://www.deccanherald.com, Deccan Herald-December 3, 2015.

***

ತೇಜಸ್ವಿಯವರ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆ ಮತ್ತು ಪರಿಸರ ಸಂರಕ್ಷಣೆ

1 ಕೃಷ್ಣಮೂರ್ತಿ. ಜಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ತ್ರಿವೇಣಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್,
ಬೆಂಗಳೂರು – 560057
krishnamurthy.info2018@gmail.com

ಪೂರ್ಣಚಂದ್ರ ತೇಜಸ್ವಿಯವರು ಕನ್ನಡ ಸಾಹಿತ್ಯವನ್ನು ಪ್ರಕೃತಿ–ಜೀವಶಾಸ್ತ್ರ–ವೈಜ್ಞಾನಿಕ ಚಿಂತನೆಯ ಸಂಯೋಜನೆಯಲ್ಲಿ ನೂತನ ದಿಕ್ಕಿಗೆ ಎಳೆದುಕೊಂಡು ಹೋದ ಅಪರೂಪದ ಲೇಖಕರು. ಮಲೆನಾಡಿನ ಮಣ್ಣು, ಮಳೆ, ಕಾಡು, ಹೊಳೆ, ಪಕ್ಷಿ, ಕೀಟ, ಸಸ್ಯ, ಕಾಡುಪ್ರಾಣಿ– ಇವೆಲ್ಲ ಅವರ ಸಾಹಿತ್ಯದ ಜೀವನಾಡಿ. ಕುವೆಂಪು, ಕಾರಂತ, ಬೇಂದ್ರೆ, ದೇವನೂರ ಮಹಾದೇವ, ಲಂಕೇಶ ಮೊದಲಾದವರ ಮೂಲಕ ಕನ್ನಡದಲ್ಲಿ ಪ್ರಕೃತಿ ಚಿಂತನೆ ವಿಭಿನ್ನ ಬಗೆಯಲ್ಲಿ ಅಭಿವ್ಯಕ್ತಿಯಾದರೂ, ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣುವ ವೈಶಿಷ್ಟ್ಯ ಎಂದರೆ ಪ್ರಕೃತಿಯನ್ನು ಅವರು 'ವೈಜ್ಞಾನಿಕವಾಗಿ' ಮತ್ತು 'ತಾರ್ಕಿಕವಾಗಿ' ಅರ್ಥೈಸಿದ ರೀತಿ. ಅವರ ಪ್ರಕಾರ ಪ್ರಕೃತಿ ಕೇವಲ ಭಾವನಾವಸ್ತು ಅಲ್ಲ; ಅದು one interconnected scientific system, one living network. ಆದ್ದರಿಂದ ಅವರ ಸಾಹಿತ್ಯ ಮಲೆನಾಡಿನ ಭೂಗೋಳ ಮತ್ತು ಜೀವಜಗತ್ತಿನ anthropological, ecological, biological documentation ಆಗಿದೆ ಎಂದರೆ ತಪ್ಪಾಗದು.

ತೇಜಸ್ವಿಯವರು ಬರಹಗಾರರಾಗುವುದಕ್ಕೂ ಮುನ್ನ ಪ್ರಕೃತಿಯಲ್ಲೇ ಬದುಕಿದ ವ್ಯಕ್ತಿ. ಅವರು ತಂದೆಯಂತೆ ಮಗನಾಗಬೇಕೆಂಬ ಸಂಪ್ರದಾಯಿಕ ದಾರಿಯನ್ನು ತಿರಸ್ಕರಿಸಿ, ಮಲೆನಾಡಿನ ಕಾಡಿನಲ್ಲಿಯೇ ನೆಲೆಸಿದದ್ದು ಆಕಸ್ಮಿಕವಲ್ಲ. ಅದು ಅವರು ಪ್ರಕೃತಿಯೊಂದಿಗೆ

ಹುಟ್ಟಿಸಿಕೊಂಡ ನಂಟಿನ ಪ್ರತಿರೂಪ. ತಮ್ಮ ಕಥೆಗಳು, ಕಾದಂಬರಿಗಳು, ಪ್ರಬಂಧಗಳು–all derive their strength not from imagination but from experiential closeness with the ecological world. ಅವರು ತಮ್ಮ ಜೀವನವನ್ನು "field study" ಆಗಿ ಪರಿವರ್ತಿಸಿಕೊಂಡು ಅದನ್ನು ಸಾಹಿತ್ಯ ರೂಪಕ್ಕೆ ತಂದವರು. ಆದ್ದರಿಂದ ಅವರ ಬರಹಗಳಲ್ಲಿ ಕಾಡು, ಮಳೆ, ಮಣ್ಣು, ಕೀಟ, ಹಾವು, ಕೂರ, ಗೂಬೆ–all seem real, breathing, living participants.

ಕುವೆಂಪು ಮಲೆನಾಡಿನ ಮಿಸ್ಟಿಸಿಸಮ್ ಅನ್ನು ಸೃಷ್ಟಿಸಿದರೆ, ತೇಜಸ್ವಿಯವರು ಮಲೆನಾಡಿನ ವಿಜ್ಞಾನವನ್ನು ಪರಿಚಯಿಸಿದರು ಎಂಬ ಅಂಶವೇ ಅವರ ಸಾಹಿತ್ಯದ ವಿಶಿಷ್ಟ ಗುಣ. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾಡಿನ ಕಾವ್ಯಾತ್ಮಕ ಚಿತ್ರಣೆ ಕಂಡುಬಂದರೆ, ತೇಜಸ್ವಿಯವರ ಕೃತಿಗಳಲ್ಲಿ ಅದೇ ಕಾಡಿನ ವೈಜ್ಞಾನಿಕ ಚಲನೆಗಳು–ಜೇನುಹುಳಿಗಳ ಸಮೂಹ ಜೀವನ, ಪಕ್ಷಿಗಳ ಸಂವಹನ, ಕೀಟಗಳ ವರ್ತನೆ, ಮಣ್ಣಿನ ಜೀವಾಣುಗಳ ಚಟುವಟಿಕೆ, ಸರಿಯಾಗಿಯೇ seasonal ecological cycles—ಕಾಣಿಸುತ್ತದೆ. ಕುವೆಂಪು ಮತ್ತು ತೇಜಸ್ವಿಯವರ ನಡುವಿನ ಸಂಬಂಧ ಸಾಹಿತ್ಯಿಕ–ಸಾಂಸ್ಕೃತಿಕ ರಕ್ತಸಂಬಂಧದಂತಿದೆ; ಆದರೆ ಅವರ ಪರಿಸರ ನೋಟಗಳು ಎರಡು ವಿಭಿನ್ನ schools of ecological thought ಅನ್ನು ಪ್ರತಿನಿಧಿಸುತ್ತವೆ. ಉದಾಹರಣೆಗೆ, ಕುವೆಂಪು ತನ್ನ ಕಥೆಯಲ್ಲಿ ನಾಯಿಗೆ 'ಹುಲಿಯ' ಎಂಬ ಜನಪದ ಬಣ್ಣದ ಹೆಸರನ್ನೀಳುತ್ತಿದ್ದರೆ, ತೇಜಸ್ವಿಯವರು ಅದೇ ಸಂಧರ್ಭದಲ್ಲಿ 'ಕಿವಿ' ಎಂಬ purely observational scientific nick-name ಬಳಸುತ್ತಾರೆ. ಇದು ಪ್ರಕೃತಿಯನ್ನು "ಭಾವನೆಯ ಮೂಲಕ" ಮತ್ತು "ವೀಕ್ಷಣೆಯ ಮೂಲಕ" ನೋಡುವ ಎರಡು ವಿಭಿನ್ನ ವಿಧಾನಗಳ ಚಿತ್ರಣ.

KEYWORDS:

ತೇಜಸ್ವಿ, ವೈಜ್ಞಾನಿಕ ಮನೋಭಾವ, ಪ್ರಕೃತಿ, ಪರಿಸರ ಸಂರಕ್ಷಣೆ, ಅರಣ್ಯ, ಮಲೆನಾಡು, ಜೀವವೈವಿಧ್ಯ, ಕನ್ನಡ ಸಾಹಿತ್ಯ, ecology, scientific temper, ಪರಿಸರ, ಪ್ರಜ್ಞೆ, ಸಾಹಿತ್ಯ, ಜುಗಾರಿಕ್ರಾಸ್, ಕಾಡಿನ ಕಥೆಗಳು

ಪರಿಚಯ:

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಕೃತಿ–ಮನುಷ್ಯ ಸಂಬಂಧದ ಚಿತ್ರಣ ಹೊಸದಲ್ಲ. ಆದರೆ 20ನೇ ಶತಮಾನದ ನಂತರ ಪರಿಸರವು ಮಾನವ ಬದುಕಿನ ಕೇಂದ್ರವಾಗಿ ಮರುಪ್ರತಿಷ್ಠಿತವಾಗುತ್ತಿದ್ದ ಸಂದರ್ಭದಲ್ಲಿ ತೇಜಸ್ವಿಯವರ ಸಾಹಿತ್ಯವು ಅತ್ಯಂತ ವೈಚಾರಿಕ, ವಿಜ್ಞಾನಾಧಾರಿತ ಹಾಗೂ ಸಮಾಜಮುಖಿ ಪರಿಸರ ಚಿಂತನೆಗೆ ದಿಕ್ಕು ತೋರಿಸಿದ ಕ್ರಾಂತಿಕಾರಕ

ಹಂತ. ತೇಜಸ್ವಿಯವರು ಕುವೆಂಪು ಅವರ ಪುತ್ರರಾಗಿದ್ದರೂ ಅವರ ಸಾಹಿತ್ಯಕ್ಕೆ ತಂದೆಯ ಕವಿತಾತ್ಮಕ ಕಾವ್ಯಾತ್ಮಕ ಚಿಂತನೆಗಿಂತ ವೈಜ್ಞಾನಿಕ ಪ್ರಶ್ನಿಸುವಿಕೆಯೂ, ಅನುಭವಪರ ದೃಷ್ಟಿಯೂ ಹೆಚ್ಚು. ಅವರು ಮಲೆನಾಡಿನ ಕಾಡು–ಮಣ್ಣು–ಮಳೆಗಳ ನಡುವೆಯೇ ಬದುಕಿದ ಕಾರಣ ಪ್ರಕೃತಿಯ ನೈಸರ್ಗಿಕ ಚಲನಶೀಲತೆಯನ್ನು life laboratoryಯಂತೆ ನೋಡಿದವರು. ಅವರ ಬರಹಗಳು ಸಾಹಿತ್ಯ, ಪರಿಸರಶಾಸ್ತ್ರ, ಜೀವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಸಂಗಮವಿದ್ದವು. Scientific method, empirical observation, ecological balance, biodiversity loss, sustainability ಎಂಬ ಆಧುನಿಕ ಪರಿಕಲ್ಪನೆಗಳು ಅವರ ಕೃತಿಗಳ ಮೂಲಭಾಗ.

ಈ ಲೇಖನವು ತೇಜಸ್ವಿಯವರ ಸಾಹಿತ್ಯದಲ್ಲಿನ ವೈಜ್ಞಾನಿಕ ಪ್ರಶ್ನಾವಿಚಾರಣೆ, ಪರಂಪರೆಯ ಮೂಢನಂಬಿಕೆಗಳ ವಿಮರ್ಶೆ, ಪ್ರಕೃತಿಯ ವೈಜ್ಞಾನಿಕ ವಿವರಣೆ, ಅರಣ್ಯ–ಜೀವವೈವಿಧ್ಯ ಸಂರಕ್ಷಣೆ, ಹಾಗೂ ಪರಿಸರ ಜಾಗೃತಿಯ ವಿಸ್ತಾರವನ್ನು comprehensive textual analysis ಮೂಲಕ ವಿಶ್ಲೇಷಿಸುತ್ತದೆ.

ವಿಷಯಾಧಾರಿತ ವಿಶ್ಲೇಷಣೆ:

1. ವೈಜ್ಞಾನಿಕ ಚಿಂತನೆ ತೇಜಸ್ವಿಯವರ ಸಾಹಿತ್ಯದ ಕೇಂದ್ರಬಿಂದು:

ತೇಜಸ್ವಿಯವರ ಬರಹಗಳಲ್ಲಿ ವೈಜ್ಞಾನಿಕ ಮನೋಭಾವವು ಕೇವಲ ಒಂದು ಅಂಶವಲ್ಲ; ಅದು ಅವರ ಸಾಹಿತ್ಯದ ತತ್ತ್ವಶಾಸ್ತ್ರೀಯ ಆಧಾರ. ಅವರು ಯಾವ ವಿಷಯವನ್ನಾದರೂ ಊಹೆ, ನಂಬಿಕೆ ಅಥವಾ ಪುರಾಣಕಥೆಗಳ ಮೂಲಕ ನೋಡದೆ, empirical reasoning ಮೂಲಕ ವಿಶ್ಲೇಷಿಸುತ್ತಾರೆ. ಅವರ ಪಾತ್ರಗಳು ಯಾವುದೇ ವಿಷಯವನ್ನು ವಿಮರ್ಶೆ ಮಾಡದೇ ನಂಬುವುದಿಲ್ಲ. ಬದಲಿಗೆ ಅವುಗಳನ್ನು ಪರಿಶೀಲನೆ, ಪ್ರಶ್ನೆ, ಪರಾಮರ್ಶೆ ಹಾಗೂ ತರ್ಕದ ಮೂಲಕ ಪರೀಕ್ಷಿಸುತ್ತವೆ. ಕರ್ವಾಲೋ ಕಾದಂಬರಿಯ ನಾಯಕ ಎಡ್ಗರ್ ಕರ್ವಾಲೋ ಪ್ರಕೃತಿಯನ್ನು ಅಧ್ಯಯನಿಸುವಲ್ಲಿ “ಹೇಗಿದೆ?”, “ಏಕೆ ಇದೆ?”, “ಹೀಗೆ ಯಾಕೆ ನಡೆಯುತ್ತದೆ?” ಎಂಬ ಪ್ರಶ್ನೆಗಳನ್ನೇ ಪ್ರತಿನಿತ್ಯದ ಬದುಕಿನ ಭಾಗವನ್ನಾಗಿಸಿಕೊಂಡಿದ್ದಾನೆ. ಚಿಟ್ಟೆಗಳ ಜೀವನಚಕ್ರ, ಹಕ್ಕಿಗಳ nesting pattern, ಜೀವಿಗಳ behaviour—all are examined with scientific precision.

ಚಿದಂಬರ ರಹಸ್ಯ ಕಾದಂಬರಿಯಲ್ಲಿ ಹಲವು ವಿಚಿತ್ರ, ನಿಗೂಢ ಘಟನಾವಳಿಗಳು ವೈಜ್ಞಾನಿಕ reasoning ಮೂಲಕವೇ ಪರಿಹರಿಸಲ್ಪಡುತ್ತವೆ. ತೇಜಸ್ವಿಯವರು ಚಮತ್ಕಾರ, ಅಲೌಕಿಕ ಘಟನೆ, ದೇವಶಕ್ತಿಯ ಪವಾಡ ಯಾವುದಕ್ಕಾದರೂ ಅವಲಂಬಿಸಿದರೆ ಓದುಗ ಮೌಢ್ಯಕ್ಕೆ ಒಳಗಾಗುವ ಸಾಧ್ಯತೆ ಇದೆ ಎಂಬುದನ್ನು ಅರಿತಿದ್ದರು.

2. ಮೂಢನಂಬಿಕೆಗಳ ವಿಮರ್ಶೆ ಮತ್ತು ಪ್ರಶ್ನಿಸುವಿಕೆ:

ತೇಜಸ್ವಿಯವರ ಸಾಹಿತ್ಯದಲ್ಲಿ ಮೂಢನಂಬಿಕೆಗಳ ವಿರುದ್ಧದ ಪ್ರತಿರೋಧವು ಕೇವಲ ಬೌದ್ಧಿಕ ವಾದವಲ್ಲ; ಒಂದು ಸಾಮಾಜಿಕ ಅಗತ್ಯತೆ ಮತ್ತು ವಿಜ್ಞಾನಾಧಾರಿತ ಮಾನವಮನಸ್ಸಿನ ವಿಮೋಚನೆಯ ಹೋರಾಟವಾಗಿದೆ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತಕಗಳು, ಪೂಜೆ–ಪರಿಹಾರ, ಶಕುನ–ಅಪಶಕುನಗಳು, ಪವಾಡ ನಂಬಿಕೆಗಳು, ಅದೃಶ್ಯ ಶಕ್ತಿಯ ಭಯ– ಇವೆಲ್ಲದರ ನಿರ್ಮಿತಿಗಳು ತೇಜಸ್ವಿಯವರ ದೃಷ್ಟಿಯಲ್ಲಿ ಮಾನವನ ವೈಚಾರಿಕ ಸಾಮರ್ಥ್ಯವನ್ನು ಕುಗ್ಗಿಸುವ ಅಡೆತಡೆಗಳು. ಅವರು ಸತ್ಯವನ್ನು ಹುಡುಕುವ ಮನುಷ್ಯನ ಮೂಲ ಶಕ್ತಿಯೇ ಪ್ರಶ್ನಿಸುವಿಕೆ ಎಂದು ನಂಬಿದರು. ಹಾಗಾಗಿ ಅವರ ಕೃತಿಗಳಲ್ಲಿ ಮೂಢನಂಬಿಕೆ dismantling ಒಂದು ನಿರಂತರ ಪ್ರಕ್ರಿಯೆಯಾಗಿದೆ. ತೇಜಸ್ವಿಯವರ ಪಾತ್ರಗಳು ಯಾವಾಗಲೂ "ಇದು ಹೀಗೆ ಆಗುತ್ತದೆ ಅಂತ ಬರೆದಿದ್ದಾರೆ, ಆದ್ದರಿಂದ ನಂಬಬೇಕು" ಎಂಬ ಸ್ವೀಕಾರನಿಲುವನ್ನು ಅನುಸರಿಸುವುದಿಲ್ಲ; ಬದಲಿಗೆ "ಹೀಗೆ ಯಾಕೆ ಆಗುತ್ತದೆ?", "ಇದರ ಹಿಂದೆ ಯಾವ ನಿಯಮವಿದೆ?", "ಇಲ್ಲಿ ಯಾವ ಪ್ರಕೃತಿ–ವೈಜ್ಞಾನಿಕ ಕಾರಣ ಇದೆ?" ಎಂಬ ಪ್ರಶ್ನೆಗಳು ಅವರ ಜೀವನದ ಭಾಗವಾಗುತ್ತವೆ.

ಉದಾಹರಣೆಗೆ, ಸಾಮಾನ್ಯ ಜನರು ಭೂಮಿ ಬಿಸಿಯಾಗುವುದು ದೇವರ ಕೋಪಕ್ಕೆ ಸಂಬಂಧಿಸಿದ ಪೌರಾಣಿಕ ನಂಬಿಕೆ ಎಂದು ವಾದಿಸಿದಾಗ, ತೇಜಸ್ವಿಯವರು ಅದನ್ನು atmospheric circulation, humidity variation, greenhouse effects ಮೊದಲಾದ ವೈಜ್ಞಾನಿಕ ಕಾರಣಗಳೊಂದಿಗೆ ವಿವೇಚಿಸುತ್ತಾರೆ. ಪಕ್ಷಿಯ ಕಿರುಚುವಿಕೆಯನ್ನೇ ಅಪಶಕುನವೆಂದು ಭಾವಿಸುವ ಮನೋವೃತ್ತಿಯನ್ನು ಅವರು ಪ್ರಶ್ನಿಸುತ್ತಾರೆ; ಪಕ್ಷಿಗಳು ತಮ್ಮ ಸಹಜ ಪರಿಸರ ಚಕ್ರದ ಭಾಗವಾಗಿ, ತಿನ್ನುವ ಆಹಾರ ಅಥವಾ ವಲಸೆಯ ಆದೇಶದ ಪ್ರಕಾರ ಕೂಗುವುದು ಮಾತ್ರ–ಅದರ ಹಿಂದೆ ಯಾವುದೂ ಅತೀಂದ್ರಿಯ ಸೂಚನೆ ಇಲ್ಲ ಎಂಬುದನ್ನು ತೇಜಸ್ವಿಯವರು ತಾರ್ಕಿಕವಾಗಿ ವಿವರಿಸುತ್ತಾರೆ. ಇದೇ ರೀತಿಯಾಗಿ, ಹಾವುಗಳನ್ನು ನೋಡುವುದನ್ನು ಅಪಾಯ ಅಥವಾ ಅಪಶಕುನ ಎಂದು ಭಾವಿಸುವ ಅಭ್ಯಾಸದ ವಿರುದ್ಧವೂ ಅವರು ಕಠಿಣವಾಗಿ ಮಾತನಾಡುತ್ತಾರೆ. ಹಾವುಗಳು rodent population control ಮಾಡುವ ಮೂಲಕ ಕೃಷಿ ಮತ್ತು ಪರಿಸರಕ್ಕೆ ನೀಡುವ ಮಹತ್ತರ ecological ಸೇವೆಯನ್ನು ತೇಜಸ್ವಿಯವರು ಎತ್ತಿ ಹಿಡಿದು, "ಹಾವು ಪ್ರಕೃತಿಯ ರಕ್ಷಣಾಕಾರಿ, ಅಂಧನಂಬಿಕೆಯ ಬಲಿ ಅಲ್ಲ" ಎಂಬ ನಿಲುವಿಗೆ ಬಲ ತುಂಬುತ್ತಾರೆ.

ಈ ರೀತಿಯ ಮೌಢ್ಯಗಳ dismantling ಮೂಲಕ ತೇಜಸ್ವಿಯವರು ಓದುಗರಲ್ಲಿ cientific skepticism, logical reasoning, ಮತ್ತು critical consciousness

ಬೆಳೆಸುತ್ತಾರೆ. ಅವರ ಬರಹಗಳು ಮನುಷ್ಯನಿಗೆ ಅಲೌಕಿಕತೆಯ ಎದುರು ಭಯದಿಂದ ತಲೆಬಾಗುವ ಬದಲು, ಪ್ರಕೃತಿಯ ನಿಯಮಗಳನ್ನು ಅರ್ಥಮಾಡಿಕೊಂಡು, ಅವುಗಳ ಹಿಂದೆ ಇರುವ ಕಾರಣ–ಕಾರ್ಯ ಸಂಬಂಧಗಳನ್ನು ತಿಳಿಯಲು ಪ್ರೇರೇಪಿಸುತ್ತವೆ. ತೇಜಸ್ವಿಯವರ ಸಾಹಿತ್ಯದಲ್ಲಿ 'ಪ್ರಶ್ನಿಸುವಿಕೆ' ಕೇವಲ ಜ್ಞಾನಾರ್ಜನೆಯ ಮಾರ್ಗವಲ್ಲ, ಬದಲಾಗುವ ಸಮಾಜದ ಬೌದ್ಧಿಕ ಕಂಕಣ. ಅವರು ಸತ್ಯದ ಹುಡುಕಾಟವನ್ನು ಧಾರ್ಮಿಕ ಬಲ, ಹಣದ ಬಲ, ಅಥವಾ ಪುರೋಹಿತಶಾಹಿಯಿಂದ ಮುಕ್ತಗೊಳಿಸಿ ಯುಕ್ತಿ–ವಿಜ್ಞಾನ–ಪ್ರಕೃತಿ ಅರಿವುಗಳ ನೆಲೆಯಲ್ಲಿ ನಿಲ್ಲಿಸುತ್ತಾರೆ. ಹೀಗಾಗಿ ತೇಜಸ್ವಿಯವರ ಮೂಢನಂಬಿಕೆಗಳ ವಿಮರ್ಶೆ ಕನ್ನಡ ಸಾಹಿತ್ಯದಲ್ಲಿನ ವೈಜ್ಞಾನಿಕ ಚಿಂತನೆಯ ಬಲಿಷ್ಠ ಘೋಷಣೆಯಾಗಿದೆ.

3. ವೈಜ್ಞಾನಿಕ ವಿಧಾನದ ಚಿತ್ರಣ:

ತೇಜಸ್ವಿಯವರ ಸಾಹಿತ್ಯದಲ್ಲಿ ವೈಜ್ಞಾನಿಕ ವಿಧಾನ ಕೇವಲ ಜ್ಞಾನಪ್ರಕ್ರಿಯೆಯಾಗಿ ಮಾತ್ರವಲ್ಲ, ಬದುಕನ್ನು ಅರಿಯುವ ತಾತ್ವಿಕ ಮಾರ್ಗವಾಗಿಯೂ ಕಾರ್ಯನಿರ್ವಹಿಸುತ್ತದೆ. ಅವರ ಕೃತಿಗಳಲ್ಲಿನ ಪಾತ್ರಗಳು ಪ್ರಕೃತಿಯ ಜೊತೆ ಸಂಬಂಧ ಬೆಸೆಯುವಾಗ, ಸಮಸ್ಯೆಗಳನ್ನು ಪರಿಹರಿಸುವಾಗ ಅಥವಾ ಅನಿಸಿಕೆಗಳನ್ನು ಪರಿಶೀಲಿಸುವಾಗ ಸದಾ systematic scientific approach ಅನ್ನು ಅನುಸರಿಸುತ್ತವೆ. ಮೊದಲ ಹಂತವಾದ ಅವಲೋಕನ ತೇಜಸ್ವಿಯವರ ಬರಹದ ಆತ್ಮ. ಮಲೆಯ ಮಂಜಿನ ಚಲನೆ, ಮಳೆಯ ನೆರಳು, ಹಕ್ಕಿಗಳ ಹಾರಾಟ, ಕೀಟಗಳ ಗುನುಗು—all meticulously documented. ಅವರು "ಕಣ್ಣು ತೆರೆದು ನೋಡುವುದು" ವಿಜ್ಞಾನದ ಪ್ರಥಮ ಹಂತ ಎಂದು ನಂಬಿದರು.

ಅವಲೋಕನದ ಆಧಾರದಲ್ಲಿ ಪಾತ್ರಗಳು ಊಹೆ ನಿರ್ಮಿಸುತ್ತವೆ. ಉದಾಹರಣೆಗೆ, ಮಳೆ ಬರುವ ಮುಂಚೆ ಗಾಳಿಯ ದಿಕ್ಕು ಬದಲಾಗುವುದು ಏಕೆ? ಕೆಲವು ಕೀಟಗಳು ರಾತ್ರಿ ಮಾತ್ರ ಚಲಿಸುವುದು ಏಕೆ? ಕೆಲವು ಮರಗಳು ಬೇಸಿಗೆಯಲ್ಲಿ ಚಿಗುರು ಬಿಡುವುದು ಯಾವ ಕಾರಣಕ್ಕೆ?–ಇಂತಹ ಪ್ರಶ್ನೆಗಳು ಪಾತ್ರಗಳನ್ನು ಊಹೆ ರೂಪಿಸುವಂತೆ ಮಾಡುತ್ತವೆ. ಈ ಊಹೆಯನ್ನು ನೇರವಾಗಿ ನಂಬುವುದಿಲ್ಲ; ತೇಜಸ್ವಿಯವರ ಕಥಾ ರಚನೆ ಮುಂದಿನ ಹಂತವಾದ ಪ್ರಯೋಗ ಕಡೆ ಸಾಗುತ್ತದೆ. ಪಾತ್ರಗಳು ತಮ್ಮ ಊಹೆಗಳನ್ನು ಪರೀಕ್ಷಿಸಲು ಪರಿಸರದೊಡನೆ direct interaction ಮಾಡುತ್ತವೆ–ಕೀಟಗಳ ನಡೆ ನೋಡುವುದು, ಪಕ್ಷಿಗಳ ಗಂಟು–ಕಿರುಚಾಟವನ್ನು ದಾಖಲಿಸುವುದು, ಮಣ್ಣಿನ ಬಣ್ಣ ಬದಲಾಗುವುದನ್ನು ಹೋಲಿಕೆ ಮಾಡುವುದು, ಮರದ ಎಲೆಗಳ ಇಳಿವಳಿಕೆಯ ಸಮಯವನ್ನು ಗಮನಿಸುವುದು–all these become their natural experiments. ಪ್ರಯೋಗದ ನಂತರ ತೇಜಸ್ವಿಯವರ ಪಾತ್ರಗಳು ತಾವು ಸಂಗ್ರಹಿಸಿದ ಮಾಹಿತಿಯನ್ನು ಪರಿಶೀಲನೆಗೆ ಒಳಪಡಿಸುತ್ತವೆ.

ಇದು ಅವರ ಸಾಹಿತ್ಯದ ಅತ್ಯಂತ ಬಲಿಷ್ಠ ಹಂತ. ತಮ್ಮ ಅವಲೋಕನಗಳನ್ನು ಪರಸ್ಪರ ಹೋಲಿಕೆ ಮಾಡಿದಾಗ ಅಥವಾ ಮೊದಲಿನ ಊಹೆಗಳಿಗೆ ಹೊಂದದ ಯಾವುದೇ ನೂತನ ಸಂಗತಿ ಕಂಡುಬಂದಾಗ, ಅವರು ಹೊಸ ತರ್ಕವನ್ನು ಹುಡುಕುತ್ತಾರೆ. ಈ verification ಪ್ರಕ್ರಿಯೆಯಲ್ಲಿ ಅವರು ಸತ್ಯ ಮತ್ತು ಸುಳ್ಳು ನಡುವೆ ಸ್ಪಷ್ಟ ಗಡಿ ಎಳೆಯುತ್ತಾರೆ. ಇದು ತೇಜಸ್ವಿಯವರ ಸಾಹಿತ್ಯದ logical discipline ಅನ್ನು ತೋರಿಸುತ್ತದೆ.

ಕೊನೆಯಲ್ಲಿ ಪಾತ್ರಗಳು ತೀರ್ಮಾನಕೆ ಬರುತ್ತವೆ. ಆದರೆ ಇದು ಡುರುಜುಣಥಿಯ ತೀರ್ಮಾನವಲ್ಲ; ಇದೊಂದು open-ended, evolving scientific conclusion. ಪ್ರಕೃತಿಯ ಯಾವುದೇ phenomenon-ಹೂವು ಬಿರುಸಾಗಿ ಅರಳುವುದು, ಮಳೆ ಹೊಡೆದಾಟದ intensity, ಪಕ್ಷಿಗಳ ವಲಸೆ ಮಾರ್ಗ, ಮಣ್ಣಿನ ತೇವಾಂಶದಲ್ಲಿ ಬರುವ ಬದಲಾವಣೆ–ಎಲ್ಲವೂ ಬಹುಕಾರಣಗಳಿಂದ ಕೂಡಿರಬಹುದು ಎಂಬ ಅರಿವಿನಿಂದಲೇ ಅವರು ತೀರ್ಮಾನಿಸುತ್ತಾರೆ. ಹೀಗಾಗಿ ತೇಜಸ್ವಿಯವರ ಪಾತ್ರಗಳು "ಇದು ಹೀಗೆ" ಎಂಬ ನಿಶ್ಚಿತ ನಂಬಿಕೆಯ ಬಳಿಗೆ ಸಾಗದೆ, "ಈಗ ತಿಳಿದಿರುವ ತನ್ನ ಇಚ್ಛೆಯ ಪ್ರಕಾರ ಹೀಗೆ ಇರಬಹುದು" ಎಂಬ ವೈಜ್ಞಾನಿಕ ವಿನಯವನ್ನು ಅಳವಡಿಸಿಕೊಳ್ಳುತ್ತವೆ.

ಹೀಗೆ, ತೇಜಸ್ವಿಯವರ ಸಾಹಿತ್ಯವು Scientific Method ಅನ್ನು ಕೇವಲ ವಿವರಣೆಗೊಳಿಸಲಿಲ್ಲ; ಅದನ್ನು dynamic storytelling ಯ backbone ಆಗಿ ರೂಪಿಸಿತು. ಮಳೆ ಬರುವ ಮುನ್ಸೂಚನೆ, ಕೀಟಗಳ ಚಲನೆಯ ರಹಸ್ಯಗಳು, ಹಕ್ಕಿಗಳ ಗೂಡು ಕಟ್ಟುವ ವಿಧಾನಗಳು, ಮರಗಳ ಬೆಳವಣಿಗೆಯ ಚಕ್ರಗಳು, ಹಾವು–ಪಿಲ್ಲಿಗಳ ನಡವಳಿಕೆ–all are scientifically reasoned phenomena. ಅವರ ಬರಹಗಳು ಪ್ರಕೃತಿಯನ್ನು ಪಾವಡವೆಂದು ನೋಡುವ ಮನೋವೃತ್ತಿಯನ್ನು scientific temperament ಮೂಲಕ ಜ್ಞಾನವಾಗಿ ಪರಿವರ್ತಿಸುತ್ತವೆ. ಈ ರೀತಿಯಾಗಿ ತೇಜಸ್ವಿಯವರು ಕನ್ನಡ ಸಾಹಿತ್ಯದಲ್ಲಿ ನೈಜ ವೈಜ್ಞಾನಿಕ ವಿಧಾನವನ್ನು ಅಳವಡಿಸಿದ ಮೊದಲ ಮತ್ತು ಅತ್ಯಂತ ಪ್ರಬಲ ಲೇಖಕರಲ್ಲಿ ಒಬ್ಬರಾಗಿದ್ದಾರೆ.

4. ಪರಿಸರ ಸಂರಕ್ಷಣೆಯ ತತ್ತ್ವ: ತೇಜಸ್ವಿಯವರ ಸಾಹಿತ್ಯದ ಜೀವನಾಡಿ

ತೇಜಸ್ವಿಯವರ ಸಾಹಿತ್ಯದಲ್ಲಿ ಪರಿಸರ ಸಂರಕ್ಷಣೆ ಒಂದು ದ್ವಿತೀಯ ವಿಷಯವಲ್ಲ; ಅದು ಅವರ ಸಂಪೂರ್ಣ ಬರಹದ ಜೀವನಾಡಿ, ಕೇಂದ್ರ ಚಿಂತನೆ ಮತ್ತು ಸಾಂಸ್ಕೃತಿಕ–ವೈಜ್ಞಾನಿಕ ಜವಾಬ್ದಾರಿಯ ಅಭಿವ್ಯಕ್ತಿ. ಪ್ರಕೃತಿ ನಾಶವಾಗುವುದು ಕೇವಲ ಪರಿಸರ ಸಮಸ್ಯೆಯಲ್ಲ, ಅದು ಮಾನವ ಸಂಸ್ಕೃತಿ, ಸಂತತಿ ಮತ್ತು ಬದುಕಿನ ಮೂಲಗಳಿಗೆ ನೇರ ಹಾನಿ ಎಂದು ತೇಜಸ್ವಿಯವರು ಎಚ್ಚರಿಸುತ್ತಾರೆ. ಮಲೆನಾಡಿನ ಮಳೆ, ಹಿಮ್ಮಡಿ ಚಿಮ್ಮುವ ಕಾಡು ಹೊಳೆಗಳು,

ದಟ್ಟ ಅರಣ್ಯಗಳು, ಕೆಂಪಗೆ ಹೊಳೆಯುವ laterite ಮಣ್ಣು, ಚಿರತೆ – ಹುಲಿ – ಹರಿಣಗಳ ವಾಸಸ್ಥಾನ – all these are nature's irreplaceable gifts ಎಂದು ಅವರು ನಿರಂತರವಾಗಿ ಸೂಚಿಸುತ್ತಾರೆ. ಪ್ರಕೃತಿಗೆ ಸಂಭವಿಸುವ ಯಾವುದೇ ಹಾನಿಯು ಅನಂತರವಾಗಿ ಮನುಷ್ಯನ ಮೇಲೆ ಹಿಂತಿರುಗಿ ಬರುವ environmental feedback mechanism–nature's retaliation—ಎಂಬ ತತ್ವವನ್ನು ಅವರು ತಮ್ಮ ಸಾಹಿತ್ಯದ ಮೂಲಕ ಜನರಲ್ಲಿ ಬಿತ್ತುತ್ತಾರೆ.

ತೇಜಸ್ವಿಯವರು ತಮ್ಮ ಬರಹಗಳಲ್ಲಿ contemporary ecological threats ಅನ್ನು ಸೂಕ್ಷ್ಮವಾಗಿ ದಾಖಲಿಸಿದ್ದಾರೆ. ಅರಣ್ಯ ನಾಶವು ಕೇವಲ ಮರಗಳ ನಾಶವಲ್ಲ; ಅದು ಮಣ್ಣಿನ ಹದನಾಶ, ನೀರಿನ ಮೂಲಗಳ ಕಳೆ ಮತ್ತು ಅನೇಕ species extinction ಗೆ ಕಾರಣವಾಗುತ್ತದೆ. ಕೃಷಿಗಳಲ್ಲಿ ಕ್ರಿಮಿನಾಶಕಗಳ ಅತಿವ್ಯಯದಿಂದ ಮಣ್ಣು ವಿಷಪೂರಿತವಾಗುವುದು, ನೀರಿನ ಗುಣಮಟ್ಟ ಕುಸಿಯುವುದು, ಕೀಟಭಕ್ಷಕ ಪಕ್ಷಿಗಳ ನಾಶಕ್ಕೆ ಕಾರಣವಾಗುವುದು—all interconnected ecological disasters ಎಂದು ಅವರು ವಿವರಿಸುತ್ತಾರೆ. "ಅಕ್ರಮ ಶಿಕಾರಿ" ಮತ್ತು ಹುಲಿ–ಕರಡಿ–ಪನ್ನಿ ಮುಂತಾದ ಕಾಡು ಪ್ರಾಣಿಗಳ ಹತ್ಯೆಯನ್ನು ಅವರು ಜೀವವೈವಿಧ್ಯದ ಮೇಲೆ ನಡೆಯುವ ನೇರ ದಾಳಿಯಂತೆ ಚಿತ್ರಿಸುತ್ತಾರೆ. ಕೈಗಾರಿಕಾ ಮಾಲಿನ್ಯ ಸೇರಿದಂತೆ ಇವು ಮಲೆನಾಡಿನ ವಾತಾವರಣ, ಜಲಚಕ್ರ ಮತ್ತು ಆಹಾರ ಸರಪಳಿಯನ್ನು ಹೇಗೆ ಹಾಳುಮಾಡುತ್ತವೆ ಎಂಬುದರ ಮೇಲೆ ಅವರು ಕಳಕಳಿಯಿಂದ ಬರೆಯುತ್ತಾರೆ.

ತೇಜಸ್ವಿಯವರು ವಿಶೇಷವಾಗಿ ವಿರೋಧಿಸಿದ another dangerous trend ಎಂದರೆ ಏಕರೂಪಿ ಕೃಷಿ. ಅವರು ಇದನ್ನು "ecological suicide" ಎಂದು ಗುರುತಿಸುತ್ತಾರೆ. ಏಕರೂಪಿ ಕೃಷಿಯು ಮಣ್ಣಿನ ಪೋಷಕಾಂಶ ಕುಗ್ಗುವಿಕೆ, ಕೀಟ–ರೋಗಗಳ ಹೆಚ್ಚುವಿಕೆ, ಸ್ಥಳೀಯ ಸಸ್ಯ–ಪಶು ಜಾತಿಗಳ ನಾಶ, ನೀರಿನ ಅತಿಯಾದ ಬಳಕೆ, ಮತ್ತು ಮಣ್ಣಿನ ಜೈವಿಕ ಕ್ರಿಯಾಶೀಲತೆಯ ಕುಸಿತ – all cause soil death ಎಂದು ತೇಜಸ್ವಿ ಎಚ್ಚರಿಸುತ್ತಾರೆ. ಗಿಡ – ಮರಗಳ ಅಳಿವು ಬಗ್ಗೆ ಅವರ ನೋವು ಅತಿ ನೈಜ. ಮರವೆಂದರೆ ಅವರ ದೃಷ್ಟಿಯಲ್ಲಿ ಕೇವಲ ಗಿಡವಲ್ಲ; ಅದು carbon-cycle, water-cycle, microclimate regulation ಮತ್ತು landscape identityಯ ಜೀವಾಳ.

ಈ ಸಮಗ್ರ ecological vision ತೇಜಸ್ವಿಯವರ ಕೃತಿಗಳಾದ ಕರ್ವಾಲೋ, ಚಿದಂಬರ ರಹಸ್ಯ, ಮತ್ತು ಜುಗಾರಿ ಕ್ರಾಸ್ ಅತ್ಯಂತ ಜೀವಂತವಾಗಿ ಗೋಚರಿಸುತ್ತದೆ. ಈ ಕೃತಿಗಳು ಕೇವಲ ಕತೆಗಿಂತಲೂ ಮೇಲಾಗಿ biodiversity crisis ಗೆ documenta-

tion ಗಳಂತೆ ಕೆಲಸ ಮಾಡುತ್ತವೆ. ಕರ್ವಾಲೋಯಲ್ಲಿ ಮಲೆನಾಡಿನ ಪಕ್ಷಿಜಾತಿಗಳ extinction crisis, ಚಿದಂಬರ ರಹಸ್ಯನಲ್ಲಿ ಕಾಡಿನ ನಾಶದಿಂದ ಉಂಟಾಗುವ ಸಾಮಾಜಿಕ–ಪರಿಸರಿಕ ಸಂಘರ್ಷ, ಜುಗಾರಿಯಲ್ಲಿ ಅಡಿವಾಸಿ ಪರಿಸರ ಜ್ಞಾನದ ಮಹತ್ವ–all vividly portray the ecological degradation. ಈ ಕೃತಿಗಳು ವೈಜ್ಞಾನಿಕ ಅಧ್ಯಯನದ ಸಮನ್ವಯದೊಂದಿಗೆ ಮಲೆನಾಡಿನ ಪರಿಸರದ ground-level realitie ಅನ್ನು ತಿಳಿಸುವ authentic environmental narratives ಆಗಿ ನಿಲ್ಲುತ್ತವೆ.

ತೇಜಸ್ವಿಯವರ ಪರಿಸರ ತತ್ವದಲ್ಲಿ ಒಂದು ಗಂಭೀರ ನಿಲುವಿದೆ:

ಪ್ರಕೃತಿಯನ್ನು ರಕ್ಷಿಸುವುದು ಮಾನವ ತನ್ನ ಬದುಕನ್ನು ಉಳಿಸಿಕೊಳಲು ಕಡ್ಡಾಯ. ಈ ನಿಲುವಿನ ದಾರ್ಶನಿಕ ಆಳತನವೇ ತೇಜಸ್ವಿಯವರ ಸಾಹಿತ್ಯವನ್ನು ಕನ್ನಡದ eco-literary tradition ನಲ್ಲಿ ಅಪ್ರತಿಮವಾಗಿ ಅಲಂಕರಿಸುತ್ತದೆ.

5. ಸೂಕ್ಷ್ಮ ಪರಿಸರ ವ್ಯವಸ್ಥೆಯ ಮಹತ್ವ

ತೇಜಸ್ವಿಯವರ ಪರಿಸರ ಚಿಂತನೆಗೆ ಮೂಲಾಧಾರವಾದ ಅಂಶವೊಂದು ಇದ್ದರೆ ಅದು ಸೂಕ್ಷ್ಮ ಪರಿಸರ ವ್ಯವಸ್ಥೆಯ ಗಾಢ ಅರ್ಥೈಸಿಕೆಯೇ. ಅವರು ಪರಿಸರವನ್ನು ಕೇವಲ "ಕಾಡು–ಮರಗಳ ಸಂಗ್ರಹ" ಎಂದು ನೋಡದೇ, ಅಲ್ಲಿ ವಾಸಿಸುವ ಪ್ರತಿಯೊಂದು ಜೀವಿಯೂ ಆ ವ್ಯವಸ್ಥೆಯ ಅವಿಭಾಜ್ಯ ಕೊಂಡಿಯೆಂದು ಸ್ಪಷ್ಟಪಡಿಸುತ್ತಾರೆ. ಅವರ ಸಾಹಿತ್ಯದಲ್ಲಿ "ಸಣ್ಣ" ಮತ್ತು "ದೊಡ್ಡ" ಎಂಬ ಮಾನವಮೂಲಕ ವರ್ಗೀಕರಣಕ್ಕೇ ಸ್ಥಳವಿಲ್ಲ; ಒಂದು ಚಿಟ್ಟೆಯ ಜೀವನಚಕ್ರವೂ ಹುಲಿಯ ಬದುಕಿನಷ್ಟೇ ಮಹತ್ವದ್ದು. ಪ್ರಕೃತಿಯಲ್ಲಿರುವ ಪ್ರತಿಯೊಂದು ಜೀವಿಯೂ ecological chain ನ ಹೊಣೆಗಾರಿಯನ್ನು ಹೊತ್ತಿರುವ living component.

ತೇಜಸ್ವಿಯವರ ಕೃತಿಗಳಲ್ಲಿ ಚಿಟ್ಟೆಗಳ metamorphosis, ಕೀಟಗಳ pollination ಚಟುವಟಿಕೆ, ಪಕ್ಷಿಗಳ seed dispersal, ಹಾವು–ಮೂಷಿಕ ನಡುವಣ rodent control, ಜೀವಾಣುಗಳ decomposition ಪ್ರಕ್ರಿಯೆ ಮುಂತಾದವನನ್ನು ಅವರು ಅತ್ಯಂತ ಸೂಕ್ಷ್ಮವಾಗಿ ವಿವರಿಸುತ್ತಾರೆ. ಉದಾಹರಣೆಗೆ, ಒಂದು ಚಿಟ್ಟೆಯ ಕಸುವಿನಿಂದ ಹೊರಬರುವ transformation ಅನ್ನು ಅವರು ಕೇವಲ ಅಲಂಕಾರಿಕವಾಗಿ ವರ್ಣಿಸುವುದಿಲ್ಲ; ಅದರ ಹಿಂದೆ ಇರುವ biological principles, hormonal shifts, ecosystemನಲ್ಲಿ ಅದರ ಪಾತ್ರ–ಇವೆಲ್ಲವನ್ನೂ ecological depth ನೊಂದಿಗೆ ವಿವರಿಸುತ್ತಾರೆ. ಕೀಟಗಳು ಪುಷ್ಪ ಪರಾಗಸಂಚಯ ಮಾಡುವ ರೀತಿಯನ್ನು ಅವರು "ಪ್ರಕೃತಿಯ ಮೌನಕಾರ್ಮಿಕರು" ಎಂದು ಬಣ್ಣಿಸಿ, ಬೆಳೆ ಉತ್ಪಾದನೆಯ ಮೂಲವೇ ಅವುಗಳ ಅನುಗ್ರಹವಾಗಿದೆ ಎಂದು

ಒತ್ತಿ ಹೇಳುತ್ತಾರೆ. ಪಕ್ಷಿಗಳು ಬೀಜವನ್ನು ದೂರದೂರಿಗೆ ಹರಡುವುದು ಕಾಡಿನ ಹೊಸ ಪೀಳಿಗೆಯನ್ನು ಹುಟ್ಟುಹಾಕುವ ಪ್ರಕೃತಿಯ seed-mobility system ಎಂದು ಅವರು ವಿವರಿಸುತ್ತಾರೆ. ಹಾವುಗಳು ಮೂಷಿಕ ಸಂವರ್ಧನೆಯನ್ನು ನಿಯಂತ್ರಿಸುವುದು ಪರಿಸರ ಸಮತೋಲನದ ಅತ್ಯಂತ ಪರಿಣಾಮಕಾರಿ ಜೀವವೈಜ್ಞಾನಿಕ phenomenon ಎಂದು ಅವರು ನಿರೂಪಿಸುತ್ತಾರೆ.

ತೇಜಸ್ವಿಯವರ ecological vision ನಲ್ಲಿ ಪರಿಸರ ಸಂರಕ್ಷಣೆ = ಮರಗಳನ್ನು ಉಳಿಸುವುದು ಎಂಬ ಸರಳ ಸಮೀಕರಣವಿಲ್ಲ. ಪರಿಸರ ಸಂರಕ್ಷಣೆ ಅಂದರೆ ಜೀವವೈವಿಧ್ಯ ಸಂಪೂರ್ಣವಾಗಿ ಬದುಕಬೇಕಾದ ಜಾಲವನ್ನು ರಕ್ಷಿಸುವ ಜವಾಬ್ದಾರಿ. ಅವರ ದೃಷ್ಟಿಯಲ್ಲಿ ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳಿಂದ ಹಿಡಿದು ಗಾಳಿಯ ಗುಣಮಟ್ಟದವರೆಗೆ, pollinators ಗಳಾದ ಚಿಟ್ಟೆ–ಜೇನುಗೂಡಿನಿಂದ ಹಿಡಿದು apex predators ಗಳಾದ ಹುಲಿ–ಚಿರತೆಯವರೆಗೆ–all are interdependent. ಅವುಗಳಲ್ಲಿ ಒಂದೇ ಒಂದು ಕೊಂಡಿ ದುರ್ಬಲವಾದರೂ, ಪೂರಾ ecological system domino effect ಮೂಲಕ ಕುಸಿಯುತ್ತದೆ ಎಂಬುದನ್ನು ಅವರು repeatedly ಸೂಚಿಸುತ್ತಾರೆ.

ತೇಜಸ್ವಿಯವರ ಸಾಹಿತ್ಯದಲ್ಲಿ ಮಲೆನಾಡಿನ ಮಣ್ಣು ಜೀವಂತ ಅಸ್ತಿತ್ವ – ಅಲ್ಲಿ billions of microorganisms ಗಳು ಮಣ್ಣಿನ ಭೂಗರ್ಭಶಾಸ್ತ್ರ ಮತ್ತು fertility ಯನ್ನು ನಿಯಂತ್ರಿಸುತ್ತವೆ. ಈ ಮಣ್ಣಿಗೆ ನೀಡಿದ ಮಹತ್ವವೇ ಅವರು ಪರಿಸರವನ್ನು holistic system ಆಗಿ ಮನಗೊಳ್ಳುವ ಶಕ್ತಿಯನ್ನು ತೋರುತ್ತದೆ. ಗಾಳಿ ಮಲೆನಾಡಿನಲ್ಲಿ ತೇವಾಂಶವನ್ನು ಹೇಗೆ ಹೊತ್ತು ಸಾಗುತ್ತದೆ, ಮಳೆ ಯಾವ ಋತುಚಲನೆಯ ಪ್ರತಿಕ್ರಿಯೆ, ಹೊಳೆಗಳಲ್ಲಿ ಜೀವಿಸುವ tiny aquatic species ಗಳ ಪರಿಣಾಮ—all are presented as parts of a single, tightly-knit, sensitive ecological machinery.

ಇದಲ್ಲದೆ, ತೇಜಸ್ವಿಯವರು human–nature relationship ನ್ನೂ ecological chain ನ ಭಾಗವೆಂದೇ ನೋಡುತ್ತಾರೆ. ಮನುಷ್ಯನು ಆ ಸರಪಳಿಯ "ಬುದ್ಧಿವಂತ ಸದಸ್ಯ", ಆದರೆ "ಸರ್ವಾಧಿಕಾರಿ" ಅಲ್ಲ. ಪ್ರಕೃತಿಯನ್ನು ಶೋಷಿಸುವಾಗ ಮನುಷ್ಯ ತನ್ನ ನೆಲವನ್ನೇ ತೆಗೆಯುತ್ತಿರುವನು ಎಂಬ ecological boomerang theory ಯನ್ನು ಅವರು ತಮ್ಮ ಕೃತಿಗಳಲ್ಲಿ ಸ್ಪಷ್ಟಪಡಿಸುತ್ತಾರೆ.

ಹೀಗಾಗಿ ತೇಜಸ್ವಿಯವರ ecological chain ಕುರಿತು ಚಿಂತನೆ ಕನ್ನಡ ಸಾಹಿತ್ಯವನ್ನು ಕೇವಲ ಪ್ರಕೃತಿ ವರ್ಣನೆಯಿಂದ ecological philosophy ಯತ್ತ ಎತ್ತುತ್ತದೆ.

ಪ್ರತಿಯೊಂದು ಜೀವಿಯೂ, ಅನಿಲವೂ, ಮಣ್ಣೂ, ನೀರಿನ ಹನಿಯೂ –ಪರಿಸರ ಸಂರಕ್ಷಣೆಯ ಮಹಾ ಸಂಗೀತದಲ್ಲಿ ಒಂದು ಅಗತ್ಯ ಸ್ವರ ಎಂದು ತೇಜಸ್ವಿಯವರು ನೆನಪಿಸಿದ್ದಾರೆ.

6. ವೈಜ್ಞಾನಿಕ ಚಿಂತನೆ ಮತ್ತು ಪರಿಸರ ಪ್ರಜ್ಞೆಯ ಸಮನ್ವಯ

ತೇಜಸ್ವಿಯವರ ಪ್ರಮುಖ ಕೊಡುಗೆ ಎಂದರೆ: Scientific Reasoning + Ecological Ethics = Sustainable Thinking.

ಅವರಿಗೆ ಮರಗಳ ಮಹತ್ವ ತಿಳಿಯಲು ಅವನ್ನು ಪೂಜಿಸುವ ಅಗತ್ಯವಿಲ್ಲ; ಅವುಗಳ:

- Photosynthesis,
- Carbon-cycle contribution,
- Water-cycle maintenance,
- Soil-binding capacity

ಇವುಗಳನ್ನು ತಿಳಿದರೆ ಪರಿಸರ ಸಂರಕ್ಷಣೆ ಒಂದು scientific necessity ಎಂದು ಸ್ಪಷ್ಟವಾಗುತ್ತದೆ. ಅವರ ಮಿಲೇನಿಯಂ ಪ್ರಬಂಧಗಳಲ್ಲಿ global warming, energy crisis, pollution control, climate change ಮುಂತಾದ ವಿಷಯಗಳನ್ನು authentic scientific data ನಿಂದ ವಿಶ್ಲೇಷಿಸಲಾಗಿದೆ.

ಸಮಾರೋಪ:

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯವು ಆಧುನಿಕ ಕನ್ನಡ ಓದುಗರಿಗೆ scientific ecological consciousness ಅನ್ನು ಬಿತ್ತಿದ ಅಪರೂಪದ ಬಂಡಾಯ ಚಿಂತನೆ. ಅಂಧನಂಬಿಕೆಗಳ ವಿರುದ್ಧದ ಧೈರ್ಯ, ಪ್ರಕೃತಿಯ ವೈಜ್ಞಾನಿಕ ವಿವೇಚನೆ, ಅರಣ್ಯ–ಜೀವವೈವಿಧ್ಯದ ecological importance, ಹಾಗೂ ಮನುಷ್ಯ – ಪ್ರಕೃತಿ ಸಹಬಾಳ್ವೆಯ ತಾತ್ವಿಕ ಸ್ಥಾಪನೆ – all these form a new intellectual framework in Kannada literature. ತೇಜಸ್ವಿಯವರ ಸಾಹಿತ್ಯ ಮಾನವೀಯತೆ, ವಿಜ್ಞಾನ, ಪ್ರಕೃತಿ ಮತ್ತು ನೈತಿಕ ಜವಾಬ್ದಾರಿಗಳ ಸಂಗಮವಾಗಿದೆ. ಅವರು ತೋರಿಸಿದ ದಾರಿ ಒಂದೇ – "ವೈಜ್ಞಾನಿಕ ಜ್ಞಾನವೇ ಪರಿಸರ ಸಂರಕ್ಷಣೆಯ ಅತ್ಯುತ್ತಮ ಸಾಧನ." ಈ ನಿಲುವು ತೇಜಸ್ವಿಯವರನ್ನು Kannada eco-literature ಯ ಶ್ರೇಷ್ಠ ಕಾರ್ಯಕರ್ತರನ್ನಾಗಿ ಮತ್ತು ಮುಂದಿನ ಪೀಳಿಗೆಯ ಪರಿಸರ ಚಳುವಳಿಗಾರರಿಗೆ ಆತ್ಮಶಕ್ತಿ ನೀಡುವ ಚಿಂತಕರನ್ನಾಗಿ ರೂಪಿಸಿದೆ.

REFERENCES :

1. ಕೆ.ಪಿ. ಪೂರ್ಣಚಂದ್ರ ತೇಜಸ್ವಿ. (2013). ಕರ್ವಾಲೋ. ಪುಸ್ತಕ ಪ್ರಕಾಶನ, ಮೈಸೂರು.
2. ಕೆ.ಪಿ. ಪೂರ್ಣಚಂದ್ರ ತೇಜಸ್ವಿ. . (2013). ಚಿದಂಬರ ರಹಸ್ಯ. ಪುಸ್ತಕ ಪ್ರಕಾಶನ, ಮೈಸೂರು.
3. ಕೆ.ಪಿ. ಪೂರ್ಣಚಂದ್ರ ತೇಜಸ್ವಿ. (1991). ಪರಿಸರದ ಕತೆ, ಪುಸ್ತಕ ಪ್ರಕಾಶನ, ಮೈಸೂರು.
4. ಕೆ.ಪಿ. ಪೂರ್ಣಚಂದ್ರ ತೇಜಸ್ವಿ. ಮಿಲೇನಿಯಂ ಸರಣಿ
5. ಕೆ.ಪಿ. ಪೂರ್ಣಚಂದ್ರ ತೇಜಸ್ವಿ. (2012), ಹುಲಿಯೂರಿನ ಸರಹದ್ದು , ಪುಸ್ತಕ ಪ್ರಕಾಶನ, ಮೈಸೂರು.
6. ಕೆ.ಪಿ. ಪೂರ್ಣಚಂದ್ರ ತೇಜಸ್ವಿ. (2012), ಲಿಂಗಬಂದ ಕಥೆ, ಪುಸ್ತಕ ಪ್ರಕಾಶನ, ಮೈಸೂರು.
7. Guha, R. (1995). Ecology and equity: The use and abuse of nature in contemporary India. Oxford University Press.
8. Gadgil, M., & Guha, R. (1992). This fissured land: An ecological history of India. Oxford University Press.
9. ಕರೀಗೌಡ ಬೀಚನಹಳ್ಳಿ, (2019), ಕೆ.ಪಿ. ಪೂರ್ಣಚಂದ್ರ ತೇಜಸ್ವಿ: ಬದುಕು–ಬರಹ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
10. ಮಹೇಶರಯ್ಯ ಎಚ್.ಎಂ., (2002), ಕೆ.ಪಿ. ಪೂರ್ಣಚಂದ್ರ ತೇಜಸ್ವಿ , ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

***

ಸತ್ಯ ಶುದ್ಧ ಕಾಯಕದ ಶಿವಶರಣೆ ಸತ್ಯಕ್ಕ

1 ಡಾ. ಚನ್ನಮ್ಮ ಎನ್. ಅಲ್ಬಾ

ಸಹಾಯಕ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ

ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ

channammanalba@gmail.come

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ 12ನೇ ಶತಮಾನವು ಅದೊಂದು ಅಪೂರ್ವಯುಗ. ಬೇರೆ ಯಾವ ಭಾಷೆಯಲ್ಲಿಯೂ ರಚನೆಯಾಗದ ವಿಶಿಷ್ಟ ಶೈಲಿಯ ವಚನ ಸಾಹಿತ್ಯದ ಹುಲುಸಾದ ಬೆಳೆ ಬೆಳೆದ ಕಾಲವದು. ಅಸ್ತವ್ಯಸ್ತವಾಗಿದ್ದ ಸಾಮಾಜಿಕ ವ್ಯವಸ್ಥೆಯನ್ನು ಸುವ್ಯವಸ್ಥೆಗೆ ತರಲು ಶಿವಶರಣರು ಕಂಕಣಬದ್ಧರಾದರು. ವಚನಗಳ ಮೂಲಕ ಕ್ರಾಂತಿಯನ್ನೇ ಹೊರಡಿಸಿದವರು ಶಿವಶರಣರು. ವಚನಗಳಲ್ಲಿ ಹಲವಾರು ಜೀವನ ಮೌಲ್ಯಗಳನ್ನು ನಾವು ಕಾಣುತ್ತೇವೆ. ಅನುಭಾವಿಗಳಾದ ಶರಣರು ನೀಡಿದ ವಚನ ಸಾಹಿತ್ಯವು ಜಾಗತಿಕ ಅನುಭಾವ ಸಾಹಿತ್ಯದಲ್ಲಿ ಆಧ್ಯಾತ್ಮಿಕ ಸಾಧನೆ ಸಿದ್ಧಿಯ ಮಹೋನ್ನತಿಯನ್ನು ಮನ ಮೆಚ್ಚುವಂತೆ ತೆರೆದು ತೋರುವ ಶ್ರೇಷ್ಠ ಸಾಹಿತ್ಯರಾಶಿಯಾಗಿದೆ. ಉಜ್ವಲ ಆಧ್ಯಾತ್ಮ ಪ್ರತಿಭೆಯ ಉತ್ತುಂಗ ಶಿಖರದಿಂದ ಇಳಿದು ಬಂದ ಆತ್ಮ ಸಾಕ್ಷಾತ್ಕಾರದ ಅಮೃತವಾಹಿನಿ ಇದಾಗಿದೆ. ಮತ್ತೆ–ಮತ್ತೆ ಮೊಗೆಮೊಗೆದು ಸವಿದರೂ ಮುಗಿಯಲಾರದ ಅನುಭಾವದ ರಸದ ಸವಿಪಾಕ ವಚನ ಸಾಹಿತ್ಯ.

ಹನ್ನೆರಡನೆಯ ಶತಮಾನ ಭಕ್ತಿಯ ಕಾಲ. ಕನ್ನಡದ ನೆಲದಲ್ಲಿ ಸಾವಿರಾರು ಶರಣರು ಅವರ ಕೈಯಲ್ಲಿ ಕಾಯಕ, ಮನಸ್ಸಿನಲ್ಲಿ ಭಕ್ತಿ. ಮಾತಿನಲ್ಲಿ ಲಿಂಗಕಳೆಯಿಂದ ಕೂಡಿದ್ದು, ಇವರು ಜಾಗತಿಕ ಮಟ್ಟದಲ್ಲಿ ನೀಡಿದ ವಿಶಿಷ್ಟ ಕೊಡುಗೆ ಎಂದರೆ ವಚನಸಾಹಿತ್ಯ.

ಅಂದಿನ ದಿನಗಳಲ್ಲಿ ಕಲುಷಿತವಾಗಿದ್ದ ಧಾರ್ಮಿಕ ಹಾಗೂ ಸಾಮಾಜಿಕ ಪರಿಸರ ಈ ಕ್ರಾಂತಿಗೆ ಕಾರಣವಾಗಿತ್ತು. ದೇವರ ಹೆಸರಿನಲ್ಲಿ, ಧರ್ಮಜ ಹೆಸರಿನಲ್ಲಿ ಮೇಲು–ಕೀಳು, ಉಚ್ಛ–ನೀಚ ಹೀಗೆ ಹಲವಾರು ಬೇಧಗಳನ್ನು ಮಾಡುತ್ತಾ ಜನಸಾಮಾನ್ಯರನ್ನು ಶೋಷಣೆ ಮಾಡುತ್ತಿದ್ದರು. ಮನುಷ್ಯರನ್ನು ಮನುಷ್ಯರನ್ನಾಗಿ ಕಾಣದಂತಹ ಪರಿಸ್ಥಿತಿಯುಂಟಾಗಿತ್ತು. ಇಂತಹ ವಿಷಮ ಪರಿಸ್ಥಿತಿಯನ್ನು ಗಮನಿಸಿದ ಶಿವಶರಣರು ಈ ಸಮಾಜಕ್ಕಂಟಿದ್ದ ಜಾತಿಯ ಭೂತವನ್ನು ಹೊಡೆದೋಡಿಸುವ ಕಾರ್ಯಕ್ಕೆ ಸನ್ನದ್ಧರಾದರು. ದೇವರು, ಧರ್ಮ ಕೆಲವರ ಸ್ವತ್ತಾಗಿದ್ದ ಕಾಲವದು. ಅದನ್ನು ಧಿಕ್ಕರಿಸಿದ ಶರಣರು ಭೂಮಿಯ ಮೇಲೆ ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಯೊಂದು ಸ್ವಾತಂತ್ರ್ಯವಿದೆ ಎಂಬುದನ್ನು ತೋರಿಸಿ ಕೊಡಬೇಕಾಗಿತ್ತು. ಅದಕ್ಕಾಗಿ ಶರಣರ ಪಡೆಯು ಸಿದ್ಧವಾಯಿತು. ಬೇಧ–ಭಾವವಿಲ್ಲದ ಸರ್ವಸಮಾನತೆಯ ಸಮಾಜವನ್ನು ನಿರ್ಮಿಸುವ ಗುರಿ ಶರಣರದಾಗಿತ್ತು. ಮಾನವೀಯ ಮೌಲ್ಯಗಳಿಗೆ ಒತ್ತು ಕೊಟ್ಟು ಧರ್ಮ ಪ್ರಸಾರ ಮತ್ತು ಸರ್ವ ಸಮಾನತೆಯ ತತ್ವಗಳನ್ನಾಧರಿಸಿ, ಆದರ್ಶ ಸಮಾಜದ ನಿರ್ಮಾಣ ಮಾಡುವುದು ಹಾಗೂ ಇಡೀ ಮನುಕುಲದ ಸಮುದ್ಧರಣವೇ ಈ ಕ್ರಾಂತಿಯ ಉದ್ದೇಶವಾಗಿತು. ಸ್ತ್ರೀ–ಪುರುಷರೆನ್ನದೇ ಸರ್ವಸಮಾನತೆಯಿಂದ ಶಿವಶರಣರು ತಮ್ಮ ವಚನಗಳನ್ನು ರಚಿಸಿ ಜನಸಾಮಾನ್ಯರ ಕಣ್ಣೆರೆಸುವ ಕಾಯಕದಲ್ಲಿ ತೊಡಗಿದರು. ಅಂಥವರಲ್ಲಿ ಎಲೆಮರೆಯ ಕಾಯಂತಿರುವ ಸತ್ಯ ಶುದ್ಧ ಕಾಯಕದ ಶಿವಶರಣೆ ಸತ್ಯಕ್ಕಳೂ ಒಬ್ಬಳು. ಕಾಯಕವನ್ನೇ ಪೂಜೆಯನ್ನಾಗಿಸಿಕೊಂಡವಳು ಸತ್ಯಕ್ಕ. 12ನೇ ಶತಮಾನದಲ್ಲಿದ್ದ ಸತ್ಯಕ್ಕೆ ಶರಣರ ಮನೆಯ ಮುಂದೆ ಕಸಗುಡಿಸುವ ಕಾಯಕದಲ್ಲಿದ್ದವಳು. "ಶಂಭುಜಕ್ಕೇಶ್ವರ" ಎಂಬ ಅಂಕಿತದಲ್ಲಿ ಇವಳ 27 ವಚನಗಳು ದೊರೆತಿವೆ. ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಬಳಿ ಹಿರೇಜಂಬೂರಿನವಳು. ಇವಳ ವಚನಗಳಲ್ಲಿ ಶಿವಪಾರಮ್ಯ, ಸದ್ಭಕ್ತರ ಮಹಿಮೆ, ಸತಿ–ಪತಿ ಭಾವ, ಸದಾಚಾರದಲ್ಲಿ ನಡೆಯುವ ಗುರು ಶಿಷ್ಯ ಜಂಗಮರ ಗುಣಲಕ್ಷಣ, ಡಾಂಭಿಕ ಭಕ್ತರ ಟೀಕೆ. ಸ್ತ್ರೀ ಪುರುಷ ಸಮಾನತೆಯ ಸಂದೇಶಗಳಿವೆ. ಶಿವಶರಣೆ ಸತ್ಯಕ್ಕನ ಒಂದೊಂದು ವಚನಗಳೂ ಅಮೂಲ್ಯ ರತ್ನಗಳೇ. ಕಾಯಕವನ್ನೇ ಪೂಜೆಯನ್ನಾಗಿಸಿಕೊಂಡಿದ್ದ ಶರಣೆ ಸತ್ಯಕ್ಕೆ ಶರಣರ ಬೀದಿಯಲ್ಲಿ ಕಸಗುಡಿಸುವ ಸಾಮಾನ್ಯ ಮಹಿಳೆ. ಉನ್ನತ ಶಿಕ್ಷಣವನ್ನು ಪಡೆದವರಿಗಿಂತಲೂ ಹೆಚ್ಚು ತನ್ನ ಅಂತರಂಗದ ಅರಿವನ್ನು ಹೊಂದಿರುವ ಇವಳ ವಚನದ ಸಾಲುಗಳು ಇಂದಿನ ಸ್ವಾರ್ಥ ಸಮಾಜಕ್ಕೆ ಚಾಟಿಯನ್ನು ಬೀಸಿದಂತಿವೆ.

"ಲಂಚವಂಚನಕ್ಕೆ ಕೈಯಾನದ ಭಾಷೆ ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.

ಇಂತಲ್ಲದೆ ನಾನು ಅಳಿಮನವ ಮಾಡಿ ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೇ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ".(ಬ.ಯು.ವ.ಮ.ಸಂ–1,ವ.1227)

ತಾನು ಲಂಚ ವಂಚನೆಗಳಿಗೆ ಕೈ ಒಡ್ಡದವಳೆಂದೂ, ದಾರಿಯಲ್ಲಿ ಬಿದ್ದ ಅನ್ಯರ ವಸ್ತು ಒಡವೆಗಳನ್ನು ಮುಟ್ಟುವುದಿಲ್ಲವೆಂದೂ ತನಗೆ ತಾನೇ ನಿರ್ಬಂಧ ವಿಧಿಸಿಕೊಂಡವಳು ಶಿವಶರಣೆ ಸತ್ಯಕ್ಕ. ಸತ್ಯಕ್ಕ ನುಡಿಯುವ ಸತ್ಯದ ನುಡಿ ಎಂದರೆ, ನನ್ನದಲ್ಲದ್ದು ನನಗೆ ಬೇಡ. "ಪರರ ದುಡ್ಡು ಪಾಷಾಣಕ್ಕೆ ಸಮ" ಎನ್ನುವ ಹಾಗೆ ಅವಳಿಗೆ ಪರರ ದ್ರವ್ಯದ ಬಗ್ಗೆ ನಿರಾಕರಣೆ ಇದೆ. ಪರರ ವಸ್ತುವಿನತ್ತ ನನ್ನ ಚಿತ್ತವು ಸಾರಿದರೆ ನನಗೆ ನರಕ ಪ್ರಾಪ್ತಿಯಾಗಲಿ ಎನ್ನುತ್ತಾಳೆ. ನಾನು ಅಭಿಮನವ ಮಾಡಲಾರೆ, ನಾನು ಸತ್ಯ ಶುದ್ಧವಾದ ಕಾಯಕದಿಂದ ಪಡೆದಿರುವುದನ್ನೇ ಮಹಾಪ್ರಸಾದವೆಂದು ಸ್ವೀಕರಿಸುತ್ತೇನೆ ಎನ್ನುತ್ತಾಳೆ, ಸತ್ಯಕ್ಕ, ಸತ್ಯಕ್ಕನ ಪ್ರಾಮಾಣಿಕತೆ, ನಿಷ್ಠುರತೆ, ನೇರ ನಡೆ–ನುಡಿಯ ನಿರ್ಭಿಡೆಯ ನುಡಿಗಳು ಇಂದಿನ ಸಮಾಜಕ್ಕೆ ಅಗತ್ಯವಿದೆ.

ಸತ್ಯಕ್ಕನ ಈ ವಚನವನ್ನು ನಾವು ಸ್ಮರಿಸಿಕೊಂಡರೆ ನಮ್ಮ ಎಷ್ಟೋ ತಪ್ಪುಗಳಿಂದ ಹೊರಬರಬಹುದಾಗಿದೆ. ಸತ್ಯಕ್ಕನ ಸತ್ಯವಾದ ನುಡಿಗಳು ನಿಜವಾಗಿಯೂ ಇಂದಿನ ನಾಗರಿಕ ಸಮಾಜದ ಬದುಕಿಗೆ ಬಿಸಿ ಮುಟ್ಟಿಸಿದಂತಿದೆ. ಓರ್ವ ಕಸಗುಡಿಸುವ ಸಾಮಾನ್ಯ ಮಹಿಳೆಗೆ ಇರುವ ಪ್ರಜ್ಞೆ ಇಂದಿನ ನಾಗರಿಕ ಸಮಾಜಕ್ಕೆ ಇಲ್ಲದಿರುವುದು ದುರಂತವೇ ಸರಿ, ಪರದ್ರವ್ಯಕ್ಕೆ ಹೊಂಚು ಹಾಕುವ, ದುಡಿಯದೇ ಸಂಪಾದನೆ ಮಾಡಬೇಕೆನ್ನುವ ಸ್ವಾರ್ಥದ ಬದುಕನ್ನು ಎಡಂಬಿಸಿದಂತಿದೆ. ಸತ್ಯಕ್ಕನ ಈ ಒಂದು ವಚನ ಇಂದಿನ ನಮ್ಮ ಸ್ವಾರ್ಥದ ಬದುಕಿಗೆ ಛೀಮಾರಿ ಹಾಕಿದಂತಿದೆ. ಕಸಗುಡಿಸುವ ಒಬ್ಬ ಸಾಮಾನ್ಯ ಮಹಿಳೆಗೆ ಇಂಥ ಎದೆಗಾರಿಕೆ ಇರಬೇಕಾದರೆ, ವಿದ್ಯಾವಂತರು ಎಂದು ಹೇಳಿಕೊಳ್ಳುವವರು. ಉನ್ನತ ಸ್ಥಾನದಲ್ಲಿದ್ದು ನಾವು ಸೇವಕರು ಎಂದು ಸೋಗು ಹಾಕಿಕೊಂಡು ಮಾಡುವ ಸೋಗಲಾಡಿತನದ, ಭ್ರಷ್ಟಾಚಾರದ ಬದುಕಿಗೆ ಬಿಸಿ ಮುಟ್ಟಿಸಿದಂತಿದೆ. "ಪಾಪಿಯ ಧನ ಪ್ರಾಯಶ್ಚಿತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದು" ಎಂಬ ಅರಿವು ಶರಣರದಾಗಿತ್ತು.

ಅರ್ಚನೆ, ಪೂಜೆ, ದೇವರು–ದಿಂಡಿರು ಎಂದು ಡಾಂಭಿಕ ಭಕ್ತಿಯನ್ನು ಹಾಗೂ ಹಗಲು ವೇಷಧಾರಿಗಳನ್ನು, ಬೂಟಾಟಿಕೆಯ ಭಕ್ತರನ್ನು ಟೀಕಿಸುತ್ತಾ, ಅಂತರಂಗ ಪರಿಶುದ್ಧವಾಗಿಲ್ಲದೇ ಯಾವ ವ್ರತಾಚರಣೆಗಳನ್ನು ಮಾಡಿದರೂ ವ್ಯರ್ಥ ಎನ್ನುತ್ತಾಳೆ ಸತ್ಯಕ್ಕ.

"ಅರ್ಚನೆ ಪೂಜೆ ನೇಮವಲ್ಲ; ಮಂತ್ರ–ತಂತ್ರ ನೇಮವಲ್ಲ;
ಧೂಪ–ಧೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೇ ನೇಮ.
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ಇವು ನಿತ್ಯನೇಮ".(ಬ.ಯು.ವ.ಸಂ–1,ವ.1205)

ನಿಜವಾದ ಭಕ್ತಿಯೆಂದರೆ, ಪರರ ವಸ್ತುವನ್ನು ಬಯಸದಿರುವುದು ಹಾಗೂ ಪರದೈವಗಳಿಗೆ ಎರಗದಿರುವುದು ಎಂದು ಹೇಳುತ್ತಾ ಏಕದೇವೋಪಾಸನೆಯನ್ನು ಅಕ್ಕ ಸಾರುತ್ತಾಳೆ. ಸತ್ಯಕ್ಕನ ಪ್ರಕಾರ ಅರ್ಚನೆ, ಪೂಜೆಗಳು ವ್ರತಗಳಲ್ಲ. ಮಂತ್ರ–ತಂತ್ರಗಳೂ ವ್ರತಗಳಲ್ಲ. ಧೂಪದಾರತಿ, ದೀಪದಾರತಿಗಳೂ ವ್ರತಗಳಲ್ಲ. ಇವುಗಳಿಗಿಂತ ಮಿಗಿಲಾದ ವ್ರತಾಚರಣೆಗಳೆಂದರೆ, ಅಂತರಂಗ–ಬಹಿರಂಗ ಶುದ್ಧಿಯಾಗಿರಬೇಕೆನ್ನುತ್ತಾಳೆ ಸತ್ಯಕ್ಕ. ಅಂತರಂಗದಲ್ಲಿ ದುರ್ಗುಣಗಳನ್ನು ತುಂಬಿಕೊಂಡು ಪರಸ್ತ್ರೀ–ಪರಧನಕ್ಕೆ ಆಸೆಪಡುತ್ತಾ, ತೋರಿಕೆಗೆ ಮಾತ್ರ ವ್ರತಾಚರಣೆಗಳನ್ನು ಮಾಡಿದರೆ ಯಾವುದೇ ಪ್ರಯೋಜನವಾಗಲಾರದು ಎನ್ನುತ್ತಾಳೆ. "ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ, ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ, ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವಾ" ಎನ್ನುವ ಅಣ್ಣನ ವಚನದ ಸಾಲುಗಳಲ್ಲಿ ಪರಿಶುದ್ಧವಾಗಿದ್ದರೆ ಮಾತ್ರ ಸಾಧನೆ ಸಾಧ್ಯವೇ ಹೊರತು ಅನ್ಯತಾ ಮಾರ್ಗವಿಲ್ಲ ಎನ್ನುವುದಿದೆ.

ಯಾರು ಭಕ್ತರಾಗಬೇಕೆಂದು ಬಯಸುತ್ತಾರೋ ಅವರು ಅದಕ್ಕೆ ತಕ್ಕ ನಡತೆಯುಳ್ಳವರಾಗಿ ಬಾಳಬೇಕು, ಇಲ್ಲದಿದ್ದರೆ ಆಷಾಡಭೂತಿಯಂತೆ ಪರರ ವಂಚನೆಯಲ್ಲಿ ಜೀವನ ನಡೆಸಬೇಕಾಗುತ್ತದೆ. ಇಂತಹ ವೇಷದಾರಿಗಳಿಗೆ ಪರಶಿವ ಒಲಿಯುವದಿಲ್ಲ. ವಚನಗಳು ಮನುಷ್ಯರು ಯಾವ ರೀತಿಯಲ್ಲಿ ವರ್ತಿಸಬೇಕು. ಯಾವ ನಿಯಮಗಳನ್ನು ಪರಿಪಾಲಿಸಬೇಕು ಎಂಬುದನ್ನು ಮನೋಜ್ಞವಾಗಿ ತಿಳಿಸಿಕೊಡುತ್ತವೆ. ಮನುಷ್ಯನ ಯಾವ ಪಾಪಕ್ಕೂ ಸಾಮಾನ್ಯವಾಗಿ ಆಸೆಯೇ ಮೂಲವಾಗಿರುತ್ತದೆ. ಆಸೆಗೆ ಅಡ್ಡಿಯುಂಟಾದಾಗ ಅನರ್ಥ ಪರಂಪರೆಗಳಾಗುತ್ತವೆ. ಆದುದರಿಂದ 'ಆಸೆಯನ್ನು ಯಾರು ತ್ಯಜಿಸುವರೋ ಅವನ್ನು ದೇವರು' ಎಂದು ವಚನಕಾರರು ತಿಳಿಸುತ್ತಾರೆ.

ಈ ರೀತಿಯಾಗಿ ಹನ್ನೆರಡನೆಯ ಶತಮಾನದ ಶಿವಶರಣರು ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಸಮಾಜ ಮುಖಿಯಾದ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಅವಿಸ್ಮರಣೀಯವಾದುದು. ಎಲೆಮರೆಯ ಕಾಯಾಗಿ ಇನ್ನೂ ಎಷ್ಟೋ ಜನ ವಚನಕಾರರಿದ್ದಾರೆ. ಅವರನ್ನೂ ಸಹ ಮುಖ್ಯ ವಾಹಿನಿಗೆ ತರಬೇಕಾದ ಕಾರ್ಯ ನಡೆಯಬೇಕಿದೆ. ಹೀಗೆ ನಿರ್ಲಕ್ಷಕ್ಕೊಳಗಾದ ವಚನಕಾರರನ್ನು ಗುರುತಿಸಿ ಅವರ ವಚನಗಳಲ್ಲಿರುವ ಜೀವನ ಮೌಲ್ಯಗಳನ್ನು ಹಾಗೂ ಅವರಲ್ಲಿರುವ ಸಾಮಾಜಿಕ ಕಳಕಳಿಯನ್ನು ಅರಿತು ನಮ್ಮ ಬದುಕನ್ನು ಹಸನಾಗಿಸಿಕೊಳ್ಳಬೇಕಾಗಿದೆ.

ಆಧಾರ ಗ್ರಂಥಗಳು :

1. ವಚನಧರ್ಮಸಾರ, ಲೇ–ಎಂ.ಆರ್. ಶ್ರೀನಿವಾಸಮೂರ್ತಿ, 1944
2. ಬಸವಯುಗದ ವಚನ ಮಹಾಸಂಪುಟ–1, ಪ್ರ.ಸಂ–ಡಾ.ಎಂ.ಎಂ. ಕಲಬುರ್ಗಿ, ಕರ್ನಾಟಕ ಸರಕಾರ ಕನ್ನಡ ಪುಸ್ತಕ ಪ್ರಾಧಿಕಾರ, 2016

***

ಕೂಡ್ಲಿಗಿ ತಾಲೂಕಿನ ಪಾಳೆಯಗಾರರ ಕಾಲದ ಮಳೆಕೊಯ್ಲು ವ್ಯವಸ್ಥೆ

1 **ಡಾ. ವಿನಯ್‌ಕುಮಾರ ಕೆ.**

ತಿಮ್ಮಲಾಪುರ ತಾಂಡ

ಕೊಟ್ಟೂರು ತಾಲ್ಲೂಕು

ವಿಜಯನಗರ ಜಿಲ್ಲೆ – 583134

vk1871498@gmail.com

ಕೂಡ್ಲಿಗಿ ಪಟ್ಟಣವು ವಿಜಯನಗರ ಜಿಲ್ಲಾ ಕೇಂದ್ರದಿಂದ 70 ಕಿ.ಮೀ ಅಂತರದಲ್ಲಿದೆ. ಈ ಪ್ರದೇಶಕ್ಕೆ ಐತಿಹಾಸಿಕ ಪರಂಪರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ರಾಮಾಯಣ ಕಾಲದಲ್ಲಿ ವಾನರ ಸೇನೆಯು ಹಂಪಿಯ ಬೆಟ್ಟಗಳಲ್ಲಿ ವಾಸಿಸುತ್ತಿದ್ದರು. ರಾಮನ ಸಹಾಯಕ್ಕಾಗಿ ದಕ್ಷಿಣ ಲಂಕೆಯ ಕಡೆಗೆ ಸೀತೆಯ ಅನ್ವೇಷಣೆಗೆ ಹೋಗುವಾಗ ನಾನಾ ಕಡೆಯಿಂದ ವಾನರ ಸೇನೆಯು ಇಲ್ಲಿ ಕೂಡುತ್ತಿತ್ತಂತೆ. ಆದ್ದರಿಂದ ಸ್ಥಳಕ್ಕೆ 'ಕೂಡಲಾಗಿ' ಕೂಡಲಿಗಿ ಎಂಬ ಹೆಸರು ಬಂದಿತ್ತೆಂದು ಹೇಳಲಾಗುತ್ತದೆ. ಇನ್ನೊಂದು ಹೇಳಿಕೆಯ ಪ್ರಕಾರ ಪುರಾತನ ಕಾಲದಲ್ಲಿ ಇದೊಂದು ಚಿಕ್ಕ ಮ್ಯಾಸರ ಹಟ್ಟಿಯಾಗಿದ್ದು, ವಿಜಯನಗರ ರಾಜಧಾನಿ ಹಂಪೆಗೆ ಜರಿಮಲೆ, ಬಿರಲಗುಡ್ಡ, ಗುಡೇಕೋಟೆ, ಹರಪನಹಳ್ಳಿ ಪಾಳೆಯಗಾರರು ವಿಜಯನಗರ ಅರಸರನ್ನು ಭೇಟಿಯಾಗಲು ಹೋಗುವ ಮುನ್ನ ಇಲ್ಲಿ ಸೇರಿ ಗುಪ್ತ ಸಮಾಲೋಚನೆ ನಡೆಸುವ ಸಲುವಾಗಿ ತಾವು ಕೂಡುವ ಸ್ಥಳಕ್ಕೆ ಅನ್ಯರಿಗೆ ತಿಳಿಯದಿರಲೆಂದು ಸನ್ನೆಯಾಗಿ 'ಕೂಡಲಿ ಇಲ್ಲಿಗೆ' ಎಂದು ಕರೆಯುತ್ತಿದ್ದರಂತೆ, ಮುಂದೆ ಕಾಲಕ್ರಮೇಣವಾಗಿ ಕೂಡಲಿಗಿ ಎಂದು ಕರೆಯಲ್ಪಟ್ಟಿತು ಎಂಬುದಾಗಿ ಹೇಳುತ್ತಾರೆ.[1] ಈ ಪರಿಸರದಲ್ಲಿ ಗುಡೇಕೋಟೆ ಪಾಳೆಯಗಾರರು, ಜರಿಮಲೆ ಪಾಳೆಯಗಾರರು ಮತ್ತು ಹರಪ್ಪನಹಳ್ಳಿ ಪಾಳೆಯಗಾರರು ಆಳ್ವಿಕೆ ಮಾಡಿರುವುದನ್ನು ಅವರು ನಿರ್ಮಿಸಿದ ದೇವಾಲಯ ಮತ್ತು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಮಳೆ ಕೊಯ್ಲು ವ್ಯವಸ್ಥೆ

ಭೂಮಿಯ ಮೇಲೆ ದ್ರವರೂಪದಲ್ಲಿ ಕಂಡುಬರುವ ನೀರು ಒಂದೇ ಆದರೂ ಅದು ವಿವಿಧ ರೂಪಗಳಲ್ಲಿ ಮಳೆ, ಮಂಜುಗಡ್ಡೆ, ಸಮುದ್ರ, ಆವಿ ತುಂಬಿಕೊಂಡು ಮೋಡವಾಗಿ ನೆಲದ ಮೇಲೆ ಬಿದ್ದ ನೀರು ನದಿಯಾಗಿ, ನೆಲದಲ್ಲಿ ಇಂಗಿ ಅಂತರ್ಜಲವಾಗುತ್ತದಷ್ಟೆ. ಹೀಗೆ ಬಹುರೂಪಿಯಾಗಿ ಪ್ರಕೃತಿಯಲ್ಲಿ ದೊರಕುವ ನೀರನ್ನು ಮಾನವರು ತನ್ನ ದಿನನಿತ್ಯದ ಉಪಯೋಗಗಳಾದ ವ್ಯವಸಾಯ, ಕೈಗಾರಿಕೆ ಮತ್ತು ಶುದ್ಧೀಕರಣ ಇತ್ಯಾದಿಗಳಿಗಾಗಿ ಉಪಯೋಗಿಸುತ್ತಾರೆ. ನಮ್ಮೆಲ್ಲರಿಗೂ ತಿಳಿದಂತೆ ನೀರಿನ ಮೂಲ ಮಳೆ. ಅದು ವರ್ಷದಲ್ಲಿ ಕೆಲವು ತಿಂಗಳು ಮಾತ್ರ ಆಗುವಂಥದ್ದು. ಆದರೆ ನೀರನ್ನು ವರ್ಷಪೂರ್ತಿಯಾಗಿ ಬಳಸುತ್ತೇವಾದ್ದರಿಂದ ಮಾನವನು ಒಂದು ಕಡೆ ನೆಲೆನಿಂತು ಜೀವನ ನಡೆಸುವುದಕ್ಕೆ ಪ್ರಾರಂಭಿಸಿದಾಗಿನಿಂದ ತನಗೆ ಬೇಕಾದಂತೆ ನೀರನ್ನು ಬಳಸಿಕೊಳ್ಳಲು ಕೆರೆ, ಕಟ್ಟೆ, ಅಣೆಕಟ್ಟು, ಜಲಾಶಯ, ಬಾವಿ, ದೊಣೆ, ಹೊಂಡ, ಪುಷ್ಕರಣಿ ಇತ್ಯಾದಿ ಕೃತಕ ಜಲ ಆಕರಗಳನ್ನು ನಿರ್ಮಿಸಿಕೊಂಡರು.

ಇಂತಹ ನೀರಿನ ಮೂಲಗಳನ್ನು ಸಂರಕ್ಷಿಸುವುದು ಇಂದಿನ ಅತ್ಯಗತ್ಯವಾದ ಕಾರ್ಯ. ಇಂತಹ ಕಾರ್ಯಗಳಲ್ಲಿ ಮಳೆನೀರು ಕೊಯ್ಲು ವಿಧಾನವು ಸಹ ಒಂದಾಗಿದೆ. ಮಳೆನೀರು ಕೊಯ್ಲು ಎಂಬುದು ಮಳೆನೀರನ್ನು ಒಗ್ಗೂಡಿಸುವ ಅಥವಾ ಸಂಚಯನ ಮಾಡುವ ಮತ್ತು ಶೇಖರಿಸಿಟ್ಟುಕೊಳ್ಳುವ ವಿಧಾನಕ್ಕಿರುವ ಹೆಸರು. ಕುಡಿಯಲು, ಗೃಹ ಬಳಕೆಗಾಗಿ, ನೀರಾವರಿಗಾಗಿ, ನೀರಿನ ವ್ಯವಸ್ಥೆ ಮಾಡಲು ಅಥವಾ ಅಂತರ್ಜಲ ಮಟ್ಟ ಹೆಚ್ಚಿಸಲು ಮಳೆನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಂಡು ಬರಲಾಗಿದೆ.

ಮಳೆಕೊಯ್ಲು ವ್ಯವಸ್ಥೆಯ ವಿಧಾನಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಗ್ರಂಥಗಳಾದ ವೇದಗಳಲ್ಲಿ ಅನೇಕ ಶಬ್ದಗಳಿವೆ. ಉದಾಹರಣೆಗೆ ಬಾವಿ (ಕೂಪ), ಕಾಲುವೆ (ಕುಲ್ಯ), ಸರೋವರ (ಸರಸಿ) ಎಂಬ ಪದಗಳು ಮಹಾ ಭಾರತದ ಅನುಶಾಸನೀಕ ಪರ್ವದಲ್ಲಿ ಕಂಡು ಬರುತ್ತವೆ. ರಾಜನು ಮಾಡಬೇಕಾದ ಕರ್ತವ್ಯಗಳ ಬಗೆಗೆ ವಿವರಗಳಿವೆ. ಅದರಲ್ಲಿ ಕೆರೆ, ಕಾಲುವೆ, ಬಾವಿಗಳನ್ನು ನಿರ್ಮಿಸುವಂತೆ ಹೇಳಲಾಗಿದೆ. ಅನೇಕ ಸಾಹಿತ್ಯ, ಪುರಾಣ, ಪ್ರಾಯೋಗಿಕಶಾಸ್ತ್ರ ಕೃತಿಗಳು, ಭಾರತದ ಅತ್ಯಂತ ಪ್ರಾಚೀನ ಸಾಹಿತ್ಯವಾದ ವೇದಗಳು, ಮನುಧರ್ಮ ಶಾಸ್ತ್ರದಲ್ಲಿ ಕೆರೆ ಬೇಸಾಯ ಪದ್ಧತಿಯ ನಾಲೆಗಳ ವಿವರವಿದೆ.[2]

ಕೂಡ್ಲಿಗಿ ಪರಿಸರದಲ್ಲಿ ಕುಡಿಯುವ ನೀರಿಗಾಗಿ ಪಾಳೆಯಗಾರರು ವಿಶೇಷ ಗಮನ ಹರಿಸಿರುವುದು ಕಂಡುಬರುತ್ತದೆ. ಚಿಕ್ಕ ದೊಡ್ಡ ಬಂಡೆಯ ಸಂದುಗಳಿಗೆ ಅಡ್ಡಲಾಗಿ ಗೋಡೆಗಳನ್ನು ಕಟ್ಟಿ ಮಳೆಯ ನೀರನ್ನು ದೊಣೆ, ಹೊಂಡ, ಬಾವಿ ಮತ್ತು ಕೆರೆಗಳ ಮೂಲಕ ಸಂಗ್ರಹಿಸಲಾಗಿದೆ.

ಮಲಿಯಮ್ಮನ ದೊಣೆ

ವೀರನದುರ್ಗ ಗ್ರಾಮವು ಕೂಡ್ಲಿಗಿ ತಾಲೂಕು ಕೇಂದ್ರದಿಂದ ದಕ್ಷಿಣಕ್ಕೆ 7 ಕಿ.ಮೀ ಅಂತರದಲ್ಲಿದೆ. ಈ ಗ್ರಾಮದಲ್ಲಿ ಕೋಟೆಯನ್ನು ಒಳಗೊಂಡ ಬೆಟ್ಟವನ್ನು ಬೀರಲಗುಡ್ಡವೆಂದು ಕರೆಯುವುದು ಸ್ಥಳೀಯರ ವಾಡಿಕೆ. ಕೆಲವರು ಬೀರಲನ ಹೆಸರಿನಿಂದ ಈ ಗುಡ್ಡಕ್ಕೆ ಬೀರಲಗುಡ್ಡವೆಂದು ಕರೆದಿರುವಂತೆ ನಂಬುತ್ತಾರೆ. ಇದಕ್ಕೆ ಕಟ್ಟಿಕೊಂಡಿರುವ ಕಥೆಗಳೇ ಇದಕ್ಕೆ ಆಧಾರವಾಗಿವೆ.[3] ವೀರನದುರ್ಗ ಎಂಬ ಹೆಸರು ಇಲ್ಲಿ ಆಳ್ವಿಕೆ ನಡೆಸಿದ ವೀರನಾಯಕ ಎಂಬುವವನಿಂದ ಬಂದಿದೆ. ಇಲ್ಲಿರುವ ಶಾಸನದಲ್ಲಿ ಅಕ್ಷರ ಸಂವತ್ಸರ...ರಾಮಯ್ಯ ನಾಯಕ ಎಂದಿಷ್ಟೇ ಇದೆ.[4] ಹಾಗಾದರೇ ವೀರನಾಯಕ ಯಾರು? ಹರಪನಹಳ್ಳಿ ವೀರಮುಮ್ಮಡಿ ನಾಯಕನೇ ಈ ವೀರನಾಯಕ ಈತನೇ ಇಲ್ಲಿ ಕೋಟೆಯನ್ನು ನಿರ್ಮಿಸಿದನೆಂಬುದು ಸ್ಥಳೀಯ ಮೂಲಗಳಿಂದ ತಿಳಿದು ಬರುವ ಅಂಶ. ವೀರಮುಮ್ಮಡಿ ನಾಯಕನೇ ಈ ವೀರನಾಯಕ ಎಂಬುದಕ್ಕೆ ಯಾವುದೇ ಶಾಸನ ಸಾಹಿತ್ಯಾಧಾರಗಳು ಲಭ್ಯವಿಲ್ಲ. ಹರಪನಹಳ್ಳಿಯನ್ನು ಆಳಿದ ಯಾವುದೇ ಪಾಳೆಯಗಾರರು ವೀರನದುರ್ಗವನ್ನು ಕಟ್ಟಿಸಿದ ಬಗ್ಗೆ ಎಲ್ಲೂ ಉಲ್ಲೇಖವಾಗಿಲ್ಲ.

ವೀರನದುರ್ಗವು ಪ್ರಕೃತಿದತ್ತವಾದ ಬೆಟ್ಟವನ್ನು ಬಳಸಿ ನಿರ್ಮಿಸಿದ ಗಿರಿದುರ್ಗ. ವಸತಿಯ ಅವಶೇಷಗಳು ಇಲ್ಲಿರುವುದರಿಂದ ಸ್ಥಳೀಯರು ಈ ಕೋಟೆಯನ್ನು ಏಳುಬಾಗಿಲ ಊರು ಎಂದು ಕರೆಯುತ್ತಾರೆ. ಇದಕ್ಕೆ ಆಧಾರಗಳೆಂಬಂತೆ ಐದು ಬಾಗಿಲುಗಳಿದ್ದು, ಉಳಿದ ಬಾಗಿಲುಗಳು ಗೋಚರಿಸುವುದಿಲ್ಲ. ಕೋಟೆಯು ಉತ್ತರ ದಿಕ್ಕಿನಿಂದ ದಕ್ಷಿಣಕ್ಕೆ ಮೇಲ್ಮುಖವಾಗಿ ವಿಸ್ತರಿಸಿವೆ. ಶತ್ರುಗಳಿಂದ ರಕ್ಷಣೆ ಪಡೆಯಲು ಕೋಟೆಯನ್ನು ಹಲವಾರು ಸುತ್ತುಗಳಲ್ಲಿ ನಿರ್ಮಿಸಿದ್ದಾರೆ. ಪ್ರತಿ ಸುತ್ತಿನಲ್ಲೂ ಗುಪ್ತ ಮಾರ್ಗಗಳಿವೆ.

ಈ ಕೋಟೆಯ ಒಳ ಆವರಣದಲ್ಲಿ ದೇವಿಯ ಹೆಸರಿನಲ್ಲಿ ಒಂದು ಹೊಂಡ ಮತ್ತು ಎರಡು ದೊಣೆಗಳನ್ನು ನಿರ್ಮಿಸಲಾಗಿದೆ. ಕೋಟೆಯ ಅಂತಿಮ ಸುತ್ತು ಬೆಟ್ಟದ ತುತ್ತ ತುದಿಯಲ್ಲಿ ಮಲಿಯಮ್ಮನ ದೇವಾಲಯ ಕಂಡುಬರುತ್ತದೆ. ಈ ದೇವಾಲಯ ಪಕ್ಕದಲ್ಲಿ ದೊಣೆ ಇರುವುದರಿಂದ ಮಲಿಯಮ್ಮನ ದೊಣೆ ಎಂದು ಕರೆಯುತ್ತಾರೆ. ಬಹುಶಃ ಈ ದೊಣೆಯನ್ನು ದೇವಾಲಯ ಮತ್ತು ಕಾರ್ಯ ನಿರ್ವಹಿಸುವ ಸೈನಿಕರ ಬಳಕೆಗಾಗಿ ನಿರ್ಮಿಸಲಾಗಿದೆ.

ದೊಣೆಯು ವ್ಯವಸ್ಥಿತವಾಗಿದ್ದು, ನಿಸರ್ಗದತ್ತ ಬೃಹತ್ ಬಂಡೆಗಲ್ಲಿನ ಬುಡದಲ್ಲಿದೆ. ಈ ದೊಣೆಗೆ ಬಂಡೆಯ ಮೇಲೆ ಬಿದ್ದ ಮಳೆನೀರು ವ್ಯರ್ಥವಾಗದಂತೆ ದೊಣೆಯ ಪೂರ್ವದಿಕ್ಕಿನಲ್ಲಿ ಸು.25 ಮೀ, ಉದ್ದವಾದ ತಡೆಗೋಡೆಯನ್ನು ನೈಸರ್ಗಿಕ ಕಲ್ಲುಗಳನ್ನು

ಬಳಸಿ ನೀರನ್ನು ತಡೆಹಿಡಿಯುವ ಪ್ರಯತ್ನವನ್ನು ಕಾಣುತ್ತೇವೆ. ಈ ದೋಣೆಯ ಮೂಲಕ ಮಳೆಕೊಯ್ಲು ವ್ಯವಸ್ಥೆ ಇಲ್ಲಿಂದಲೇ ಆರಂಭವಾಗಿದೆ. ದೋಣೆ ತುಂಬಿದ ಹೆಚ್ಚಾದ ನೀರನ್ನು 5 ಅಡಿ ಅಂತರದಲ್ಲಿರುವ ಮತ್ತೊಂದು ಹೆಸರಿನ ಮಲಿಯಮ್ಮನ ದೋಣೆಗೆ ಹರಿಸಲಾಗಿದೆ. ಇಲ್ಲಿಂದ ಮಲಿಯಮ್ಮನ ಹೊಂಡಕ್ಕೆ ಹರಿಯುತ್ತದೆ. ಈ ಹೊಂಡ ತುಂಬಿದ ನಂತರ ಬೆಟ್ಟದ ಕೆಳಗೆ ಇರುವ ರುದ್ರಯ್ಯನ ಬಾವಿಗೆ ಸೇರುತ್ತದೆ.

ದೋಣೆಯು ಪೂರ್ವ ಪಶ್ಚಿಮವಾಗಿ 18 ಅಡಿ ಉದ್ದ, ದಕ್ಷಿಣೋತ್ತರವಾಗಿ 10 ಅಡಿ ಅಗಲವಿದ್ದು, 7 ಅಡಿ ಆಳ, ಸುಮಾರು (ಮೂರು ಲಕ್ಷ ಐವತ್ತು ಸಾವಿರ) ಲೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ದೋಣೆಯ ನೀರು ಹೊರಹೋಗದಂತೆ ಅದರ ಬಲಭಾಗದಲ್ಲಿ ನೈಸರ್ಗಿಕ ಕಲ್ಲುಗಳನ್ನು ಬಳಸಿ ಸುಮಾರು 10 ಮೀ. ಉದ್ದದ ತಡೆಗೋಡೆಯನ್ನು ನಿರ್ಮಿಸುವುದರ ಮೂಲಕ ನೀರನ್ನು ಸಂಗ್ರಹಣೆ ಮಾಡಿರುವುದು ಕಾಣುತ್ತೇವೆ. ಈ ದೋಣೆಯು ಇಂದಿಗೂ ಸುವ್ಯವಸ್ಥೆಯಿಂದ ಕೂಡಿದೆ. ಮಳೆಗಾಲದಲ್ಲಿ ತುಂಬಿದ ನೀರು ವರ್ಷಪೂರ್ತಿ ಬಳಸಬಹುದಾಗಿದೆ. ಪ್ರಸ್ತುತ ದೋಣೆಯು ಹೂಳು, ಸಸ್ಯ, ಜಾಲಿ ಮುಳ್ಳುಗಳಿಂದ ಕೂಡಿ ಶಿಥಿಲಾವಸ್ಥೆಯಲ್ಲಿದೆ. ಈ ದೋಣೆಯು ಇಂದು ಪ್ರಾಣಿ ಪಕ್ಷಿಗಳಿಗೆ ಆಸರೆಯಾಗಿದೆ.

ವೀರನದುರ್ಗ ಕೋಟೆಯ ಅಂತಿಮ ಸುತ್ತು ಬೆಟ್ಟದ ತುತ್ತ ತುದಿಯಲ್ಲಿ ಮಲಿಯಮ್ಮನ ದೇವಾಲಯ ಪಕ್ಕದಲ್ಲಿಯೇ ಈ ದೋಣೆಯನ್ನು ನಿರ್ಮಿಸಲಾಗಿದೆ. ಈ ದೇವಾಲಯವು ಒಂದು ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಪೂರ್ವಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಕಲ್ಲು ಗುಂಡನಿಟ್ಟು ಪೂಜಿಸುತ್ತಾರೆ. ಮಲಿಯಮ್ಮ ಇಲ್ಲಿನ ಜನರ ಅಧಿದೇವತೆಯಾಗಿದ್ದು, ಇಲ್ಲಿ ಶ್ರಾವಣ ಮಾಸದ ಮಂಗಳವಾರದಂದು ವಿಶೇಷ ಪೂಜೆ ನಡೆಯುತ್ತದೆ.5 ಇಲ್ಲಿಯೂ ಸಹ ನಿಸರ್ಗದತ್ತವಾದ ಬೆಟ್ಟದ ಬುಡದಲ್ಲಿ ಚಿಕ್ಕದಾದ ದೋಣೆಯನ್ನು ನಿರ್ಮಿಸಲಾಗಿದೆ. ಈ ದೋಣೆಯ ಮೇಲ್ಭಾಗದಲ್ಲಿರುವ ಮಲಿಯಮ್ಮನ ದೋಣೆಯ ಮೂಲಕ ನೀರನ್ನು ಹರಿಸಲಾಗಿದೆ. ಈ ದೋಣೆ ತುಂಬಿದ ನಂತರ ಮಲಿಯಮ್ಮನ ಹೊಂಡಕ್ಕೆ ಇಲ್ಲಿಂದ ರುದ್ರಯ್ಯನ ಬಾವಿಗೆ ಸೇರುತ್ತದೆ.

ದೋಣೆಯ ದಕ್ಷಿಣಕ್ಕೆ ಇರುವ ಬಂಡೆಯೊಂದರಲ್ಲಿ ನಾಗಶಿಲ್ಪವನ್ನು ಕೆತ್ತಲಾಗಿದೆ. ಸ್ವಾಭಾವಿಕ ಕಲ್ಲುಗಳನ್ನು ಬಳಸಿ ದೋಣೆಯನ್ನು ರಚಿಸಿದ್ದಾರೆ. ಮಲಿಯಮ್ಮನ ದೋಣೆಯ ಮೂಲಕ ಹರಿದು ಬರುವ ನೀರನ್ನು ಪೋಲಾಗದಂತೆ ದೋಣೆಯ ಪೂರ್ವಕ್ಕೆ 12 ಮೀ. ಉದ್ದವಾದ ತಡೆಗೋಡೆಯನ್ನು ನಿರ್ಮಿಸುವುದನ್ನು ಕಾಣುತ್ತೇವೆ. ಇದು ಪಶ್ಚಿಮವಾಗಿ 10 ಅಡಿ ಉದ್ದ, ಉತ್ತರ ದಕ್ಷಿಣವಾಗಿ 5 ಅಡಿ ಅಗಲವಿದ್ದು, 4 ಅಡಿ ಆಳ, ಅಂದಾಜು

(ಮೂರು ಲಕ್ಷ ಲೀಟರ್)ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಈ ದೊಣೆಯನ್ನು ದೇವಾಲಯದ ಮೂರ್ತಿ ಪೂಜೆಗಾಗಿ ಮತ್ತು ಕಾವಲು ಗೋಪುರದ ಕಾರ್ಯ ನಿರ್ವಹಿಸುವ ಸೈನಿಕರ ಬಳಕೆಗಾಗಿ ನಿರ್ಮಿಸಲಾಗಿದೆ.

ಬಸವಣ್ಣ ದೊಣೆ

ಭೈರವದೇವರ ಗುಡ್ಡ ಗ್ರಾಮವು ಕೂಡ್ಲಿಗಿಯಿಂದ ದಕ್ಷಿಣಕ್ಕೆ 17 ಕಿ.ಮೀ ದೂರದಲ್ಲಿದೆ. ಗ್ರಾಮದ ಉತ್ತರಕ್ಕಿರುವ ಬೆಟ್ಟದ ಮೇಲೆ ಪಾಳೆಯಗಾರರ ಕಾಲದ ಕೋಟೆ. ಕೋಟೆ ಇರುವ ಬೆಟ್ಟವು ತುಂಬಾ ಕಡಿದಾಗಿದೆ. ಬೆಟ್ಟದ ಮೇಲೆ ನಿಂತು ನೋಡಿದರೆ ಸುಮಾರು 2 ಕಿ.ಮೀ ದೂರದ ವರೆಗಿನ ದೃಶ್ಯಗಳು ಕಾಣುತ್ತವೆ. ಆದರೆ ಈ ಕೋಟೆಯನ್ನು ಯಾರು ಕಟ್ಟಿಸಿದರು ಯಾವಾಗ ಕಟ್ಟಿಸದರೆಂಬ ಮಾಹಿತಿಗಳು ಮಾತ್ರ ಅಲಭ್ಯ. ಕೋಟೆ ಮಾತ್ರ ಸುಸ್ಥಿತಿಯಲ್ಲಿದೆ. ಸ್ಥಳೀಯರು ಈ ಕೋಟೆಯನ್ನು ಭೈರವನಾಯಕನು ಕಟ್ಟಿಸಿದನು ಎಂದು ಹೇಳುತ್ತಾರೆ. ಆದರೆ ಭೈರವನಾಯಕನು ಯಾರು ಎಂಬುವುದು ಮಾಹಿತಿ ಅಲಭ್ಯ. ಕೋಟೆಯಲ್ಲಿ ಬಸವಣ್ಣ ದೇವಾಲಯ, ಚೌಡಮ್ಮನ ದೇವಾಲಯ, ಆಂಜನೇಯ ದೇವಾಲಯ ಹಾಗೂ ಭೈರವನ ಶಿಲ್ಪ ಇರುವುದು ಕಂಡುಬರುತ್ತದೆ.

ಈ ದೊಣೆಯನ್ನು ಬೆಟ್ಟದ ತುದಿಯಲ್ಲಿರುವ ಬಸವಣ್ಣನ ದೇವಾಲಯದ ಪಕ್ಕದಲ್ಲಿ ನಿರ್ಮಿಸಲಾಗಿದೆ. ಹಾಗಾಗಿ ಈ ದೊಣೆಯನ್ನು ಬಸವಣ್ಣನ ದೊಣೆ ಎಂದು ಕರೆಯುತ್ತಾರೆ. ಬೃಹತ್ ಬಂಡೆಯ ಮೇಲೆ ಬಿದ್ದ ಮಳೆನೀರು ವ್ಯರ್ಥವಾಗದಂತೆ ದೊಣೆಯ ಉತ್ತರಕ್ಕೆ 13 ಮೀ. ಉದ್ದವಾದ ತಡೆಗೋಡೆಯನ್ನು ನಿರ್ಮಾಣ ಮಾಡುವುದರ ಮೂಲಕ ನೀರನ್ನು ಸಂಗ್ರಹಣೆ ಮಾಡುತ್ತಿದ್ದರು. ಈ ದೊಣೆಯ ಹೆಚ್ಚಾದ ನೀರನ್ನು ಚೌಡಮ್ಮನ ದೊಣೆಗೆ ಹರಿಸಲಾಗಿದೆ. ಇಲ್ಲಿಂದ ಹೆಚ್ಚಾದ ನೀರನ್ನು ಬೆಟ್ಟದ ಕೆಳಭಾಗಕ್ಕೆ ಹರಿಸಲಾಗಿದೆ.

ದೊಣೆಯು ಪೂರ್ವ ಪಶ್ಚಿಮವಾಗಿ 18 ಅಡಿ ಉದ್ದ, ಉತ್ತರ ದಕ್ಷಿಣವಾಗಿ 5 ಅಡಿ ಅಗಲವಿದ್ದು, 4 ಅಡಿ ಆಳ, ಅಂದಾಜು (ಮೂರು ಲಕ್ಷ ಲೀಟರ್) ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಈ ದೊಣೆಯ ನೀರನ್ನು ದೇವಾಲಯದ ಕಾರ್ಯಗಳಿಗಾಗಿ ಮತ್ತು ಇದರ ಪಕ್ಕದಲ್ಲಿ ಕಾವಲು ಗೋಪುರ, ಸೈನಿಕರ ವಸತಿ ಇರುವುದರಿಂದ ಇವರ ಪರಿವಾರದವರಿಗಾಗಿ ನಿರ್ಮಿಸಲಾಗಿದೆ.

ಚೌಡಮ್ಮನ ದೊಣೆ

ಚೌಡಮ್ಮನ ದೊಣೆಯು ಸಹ ಭೈರವದೇವರ ಗುಡ್ಡ ಗ್ರಾಮದ ಬೆಟ್ಟದ ಮೇಲಿರುವ ಕೋಟೆಯಲ್ಲಿದೆ. ಬಸವಣ್ಣ ದೊಣೆಯಿಂದ ಕೆಳಭಾಗಕ್ಕೆ 40 ಅಡಿಯಷ್ಟು ಅಂತರದಲ್ಲಿ

ಮತ್ತೊಂದು ನಿಸರ್ಗದತ್ತವಾದ ಸುಮಾರು 6 ಅಡಿಯಷ್ಟು ಆಳವನ್ನು ಹೊಂದಿರುವ ಚಿಕ್ಕದಾದ ದೋಣೆಯನ್ನು ನಿರ್ಮಿಸಲಾಗಿದೆ. ಬಸವಣ್ಣ ದೋಣೆಯಂತಹ ರಚನೆ ಹೊಂದಿದ್ದರೂ ಅದಕ್ಕಿಂತ ಸ್ವಲ್ಪ ಚಿಕ್ಕದಾಗಿದೆ. ಈ ದೋಣೆಯ ನೀರು ಸಣ್ಣ ಕಾಲುವೆಯ ಮೂಲಕ ಬೆಟ್ಟದ ಕೆಳಗೆ ಹರಿಸಲಾಗಿದೆ. ಕಾಲುವೆಯ ಕುರುಹುಗಳು ಇಂದಿಗೂ ಕಾಣುತ್ತೇವೆ. ಇಲ್ಲಿಯೂ ಮಳೆನೀರು ಹೆಚ್ಚಾಗಿ ಹರಿಯುತ್ತಿದ್ದರಿಂದ ಪೋಲಾಗದಂತೆ ಮಳೆನೀರಿನ ಸಂರಕ್ಷಣೆಯ ದೃಷ್ಟಿಯಿಂದ ಈ ಚಿಕ್ಕ ದೋಣೆಯನ್ನು ನಿರ್ಮಿಸಲಾಗಿದೆ.

ಈ ದೋಣೆಯು ಚೌಡಮ್ಮನ ದೇವಾಲಯ ಪಕ್ಕದಲ್ಲಿ ಇರುವುದರಿಂದ ಈ ದೋಣೆಗೆ ಚೌಡಮ್ಮನ ದೋಣೆ ಎಂದು ಕರೆಯುತ್ತಾರೆ. ಬೃಹತ್ ಬಂಡೆಯ ಮೇಲೆ ಬಿದ್ದ ಮಳೆನೀರು ವ್ಯರ್ಥವಾಗದಂತೆ ಹಾಗೂ ಬಸವಣ್ಣ ದೋಣೆಯ ಮೂಲಕ ಹೆಚ್ಚಾದ ನೀರನ್ನು ಸಂಗ್ರಹಿಸಲು ದೋಣೆ ಪೂರ್ವಕ್ಕೆ ಸು.15 ಮೀ ಉದ್ದವಾದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ದೋಣೆಯು ಪೂರ್ವ ಪಶ್ಚಿಮವಾಗಿ 12 ಅಡಿ ಉದ್ದ, ಉತ್ತರ ದಕ್ಷಿಣವಾಗಿ 4 ಅಡಿ ಅಗಲವಿದ್ದು, 6 ಅಡಿ ಆಳ, ಅಂದಾಜು (ಎರಡು ಲಕ್ಷ ಲೀಟರ್) ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಈ ದೋಣೆಯ ನೀರನ್ನು ದೇವಾಲಯದ ಕಾರ್ಯಗಳಿಗಾಗಿ ಮತ್ತು ಇದರ ಪಕ್ಕದಲ್ಲಿ ಸೈನಿಕರ ವಸತಿ ಇರುವುದರಿಂದ ಇವರ ಪರಿವಾರದವರಿಗಾಗಿ ನಿರ್ಮಿಸಲಾಗಿದೆ. ಈ ದೋಣೆಯು ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿದೆ.

ಓಕಳಿ ಹೊಂಡ

ಗುಡೇಕೋಟೆ ಗ್ರಾಮವು ಕೂಡ್ಲಿಗಿ ತಾಲೂಕು ಕೇಂದ್ರದಿಂದ 28 ಕಿ.ಮೀ ಅಂತರದಲ್ಲಿದೆ. ಈ ಗ್ರಾಮದ ಸುತ್ತಲೂ ಬೆಟ್ಟಗುಡ್ಡಗಳು, ಕುರುಚಲ ಗಿಡಗಳಿಂದ ಸುತ್ತುವರಿದಿದೆ. ಗುಡೇಕೋಟೆಯು ದೊರೆಗಳ ಗುಡ್ಡ, ಸೋಮೇಶ್ವರ ಗುಡ್ಡ, ಅಗಸರ ಗುಡ್ಡ, ಹರಿಜನಕೇರಿ ಗುಡ್ಡ, ಕರಡಿ ಗುಡ್ಡಗಳ ಮಧ್ಯದಲ್ಲಿದೆ. ಇಂದಿನ ಗುಡೇಕೋಟೆಗೆ ಹಿಂದೆ ಬಾಣಾಸುರ ಪಟ್ಟಣವೆಂದು ಕರೆಯುತ್ತಿದ್ದರೆಂದು ಸ್ಥಳೀಯರ ವಾಡಿಕೆ. ಈ ಗ್ರಾಮವನ್ನು ಕ್ರಿ.ಶ 1623ರ ಶಾಸನದಲ್ಲಿ 'ಗುಡಿಕೋಟೆ' ಎಂದು ಉಲ್ಲೇಖಿಸಲಾಗಿದೆ.[6] ಗುಡೇಕೋಟೆ ಪ್ರಾಗಿತಿಹಾಸ ನೆಲೆಯಾಗಿದ್ದು, ಇಲ್ಲಿ ಹಳೆಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗದ ಆಯುಧಗಳು ಕಂಡುಬರುತ್ತವೆ.

ಗ್ರಾಮದ ಉತ್ತರಕ್ಕೆ ಕೂಡ್ಲಿಗಿ ರಸ್ತೆಯ ಪಕ್ಕದಲ್ಲಿರುವ ದೊರೆಗಳ ಗುಡ್ಡದ ಮೇಲಿರುವುದೇ ಪಾಳೆಯಗಾರರ ಕೋಟೆ. ಎರಡು ಗುಡ್ಡಗಳನ್ನು ಬಳಸಿಕೊಂಡು ಹೊರಕೋಟೆಯನ್ನು ಕಟ್ಟಿದ್ದು, ಇದೊಂದು ಗಿರಿದುರ್ಗವಾಗಿದೆ. ಹಾಸು ಬಂಡೆಗಳೇ ಈ ಕೋಟೆಯ ತಳಪಾಯವಾಗಿದೆ. ಗುಡೇಕೋಟೆ ಬೆಟ್ಟದ ಉತ್ತರ ದಿಕ್ಕಿನಲ್ಲಿರುವ ಬಿಸಿಲು

ಕಾಣದ ಬಾವಿಯ ಪಕ್ಕದಲ್ಲಿ ಓಕುಳಿ ಹೊಂಡವನ್ನು ನಿರ್ಮಿಸಲಾಗಿದೆ. ಗುಡೇಕೋಟೆ ಪಾಳೆಯಗಾರರು ಯುಗಾದಿಯ ಹಬ್ಬದ ಸಂದರ್ಭದಲ್ಲಿ ಓಕುಳಿ ಆಡವುದು ಮನರಂಜನಾ ಕ್ರೀಡೆಗಳಲ್ಲಿ ಒಂದಾಗಿತ್ತು. ಹೊಂಡದಲ್ಲಿಯೇ ಓಕುಳಿ ಆಡುತ್ತಿದ್ದ. ಈ ಹೊಂಡಕ್ಕೆ ಓಕುಳಿ ಹೊಂಡವೆಂದು ಕರೆಯುತ್ತಾರೆ. ಇಂದಿಗೂ ಆ ಸಂಪ್ರದಾಯ ಉಳಿದು ಬಂದಿದೆ.7 ಹೊಂಡಕ್ಕೆ ಬೆಟ್ಟದ ಮೇಲೆ ಬಿದ್ದ ಮಳೆ ನೀರು ವ್ಯರ್ಥವಾಗದಂತೆ ಕಾಲುವೆಯ ಮೂಲಕ ಹೊಂಡಕ್ಕೆ ಹರಿಸಲಾಗಿದೆ. ಪ್ರಸ್ತುತ ಕಾಲುವೆಯ ಅವಶೇಷಗಳಿವೆ. ಇಲ್ಲಿಂದ ಹೆಚ್ಚಾದ ನೀರು 2 ಮೀಟರ್ ಅಂತರದಲ್ಲಿರುವ ಬಿಸಿಲು ಕಾಣದ ಬಾವಿಗೆ ಸೇರುತ್ತದೆ. ಹೊಂಡದ ಪಕ್ಕದಲ್ಲಿ ಅರಮನೆಯಿದ್ದು, ರಾಜ ಪರಿವಾರದವರಿಗೆ ಮತ್ತು ಸೈನಿಕರಿಗಾಗಿ ಹೊಂಡವನ್ನು ನಿರ್ಮಿಸಲಾಗಿದೆ. ಹೊಂಡವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದು, ಚೌಕಾಕಾರವಾಗಿದೆ. 18.28 ಮೀಟರ್ ಅಗಲ, 18.28 ಮೀಟರ್ ಉದ್ದ ಮತ್ತು 10.ಮೀ ಆಳವಿದ್ದು, ಸುಮಾರು 5,12000 (ಐದು ಲಕ್ಷದ ಹನ್ನೆರಡು ಸಾವಿರ) ಲೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಹೊಂಡದ ಸುತ್ತಲೂ ಸೋಪಾನಗಳನ್ನು ಅಳವಡಿಸಲಾಗಿದೆ. ದಕ್ಷಿಣ ದಿಕ್ಕಿನಲ್ಲಿ ಇಳಿಯಲು 7 ಕ್ಕಿಂತ ಹೆಚ್ಚು ಮೆಟ್ಟಿಲುಗಳನ್ನು ಹೊಂದಿದ್ದು, ಅದಕ್ಕೂ ಸಹ ಸೋಪಾನಗಳನ್ನು ಅಳವಡಿಸಲಾಗಿದೆ. ಹೊಂಡದ ಕೆಳಭಾಗಕ್ಕೆ ಹೋದಂತೆ ಅಗಲವು ಕಿರಿದಾಗುತ್ತ ಹೋಗುತ್ತದೆ. ಪ್ರಸ್ತುತ ಹೊಂಡವು ಹೂಳು, ಸಸ್ಯ, ಜಾಲಿ ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ. ಇಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಆಸರೆಯಾಗಿದೆ.

ಅಕ್ಕಮ್ಮನ ಹೊಂಡ

ಗುಡೇಕೋಟೆ ಗ್ರಾಮದ ಉತ್ತರಕ್ಕೆ ಕೂಡ್ಲಿಗಿ ರಸ್ತೆಯ ಪಕ್ಕದ ಗುಡ್ಡದ ಮೇಲಿರುವುದೇ ಪಾಳೆಯಗಾರರ ಕೋಟೆ. ಕೋಟೆಯೊಳಗೆ ಹೋಗುವ ಪ್ರಾರಂಭದಲ್ಲಿ ಉಪ್ಪರಿಗೆ ಕಂಡುಬರುತ್ತದೆ. ಅದೇ ಮಾರ್ಗದಲ್ಲಿ ಅಕ್ಕಮ್ಮನ ಹೊಂಡವಿದೆ. ಓನಕೆ ಓಬವ್ವನ ಪತಿಯ ಸಂಬಂಧಿಕರಲ್ಲಿ ಅಕ್ಕಮ್ಮ ಎಂಬ ಮಹಿಳೆ ಇದ್ದರಂತೆ ಅವರ ಹೆಸರಿನಲ್ಲಿ ಹೊಂಡವನ್ನು ನಿರ್ಮಿಸಿದ್ದಾರೆ ಎಂಬುದು ಸ್ಥಳೀಯರ ಅಭಿಪ್ರಾಯ.

ಹೊಂಡದ ರಚನೆ

ಬೆಟ್ಟದ ಮೇಲಿಯಿಂದ ಬಿದ್ದ ಮಳೆನೀರು ಹಾಗೂ ತೊಟ್ಟಿಲು ಬಾವಿಯಿಂದ ಹರಿಸಲಾಗಿರುವ ನೀರು ಪೋಲಾಗದಂತೆ ಉತ್ತರ ದಿಕ್ಕಿನಲ್ಲಿ 40 ಅಡಿ ಉದ್ದವಾದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಇದು 16–17ನೇ ಶತಮಾನದ್ದು. ಹೊಂಡವು ಸುಮಾರು 42 ಅಡಿ ಅಗಲ ಮತ್ತು 43 ಅಡಿ ಉದ್ದ ಮತ್ತು ಸುಮಾರು 15 ಅಡಿ ಆಳವಿದ್ದು, 14,94,000 (ಹದಿನಾಲ್ಕು ಲಕ್ಷದ ತೊಂಬತ್ತು ನಾಲ್ಕು ಸಾವಿರ) ಲೀಟರ್ ಸಂಗ್ರಹಣಾ

ಸಾಮರ್ಥ್ಯ ಹೊಂದಿದೆ. ಆಯತಾಕಾರದಲ್ಲಿದೆ. ಮೊದಲು ಉತ್ತರ ಭಾಗದ ಕಡೆಯಿಂದ ಇಳಿಯಲು ಪ್ರವೇಶ ದ್ವಾರವನ್ನು ಹೊಂದಿದೆ ಎಂದು ಸ್ಥಳೀಯರು ಹೇಳುತ್ತಾರೆ. ಆದರೆ ಹೊಂಡವನ್ನು ಗಮನಿಸಿದಾಗ ಯಾವುದೇ ತರಹದ ಮೆಟ್ಟಿಲು ಅಥವಾ ಸೋಪಾನಗಳನ್ನು ಅಳವಡಿಸಿದ ಅವಶೇಷಗಳು ಕಂಡುಬರುವುದಿಲ್ಲ. ಹೊಂಡದ ಅತಿ ಕೆಳಗಿನ ಭಾಗವನ್ನು ನೈಸರ್ಗಿಕ ಕಲ್ಲಿನಲ್ಲಿಯೇ ಕೊರೆಯಲಾಗಿದೆ. ಪಕ್ಕದಲ್ಲಿಯೇ ವಸತಿ ಗೃಹದ ಅವಶೇಷಗಳು ಕಂಡುಬಂದಿದ್ದು, ಇದು ಸೈನಿಕರ ವಸತಿ ಗೃಹ ಇರಬಹುದು, ಅದಕ್ಕಾಗಿ ಸೈನಿಕರಿಗೆ ಕುಡಿಯುವ ನೀರಿನ ಸಲುವಾಗಿ ನಿರ್ಮಿಸಿರುವರು. ಪ್ರಸ್ತುತ ಹೊಂಡವು ಹೂಳು, ಜಾಲಿ ಮುಳ್ಳುಗಳಿಂದ ಕೂಡಿ ಶಿಥಿಲಾವಸ್ಥೆಯಲ್ಲಿದೆ.

ಆನೆಹೊಂಡ

ಕೂಡ್ಲಿಗಿ ತಾಲೂಕು ಕೇಂದ್ರದಿಂದ ನೈರುತ್ಯಕ್ಕೆ 15 ಕಿ.ಮೀ ದೂರದಲ್ಲಿ ಜರಿಮಲೆ ಗ್ರಾಮವಿದೆ. ಗ್ರಾಮವು ಸಮುದ್ರ ಮಟ್ಟದಿಂದ 2750 ಅಡಿ ಎತ್ತರವಿದ್ದು, ಸುತ್ತಲಿನ ಪ್ರದೇಶದಿಂದ 800 ಅಡಿ ಮೇಲ್ಮಟ್ಟದಲ್ಲಿದೆ.[7] ಗ್ರಾಮದ ಪೂರ್ವದಿಕ್ಕಿಗೆ ಬೆಟ್ಟದ ಮೇಲೆ ಕೋಟೆಯಿದ್ದು, ಜರಿಮಲೆ ಪಾಳೆಯಗಾರರು ಕುಡಿಯುವ ನೀರಿಗೆ ವಿಶೇಷ ಗಮನ ಹರಿಸಿರುವುದು ಕಂಡುಬರುತ್ತದೆ. ಜಲವು ವರ್ಷಪೂರ್ತಿ ದೊರೆಯುವಂತೆ, ಹೊಂಡ ಮತ್ತು ಬಾವಿಗಳನ್ನು ನಿರ್ಮಿಸಿರುವುದನ್ನು ಪ್ರಸ್ತುತವಾಗಿ ಕೋಟೆಯಲ್ಲಿ ಕಾಣುತ್ತೇವೆ.

ಕೋಟೆಯ ಮೊದಲನೇ ದ್ವಾರದಲ್ಲಿ ಕಾಣುವುದೇ ಆನೆಹೊಂಡ. ಪಾಳೆಯಗಾರರು ಇಲ್ಲಿ ಆನೆಗಳನ್ನು ಸ್ನಾನ ಮಾಡಿಸುತ್ತಿದ್ದರಂತೆ ಅದಕ್ಕೆ ಇದನ್ನು ಆನೆಹೊಂಡ ಎಂದು ಕರೆಯುತ್ತಾರೆ. ಹೊಂಡದ ರಚನೆಯ ತಾಂತ್ರಿಕತೆಯನ್ನು ಗಮನಿಸಿದಾಗ ಬೆಟ್ಟದ ಇಳಿಜಾರಿನ ಅತ್ಯಂತ ತಗ್ಗಾದ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಹೊಂಡಕ್ಕೆ ಬೆಟ್ಟದ ಮೇಲಿನಿಂದ ಬಿದ್ದ ಮಳೆ ನೀರು ಪೋಲಾಗದಂತೆ ನೈಸರ್ಗಿಕ ಕಲ್ಲುಗಳನ್ನು ಬಳಸಿ ಎಲ್ ಆಕಾರದ ತಡೆಗೋಡೆಯನ್ನು ನಿರ್ಮಿಸುವುದರ ಮೂಲಕ ಹೊಂಡದಲ್ಲಿ ಹೆಚ್ಚು ನೀರು ಸಂಗ್ರಹಿಸುತ್ತಿರುವುದು ಅವರ ತಾಂತ್ರಿಕತೆ ಕೈಗನ್ನಡಿ ಆಗಿದೆ. ಇಲ್ಲಿಂದ ಹೆಚ್ಚಾದ ನೀರು ಕರಡಿ ಹೊಂಡಕ್ಕೆ ಹರಿಸಲಾಗಿದೆ. ಇದು ಚೌಕಾಕಾರವಾಗಿದ್ದು, ಈಶಾನ್ಯ ದಿಕ್ಕಿನಲ್ಲಿ 15ಕ್ಕಿಂತ ಹೆಚ್ಚು ಮೆಟ್ಟಿಲುಗಳನ್ನು ಹೊಂದಿದೆ. 70 ಮೀಟರ್ ಉದ್ದ, 60 ಮೀ ಅಗಲ ಮತ್ತು 30 ಅಡಿ ಆಳವಿದ್ದು, ಸುಮಾರು (ಮೂವತ್ತೆಂಟು ಲಕ್ಷದ ಐವತ್ತು ಸಾವಿರ) ಲೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಹೊಂಡದ ಪಕ್ಕದಲ್ಲಿಯೇ ವಸತಿ ಗೃಹದ ಅವಶೇಷಗಳು ಕಂಡುಬಂದಿದ್ದು, ಇದು ಸೈನಿಕರ ವಸತಿ ಗೃಹ ಇರಬಹುದು. ಅದಕ್ಕಾಗಿ ಸೈನಿಕರ ಕುಟುಂಬದವರಿಗೆ ಈ ಹೊಂಡವನ್ನು ನಿರ್ಮಿಸಲಾಗಿದೆ. ಪ್ರಸ್ತುತ ಹೊಂಡವು ಹೂಳು,

ಜಾಲಿ ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ. ಇಲ್ಲಿನ ಪ್ರಾಣಿಪಕ್ಷಿಗಳಿಗೆ ಹೊಂಡದ ನೀರು ಆಸರೆಯಾಗಿದೆ.

ದುರ್ಗಮ್ಮನ ಹೊಂಡ

ಪಾಲಯ್ಯನ ಕೋಟೆ ಗ್ರಾಮವು ಕೂಡ್ಲಿಗಿಯಿಂದ ದಕ್ಷಿಣಕ್ಕೆ 18 ಕಿ.ಮೀ ದೂರದಲ್ಲಿದೆ. ಇದನ್ನು ಅಡವಿ ಪೂಜಾರಳ್ಳಿ ಎಂತಲೂ ಕರೆಯುತ್ತಾರೆ. ಗ್ರಾಮದ ಉತ್ತರಕ್ಕಿರುವ ಬೆಟ್ಟದ ಮೇಲೆ ಕೋಟೆ ಇದೆ. ಈ ಕೋಟೆಯನ್ನು ಯಾರು ಕಟ್ಟಿಸಿದರೆಂಬ ಮಾಹಿತಿಗಳು ಅಲಭ್ಯ. ಆದರೆ ಈ ಪರಿಸರದಲ್ಲಿ ಜರಿಮಲೆ ಪಾಳೆಗಾರರು ಆಳ್ವಿಕೆ ಮಾಡಿರುವುದರಿಂದ ಇವರ ಕಾಲದಲ್ಲಿ ನಿರ್ಮಾಣವಾಗಿರಬಹುದು ಎಂದು ಊಹಿಸಬಹುದು. ಈ ಕೋಟೆಯ ಪೂರ್ವಕ್ಕೆ ಗೋಡೆಗೆ ಹೊಂದಿಕೊಂಡು ದುರ್ಗಮ್ಮನ ಹೊಂಡವಿದೆ. ಹೊಂಡದ ಪಕ್ಕದಲ್ಲಿ ದುರ್ಗಮ್ಮನ ದೇವಾಲಯ ಇರುವುದರಿಂದ ಈ ಹೊಂಡಕ್ಕೆ ದುರ್ಗಮ್ಮನ ಹೊಂಡ ಎಂದು ಸ್ಥಳೀಯರು ಕರೆಯುತ್ತಾರೆ.

ಹೊಂಡದ ರಚನೆ

ಹೊಂಡಕ್ಕೆ ಬೆಟ್ಟದ ಮೇಲಿಂದ ಬಿದ್ದ ಮಳೆ ನೀರು ವ್ಯರ್ಥವಾಗದಂತೆ ನೈಸರ್ಗಿಕ ಕಲ್ಲುಗಳನ್ನು ಬಳಸಿ ಸು.20 ಮೀ ಉದ್ದವಾದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಹೊಂಡದ ದಕ್ಷಿಣೋತ್ತರವಾಗಿ 15 ಅಡಿ ಉದ್ದ, ಪೂರ್ವ ಪಶ್ಚಿಮಕ್ಕೆ 15 ಅಡಿ ಅಗಲ, ಅಂದಾಜು 30 ಅಡಿ ಆಳವನ್ನು ಹೊಂದಿದೆ. ಅಂದಾಜು 190,8,876(ಹತ್ತೊಂಬತ್ತು ಲಕ್ಷದ ಎಂಟು ಸಾವಿರದ ಎಂಟನೂರ ಎಪ್ಪತ್ತಾರು) ಲೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ಎಷ್ಟೇ ಬರಗಾಲ ಬಂದರೂ ಬತ್ತದೆ ವರ್ಷಪೂರ್ತಿಯಾಗಿ ಈ ಹೊಂಡದಲ್ಲಿ ನೀರಿರುವುದು ದುರ್ಗಮ್ಮನ ಹೊಂಡದ ವಿಶೇಷ.

ದುರ್ಗಮ್ಮನ ಹೊಂಡವು ತುಂಬಿದ ನಂತರ ಪಶ್ಚಿಮ ದಿಕ್ಕಿನಲ್ಲಿರುವ ಕಣಶಿಲೆಯ ಕಾಲುವೆ ಮೂಲಕ ಬೆಟ್ಟದ ಕೆಳಗೆ ಹೋಗುವಂತೆ ವ್ಯವಸ್ಥೆ ಮಾಡಿರಬಹುದು. ಏಕೆಂದರೆ ಕಾಲುವೆಯ ಕುರುಹುಗಳು ಇಂದಿಗೂ ಅವಶೇಷ ರೂಪದಲ್ಲಿ ಉಳಿದಿವೆ. ಇಂದಿಗೂ ಹೊಂಡದ ನೀರನ್ನು ದುರಗಮ್ಮನ ಮೂರ್ತಿ ಪೂಜೆಗೆ ಬಳಸುತ್ತಾರೆ. ಬೆಟ್ಟದ ಮೇಲೆ ವರ್ಷಕೊಮ್ಮೆ ದುರ್ಗಮ್ಮನ ಜಾತ್ರೆ ನಡೆಯುತ್ತದೆ. ಇಲ್ಲಿ ಬರುವ ಭಕ್ತಾದಿಗಳು ದೇವರಿಗೆ ಕುರಿ, ಕೋಳಿ ಬಲಿ ನೀಡುತ್ತಾರೆ. ಹೊಂಡದ ನೀರನ್ನು ಕುಡಿದರೆ ಕಾಯಿಲೆಗಳು ನಿರ್ವಹಣೆಯಾಗುತ್ತದೆ ಎಂಬುವುದು ಸ್ಥಳೀಯರ ಅಭಿಪ್ರಾಯ. ಪ್ರಸ್ತುತ ಹೊಂಡವು ಹೂಳು, ಜಾಲಿ ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ. ಪ್ರಾಣಿ ಪಕ್ಷಿಗಳಿಗೆ ಹೊಂಡದ ನೀರು ಆಸರೆಯಾಗಿದೆ.

ಮಲಿಯಮ್ಮನ ಹೊಂಡ

ಕೂಡ್ಲಿಗಿಯಿಂದ ದಕ್ಷಿಣ ದಿಕ್ಕಿಗೆ 7 ಕಿ.ಮೀ ದೂರದಲ್ಲಿ ವೀರನದುರ್ಗವಿದೆ. ಸ್ಥಳೀಯರು ಕೋಟೆಯನ್ನು ಒಳಗೊಂಡ ಬೆಟ್ಟವನ್ನು ಬೀರಲಗುಡ್ಡವೆಂದು ಹೆಸರಿಸುತ್ತಿರುವುದು ವಾಡಿಕೆ.[8] ವೀರನದುರ್ಗ ಎಂಬ ಹೆಸರು ಇಲ್ಲಿ ಆಳ್ವಿಕೆ ನಡೆಸಿದ ವೀರನಾಯಕ ಎಂಬುವವನಿಂದ ಬಂದಿದೆ. ಇಲ್ಲಿರುವ ಶಾಸನದಲ್ಲಿ ಅಕ್ಷರ ಸಂವತ್ಸರ...ರಾಮಯ್ಯ ನಾಯಕ ಎಂದಷ್ಟೇ ಇದೆ.[9] ಹಾಗಾದರೆ ಮುಮ್ಮಡಿ ನಾಯಕನೇ ಈ ವೀರನಾಯಕ. ಇವನ ಆಳ್ವಿಕೆಯಲ್ಲಿ ಈ ಕೋಟೆಯನ್ನು ನಿರ್ಮಿಸಿದನು ಎಂದು ಹೇಳಲು ಕಷ್ಟಸಾಧ್ಯ. ಕೋಟೆಯ ಅಂತಿಮ ಸುತ್ತು ಬೆಟ್ಟದ ತುತ್ತ ತುದಿಯಲ್ಲಿ ಮಲಿಯಮ್ಮನ ಹೊಂಡ ಕಂಡುಬರುತ್ತದೆ.

ಹೊಂಡದ ರಚನೆ

ಹೊಂಡದ ಪಕ್ಕದಲ್ಲಿ ಮಲಿಯಮ್ಮನ ದೇವಾಲಯ ಇರುವುದರಿಂದ ಈ ಹೊಂಡ ಮಲಿಯಮ್ಮನ ಹೊಂಡವೆಂದೇ ಪ್ರಸಿದ್ಧಿ ಹೊಂದಿದೆ. ಈ ಹೊಂಡವನ್ನು ಪಾಳೆಯಗಾರರ ಆಳ್ವಿಕೆಯ ಅವಧಿಯಲ್ಲಿ ನಿರ್ಮಿಸಲಾಗಿದೆ. ಹೊಂಡಕ್ಕೆ ಬೃಹತ್ ಬಂಡೆಗಳ ನೈಸರ್ಗಿಕ ಕಲ್ಲಾಸರೆಗಳ ಮಧ್ಯದ ತಗ್ಗಾದ ಪ್ರದೇಶವನ್ನು ಬಳಸಿಕೊಂಡಿದ್ದಾರೆ. ಅದರ ಮೇಲಿನ ಕಲ್ಲಿನ ಗೋಡೆಯನ್ನು ಅವಶ್ಯಕತೆ ಇರುವ ಕಡೆ ಅಂದರೆ ಹೊಂಡದ ನೀರು ಕಲ್ಲಾಸರೆಗಳಿಂದ ತುಂಬಿ ಮೇಲ್ಮಟ್ಟದಲ್ಲಿ ಹರಿದು ಹೋಗುವಂತಹ ಸ್ಥಳದಲ್ಲಿ ತಡೆಗೋಡೆಯ ರೀತಿಯಲ್ಲಿ ಕಲ್ಲಿನ ಕಟ್ಟಡವನ್ನು ನಿರ್ಮಾಣ ಮಾಡಿರುವರು. ಈ ಹೊಂಡದ ಮೇಲ್ಭಾಗದಲ್ಲಿ ಬತೇರಿ ಕಂಡುಬರುತ್ತದೆ. ಈ ಹೊಂಡಕ್ಕೆ ಮಲಿಯಮ್ಮನ ದೊಣೆಯ ಮೂಲಕ ನೀರು ಬಂದು ಸೇರುತ್ತದೆ. ಇಲ್ಲಿಂದ ರುದ್ರಯ್ಯನ ಬಾವಿಗೆ ಹರಿಸಲಾಗಿದೆ. ಅತ್ಯಂತ ಎತ್ತರದ ಪ್ರದೇಶವಾದ್ದರಿಂದ ಈ ಭಾಗದಲ್ಲಿ ಪಹರೆ ಕಾಯುವ ಸೈನಿಕರಿಗೆ ಕುಡಿಯುವ ನೀರಿನ ಸಲುವಾಗಿ ನಿರ್ಮಿಸಿರುವರು. ಈ ಹೊಂಡದ ಪಕ್ಕದಲ್ಲಿಯೇ ವಸತಿ ಗೃಹವಿದ್ದು, ಈ ಗೃಹದಲ್ಲಿ ವಾಸವಿದ್ದ ಸೈನಿಕರ ಕುಟುಂಬ ಅಥವಾ ಪಹರೆಯವರಿಗಾಗಿ ಹೊಂಡವನ್ನು ನಿರ್ಮಿಸಲಾಗಿದೆ. ಮೇಲ್ಭಾಗದ ಉತ್ತರ ದಿಕ್ಕಿನಲ್ಲಿರುವ ದೊಣೆಯು ತುಂಬಿದ ಹೆಚ್ಚುವರಿ ನೀರನ್ನು ಈ ಹೊಂಡಕ್ಕೆ ಹರಿಸಲಾಗಿದೆ ಎಂದು ಕಾಲುವೆ ಕುರುಹುಗಳ ಮೂಲಕ ಸ್ಪಷ್ಟವಾಗುತ್ತದೆ.

ಹೊಂಡವು ಉತ್ತರ ದಕ್ಷಿಣವಾಗಿ 15 ಮೀಟರ್ ಉದ್ದ, ಪೂರ್ವ ಪಶ್ಚಿಮವಾಗಿ 10 ಮೀಟರ್ ಅಗಲವಿದ್ದು, 60 ಅಡಿ ಆಳ, ಸುಮಾರು (27,42,000 ಲೀಟರ್) ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ದೇವಾಲಯದ ಪಕ್ಕದಲ್ಲಿ ಹೊಂಡವನ್ನು ನಿರ್ಮಿಸಲಾಗಿರುವುದರಿಂದ ದೇವಸ್ಥಾನದ ಕಾರ್ಯಗಳಿಗೆ ನೀರನ್ನು ಹೆಚ್ಚಾಗಿ ಉಪಯೋಗಿಸಿಕೊಂಡಂತೆ ಕಂಡುಬರುತ್ತದೆ. ಪ್ರಸ್ತುತ ಹೊಂಡವು ಹೂಳು, ಜಾಲಿ

ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ. ಇಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಹೊಂಡದ ನೀರು ಆಸರೆಯಾಗಿದೆ.

ಬೊಮ್ಮಲಿಂಗನ ಕೆರೆ

ಗುಡೇಕೋಟೆ ಗ್ರಾಮವು ಕೂಡ್ಲಿಗಿ ತಾಲೂಕು ಕೇಂದ್ರದಿಂದ 19 ಕಿ.ಮೀ ಅಂತರದಲ್ಲಿದೆ. ಗುಡೇಕೋಟೆ ಗ್ರಾಮದ ಶಿವ–ಪಾರ್ವತಿಯರ ಗುಡಿಯಿಂದ ಪಶ್ಚಿಮಕ್ಕೆ ಸಾಗಿದರೆ ಕೆರೆ ಕಂಡುಬರುತ್ತದೆ. ಇಂದಿಗೂ ಅದು ಸುಸ್ಥಿತಿಯಲ್ಲಿದ್ದು, ಜನರು ಅದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಗುಡೇಕೋಟೆ ಗುಡ್ಡ ಮತ್ತು ದೊರೆಗಳ ಗುಡ್ಡ ಮಧ್ಯದಲ್ಲಿ ಕೆರೆಯನ್ನು ನಿರ್ಮಾಣ ಮಾಡಲಾಗಿದೆ. ಈ ಎರಡು ಗುಡ್ಡಗಳ ಮೇಲೆ ಬಿದ್ದ ಮಳೆ ನೀರನ್ನು ಸರಣಿಯಾರದಲ್ಲಿ ಬಳಸಿಕೊಂಡು ಒಂದು ತುಂಬಿದ ನಂತರ ಮತ್ತೊಂದಕ್ಕೆ ಎನ್ನುವ ರೀತಿಯಾಗಿ ಗುಡ್ಡದ ಮೇಲಿರುವ ತೊಟ್ಟಿಲು ಬಾವಿಯಿಂದ ಓಕಳಿ ಹೊಂಡದ ಮೂಲಕ ಅಕ್ಕಮ್ಮನ ಹೊಂಡಕ್ಕೆ ತಲುಪಿ ಅಲ್ಲಿಂದ ಬೊಮ್ಮಲಿಂಗನ ಕೆರೆಗೆ ಹರಿದು ಬಂದ ನೀರು ಪೋಲಾಗದಂತೆ ಕೆರೆಯ ಪೂರ್ವಕ್ಕೆ 964.00 ಮೀ ಉದ್ದವಾದ ಏರಿಯನ್ನು ನಿರ್ಮಿಸಲಾಗಿದೆ. ಕೆರೆಯ ಹಿಂಭಾಗದ ರಸ್ತೆ ಬದಿಯ ಹೆಬ್ಬಂಡೆಯ ಮೇಲಿನ ಶಾಸನವು ನಾಲ್ಕು ಸಾಲಗಳನ್ನು ಒಳಗೊಂಡಿದ್ದು, ಅಕ್ಷರಗಳು ಅಸ್ಪಷ್ಟವಾಗಿದೆ. 'ನಾಯಕರ(ಸೇನಾಪತಿ)ದಲಿಗೆ ಯಿಜಾಗಿ ತಿರುಮಲ ದೇವರ ದರ ಭಕವತಿ' ಎಂದು ತಿಳಿದು ಬರುತ್ತದೆ. ಇದರ ಸಾರಾಂಶ ನಾಯಕ ಸೇನಾಧಿಪತಿಗಳು ಯುದ್ಧದಲ್ಲಿ ತೋರಿದ ಸಾಹಸಕ್ಕೆ, ತಂದುಕೊಟ್ಟ ಜಯಕ್ಕೆ ಪ್ರತಿಫಲವಾಗಿ ವಿಜಯನಗರದ ಅರಸ ಈ ಪ್ರದೇಶವನ್ನು ಅವರಿಗೆ (ಗುಡೇಕೋಟೆ) ಜಹಗೀರಾಗಿ ಕೊಟ್ಟಿರಬೇಕು.[10] ಗುಡೇಕೋಟೆ ಪಾಳೆಯಗಾರರಲ್ಲಿ ಪ್ರಸಿದ್ಧ ನಾಯಕನಾದ ಬೊಮ್ಮನಾಯಕನು ಕೆರೆಯನ್ನು ಕಟ್ಟಿಸಿದನು. ಅದಕ್ಕೆ ಈ ಕೆರೆಯನ್ನು ಬೊಮ್ಮಲಿಂಗನ ಕೆರೆ ಎಂದು ಕರೆಯುತ್ತಾರೆ.

ಕೆರೆಯ ಜಲಾನಯನ ಪ್ರದೇಶ 54.94 ಹೆಕ್ಟೇರ್ ಆಗಿದ್ದು, ಕೆರೆಯ ಏರಿಯ ಉದ್ದ 964.00 ಮೀ ಎತ್ತರ 967.00 ಮೀ. ಕೆರೆಯ ಅಗಲ 2.50 ಮೀ, ಏರಿಯ ಮುಂಭಾಗದ ಇಳಿಜಾರಿನ 11\2:1 ಮೀ, ಏರಿಯ ಹಿಂಭಾಗದ ಇಳಿಜಾರು 11/ 2:1ಮೀಟರ್‌ಯನ್ನು ಹೊಂದಿದೆ. ಕೆರೆಯ ಎಡ ಭಾಗದ ಕಾಲುವೆಯ ಉದ್ದ 2.00 ಕಿ.ಮೀ ಮತ್ತು ಬಲ ಭಾಗದ ಕಾಲುವೆಯ ಉದ್ದ 0.50 ಕಿ.ಮೀ. ಅಚ್ಚುಕಟ್ಟು ಪ್ರದೇಶಗಳಿಗೆ 75.00 ಹೆಕ್ಟೇರ್‌ಗಳಿಗೆ ನೀರನ್ನು ಹಾಯಿಸಲಾಗುತ್ತದೆ. ಕೆರೆಯು ಸುಮಾರು ಎರಡು ಸಾವಿರ ಹೆಕ್ಟೇರ್‌ನಷ್ಟು ವಿಸ್ತೀರ್ಣ ಹೊಂದಿದ್ದು, ಕಲ್ಲುಗಳಿಂದ ನಿರ್ಮಿಸಲಾದ ಎರಡು ತೂಬುಗಳನ್ನು ಹೊಂದಿದೆ. ಕೆರೆಯ ಏರಿಯು ನೈಸರ್ಗಿಕ ಕಲ್ಲುಗಳಿಂದ ಭದ್ರವಾದ ತಳಪಾಯವನ್ನು

ಹೊಂದಿದೆ. ಏರಿಯ ನಿರ್ಮಾಣದಲ್ಲಿ ನೈಸರ್ಗಿಕ ಕಲ್ಲುಗಳನ್ನು ಬಳಸಲಾಗಿದೆ. ಕೆರೆಯ ನೀರು ಕಾಲುವೆಯ ಮೂಲಕ ಕೃಷಿ ಭೂಮಿಯನ್ನು ತಲುಪುವ ನೀರು ಎಲ್ಲಿಯೂ ಪೋಲಾಗದಂತೆ ಕಬ್ಬಿಣದ ಶೆಲ್ಟರ್‌ಗಳನ್ನು ನಿರ್ಮಿಸಲಾಗಿದೆ. ಎಡ ಮತ್ತು ಬಲ ಕಾಲುವೆಗೆ ತಲಾ ಮೂರು ಉಪ ಕಾಲುವೆ ಹಾಗೂ ಮಧ್ಯದ ಕಾಲುವೆಗೆ ತಲಾ ಎರಡು ಉಪ ಕಾಲುವೆಗಳನ್ನು ಜೋಡಿಸಲಾಗಿದೆ. ಇವುಗಳಿಗೆ ಕ್ರಮವಾಗಿ 200.00, 827.6 ಮೀಟರ್ ನೀರು ಹಂಚಿಕೆ ವ್ಯವಸ್ಥೆ ಮಾಡಲಾಗಿದೆ. ದಕ್ಷಿಣ ಭಾಗದಲ್ಲಿ ಕೋಡಿಯನ್ನು ಹೊಂದಿದ್ದು, ಪಕ್ಕದಲ್ಲಿ ಆಂಜನೇಯ ಸ್ವಾಮಿ ದೇವಾಲಯವಿದೆ. ಈ ದೇವಾಲಯವನ್ನು ಕೋಡಿ ಆಂಜನೇಯ ಎಂದು ಕರೆಯಲಾಗುತ್ತದೆ. ಕೆರೆಯು ತುಂಬಿ ಕೋಡಿ ಬಿದ್ದಂತಹ ಸಂದರ್ಭದಲ್ಲಿ ಆಂಜನೇಯನಿಗೆ ಮತ್ತು ಕೆರೆಯ ಕೋಡಿಗೆ ವಿಶೇಷವಾದ ಪೂಜೆಯನ್ನು ಸಲ್ಲಿಸುತ್ತಾರೆ.[11] ಏರಿಯ ಪೂರ್ವಕ್ಕೆ ಮಾರಮ್ಮನ ಗುಡಿಯಿದೆ. ಗುಡಿಯ ಮುಂಭಾಗದಲ್ಲಿ ದೇವಿಯ ಪಾದುಕೆಗಳಿವೆ. ಮಳೆಗಾಲದಲ್ಲಿ ಕೆರೆಯೂ ಭರ್ತಿಯಾದಂತಹ ಸಂದರ್ಭದಲ್ಲಿ ಈ ಪಾದುಕೆಗಳಿಗೆ ಕುರಿ, ಕೋಳಿಗಳನ್ನು ಬಲಿ ನೀಡುತ್ತಾರೆ. ಈ ಕೆರೆಯು ಮುಂದೆ ತುಂಗಭದ್ರ ನದಿಯನ್ನು ಸೇರುತ್ತದೆ. ಪ್ರಸ್ತುತವಾಗಿ ಕೆರೆಯ ಸುತ್ತ ರಾಗಿ, ಜೋಳ, ಭತ್ತ ಮತ್ತು ಮೆಕ್ಕೆಜೋಳ ಬೆಳೆಗಳನ್ನು ಬೆಳೆಯುತ್ತಾರೆ.

ಜರಿಮಲೆ ಕೆರೆ

ಜರಿಮಲೆ ಗ್ರಾಮವು ಕೂಡ್ಲಿಗಿ ತಾಲೂಕು ಕೇಂದ್ರದಿಂದ ಆಗ್ನೇಯಕ್ಕೆ 14 ಕಿ.ಮೀ ಅಂತರದಲ್ಲಿದೆ. ಜರಿಮಲೆ ಎಂಬುದು 'ಜರಿ' ಎಂದರೆ ತೆಳುವಾಗಿ ಹರಿಯುವ ನೀರು 'ಮಲೆ' ಎಂದರೆ ಬೆಟ್ಟ, ಗುಡ್ಡ ಎಂದರ್ಥ.[12] ಗುಡ್ಡದಲ್ಲಿ ನೀರು ಹರಿಯುವುದು ಅಥವಾ ನೀರು ಬಸಿಯುವುದು ಎಂದರ್ಥ. ಈ ಕೆರೆಯು ಜರಿಮಲೆ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿದೆ. ಈ ಕೆರೆಯಿಂದ 800 ಮೀಟರ್ ಅಂತರದಲ್ಲಿ ಬೆಟ್ಟದ ಮೇಲೆ ಜರಿಮಲೆ ಪಾಳೆಯಗಾರರ ಕಾಲದ ಕೋಟೆ ಕಂಡುಬರುತ್ತದೆ. ನೀರಿನ ವ್ಯವಸ್ಥೆಗಾಗಿ ಕೋಟೆಯಲ್ಲಿ ಹೊಂಡ ಮತ್ತು ಬಾವಿಗಳನ್ನು ನಿರ್ಮಿಸಿದ್ದಾರೆ. ಈ ಕೆರೆಯು ಬೆಟ್ಟದ ಕೆಳಗಿದ್ದು, ಹಿಂದೆ ಇಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿದಂತೆ ತೋರುತ್ತದೆ. ಕೃಷಿ ವ್ಯವಸ್ಥೆಗೆ ಸಹಾಯಕವಾಗುವ ದೃಷ್ಟಿಯಲ್ಲಿ ಕೆರೆಯನ್ನು ಕಟ್ಟಲಾಗಿದೆ.

ಈ ಕೆರೆಗೆ ಜರಿಮಲೆ ಕೋಟೆ ಬೆಟ್ಟದ ತಪ್ಪಲಿನ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ಸರಾಗವಾಗಿ ಈ ಪ್ರದೇಶಕ್ಕೆ ಹರಿದು ಬರುವ ನೀರನ್ನು ಕೆರೆಯ ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿ 900 ಮೀ ಉದ್ದವಾದ ಏರಿಯನ್ನು ನಿರ್ಮಿಸಲಾಗಿದೆ. ಇದರಿಂದ ಕೆರೆಯು 60.55ರಷ್ಟು ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ಏರಿಯ ಅಗಲ

5 ಮೀ ಮತ್ತು ಒಳಪಾರ್ಶ್ವ ಭಾಗದ ಎತ್ತರ 10 ಮೀ ಹೊಂದಿದೆ. ಏರಿಯ ಒಳಭಾಗವನ್ನು ನೈಸರ್ಗಿಕ ಕಲ್ಲುಗಳನ್ನು ಬಳಸಿ ಇಳಿಜಾರಾಗಿ ರಚನೆಯನ್ನು ಹೊಂದಿದೆ. ಏರಿಯ ಮೇಲೆ ಓಡಾಡಲು ಸಾಧ್ಯವಾಗದಷ್ಟು ಪೊದರು ಗಿಡಗಳು ಬೆಳೆದಿದೆ. ಏರಿಗೆ ಹೊಂದಿಕೊಂಡಂತೆ ಒಂದು ತೂಬು ಇದ್ದು, ಅವುಗಳಿಗೆ ಅನುಗುಣವಾಗಿ ಏರಿಯ ಹೊರ ಭಾಗದಲ್ಲಿ ಕಾಲುವೆಗಳನ್ನು ಅಳವಡಿಸಲಾಗಿದೆ. ಕಾಲುವೆಗಳ ಮೂಲಕ ನೀರನ್ನು ಆಯಕಟ್ಟು ಪ್ರದೇಶಕ್ಕೆ ಹಾಯಿಸಿ ಜೋಳ, ಭತ್ತ ಮತ್ತು ಮೆಕ್ಕೆಜೋಳ ಬೆಳೆಗಳನ್ನು ಬೆಳೆಯುತ್ತಾರೆ. ಕೆರೆಯ ಹಿಂಭಾಗದಲ್ಲಿ ಅತೀ ಹೆಚ್ಚು ಹೊಲಗಳು ನಾಯಕರ ಸಮುದಾಯಕ್ಕೆ ಸೇರಿವೆ. ಕೆರೆಯ ನಿರ್ವಹಣೆಯನ್ನು ನಾಯಕ ಸಮುದಾಯದ ವೆಂಕಟೇಶ್ ಅವರು ನೋಡಿಕೊಳ್ಳುತ್ತಿದ್ದಾರೆ. ಕೆರೆಯು ಜಲಾನಯನ ಪ್ರದೇಶವು 27.30 ಹೆಕ್ಟೇರ್ ಮತ್ತು 28.67 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಕೆರೆಯ ಕೋಡಿ ಹತ್ತಿರ ದುರಗಮ್ಮನ ದೇವಾಲಯ ಇರುವುದರಿಂದ ಈ ಕೋಡಿಗೆ ದುರಗಮ್ಮನ ಕೋಡಿ ಎಂದು ಕರೆಯುತ್ತಾರೆ. ಕೆರೆ ತುಂಬಿ ಕೋಡಿ ಬಿದ್ದಂತಹ ಸಂದರ್ಭದಲ್ಲಿ ಈ ದೇವಿಗೆ ಇಲ್ಲಿನ ತಳಸಮುದಾಯಗಳು ಕೋಳಿ, ಕುರಿಯನ್ನು ಬಲಿ ನೀಡಿ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ. ಕೆರೆಯು ನೀರು ಈಗಲೂ ಧಾರ್ಮಿಕ ಕಾರ್ಯಗಳು ಹಾಗೂ ಜಾನುವಾರುಗಳಿಗೆ ಮತ್ತು ಕೃಷಿ ಚಟುವಟಿಕೆಗಳಿಗೆ ಉಪಯೋಗವಾಗಿದೆ. ಪ್ರಸ್ತುತ ಕೆರೆಯು ಸಂಪೂರ್ಣವಾಗಿ ತುಂಬಿದೆ.

ಏಣಿ ಈರಪ್ಪನ ಬಾವಿ

ಗುಡೇಕೋಟೆ ಗ್ರಾಮವು ಕೂಡ್ಲಿಗಿ ತಾಲೂಕು ಕೇಂದ್ರದಿಂದ 29 ಕಿ.ಮೀ ಅಂತರದಲ್ಲಿದೆ. ಗ್ರಾಮದ ಏಣಿ ಈರಪ್ಪ ದೇವಾಲಯದ ಆಗ್ನೇಯಕ್ಕಿರುವ ಬಾವಿ. ಈ ಬಾವಿಗೆ ಏಣಿ ಈರಪ್ಪನ ಬಾವಿ ಎಂಬ ಹೆಸರು ಬರಲು ಇಲ್ಲಿ ಏಣಿ ಈರಪ್ಪನ ದೇವಾಲಯ ಇರುವುದರಿಂದ ಈ ಹೆಸರು ಬಂದಿದೆ. ಮತ್ತೊಂದು ಐತಿಹ್ಯದ ಪ್ರಕಾರ ಏಣಿ ಈರಪ್ಪ ಎಂಬ ಸನ್ಯಾಸಿ ನೆಲಸಿದ್ದರಿಂದ ಈ ಹೆಸರು ಬಂದಿರ ಬಹುದು ಎಂಬುದು ಸ್ಥಳೀಯರ ಅಭಿಪ್ರಾಯ. ಇದು ಕ್ರಿ.ಶ. 16–17ನೆ ಶತಮಾನದ್ದಾಗಿದ್ದು, ಇದನ್ನು ಗ್ರಾನೈಟ್ ಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ಚಚ್ಚೌಕಕಾರವಾಗಿದ್ದು, 20.50 ಮೀ ಅಗಲ, 20.50 ಮೀ ಉದ್ದ ಮತ್ತು ಸುಮಾರು 10 ಮೀ ಆಳವಿದ್ದು, (ನಲವತ್ತು ಲಕ್ಷದ ಎಪ್ಪತ್ತು ಸಾವಿರದ ಆರುನೂರು ಲೀಟರ್ ನೀರು) ಸಂಗ್ರಹಣಾ ಸಾಮರ್ಥ್ಯ ಹೊಂದಿದೆ.

ಬಾವಿಯ ಸುತ್ತಲೂ ಸೋಪಾನಗಳನ್ನು ಅಳವಡಿಸಿದ್ದು, ದಕ್ಷಿಣದ ಕಡೆಯಿಂದ ಇಳಿಯಲು 25 ಮೆಟ್ಟಿಲುಗಳುಳ್ಳ ಪ್ರವೇಶವಿದೆ. ಅದಕ್ಕೂ ಸಹ ಸೋಪಾನಗಳನ್ನು ಅಳವಡಿಸಲಾಗಿದೆ. ಬಾವಿಯ ಉತ್ತರದ ಭಾಗದ ಮಧ್ಯದಲ್ಲಿ ನಾಲ್ಕು ಕಂಬಗಳನ್ನಿಟ್ಟು

ಅದರ ಮೇಲೆ ಶಿಲಾತೊಲೆಗಳೊಂದಿಗೆ ಮಾಡಲ್ಪಟ್ಟಿದೆ. ಪೂರ್ವಭಾಗದ ಕಂಬದಲ್ಲಿ ವೀರಭದ್ರನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ನೀರು ಮೇಲೆತ್ತುವ ಜಗಲಿಯನ್ನು ಎತ್ತಿ ಹಿಡಿಯಲು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಏತದಿಂದ ನೀರನ್ನು ಮೇಲಕ್ಕೆ ಎತ್ತಲು ಸಹಾಯವಾಗಲು ಎತ್ತರವಾದ ವೇದಿಕೆ ಮತ್ತು ಏತದ ಬಾಗಿಲನ್ನು ಮಾಡಿದ್ದಾರೆ. ಬಾವಿಯ ಮೇಲ್ಭಾಗದ ಭಿತ್ತಿಯ ಕಲ್ಲುಗಳಲ್ಲಿ ಹಂಸ, ಸರ್ಪ, ಮೀನು, ಮೊಸಳೆ(ಮಕರ), ಬಿಲ್ಲು ಬಾಣಗಳನ್ನು ಹಿಡಿದು ನಿಂತ ಬೇಟೆಗಾರರು, ಆನೆ, ಸಿಂಹ, ವಾದ್ಯಗಾರರು ಹೀಗೆ ಅನೇಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.[13] ಬಾವಿಯ ಹಿಂಭಾಗದಲ್ಲಿ ಏಣಿ ಈರಪ್ಪನ ದೇವಾಲಯ ಇರುವುದರಿಂದ ದೇವಾಲಯದ ಪೂಜೆಗೆ ಮತ್ತು ಸಾರ್ವಜನಿಕ ಬಳಕೆಗೆ ನಿರ್ಮಿಸಲಾಗಿದೆ. ಬಾವಿಯ ಪೂರ್ವದಿಕ್ಕಿನಲ್ಲಿ ಸಣ್ಣ ಕಾಲುವೆ ಹೊಂದಿದ್ದು, ಇದರ ಮೂಲಕ ಹೊಲಗಳಿಗೆ ಅಥವಾ ಕೃಷಿ ಚಟುವಟಿಕೆಗಳಿಗೆ ಬಳಸಲಾಗಿದೆ. ಈ ಬಾವಿಗೆ ಬೆಟ್ಟದ ಮೇಲೆ ಬಿದ್ದ ಮಳೆ ನೀರು ಕಾಲುವೆಯ ಮೂಲಕ ಬಂದು ಸೇರುವ ಹಾಗೇ ರಚನೆ ಮಾಡಿದ್ದಾರೆ. ಆದರೆ ಪ್ರಸ್ತುತ ಕಾಲುವೆ ಮಣ್ಣಿನಲ್ಲಿ ಹೂತು ಹೋಗಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ.

ಬಿಸಿಲು ಕಾಣದ ಬಾವಿ/ತೊಟ್ಟಿಲು ಬಾವಿ

ಗುಡೇಕೋಟೆ ಕೋಟೆಯ ಮೊದಲನೇ ಪ್ರವೇಶ ದ್ವಾರ ಬಾಗಿಲನ ಹತ್ತಿರದ ಎಡ ಭಾಗದಲ್ಲಿರುವ ಬಾವಿ. ಈ ಬಾವಿಯನ್ನು ಬಿಸಿಲು ಕಾಣದ ಬಾವಿ ಅಥವಾ ತೊಟ್ಟಿಲು ಬಾವಿ ಎಂದು ಕರೆಯಲಾಗುತ್ತದೆ. ಏಕೆಂದರೆ ಈ ಬಾವಿಯ ಮೇಲ್ಭಾಗದಲ್ಲಿ ಸುತ್ತಲೂ ಹೆಬ್ಬಂಡೆಗಳು ಆವರಿಸಿರುವುದರಿಂದ ಸೂರ್ಯನ ಕಿರಣಗಳು ಬಾವಿಯೊಳಗೆ ಬೀಳುವುದು ಕಷ್ಟಕರ. ಹಾಗಾಗಿಯೇ ಬಿಸಿಲು ಬೀಳದಿರುವ ಬಾವಿಯೇ ಬಿಸಿಲು ಕಾಣದ ಬಾವಿಯಾಯ್ತು. ತೊಟ್ಟಿಲಿನ ಆಕಾರದಲ್ಲಿರುವುದರಿಂದ ಇದಕ್ಕೆ ತೊಟ್ಟಿಲು ಬಾವಿಯೆಂತಲೂ ಸ್ಥಳೀಯರ ವಾಡಿಕೆ.[14] ಬಾವಿಯನ್ನು ಗ್ರಾನೈಟ್ ಕಲ್ಲುಗಳಿಂದ ನಿರ್ಮಿಸಲಾಗಿದೆ. ಬಾವಿಯು ಚೌಕಾಕಾರವಾಗಿದ್ದು, ಇದರ ಪಕ್ಕದಲ್ಲಿರುವ ಓಕಳಿ ಹೊಂಡ ತುಂಬಿದ ಬಳಿಕ ಹೆಚ್ಚುವರಿ ನೀರನ್ನು ಈ ಬಾವಿಗೆ ಹರಿಸಲಾಗಿದೆ. 15 ಅಡಿ ಅಗಲ, 15 ಅಡಿ ಉದ್ದ ಮತ್ತು ಸುಮಾರು 30 ಅಡಿ ಆಳವಿದ್ದು, ಸುಮಾರು 1,00,000(ಒಂದು ಲಕ್ಷ) ಲೀಟರ್ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಉತ್ತರದ ಭಾಗದ ಕಡೆಯಿಂದ ಇಳಿಯಲು ಸುಮಾರು 10ಕ್ಕಿಂತ ಹೆಚ್ಚು ಮೆಟ್ಟಿಲುಗಳನ್ನು ಹೊಂದಿದೆ. ಉತ್ತರ ದಿಕ್ಕಿನಲ್ಲಿ ಏತದ ಕಟ್ಟೆ ಪ್ರತ್ಯೇಕವಾಗಿದ್ದು, ನೀರು ಮೇಲೆತ್ತುವ ಜಗಲಿಯನ್ನು ಎತ್ತಿ ಹಿಡಿಯಲು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಬಾವಿಯ ಭಿತ್ತಿ ಭಾಗದಲ್ಲಿ ಸರ್ಪ, ಮೀನು, ಸೂರ್ಯ, ಮೊಸಳೆ ಮತ್ತು ಹಂಸ ಹೀಗೆ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇದರ ಪಕ್ಕದಲ್ಲಿ ಸೈನಿಕರ ವಸತಿಗೃಹಗಳಿವೆ. ಅವರಿಗೆ ಮತ್ತು ಅವರ

ಪರಿವಾರದವರಿಗೆ ಕುಡಿಯುವ ಸಲುವಾಗಿ ನಿರ್ಮಿಸಿದ್ದಾರೆ.

ಈ ಬಾವಿಯು ಗುಡೇಕೋಟೆ ಪರಿಸರದಲ್ಲಿ ಮಹತ್ವದ ಪಾತ್ರವಹಿಸಿದ್ದು, ಸುತ್ತಮುತ್ತಲಿನ ಗ್ರಾಮದ ಜನರು ಪೂಜ್ಯಾನೀಯ ಭಾವನೆ ಹೊಂದಿದ್ದಾರೆ. ಏಕೆಂದರೆ ಈ ಬಾವಿಯಲ್ಲಿ ವರ್ಷದುದ್ದಕ್ಕೂ ನೀರಿದ್ದು ಎಂದಿಗೂ ಬತ್ತದಿರುವುದು ಗಮನಾರ್ಹವಾಗಿದೆ. ಕೋಟೆಯಲ್ಲಿರುವ ಮಲಿಯಮ್ಮನ ದೇವಿಯ ಮೂರ್ತಿ ಪೂಜೆಗೆ ಮತ್ತು ಶ್ರಾವಣ ಮಾಸದ ಕೊನೆಯ ಮಂಗಳವಾರ ಊರಿನ ಜನ ಹೋಗಿ ಮಣ್ಣಿನಿಂದ ಮೂರ್ತಿ ಮಾಡಿ ಬಾವಿ ನೀರಿನಿಂದ ಪೂಜೆಯನ್ನು ಮಾಡುತ್ತಾರೆ. ಇಲ್ಲಿಗೆ ಬರುವ ಭಕ್ತಾಧಿಗಳು ಪ್ರಸಾದವನ್ನು ಸೇವಿಸಿ ನೀರನ್ನು ಕುಡಿಯಲಿಕ್ಕೆ ಆ ನೀರನ್ನು ಬಳಕೆ ಮಾಡುತ್ತಾರೆ. ಪ್ರಸ್ತುತ ಬಾವಿಯು ಕಸ ಕಡ್ಡಿಗಳಿಂದ ಕೂಡಿದ್ದು ಶಿಥಿಲಾವಸ್ಥೆಯಲ್ಲಿದೆ.

ಹರಿಜನಕೇರಿ ಬಾವಿ

ಗುಡೇಕೋಟೆ ಗ್ರಾಮದ ದಕ್ಷಿಣಕ್ಕೆ ಹರಿಜನ ಗುಡ್ಡದ ಹತ್ತಿರ ಕಾಳಮ್ಮ ದೇವಾಲಯದ ಎಡಬದಿಯಲ್ಲಿ ಬಾವಿಯನ್ನು ನಿರ್ಮಿಸಲಾಗಿದೆ. ಹರಿಜನಕೇರಿಯಲ್ಲಿ ಇರುವುದರಿಂದ ಇದನ್ನು ಹರಿಜನಕೇರಿ ಬಾವಿ ಎಂದು ಕರೆಯಲಾಗುತ್ತದೆ. ಬಾವಿಯ ಹತ್ತಿರ ಇರುವ ಕಾಳಮ್ಮನ ದೇವಾಲಯವನ್ನು ಉತ್ತರಾಭಿಮುಖವಾಗಿ ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲಾಗಿದೆ. ಇದು ಗರ್ಭಗೃಹವನ್ನು ಹೊಂದಿದ್ದು, ಇದರಲ್ಲಿ ಯಾವುದೇ ಶಿಲ್ಪವಿಲ್ಲ. ಬಾಗಿಲುವಾಡದಲ್ಲಿ ದ್ವಾರಪಾಲಕಿಯರ ಶಿಲ್ಪಗಳು, ಲಲಾಟ ಬಿಂಬದಲ್ಲಿ ಪದ್ಮವಿದೆ. ಕಣಶಿಲೆಯಲ್ಲಿ ಈ ದೇವಾಲಯವನ್ನು ಕಟ್ಟಲಾಗಿದೆ.[15]

ಬಾವಿಯ ಪಕ್ಕದಲ್ಲಿ ಹರಿಜನ ಗುಡ್ಡ ಇರುವುದರಿಂದ ಆ ಗುಡ್ಡದ ಮೇಲೆ ಬಿದ್ದ ಮಳೆ ನೀರು ಹಾಗೂ ಗ್ರಾಮದ ಬೊಮ್ಮಲಿಂಗ ಕೆರೆ ಇರುವುದರಿಂದ ಬಾವಿಯ ಅಂತರ್ಜಲ ಮಟ್ಟ ಅಥವಾ ನೀರಿನ ಸೆಲೆ ಹೆಚ್ಚಾಗಲು ಕಾರಣವಾಗಿದೆ. ಬಾವಿಯು 17–18ನೇ ಶತಮಾನದಾಗಿದ್ದು, ಚೌಕಾಕಾರವಾಗಿದೆ. ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದು, ಇದು 20.5 ಮೀ ಅಗಲ, 20.5 ಮೀ ಉದ್ದ ಮತ್ತು ಸುಮಾರು 12.1 ಮೀ ಆಳವಿದ್ದು, ಸುಮಾರು 5,085000 (ಐದು ಲಕ್ಷದ ಎಂಬತ್ತೈದು ಸಾವಿರ) ಲೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಬಾವಿಗೆ ಇಳಿಯಲು ದಕ್ಷಿಣ ದಿಕ್ಕಿನಲ್ಲಿ ಮೆಟ್ಟಿಲುಗಳನ್ನು ಹೊಂದಿದ್ದು, ಆದರೆ ಈಗ ಅವು ನಶಿಸಿ ಹೋಗಿವೆ. ಕೆಳಭಾಗವನ್ನು ನೈಸರ್ಗಿಕ ಕಲ್ಲಿನಲ್ಲಿ ಕೊರೆಯಲಾಗಿದೆ. ಕೆಳಭಾಗಕ್ಕೆ ಹೋದಂತೆ ಬಾವಿಯ ಅಗಲವು ಕಿರಿದಾಗುತ್ತ ಹೋಗುತ್ತದೆ. ಬಾವಿಯ ಒಳಗಡೆ ಗೂಡುಗಳು, ಶಿಲ್ಪಗಳು ಕಂಡುಬಂದಿಲ್ಲ. ಆದರೆ ಮೇಲ್ಭಾಗದಲ್ಲಿ ನಾಗಶಿಲ್ಪಗಳು ಕಂಡುಬರುತ್ತವೆ. ಪಾಳೆಯಗಾರರ ಕಾಲದಲ್ಲಿ ದೇವತಾ ಕಾರ್ಯಗಳಿಗೆ ಮತ್ತು ಜನಸಾಮನ್ಯರಿಗೆ ಕುಡಿಯಲಿಕ್ಕೆ

ನಿರ್ಮಿಸಲಾಗಿದೆ. ಪ್ರಸ್ತುತ ಬಾವಿಯು ಜಾಲಿ, ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ.

ಬೊಮ್ಮಕ್ಕನ ಬಾವಿ

ಗುಡೇಕೋಟೆ ಗ್ರಾಮದ ಉತ್ತರಕ್ಕೆ ದೊರೆಗಳ ಗುಡ್ಡ ಇಳಿಜಾರಿಗೆ ಹೊಂದಿಕೊಂಡಂತೆ ಬಾವಿಯನ್ನು ನಿರ್ಮಿಸಲಾಗಿದೆ. ಬಾವಿಯ ಪಕ್ಕದಲ್ಲಿ ಬೊಮ್ಮಕ್ಕನ ದೇವಾಲಯ ಇತ್ತಂತೆ ಅದಕ್ಕೆ ಇದನ್ನು ಬೊಮ್ಮಕ್ಕನ ಬಾವಿ ಎಂದು ಕರೆಯುತ್ತಾರೆ. ಅದರೆ ಪ್ರಸ್ತುತವಾಗಿ ಬಾವಿಯ ಸುತ್ತ ದೇವಾಲಯ ಕಂಡುಬರುವುದಿಲ್ಲ. ಬಾವಿಗೆ ದೊರೆಗಳ ಗುಡ್ಡದ ಮೇಲೆ ಬಿದ್ದ ಮಳೆ ನೀರು ಹಾಗೂ ಬೊಮ್ಮಲಿಂಗನ ಕೆರೆಯ ನೀರನ್ನು ಕಾಲುವೆಯ ಮೂಲಕ ಹರಿಸಲಾಗಿದೆ. ಪ್ರಸ್ತುತ ಕಾಲುವೆ ಅವಶೇಷಗಳು ಕಂಡುಬರುತ್ತವೆ. ಇದು ಕ್ರಿ.ಶ 16–17ನೇ ಶತಮಾನದ್ದಾಗಿದ್ದು, ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಚೌಕಾಕಾರವಾಗಿದ್ದು, ಪೂರ್ವ ದಿಕ್ಕಿನಲ್ಲಿ ಬಾವಿಗೆ ಇಳಿಯಲು 22 ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಬಾವಿಯ ಪ್ರವೇಶದ ಬಲ ಭಾಗದ ಗೋಡೆಯಲ್ಲಿ ಒಂದು ಚಿಕ್ಕ ಗೂಡು ಇದೆ. ಅದರೆ ಆ ಗೂಡಿನಲ್ಲಿ ಯಾವುದೇ ಶಿಲ್ಪ ಕಂಡುಬಂದಿಲ್ಲ. ಮೆಟ್ಟಿಲುಗಳ ಮೇಲೆ ಆಂಜನೇಯ 2 ಅಡಿ ಎತ್ತರದ ಶಿಲ್ಪ ಇದೆ. ಅದೇ ಗೂಡಿನ ಶಿಲ್ಪ ಇರಬಹುದು. ಸುಮಾರು 10.50 ಮೀ ಅಗಲ, 10.50 ಉದ್ದ ಮತ್ತು 15.28 ಅಡಿ ಆಳವಿದ್ದು, ಸುಮಾರು 16,84.620 (ಹದಿನಾರು ಲಕ್ಷದ ಏಂಬತ್ತು ನಾಲ್ಕು ಸಾವಿರದ ಆರುನೂರು ಇಪ್ಪತ್ತು) ಲೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಪೂರ್ವ, ಉತ್ತರ ಮತ್ತು ದಕ್ಷಿಣ ಭಾಗದ ಕಡೆ ಮಾತ್ರ ಸೋಪಾನಗಳನ್ನು ಅಳವಡಿಸಲಾಗಿದೆ. ಪಶ್ಚಿಮದ ಗೋಡೆಯ ಮಧ್ಯಭಾಗದಲ್ಲಿ ನೀರು ಮೇಲೆತ್ತುವ ಜಗಲಿಯಿದ್ದು, ಅದು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಬಾವಿಯ ಸೋಪಾನಗಳ ಮತ್ತು ಭಿತ್ತಿ ಭಾಗದಲ್ಲಿ ಮೀನು, ಮೊಸಳೆ, ಹುಲಿ, ಆನೆ, ನಂದಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ಬಾವಿಯು ಗುಡ್ಡದ ಕೆಳ ಭಾಗದಲ್ಲಿರುವುದರಿಂದ ಜನಸಾಮಾನ್ಯರಿಗೆ, ಸೈನಿಕರಿಗೆ ಮತ್ತು ಧಾರ್ಮಿಕ ಕಾರ್ಯಗಳಿಗೆ ನಿರ್ಮಿಸಲಾಗಿದೆ. ಪ್ರಸ್ತುತವಾಗಿ ದುರುಗಮ್ಮ ಮತ್ತು ಮಲಿಯಮ್ಮನ ಮೂರ್ತಿ ಪೂಜೆಗೆ ಬಾವಿಯ ನೀರನ್ನು ಬಳಸುತ್ತಾರೆ. ಗ್ರಾಮದಲ್ಲಿ ಓಕಳಿ ಹಬ್ಬದ ಸಂಧರ್ಭದಲ್ಲಿ ಗ್ರಾಮದ ಜನರು ಓಕಳಿ ಆಡಿ ಬಂದು ಸ್ನಾನ ಮಾಡುತ್ತಾರೆ. ಇದರ ಸುತ್ತಮುತ್ತ ಹೊಲಗಳಿದ್ದು ಬಾವಿಯ ಪ್ರಯೋಜನವನ್ನು ಇಲ್ಲಿಯ ರೈತರು ಪಡೆದುಕೊಳ್ಳುತ್ತಿದ್ದಾರೆ. ಪ್ರಸ್ತುತ ಬಾವಿಯು ನೀರಿನಿಂದ ತುಂಬಿದೆ. ಸುತ್ತಮುತ್ತ ಜಾಲಿ, ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ.

ಒಟ್ಟಾರೆಯಾಗಿ ಈ ಪರಿಸರದ ಕೋಟೆಗಳನ್ನು ಅವಲೋಕನ ಮಾಡಿದಾಗ

ಪಾಳೆಯಗಾರರು ನೀರಿನ ಸಂಗ್ರಹಣೆಗಾಗಿ ಹಲವಾರು ದೊಣೆ, ಬಾವಿ, ಹೊಂಡ, ಕೆರೆಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾಗಿ ಭೈರವದೇವರ ಕೋಟೆ ಮತ್ತು ವೀರನದುರ್ಗ ಕೋಟೆ. ಈ ಕೋಟೆಗಳ ಬಸವಣ್ಣ ದೊಣೆ ಮತ್ತು ಮಲಿಯಮ್ಮನ ದೊಣೆ ಪ್ರಥಮ ಜಲಸಂಗ್ರಹಾಗಾರವಾಗಿರುವುದು ಗಮನಾರ್ಹ. ಕೋಟೆಯಲ್ಲಿ ದೊಣೆಗಳಿಂದ ಹೆಚ್ಚಾದ ನೀರನ್ನು ಅಗತ್ಯವಿರುವ ಕಡೆಗಳಲ್ಲಿ ವ್ಯವಸ್ಥಿತ ಕಾಲುವೆಗಳನ್ನು ನಿರ್ಮಿಸಿ ಅವುಗಳ ಮೂಲಕ ಬೃಹತ್ ಜಲಸಂಗ್ರಹಾಗಾರಗಳಾದ ಹೊಂಡಗಳಿಗೆ ನೀರನ್ನು ಹರಿಸಲಾಗಿದೆ. ಬೃಹತ್ ಬಂಡೆಗಲ್ಲುಗಳ ಬುಡದಲ್ಲಿ ಹೆಚ್ಚಾಗಿ ದೊಣೆಗಳನ್ನು ನಿರ್ಮಿಸಲಾಗಿದ್ದು, ಈ ಬಂಡೆಗಲ್ಲುಗಳ ಮೇಲೆ ವ್ಯರ್ಥವಾಗಿ ಹರಿದುಹೋಗುವ ನೀರನ್ನು ಗುರುತಿಸಿ, ಅಂತಹ ಸ್ಥಳಗಳಲ್ಲಿ ದೊಣೆಗಳನ್ನು ನಿರ್ಮಿಸಿರುವುದು ವಿಶೇಷವಾಗಿದೆ.

ಅಡಿ ಟಿಪ್ಪಣಿಗಳು

1. ಕರಿಬಸಪ್ಪ ಎ, 2009, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಪು–81
2. ವಿಠ್ಠಲ ಎಸ್. ಬಡಿಗೇರ, 2017, ಹೊಯ್ಸಳ ಕಾಲದ ನೀರಾವರಿ ಪದ್ಧತಿ ಪು–41
3. ಕೊಟ್ರೇಶ್ ಎಂ., 2011, ಬಳ್ಳಾರಿ ಜಿಲ್ಲೆಯ ಕೋಟೆಗಳು ಪು–51
4. ಅದೇ ಪು–51
5. ಅದೇ ಪು–55
6. ಬಸಪ್ಪ ಎಸ್. ಪಾಟೀಲ್, (ಸಂ), 1997, ಬಳ್ಳಾರಿ ಜಿಲ್ಲೆಯ ಶಾಸನಗಳು, ಪು–81
7. ಕೊಟ್ರೇಶ್ ಎಂ, 2011, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪು–44
8. ಅದೇ ಪು–51
9. ಅದೇ ಪು–51
10. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು ಪು–8
11. ನಾಗರತ್ನ., 2024, ಬಳ್ಳಾರಿ ಜಿಲ್ಲೆಯ ಕೆರೆಗಳು : ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಪು–159–161
12. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ–10
13. ಮಂಜನಾಯ್ಕ ಆರ್., 2022, ವಿಜಯನಗರ ಜಿಲ್ಲೆಯ ಪುರಾತತ್ವ, ಪು–380–381
14. ಕೊಟ್ರೇಶ್ ಎಂ, 2011 ಪೂರ್ವೋಕ್ತ ಪು–41

15. ಸುರೇಶ್ ಎಂ, ವಾಸುದೇವ ಬಡಿಗೇರ, ಕೊಟ್ರೇಶ.ಎಂ ಸೋಮಶೇಖರ್ ಎಸ್.ವೈ, 1999, ಬಳ್ಳಾರಿ ಜಿಲ್ಲೆಯ ದೇವಾಲಯ ಕೋಶ ಪು–180,181

ಛಾಯಾಚಿತ್ರಗಳು

ಓಕಳಿ ಹೊಂಡ, ಗುಡೇಕೋಟೆ

ಬಿಸಿಲುಕಾಣದ ಬಾವಿ, ಗುಡೇಕೋಟೆ

ಜರಿಮಲೆ ಕೆರೆ

ಅನೆಹೊಂಡ, ಜರಿಮಲೆ

***

ಬಿ.ದುರ್ಗ ದರ್ಗಾ : ಸಾಂಸ್ಕೃತಿಕ ಅನನ್ಯತೆ

1 ಡಾ. ರುಜುವಾನ್ ಕೆ.

ಅತಿಥಿ ಉಪನ್ಯಾಸಕರು

ಶ್ರೀ ಬಸವೇಶ್ವರ ಸ ಪ್ರ ದ ಕಾಲೇಜು

ಮಾಯಕೊಂಡ

rujusuchi@gmail.com

ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಮೂಲತಃ ಸಂಕೀರ್ಣವಾದದ್ದು. ಅದರಲ್ಲೂ ಭಾರತೀಯ ಸಂಸ್ಕೃತಿಯ ಓದು ಬಹುಸ್ತರೀಯವಾದ್ದರಿಂದ ಅದು ಅತ್ಯಂತ ಕ್ಲಿಷ್ಟವೂ ಹೌದು. ನಮ್ಮ ಹಳ್ಳಿಗಳನ್ನು ಅಲ್ಲಿನ ಜೀವನ ಕ್ರಮಗಳನ್ನು ಅರ್ಥಮಾಡಿಕೊಳ್ಳುವುದಂತೂ ಇನ್ನೂ ಕಠಿಣ. ಆದರೂ ಅದನ್ನು ಅರ್ಥೈಸಿಕೊಳ್ಳುವುದು ಇಂತಹ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನದ ಮೂಲಕವೇ. ಈ ರೀತಿಯ ಶ್ರಮದಾಯಕ ಕಾಯಕವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ.

ಬಿ.ದುರ್ಗವು ಹೋಬಳಿ ಮುಖ್ಯ ಕೇಂದ್ರವಾಗಿದ್ದು, ಈ ಗ್ರಾಮ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಪ್ರಸ್ತುತ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ 4 ಹೋಬಳಿಗಳಲ್ಲಿ (ಕಸಬಾ. ರಾಮಗಿರಿ. ತಾಳ್ಯ. ಬಿ.ದುರ್ಗ) ಬಿ.ದುರ್ಗವೂ ಒಂದಾಗಿದೆ. ಈ ಗ್ರಾಮದ ಮೂಲ ಹೆಸರು 'ನವಿಲು ಕಲ್ಲು ದುರ್ಗ', ಹೊಳಲ್ಕೆರೆಯಿಂದ 18 ಕಿ. ಮೀ ದೂರದಲ್ಲಿ ದಾವಣಗೆರೆ ಮಾರ್ಗದಲ್ಲಿ ಕಂಡುಬರುತ್ತದೆ. 16ನೆಯ ಶತಮಾನದಲ್ಲಿ ಇಲ್ಲಿ ಕೋಟೆ ನಿರ್ಮಿಸಿ ಆಳ್ವಕೆ ನಡೆಸಿದ ಪಾಳೆಯಗಾರ 'ಬಿಚ್ಚುಗತ್ತಿ ಭರಮಣ್ಣ ನಾಯಕನ' ನೆನಪಿಗಾಗಿ 'ಬಿ.ದುರ್ಗ' ಎಂಬ ಹೆಸರು ಬಂದಿದೆ. ಗ್ರಾಮದಲ್ಲಿ 800 ಕ್ಕೂ ಹೆಚ್ಚು ಅಧಿಕ ಮನೆಗಳಿದ್ದು, 2500 ಕ್ಕೂ ಅಧಿಕ ಜನ ವಾಸವಿದ್ದಾರೆ. ಲಿಂಗಾಯತ, ವೀರಶೈವ ಲಿಂಗಾಯತ,

ನಾಯಕ, ಆದಿಕರ್ನಾಟಕ, ಕುರುಬ, ಕುಂಬಾರ, ಗೊಲ್ಲ, ಬೆಸ್ತ, ಲಂಬಾಣಿ, ವಡ್ಡರು, ವಿಶ್ವಕರ್ಮ, ಮುಸ್ಲೀಂ, ಕ್ರಿಶ್ಚಿಯನ್ ಮುಂತಾದ ಸಮುದಾಯದವರು ಇಲ್ಲಿ ಕಂಡುಬರುತ್ತಾರೆ. ಬಿ.ದುರ್ಗ ಹೋಬಳಿ ಕೇಂದ್ರದ ಆಡಳಿತಕ್ಕೆ ಒಳಪಡುವಂತೆ ಒಟ್ಟು 41 ಹಳ್ಳಿಗಳು ಇದ್ದು, ಈ ಮೇಲಿನ ಸಮುದಾಯದವರು ಈ ಹಳ್ಳಿಗಳೆಲ್ಲೆಲ್ಲಾ ಕಂಡು ಬರುತ್ತಾರೆ. ಕೆಲವು ಗ್ರಾಮಗಳು ಜಾತಿ ಆದಾರಿತ ಏಕ ಮಾತ್ರ ಜಾತಿಯ ಸಮುದಾಯವನ್ನು ಹೊಂದಿದ್ದು ಮತ್ತೆ ಕೆಲವು ಗ್ರಾಮಗಳು ಬಹು ಸಮುದಾಯದವರನ್ನು ಹೊಂದಿವೆ. ಹೀಗೆ ಬಿ.ದುರ್ಗ ಹೋಬಳಿಯಲ್ಲಿ ಹಲವಾರು ವಿಧದ ಜಾತಿಯ ಜನರು ವಾಸವಾಗಿದ್ದು, ಇವರಲ್ಲಿ ಕೆಲವರು ಇಲ್ಲಿಯೇ ಹುಟ್ಟಿ ಬೆಳೆದವರಾಗಿದ್ದು ಮತ್ತೆ ಕೆಲವರು ಬೇರೆ ಬೇರೆ ಪ್ರದೇಶಗಳಿಂದ ವಲಸೆ ಬಂದವರಾಗಿದ್ದಾರೆ.

ಬಿ.ದುರ್ಗವೂ ಸೇರಿದಂತೆ ಅದರ ವ್ಯಾಪ್ತಿಗೆ ಬರುವ ಹಳ್ಳಿಗಳಲ್ಲಿ ಆಂಜನೇಯ, ಸಿದ್ದೇಶ್ವರ, ವೀರಭದ್ರೇಶ್ವರ, ಕರಿಯಮ್ಮ, ಉಡುಸಲಮ್ಮ, ಏಕನಾಥೇಶ್ವರಿ, ಗಣೇಶ, ಚೌಡಮ್ಮ, ಬೂತಪ್ಪ, ಮುಸ್ಲೀಮರ ಮಸೀದಿಗಳು ಹಾಗು ಚರ್ಚುಗಳು ಕಂಡು ಬರುತ್ತವೆ. ಈ ಲೇಖನದ ಆಶಯ ಇಲ್ಲಿನ ದರ್ಗಾದ ಕುರಿತಾಗಿದ್ದು; ಬಿ.ದುರ್ಗ ಗ್ರಾಮದಲ್ಲಿ 400 ವರ್ಷದ ಹಳೆಯದಾದ "ಹಜ್ರತ್ ಸೈಯದ್ ಷಾಃ ಅಬ್ದುಲ್ಲಾ ಷಾಃ ಖಾದ್ರಿ" ಸೂಫೀ ಸಂತನ ಸಮಾಧಿ ಸ್ಥಳವಿರುವುದು ಕಂಡುಬರುತ್ತದೆ. ಹಾಗಾಗಿ ಇಲ್ಲಿ ಪ್ರತೀ ವರ್ಷವೂ 'ಉರುಸ್' ಆಚರಣೆ ಜಾರಿಯಲ್ಲಿರುತ್ತದೆ. ಸುತ್ತಮುತ್ತಲ ಹತ್ತಾರು ಊರು, ತಾಲ್ಲೂಕು, ಜಿಲ್ಲೆ, ಹೊರ ಜಿಲ್ಲೆಗಳಿಂದ ಸಾವಿರಾರು ಜನರು ಇಲ್ಲಿಗೆ ಆಗಮಿಸುತ್ತಾರೆ. ಹಿಂದೂಗಳು ಇದನ್ನು 'ಗೋರಿಸ್ವಾಮಿ' ಎಂದು ಕರೆಯುವುದರ ತೊತೆಗೆ, 'ತಮ್ಮ ಮನೆಯ ಹಸು ಮೊದಲ ಕರು ಹಾಕಿದಾಗ ಅದರ ಗಿಣ್ಣವನ್ನು ಗೋರಿಸ್ವಾಮಿಗೆ ತಂದು ಸಮರ್ಪಿಸಿ ನೈವೇದ್ಯ ಮಾಡುತ್ತಾರೆ'.

ಕರ್ನಾಟಕದ ಸೂಫಿ ಸಂತರ ಬಗ್ಗೆ ತಿಳಿಯುವುದು ಎಂದರೆ, ಅದು ಐತಿಹಾಸಿಕ ಕಥನವಲ್ಲ; ಈ ಹೊತ್ತಿನ ಈ ನಾಡಿನ ಜನಸಮುದಾಯಗಳ ಕಥನ ಕೂಡ ಆಗಿದೆ. ಯಾಕೆಂದರೆ ಒಂದು ಕಾಲದಲ್ಲಿ ಜೀವಂತ ವ್ಯಕ್ತಿಗಳಾಗಿ ಬದುಕಿದ್ದ ಸೂಫಿಗಳು, ಈಗ ದೈವಗಳಾಗಿ ಬೇರೊಂದು ರೀತಿಯಲ್ಲಿ ವಿಶಿಷ್ಟ ಆಚರಣೆ, ಸಂಸ್ಕೃತಿಯ ಅಂಗವಾಗಿ ಜನಮಾನಸದಲ್ಲಿ ಇಂದಿಗೂ ಬದುಕಿದ್ದಾರೆ. ಇದೊಂದು ಬಗೆಯ ರೂಪಾಂತರ. ಈ ರೂಪಾಂತರಗಳ ಬೆನ್ನು ಹತ್ತಿ ಹೋದರೆ, ಸೂಫಿಗಳ ಚರಿತ್ರೆಯ ಜೊತೆಗೆ ಅವರನ್ನು ನಂಬಿ ಅನುಸರಿಸುವ ಸಮುದಾಯಗಳ ಹಾಡು–ಪಾಡು, ಕಥೆ, ವಿಶಿಷ್ಠ ಆಚರಣೆಗಳನ್ನು ಹಾಗೂ ಈ ವರ್ಣರಂಜಿತ ಲೋಕದಲ್ಲಿ ಪ್ರಕಟಿಸುತ್ತಾ ಬಂದಿರುವ ಚೈತನ್ಯಶೀಲತೆಯನ್ನು ಸಮುದಾಯಗಳ ಸೃಜನಶೀಲತೆಯನ್ನು ಅವಲೋಕಿಸಬಹುದು. ಹೀಗೆ ಈ ಲೇಖನದ

ನಿಜವಾದ ಹಂಬಲ ಬಿ.ದುರ್ಗ ಗ್ರಾಮದ "ಹಜ್ರತ್ ಸೈಯದ್ ಷಾಃ ಅಬ್ದುಲ್ಲಾ ಷಾಃ ಖಾದ್ರಿ" ಸೂಫೀ ಸಂತನ ದರ್ಗಾದ ಆಚರಣೆ ಮತ್ತು ಅದನ್ನು ಅನುಸರಿಸುವ ಸಮುದಾಯಗಳ ಸೃಜನಶೀಲತೆಯನ್ನು ಅರಿಯಲು ಪ್ರಯತ್ನಿಸುವುದಾಗಿದೆ.

ಹಜ್ರತ್ ಸೈಯದ್ ಷಾಃ ಅಬ್ದುಲ್ಲಾ ಷಾಃ ಖಾದ್ರಿ ದರ್ಗಾ

ಈ ದರ್ಗಾವು ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ, ಬಿ.ದುರ್ಗಾ ಹೋಬಳಿ, ಮತ್ತು ಅದೇ ಗ್ರಾಮದ ಸರ್ಕಾರಿ ಪ್ರಾಥಮಿಕ ಚಿಕಿತ್ಸಾ ಕೇಂದ್ರದ ರಸ್ತೆಯ ಮಾರ್ಗವಾಗಿ ಪೂರ್ವ ದಿಕ್ಕಿನಲ್ಲಿದೆ. ಹೊಳಲ್ಕೆರೆ–ದಾವಣಗೆರೆ ರಾಜ್ಯ ರಸ್ತೆ ಎಸ್.ಹೆಚ್ 47 ರಲ್ಲಿ ಹೊಳಲ್ಕೆರೆಯಿಂದ 18 ಕಿ.ಮೀ ಹಾಗೂ ದಾವಣಗೆರೆಯಿಂದ 45 ಕಿ.ಮೀ ಅಂತರದಲ್ಲಿದೆ. ಬಿ.ದುರ್ಗಾದಲ್ಲಿನ ಈ ದರ್ಗಾವು ಭಾರತದಾತ್ಯಂತ ಕಂಡು ಬರುವ ಸೂಫಿ ಪರಂಪರೆಯ ಅತ್ಯಂತ ಜನಪ್ರಿಯ ಆಚರಣೆಗಳನ್ನೇ ಹೋಲುವಂತಿದ್ದು, ಹಜ್ರತ್ ಸೈಯದ್ ಷಾಃ ಅಬ್ದುಲ್ಲಾ ಷಾಃ ಖಾದ್ರಿ ಸೂಫಿ ಸಂತನ ಸಮಾಧಿಯ ಭೇಟಿಯಿಂದ ಮೊದಲ್ಗೊಂಡು, ಇಂದು ಸೂಫಿ ದೇವಾಲಯವಾಗಿ ವಿಕಾಸಗೊಂಡು ಸಾಂಸ್ಕೃತಿಕವಾಗಿ ಇಲ್ಲಿನ ಪರಿಸರದಲ್ಲಿ ನೆಲೆಗೊಂಡಿದೆ. ಸಾಮಾನ್ಯವಾಗಿ ಸೂಫಿ ಸಂತರ ಸ್ಥಳಕ್ಕೆ ಭೇಟಿ ನೀಡುವ ಈ ಪದ್ಧತಿಯನ್ನು 'ಜಿಯಾರತ್' ಎಂದು ಕರೆಯಲಾಗಿದ್ದು, ಸಂತನ ಸಮಾಧಿಯು ಮಹಾನ್ ಪೂಜೆಯ ತಾಣವಾಗಿ ಪ್ರಾರ್ಥನೆ, ಆಶೀರ್ವಾದ ಹಾಗೂ ವಿಶಿಷ್ಟ ಆಚರಣಾ ಸಂಸ್ಕೃತಿಯೊಂದಿಗೆ ತನ್ನ ಸುತ್ತಮುತ್ತಲ ಹಲವಾರು ಹಳ್ಳಿಗಳ, ನಾಲ್ಕಾರು ಜಿಲ್ಲೆಗಳ ಭಕ್ತಾದಿಗಳನ್ನ ತನ್ನತ್ತ ಸೆಳೆಯುತ್ತಿರುವ ಪವಿತ್ರ ಸ್ಥಳವಾಗಿ ನೆಲೆಗೊಂಡಿದೆ. ಇಲ್ಲಿಗೆ ಭೇಟಿ ನೀಡುವ ಭಕ್ತರು ಮತ್ತು ಯಾತ್ರಿಕರಿಗೆ ಅನುಕೂಲವಾಗುವಂತೆ ತಂಗಲು ನಿಲಯಗಳನ್ನು, ವಿಶಾಲವಾದ ಮೈದಾನ, ನೀರು–ನಿಡೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ. ಆರಂಭದಲ್ಲಿ ಈ ಗೋರಿಯನ್ನು ಸಂರಕ್ಷಿಸಲು, ಕಟ್ಟಡವನ್ನು ನಿರ್ಮಿಸಿ ಅಭೂತಪೂರ್ವ ವಾಸ್ತುಶಿಲ್ಪದೊಂದಿಗೆ ನವೀಕರಿಸಲು, ಗ್ರಾಮದ ಸುತ್ತಮುತ್ತಲಿನ ವರಿಷ್ಠರು, ಗಣ್ಯರು, ಭಕ್ತಾದಿಗಳ ದೇಣಿಗೆ, ಗೌರವ ಕಾಣಿಕೆಗಳು ಜೊತೆಗೆ ವಕ್ಫ್ ಸಂಸ್ಥೆಯ ಸಹಯೋಗಿತ್ವದೊಂದಿಗೆ ದರ್ಗಾವನ್ನು ನವೀಕರಿಸಲಾಗಿದೆ. ಭಕ್ತಾದಿಗಳು ಸಲ್ಲಿಸುವ ಕಾಣಿಕೆ, ದೇಣಿಗೆ, ಆಚರಣೆಗಳು, ವಾರ್ಷಿಕ ಸ್ಮರಣೆಗಳು ಅಂಗೀಕೃತ ನಿಯಮಗಳಾಗಿ ವಿಸ್ತಾರವಾಗಿ ರೂಪುಗೊಂಡಿದೆ. ಸೂಫಿ ಅಭ್ಯಾಸದ ಈ ಆಚರಣೆಗಳು ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಂಪ್ರದಾಯಗಳ ಸೆಳವು ಪಡೆದುಕೊಂಡು, ವಿಶೇಷವಾಗಿ ಪೂಜ್ಯ ಸಂತನಿಂದ ಆಶೀರ್ವಾದ ಪಡೆಯುವ ಪದ್ಧತಿ, ಸಲ್ಲಿಸುವ ಕಾಣಿಕೆಗಳು ಇತ್ಯಾದಿ ವಿಶಿಷ್ಟ ಆಚರಣೆಗಳು ತಲತಲಾಂತರುಗಳಿಂದ ಉಳಿದುಕೊಂಡು ಬಂದಿದೆ.

ದರ್ಗಾದ ಐತಿಹಾಸಿಕತೆ

ಬಿ.ದುರ್ಗಾ ಗ್ರಾಮದ ಹಿರಿಯ ವ್ಯಕ್ತಿಯೊಬ್ಬರು ಹೇಳುವಂತೆ ಈ ದರ್ಗಾವು ಸುಮಾರು 350–400 ವರ್ಷಗಳ ಇತಿಹಾಸವನ್ನು ಹೊಂದಿದ್ದು. ದರ್ಗಾ ಇರುವ ಪ್ರಸ್ತುತ ಸ್ಥಳ ಒಂದು ಕಾಲದಲ್ಲಿ ಬೇಲಿ ಪೆಳೆಗಳಿಂದ ಹಾಳುಕೊಂಪೆಯಂತಿದ್ದ ಜಾಗವಾಗಿದ್ದು, ಗ್ರಾಮದ ಕುರಿಗಾಯಿಯೊಬ್ಬ ಈ ಸ್ಥಳದಲ್ಲಿ ಕುರಿ ಮೇಯಿಸುತ್ತಿದ್ದ ಸಂದರ್ಭದಲ್ಲಿ, ಅವರ ಕಣ್ಣಿಗೆ ಈ ಗೋರಿಯು ಕಾಣಿಸಿಕೊಂಡಿದ್ದು, ಈ ವಿಷಯವನ್ನ ಊರಿನವರಿಗೆ ತಿಳಿಸಿ ಇಲ್ಲೊಂದು ಪುರಾತನ ಗೋರಿಯಿರುವುದನ್ನ ಕಂಡುಕೊಂಡರಂತೆ. ಕಾಲಾ ನಂತರ ಗ್ರಾಮದ ಒಂದು ಮುದುಕಿ ಈ ಜಾಗವನ್ನು ಪ್ರತಿ ದಿನ ಮುಂಜಾನೆ ಸ್ವಚ್ಚಗೊಳಿಸುವುದ ಮತ್ತು ತಮ್ಮ ಮನದ ತೊಳಲಾಟಗಳನ್ನ ಈ ಗೋರಿಯ ಮುಂದೆ ನಮ್ರತೆಯಿಂದ ಪ್ರಾರ್ಥನೆಯ ಮೂಲಕ ಹೇಳಿಕೊಳ್ಳ ತೊಡಗಿ, ಆಕೆಯ ಮನಸ್ಸಿಗದು ಸಂತೃಪ್ತಿಯನ್ನು ನೀಡಿತಂತೆ. ಈ ವಿಷಯವನ್ನ ಅಜ್ಜಿ ಹತ್ತಾರು ಮಂದಿಗೆ ತಿಳಿಸುವ ಮೂಲಕ ಸಾರ್ವಜನಿಕರೂ ಸಹ ಅಜ್ಜಿಯಂತೆ ಗೋರಿ ಆಚರಣೆಯ ಪರಂಪರೆಯನ್ನು ಹಿಂಬಾಲಿಸಿ ತಮ್ಮ ಆತ್ಮ ಸಂತೃಪ್ತಿಯನ್ನ ಪಡೆದುಕೊಳ್ಳುವ ಪದ್ಧತಿಯು ಆರಂಭವಾಯಿತು ಎಂದು ಹೇಳಲಾಗುತ್ತದೆ. ಜನಪದರಲ್ಲಿ ಈ ಸ್ಥಳ 'ಗೋರಿ ಸ್ವಾಮಿ' ಎಂಬ ಹೆಸರು ಪಡೆದು, ಇಂದು ವ್ಯವಸ್ಥಿತ ದರ್ಗಾ ಕಟ್ಟಡ ನಿರ್ಮಾಣವಾಗಿ ಪ್ರತೀವರ್ಷದ ಉರುಸ್ ಆಚರಣೆಯ ತನಕ ಬಂದುನಿಂತಿದೆ.

ಗ್ರಾಮದಲ್ಲಿ ಗೋರಿ ಕಾಣಿಸಿಕೊಂಡ ಅಂದಿನ ದಿನದಿಂದ ಈ ಗ್ರಾಮದಲ್ಲಿನ ಯಾವುದೇ ಮನೆಯಲ್ಲಿ ಹಸುವೊಂದು ಕರುವಿಗೆ ಜನ್ಮ ನೀಡಿದಾಗ, ಆ ಹಸುವಿನ ಗಿಣ್ಣದ ಹಾಲನ್ನು ಈ 'ಗೋರಿ ಸ್ವಾಮಿಗೆ' ಅರ್ಪಿಸಿ ಪ್ರಾರ್ಥಿಸಿಕೊಳ್ಳುವ ಒಂದು ಚಿಕ್ಕ ಪ್ರಸಂಗದಿಂದ ಇಲ್ಲಿನ ಆಚರಣೆ, ಪದ್ಧತಿ ಆರಂಭವಾಯಿತೆಂದು ಹೇಳಲಾಗುತ್ತದೆ. ಈ ಆಚರಣೆಯ ಜೊತೆ ಜೊತೆಗೆ ಹಿಂದೂ ಮುಸಲ್ಮಾನರೆನ್ನದೆ ಪ್ರತಿಯೊಬ್ಬರೂ ತಮ್ಮ ಆಶಯ, ಬೇಡಿಕೆ, ಭಿನ್ನಪಗಳನ್ನ ಗೋರಿಯ ಮುಂದಿಟ್ಟು ಮನಸ್ಪೂರ್ವಕವಾಗಿ ಪ್ರಾರ್ಥಿಸಿ, ಅವರ ನಿವೇಧನೆ ಈಡೇರಿದ ಬಳಿಕ ಆ ಸಾರ್ಥಕತೆಗೆ ಗೌರವ ಸೂಚಿಸಲು ಕೆಲ ಕಾಣಿಕೆಗಳು, ಗೌರವ ಸಮರ್ಪಣೆಗಳ ಮೂಲಕ ಈ ಸ್ಥಳ ಧಾರ್ಮಿಕ ಪುಣ್ಯಸ್ಥಳವಾಗಿ ಮಾರ್ಪಾಡು ಹೊಂದಿರುವುದನ್ನು ಕಾಣಬಹುದು.

ಜಾನಪದ ಆಚರಣೆಯಾಗಿ ಕೇವಲ ಗ್ರಾಮಕ್ಕೆ ಮಾತ್ರ ಸೀಮಿತವಾಗಿದ್ದ ಈ ಗೋರಿ ಆಚರಣೆಯನ್ನ ಸುತ್ತಮುತ್ತಲ ಗ್ರಾಮದ ಜನತೆಗೆ ಧಾರ್ಮಿಕ ಆಚರಣೆಯಾಗಿ ಪರಿಚಯಿಸಿದ್ದು ಬಿ.ದುರ್ಗ ಗ್ರಾಮದ ಗಣ್ಯವ್ಯಕ್ತಿ, ಊರಿನ ಮುಖಂಡರಾದ ದೊಡ್ಡ ರುದ್ರಪ್ಪನವರು. ಇವರು ತಮ್ಮ ಕಾಲಾವದಿಯಲ್ಲಿ ಈ ಸ್ಥಳಕ್ಕೆ ಭೇಟಿ ನೀಡಿದ ನೆರೆಹೊರೆಯ

ಮುಸ್ಲಿಂ ಧಾರ್ಮಿಕ ಮುಖಂಡರ ಮೂಲಕ ಈ ಸಮಾದಿಯು ದಾವಣಗೆರೆ ದೊಡ್ಡಬಾತಿಯಲ್ಲಿ ಕಂಡು ಬರುವ ದರ್ಗಾದ ವಂಶಸ್ಥರು ಆದ ಹಜ್ರತ್ ಸೈಯದ್ ಷಾಃ ಅಬ್ದುಲ್ಲಾ ಷಾಃ ಖಾದ್ರಿ ಎಂದು ಊಹಿಸಿ ಇಲ್ಲೊಂದು ದರ್ಗಾದ ಆಚರಣೆ ಸಂಸ್ಕೃತಿಗಳನ್ನ ಮುನ್ನಡೆಸಲು ಮುಂದಾದರು.

ದೊಡ್ಡರುದ್ರಪ್ಪನವರು ಪ್ರಪ್ರಥಮವಾಗಿ 1956 ರಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡರೊಂದಿಗೆ ಕೈ ಜೋಡಿಸಿ ಅವರ ಸಲಹೆ ಸೂಚನೆಗಳಂತೆ ಇಲ್ಲಿ 'ಉರುಸ್' ಎಂಬ ಇಸ್ಲಾಮಿಕ್ ಧಾರ್ಮಿಕ ಆಚರಣೆಯನ್ನು ಆರಂಭಿಸುವಲ್ಲಿ ಮುಂದಾದರು. 1956 ರಿಂದ ಈ ಸ್ಥಳದಲ್ಲಿ ಹಜ್ರತ್ ಸೈಯದ್ ಷಾಃ ಅಬ್ದುಲ್ಲಾ ಷಾಃ ಖಾದ್ರಿ ರವರ ಹೆಸರಿನಲ್ಲಿ ಪ್ರತೀ ವರ್ಷ ಉರುಸ್ ಆಚರಣೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.

ದರ್ಗಾದ ಕೆಲವು ವಿಶಿಷ್ಟ ಆಚರಣೆಗಳು

ಹಜ್ರತ್ ಸೈಯದ್ ಷಾಃ ಅಬ್ದುಲ್ಲಾ ಷಾಃ ಖಾದ್ರಿ ದರ್ಗಾದಲ್ಲಿ ಪ್ರಮುಖವಾಗಿ ಸಂದಲ್ ಕಾರ್ಯಕ್ರಮ, ಚಾದರ್ ಅರ್ಪಿಸುವುದು, ಮುಡುಪು ನೀಡುವುದು, ಕಾಣಿಕೆ ಗೌರವ ಸಮರ್ಪಣೆಗಳನ್ನ ಸಲ್ಲಿಸುವುದು, ಪ್ರಸಾದ (ಎಡೆ) ಅರ್ಪಿಸುವುದು, ಪ್ರಾರ್ಥನೆ ಸಲ್ಲಿಸುವುದು, ಹರಕೆ ಕಟ್ಟಿಕೊಳ್ಳುವುದು, ಕವಾಲಿ ಕಾರ್ಯಕ್ರಮ ಇತ್ಯಾದಿ ಆಚರಣೆಗಳನ್ನೊಳಗೊಂಡಿರುತ್ತದೆ.

ಪ್ರಸ್ತುತ ಬಿ.ದುರ್ಗಾ ಗ್ರಾಮದಲ್ಲಿ ಈ ದರ್ಗಾ ಆಚರಣೆಯು ಹಿಂದೂ–ಮುಸಲ್ಮಾನರ ಸಹಭಾಗಿತ್ವದೊಂದಿಗೆ, ಎರಡು ಪಂಗಡದವರು ಸೇರಿ ಒಂದು ಸಂಘ(ಕಮೀಟಿ)ವನ್ನು ರಚಿಸಿಕೊಂಡು. ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಜಿ, ಸದಸ್ಯರುಗಳಾಗಿ ಸುಮಾರು 30 ರಿಂದ 40 ಜನರ ಜವಾಬ್ದಾರಿಯುತ ನಡತೆಯೊಂದಿಗೆ ಕಾರ್ಯಕ್ರಮ ನಡೆಸಲಾಗುತ್ತದೆ. ಊರಿನ ಗ್ರಾಮಸ್ಥರುಗಳಿಂದ ದೇಣಿಗೆ ಸಂಗ್ರಹ, ನೆರೆಹೊರೆಯ ಭಕ್ತಾದಿಗಳಿಂದ ಹಾಗೂ ದರ್ಗಾದಲ್ಲಿರುವ ಕಾಣಿಕೆ ಹುಂಡಿಯಲ್ಲಿ ಸಂಗ್ರಹವಾದ ಹಣ ಇವೆಲ್ಲವನ್ನೂ ಉರುಸ್ ಆಚರಣೆಗೆ ಬಳಸಿಕೊಳ್ಳಲಾಗುತ್ತದೆ. ಕರ್ನಾಟಕದ ಬಹುತೇಕ ದರ್ಗಾಗಳಲ್ಲಿ ಉರುಸ್ ಆಚರಣೆಯ ಸಂದರ್ಭದಲ್ಲಿ 'ದೋಸ್ತಾರ್‌ದೀನ್' ಎಂಬ ಘೋಷಣೆಯನ್ನು ಮಾಡಲಾಗುತ್ತದೆ, ದೋಸ್ತಾರ್‌ದೀನ್ ಎಂದರೆ 'ಧಾರ್ಮಿಕ ಗೆಳೆತನ' ಎಂದು ಅರ್ಥ. ಇದೇ ಸದುದ್ದೇಶ ಮತ್ತು ಆಪ್ತತೆಯ ಮನೋಭಾವವನ್ನ ಹೊಂದಿರುವ ಇಲ್ಲಿನ ಮುಸ್ಲಿಂ ಮತ್ತು ಹಿಂದೂ ಸಮುದಾಯವೂ ಸಹೋದರತ್ವದ ಮೇರು ಪ್ರದರ್ಶಕರಾಗಿ ಸಕಲ ಜವಾಬ್ದಾರಿಗಳನ್ನ ಹೊತ್ತು ಬಹು ಶಿಸ್ತಿನಿಂದ ಉರುಸ್ ಆಚರಣೆಯನ್ನು ನಡೆಸಿಕೊಡುತ್ತಾರೆ.

ಉರುಸ್ ಜಾತ್ರೋತ್ಸವದ ಹಿನ್ನೆಲೆಯಾಗಿ ದರ್ಗಾದ ಸುತ್ತ ಮುತ್ತಲಿನ ಜಾಗವನ್ನು

ಶುಚಿಗೊಳಿಸಿ, ದರ್ಗಾವನ್ನು ಸುಣ್ಣ-ಬಣ್ಣಗಳಿಂದ ಲೇಪಿಸಿ ನೂತನ ಮೆರುಗನ್ನು ತಂದು. ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯಗಳನ್ನ ಒದಗಿಸುವ ಸರ್ವ ಕಾರ್ಯಗಳನ್ನು ದರ್ಗಾದ ಕಮೀಟಿಯೇ ವ್ಯವಸ್ಥೆ ಮಾಡುತ್ತದೆ. ಜೊತೆಗೆ ತಮ್ಮ ಗ್ರಾಮ ಮತ್ತು ಸುತ್ತಮುತ್ತಲ ಜಿಲ್ಲೆಯ ಭಕ್ತಾದಿಗಳನ್ನ ಉರುಸ್‌ಗೆ ಆಹ್ವಾನಿಸಲು ಕರಪತ್ರಗಳನ್ನು ತಯಾರಿಸಿ ಹಂಚಲಾಗುತ್ತದೆ.

ಉರುಸ್‌ನ ಕರಪತ್ರದ ಒಂದು ಮಾದರಿ

ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಬಿ.ದುರ್ಗಾ ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಬಾಂದವರಿಂದ. ಹಜ್ರತ್ ಸೈಯದ್ ..ಷಾಃ ಅಬ್ದುಲ್ಲಾ ಷಾಃ ಖಾದ್ರಿ ಸಂದಲ್ ಮತ್ತು ಉರುಸ್ ಮಹೋತ್ಸವ.

ಸಂದಲ್ 17-02-2022 ನೇ ಗುರುವಾರ. ಉರುಸ್ 18-02-2022 ನೇ ಶುಕ್ರವಾರ

ಆತ್ಮೀಯರೇ.., ದಿನಾಂಕ 17-02-2022 ರ ಗುರುವಾರ ಸಾಯಂಕಾಲ 4.00 ಗಂಟೆಗೆ ಸರಿಯಾಗಿ ಸಂದಲ್ ಉತ್ಸವವೂ ಬಿ.ದುರ್ಗದ ಮಾಜಿ ಛೇರ್ಮನ್ ದಿ॥ ಶ್ರೀ ದೊಡ್ಡ ರುದ್ರಪ್ಪ ರವರ ಮನೆಯಿಂದ ಹೊರಟು ದರ್ಗಾ ತಲುಪಿ ದರ್ಗಾದ ಮುಖ್ಯಸ್ಥರಿಂದ ಸಂದಲ್ ಕಾರ್ಯಕ್ರಮ ನಡೆಯುವುದು. ನಂತರ ದೇಶದಲ್ಲಿ ಸುಖ ಶಾಂತಿಗಾಗಿ ದೇವರಲ್ಲಿ ಪ್ರಾರ್ಥಿಸಲಾಗುವುದು. ಸರ್ವ ಭಕ್ತಾದಿಗಳು, ಸದ್ಭಕ್ತರು ಹರಕೆ, ಕಾಣಿಕೆ, ಮುಡುಪುಗಳನ್ನು ಅರ್ಪಿಸಿ ತನು-ಮನ-ಧನ ಸಹಾಯದೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಬೇಕೆಂದು ಸರ್ವರಲ್ಲಿ ವಿನಂತಿಸಿಕೊಳ್ಳುತ್ತೇವೆ.

ವ್ಯವಸ್ಥಾಪಕರು ದರ್ಗಾ ಕಮಿಟಿ, ಗ್ರಾಮಸ್ಥರು, ಹಿಂದೂ-ಮುಸ್ಲಿಂ ಬಾಂದವರು, ಹಾಗು ಸರ್ವಭಕ್ತಾದಿಗಳು ಬಿ.ದುರ್ಗ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಉರುಸ್ ಆಚರಣೆ

ಉರುಸ್ ನಡೆಯುವ ದಿನಗಳ ನಿಗಧಿಗೆ ಸಂಬಂಧಿಸಿದಂತೆ, ಹಿಂದಿನಿಂದಲೂ ದೊಡ್ಡರುದ್ರಪ್ಪನವರು ನಡೆಸಿಕೊಂಡು ಬಂದಿರುವ ಹಾಗೆ ಪ್ರತೀ ವರ್ಷ ಫೆಬ್ರವರಿ ತಿಂಗಳಿನ ಮೊದಲ ಹುಣ್ಣಿಮೆ ಅಥವಾ ಕಾಳನ ಹುಣ್ಣಿಮೆಯ ದಿನದಿಂದ ಎರೆಡು ದಿನಗಳ ಕಾಲ ನಡೆಯುತ್ತದೆ. ಉರುಸ್ ಪ್ರಾರಂಭವಾಗುವ ಮೊದಲನೇ ದಿನದ ಸಂಜೆಯ ಸಮಯದಲ್ಲಿ ದೊಡ್ಡರುದ್ರಪ್ಪನವರ ಮನೆಯಿಂದ ಹಿಂದಿನ ರಾತ್ರಿಯೇ ಅರೆದು ಇಟ್ಟಿರುವ ಗಂಧವನ್ನು ತಂದು ಗೋರಿಗೆ ಸಮರ್ಪಿಸುವ ಮೂಲಕ ಉರುಸ್ ಆಚರಣೆಯು ಆರಂಭವಾಗುತ್ತದೆ.

ಗಂಧ ಸಿದ್ಧಪಡಿಸುವ ಮುನ್ನ ಕುಟುಂಬಸ್ಥರು ತಮ್ಮ ಮನೆಯನ್ನೆಲ್ಲಾ ಸಂಪೂರ್ಣವಾಗಿ ಸ್ವಚ್ಛಗೊಳಿಸಿ, ಸುಣ್ಣ-ಬಣ್ಣವನ್ನ ಮನೆಗೆ ಬಳಿದು, ರೀತಿ-ರಿವಾಜುಗಳೊಂದಿಗೆ ಶಾಸ್ತ್ರೋಸ್ತ್ರವಾಗಿ ಗಂಧ ಅರೆದು ಅದನ್ನು ಮಡಿಕೆಯೊಂದರಲ್ಲಿ ತುಂಬಿಸಿ. ದರ್ಗಾದ ಮುಲ್ಲಾನಿಂದ ತಮ್ಮ ಮನೆಯಲ್ಲಿ 'ಫಾಥೇಃ' (ಪ್ರಾರ್ಥನೆ\ಓದಿಕೆ) ಮಾಡಿಸಿ ಅವರ ಮನೆಯಿಂದ ದರ್ಗಾ ಬಳಿ ಮೆರವಣಿಗೆಯೊಂದಿಗೆ ತರುತ್ತಾರೆ. ಬರುವ ಹಾದಿಯಲ್ಲಿ ವಾದ್ಯವನ್ನು ಮೊಳಗಿಸುತ್ತಾ ಕಲಾವಿದ ತಂಡದವರು ತಮ್ಮ ಕಲೆಗಳನ್ನು ಪ್ರದರ್ಶಿಸುತ್ತಾರೆ. ಸಂದಲ್(ಗಂಧ) ತರುವ ಈ ಕಾರ್ಯಕ್ರಮದಲ್ಲಿ ಜನರನ್ನು ಸೋಜಿಗಗೊಳಿಸುವ ಮನರಂಜನಾ ಕಾರ್ಯಕ್ರಮಗಳಾಗಿ ಬಾಯಿಗೆ ಬೀಗ ಹಾಕುವವರು, ಬಾಯಿಗೆ ಸೂಜಿ ಏರಿಸುವವರು, ಬೆನ್ನು ತೋಳು ಭುಜಗಳಿಗೆ ಸೂಜಿ ಚುಚ್ಚಿಕೊಳ್ಳುವವರ ಕಲಾ ತಂಡ. ಇವೆಲ್ಲವೂ ದಾರಿಯುದ್ದಕ್ಕೂ ಸಾಗಿ ಬಂದು ಅಂತಿಮವಾಗಿ ದರ್ಗಾ ಬಳಿ ಬರಲಾಗುತ್ತದೆ. ತಂದಿರುವ ಸಂದಲ್ ಅನ್ನು ಓದಿಕೆ ಮಾಡಿಸಿ ಗೋರಿಗೆ ಮತ್ತು ಗೋರಿಯ ಕಟ್ಟಡ ಮತ್ತು ಸುತ್ತಮುತ್ತಲೂ ಗಂಧವನ್ನು ಸಿಂಪಡಿಸಲಾಗುತ್ತದೆ. ಈ ರೀತಿಯಾಗಿ ಸಂದಲ್ ಕಾರ್ಯಕ್ರಮವೂ ನೋಡುಗರ ಕಣ್ಮನ ಸೆಳೆಯುತ್ತದೆ.

ತದ ನಂತರ ಹಿಂದಿನ ವರ್ಷ ಹರಕೆ ಕಟ್ಟಿಕೊಂಡ ಭಕ್ತಾದಿಗಳು ಝುಂಡಾ ಮತ್ತು ಚಾದರ್ ಬಟ್ಟೆಗಳನ್ನು ಗೋರಿಯ ಮುಂದಿರಿಸಿ ಓದಿಕೆ ಮಾಡಿಸಿ, ಗೋರಿಯ ಮೇಲ್ಭಾಗ ಚಾದರ್ ಬಟ್ಟೆಗಳನ್ನು ಹೊದಿಸಿ, ಹೊರ ಆವರಣದ ಕಟ್ಟಡದ ಮಿನಾರ್(ಗೋಪುರ)ಗಳಿಗೆ ಝುಂಡಾ ಬಟ್ಟೆಯನ್ನು ಏರಿಸಿ ಬಿಗಿಯುತ್ತಾರೆ. ಮುಂದುವರೆದಂತೆ ಕೆಲವರು ಸಕ್ಕರೆ ಫಾಥೇಃ, ಉತ್ತುತ್ತಿ ಕಲ್ಲು ಸಕ್ಕರೆ ಊದಿನಬತ್ತಿ, ಇಲ್ಲವೇ ಗಂಜಿ ಮಾಲ್ದಿ ಎನ್ನುವ ಪದಾರ್ಥವನ್ನು ಅರ್ಪಿಸಿ ಓದಿಕೆ ಮಾಡಿಸಿ ತಮ್ಮ ತಮ್ಮ ಕುಟುಂಬದವರು ಸೇವಿಸುತ್ತಾರೆ. ಈ ಆಚರಣೆಯು ಆ ದಿನದ ರಾತ್ರಿಯ ವರೆಗೂ ನಡೆಯುತ್ತದೆ. ರಾತ್ರಿ 8 ಗಂಟೆಯ ನಂತರ ಭಕ್ತಾದಿಗಳಿಂದ ಇಲ್ಲವೇ ಕಲಾ ತಂಡಗಳಿಂದ ಲಾವಣಿ, ಮುಸ್ಲಿಂ ಭಜನಾ ಹಾಡುಗಳ ಕಾರ್ಯಕ್ರಮ ರಾತ್ರಿಯಿಡೀ ನಡೆಯುತ್ತದೆ.

ಮರುದಿನ ಬೆಳಗ್ಗಿನಿಂದಲೂ ಓದಿಕೆ, ನಮಾಜ್, ಪ್ರಾರ್ಥನೆಗಳು ದಿನಪೂರ್ತಿ ಜಾರಿಯಲ್ಲಿದ್ದು, ಹಿಂದೂ ಮುಸಲ್ಮಾನರೆನ್ನದೆ ಪ್ರತಿಯೊಬ್ಬರೂ ಓದಿಕೆ ಮಾಡಿಸುತ್ತಾರೆ. ಎರಡನೆಯ ದಿನ ಎಡೆಯಾಗಿ ಮಾಂಸಹಾರದ ಆಹಾರವನ್ನ ಅರ್ಪಿಸುತ್ತಾರೆ. ಮುಸಲ್ಮಾನರಿಗೆ ಪ್ರಿಯವಾದ ಬಿರಿಯಾನಿ ಇಲ್ಲಿ ಮುಂಚೂಣಿಯಲ್ಲಿರುತ್ತದೆಂದು ಹೇಳಿದರೆ ತಪ್ಪಾಗಲಾರದು. ಎಡೆಯನ್ನು ಅರ್ಪಿಸಿ ಮುಲ್ಲಾನಿಂದ ಓದಿಕೆ ಮಾಡಿಸಿದ ಬಳಿಕ ತಮ್ಮ ತಮ್ಮ ಪರಿವಾರದವರು, ಅವರವರ ಬಿಡಾರಗಳಲ್ಲಿ ಆಹಾರವನ್ನು ಸೇವಿಸುತ್ತಾರೆ. ರಾತ್ರಿ 9 ರ ಬಳಿಕ ಮುಸ್ಲಿಂ ವಿದ್ವಾಂಸರುಗಳಿಂದ ಕುರಾನ್ ಪಠಣೆ ಮತ್ತು ಕವಾಲಿ ಹಾಡುಗಳ ಪ್ರದರ್ಶನಗಳು ನಡೆಯುತ್ತವೆ.

ರಾತ್ರಿಯಿಡೀ ಭಕ್ತಾದಿಗಳು ಈ ಕಾರ್ಯಕ್ರಮದ ಸವಿಯನ್ನು ಸವಿದು ಕೆಲವರು ತಮ್ಮ ಊರುಗಳಿಗೆ ತೆರಳಿದರೆ ಇನ್ನು ಕೆಲವರು ಅಲ್ಲೇ ಉಳಿದು ಮರುದಿನ ಹೊರಡುತ್ತಾರೆ. ಹೀಗೆ ಮಧ್ಯಕರ್ನಾಟಕದ ಭಾಗದಲ್ಲಿ ಕಂಡುಬರುವ ಚಿತ್ರದುರ್ಗ ಜಿಲ್ಲೆಯ ಬಿ.ದುರ್ಗ ದರ್ಗಾ ಮಾತ್ರವಲ್ಲದೇ, ಜಿಲ್ಲೆಯಲ್ಲಿ ಕಂಡು ಬರುವ ಇತರೆ ಹತ್ತಾರು ದರ್ಗಾಗಳಲ್ಲಿಯೂ ಇದೇ ತರನಾದ ಭ್ರಾತೃತ್ವ ಬೆಸೆಯುವ, ಸಹೋದರತ್ವವನ್ನು ಮೆರೆಯುವ ದರ್ಗಾ ಆಚರಣೆಗಳು ಕಾಣಸಿಗುತ್ತವೆ. ಜಾತಿ ಮತ ಪಂಥಗಳೆನ್ನದೆ ಎಲ್ಲರೂ ಒಂದು ಗೂಡಿ, ಆಯಾ ಪ್ರದೇಶದ ದೇಸಿ ಸಂಸ್ಕೃತಿ ಆಚರಣೆಗಳು, ಕೆಲವು ವಿಧಿ ವಿಧಾನಗಳಿಗೆ ಬದ್ಧರಾಗಿ ತಮ್ಮ ಪೂರ್ವಜರೂ ತೋರಿಸಿಕೊಟ್ಟ ಮಾರ್ಗದಲ್ಲಿಯೇ ಅವರ ಧಾರ್ಮಿಕ ನಂಬಿಕೆ ಆಚರಣೆಗಳನ್ನು ಈ ಕಾಲಕ್ಕೂ ಅನುಸರಿಕೊಳ್ಳುತ್ತಾ ಬಂದಿದ್ದು; ಜಾತಿ ಮತಗಳ ನಡುವೆ ಸ್ನೇಹ ಸೌಹಾರ್ಧತೆಯನ್ನು ಇಂತಹ ಧಾರ್ಮಿಕ ಹಬ್ಬ ಜಾತ್ರೆ ಉರುಸ್‌ಗಳಲ್ಲಿ ಕಾಣಬಹುದಾಗಿದೆ.

ವಕ್ತೃಗಳ ವಿವರ :

ಕ್ರ.ಸಂ ಹೆಸರು	ಹೆಸರು	ವಯಸ್ಸು	ವಾಸಸ್ಥಳ	ವೃತ್ತಿ
1.	ಸೈಯದ್ ರಿಯಾಜ್	63	ಬಿ.ದುರ್ಗಾ ದರ್ಗಾ ದ ಮುಖ್ಯಸ್ಥರು	ಚಿತ್ರದುರ್ಗ
2.	ರಾಮಸ್ವಾಮಿ ಎಸ್ ಡಿ	55	ದರ್ಗಾ ಕಮಿಟಿಯ ಅಧ್ಯಕ್ಷರು	ಬಿ.ದುರ್ಗ
3.	ನಾಗರಾಜು	45	ದರ್ಗಾ ಕಮಿಟಿಯ ಕಾರ್ಯದರ್ಶಿ	ಬಿ.ದುರ್ಗ
4.	ಖಾಜಿಂ ಅಲಿ	60	ಹಜರತ್(ಮೌಲ್ವಿ)	ಅಂದನೂರು
5.	ಶಿವಪ್ಪ	45	ದರ್ಗಾ ಕಮಿಟಿ ಸದಸ್ಯರು	ಬಿ.ದುರ್ಗ

ಪರಾಮರ್ಶನ ಗ್ರಂಥಗಳು :

1. ರಹಮತ್ ತರೀಕೆರೆ – ಕರ್ನಾಟಕದ ಸೂಫಿಗಳು. ಅಭಿನವ ಪ್ರಕಾಶಕನ, ವಿಜಯನಗರ, ಬೆಂಗಳೂರು. 1998
2. ರಹಮತ್ ತರೀಕೆರೆ – ಸಾಂಸ್ಕೃತಿಕ ಅಧ್ಯಯನ, ಅಭಿನವ ಪ್ರಕಾಶಕನ, ವಿಜಯನಗರ, ಬೆಂಗಳೂರು. 2012
3. ರಹಮತ್ ತರೀಕೆರೆ – ಪ್ರತಿ ಸಂಸ್ಕೃತಿ, ಅಭಿನವ ಪ್ರಕಾಶಕನ, ವಿಜಯನಗರ, ಬೆಂಗಳೂರು. 2012
4. ತಾಳ್ಯದ ವೇದಮೂರ್ತಿ – ಹೊಳಲ್ಕೆರೆ ತಾಲ್ಲೂಕು ಗ್ಯಾಸೆಟಿಯರ್, ಕರ್ನಾಟಕ ಸರ್ಕಾರದ ಪ್ರಕಟಣೆ, ಬೆಂಗಳೂರು, 2018

ಕುವೆಂಪುರವರ 'ಜಲಗಾರ' ನಾಟಕ ಮತ್ತು ಮಾನವತಾವಾದ

1 **ಪ್ರೊ. ರೇಣುಕಮ್ಮ.ಜೆ**
ಕನ್ನಡ ಪ್ರಾಧ್ಯಾಪಕರು
ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು
ಯಲಹಂಕ ಉಪನಗರ, ಬೆಂಗಳೂರು–64
renukamanju1@gmail.com

ಕುವೆಂಪು ಅವರ ಜಲಗಾರ ನಾಟಕದಲ್ಲಿ ಅಡಗಿರುವ ಮಾನವತಾವಾದದ ನೆಲೆಗಟ್ಟುಗಳನ್ನು ಇಲ್ಲಿ ಗುರುತಿಸಲಾಗಿದೆ. ಮೌಢ್ಯ ಮತ್ತು ಕಂದಾಚಾರಗಳನ್ನು ವಿರೋದಿಸಿ ಮಾನವತಾವಾದವನ್ನು ಪ್ರತಿಪಾದಿಸಿದ ಕುವೆಂಪು ಅವರ ದಾರ್ಶನಿಕತೆಯನ್ನು ಇದು ಚರ್ಚಿಸುತ್ತದೆ. ಧರ್ಮದ ಹೆಸರಿನಲ್ಲಿ ಮೌಢ್ಯ ಪ್ರಚಾರ ಮಾಡುವ ಸಮಾಜದ ಮೂಡ ಸಂಪ್ರದಾಯದ ಬಗ್ಗೆ ಕುವೆಂಪು ಅವರು ನಿರ್ದಾಕ್ಷಿಣ್ಯವಾಗಿ ಟೀಕಿಸುತ್ತಾರೆ. ಸಾಮಾಜಿಕ ನ್ಯಾಯ ಕುರಿತಾದ ಅವರ ನಿಷ್ಠುರ ಹಾಗೂ ಖಚಿತ ನಿಲುವುಗಳು ಹೇಗೆ ಮನುಜನನ್ನು ಎಚ್ಚರಿಸಿದವು ಎಂಬುದನ್ನು ಈ ಲೇಖನದ ಮೂಲಕ ಎತ್ತಿ ಹಿಡಿಯಲಾಗಿದೆ. ಕುವೆಂಪು ಅವರ ಜಲಗಾರ ನಾಟಕದಲ್ಲಿ ನಾವು ಕಾಣುವ ಸಮತೋಲನ ದೃಷ್ಟಿ, ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ಅವರ ಮಾನವತಾದೃಷ್ಟಿ ವಿವಿಧ ವಲಯಗಳಲ್ಲಿ ಅಂದರೆ ಸಮಾಜ, ವೃತ್ತಿ, ದೇವರು, ಧರ್ಮ ಈ ಮೋದಲಾದವುಗಳನ್ನು ಕುರಿತು ವಿವೇಚಿಸಲಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಮಾನವತವಾದಿಯಾಗಬೇಕೆಂದು ಆಧ್ಯಾತ್ಮ ಮತ್ತು ವೈಜ್ಞಾನಿಕತೆಯ ಮೂಲಕ ಹೊಸ ಮೌಲ್ಯಗಳನ್ನು ಕಟ್ಟಿಕೊಟ್ಟ ಕುವೆಂಪು ಅವರ ಜಲಗಾರ ನಾಟಕದಲ್ಲಿನ ಮಾನವತಾವಾದದ ಮಹತ್ವವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ನಾಟಕದಲ್ಲಿನ ವಿಷಯ, ವಸ್ತು ಅದರಲ್ಲಿ ಬರುವ ಪಾತ್ರಗಳ ವಿಶಿಷ್ಟತೆ, ಅದು ಸಮಾಜಕ್ಕೆ ಸಾರುವ ಮಾನವತಾವಾದದ

ಸಂದೇಶ ಮತ್ತು ಪರಿಣಾಮಗಳನ್ನು ವಿಶ್ಲೇಸುವ ಪ್ರಯತ್ನ ಮಾಡಲಾಗಿದೆ.

ಮುಖ್ಯಪದಗಳು; ಕುವೆಂಪು, ಮನುಜಮತ, ವಿಶ್ವಪಥ, ಸಮ ಸಮಾಜ, ಪೂರ್ಣ ದೃಷ್ಟಿ.

ಕುವೆಂಪುರವರ 'ಜಲಗಾರ' ನಾಟಕ ಮತ್ತು ಮಾನವತಾವಾದ

ಕುವೆಂಪು ಅವರು ಸಾಹಿತ್ಯದ ಮೂಲಕ ಸಾಮಾಜಿಕ ಸಮಾನತೆಗಾಗಿ ದುಡಿದವರು. ಮನುಷ್ಯ ಅಲ್ಪಮಾನವತೆಯನ್ನು ದಾಟಿ ಮಾನವತಾವಾದಿಯಾಗಬೇಕೆಂದು ಹಂಬಲಿಸಿದವರು. ಅನೇಕವೇಳೆ ಅಂತರಂಗದ ಸೂಕ್ಷ್ಮ ಭಾವಗಳನ್ನು ಅನುಭವಗಳನ್ನು ವೈಚಾರಿಕತೆಗೆ ವಿರೋದವೆಂದು ಕೆಲವರು ಭಾವಿಸುವುದುಂಟು. ಅದರಲ್ಲೂ ದೇವರು ಧರ್ಮ, ಆತ್ಮ, ಪರಮಾತ್ಮ ಈ ಮೊದಲಾದ ಮತುಗಳೇ ಕೆಲವರಿಗೆ ಆಗದು. ಅವೆಲ್ಲ ಅಂಧಸ್ರದ್ದೆಯೆಂಬ ತಿರಸ್ಕಾರ ಭಾವನೆಯುಂಟು. ಯಾವುದೇ ಒಂದು ಭಾವನೆ ಮನಸ್ಸಿನಲ್ಲಿ ಹೊಳೆದು ತೋರಿದಾಗ ಅದನ್ನು ಮತ್ತೆ ಪರಿಭಾವಿಸುತ್ತ ಉಜ್ಜಿ, ತಿಕ್ಕಿ, ಬಡಿದು ಸ್ಪಷ್ಟವಾದ ರೂಪವನ್ನು ಅದು ಪಡೆಯುವಂತೆ ಮಾಡುವುದು ವಿಚಾರಶಕ್ತಿಯ ಒಂದು ಮುಖ್ಯ ಲಕ್ಷಣ. ಮಾನವತಾವಾದವನ್ನು ಮೈಗೂಡಿಸಿಕೊಂಡ ಕುವೆಂಪು ಅವರು ಆಚಾರ, ಸಂಪ್ರದಾಯಗಳನ್ನು ರೂಡಿ ಪದ್ಧತಿಗಳನ್ನು ಪ್ರಶ್ನಿಸದ ಹೊರತು ಆಚರಿಸುತ್ತಿರಲಿಲ್ಲ. ಸಾಮಾಜಿಕ ನ್ಯಾಯ ಕುರಿತಾದ ಅವರ ನಿಷ್ಟುರ ಹಾಗೂ ಖಚಿತ ನಿಲುವುಗಳು ಹೇಗೆ ಮನುಜನನ್ನು ಎಚ್ಚರಿಸಿದವು ಎಂಬುದನ್ನು ಈ ಲೇಖನದ ಮೂಲಕ ಎತ್ತಿ ಹಿಡಿಯಲಾಗಿದೆ.

ಕುವೆಂಪು ಅವರ ನಾಟಕ ಜಲಗಾರದಲ್ಲಿ ಸಾಮಾಜಿಕ ಬದ್ಧತೆ ಪ್ರಧಾನವಾಗಿದೆ. ಅವರ ಜಲಗಾರ ನಾಟಕದಲ್ಲಿ ಕಸಗುಡಿಸುವವನಿರುವಲ್ಲಿಯೇ ದೇವರನ್ನು ಕರೆಯುತ್ತಾರೆ. ಈ ನಾಟಕದಲ್ಲಿ ಶೋಷಿತ ವರ್ಗಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಕುವೆಂಪು ಅವರು. ಜಡ ಸಂಪ್ರದಾಯಿಕ ಮೌಲ್ಯಗಳು ಹಾಗೂ ಜಾತಿವ್ಯವಸ್ಥೆಯ ಸಂಕುಚಿತತೆಯನ್ನು ನಿರಾತಂಕವಾಗಿ ಪ್ರಶ್ನಿಸಿದವರು. ಜಾತಿ ಮತಗಳ ಘರ್ಷಣೆಯನ್ನು ಗಂಭೀರವಾಗಿ ವೈಚಾರಿಕ ದೃಷ್ಟಿಯಿಂದ ವಿವೇಚಿಸುತ್ತಾರೆ. ತಮ್ಮ ಸೃಜನಶೀಲ ನೆಲೆಯಲ್ಲಿ ಸಮರ್ಥವಾಗಿ ಎದುರಾಗುವ, ಪ್ರಶ್ನಿಸುವ ಪ್ರಯತ್ನ ಮಾಡಿದ್ದಾರೆ. ಪ್ರಧಾನ ಸಂಸ್ಕೃತಿಗೆ ಹಾಗೂ ಅದರ ಮೌಲ್ಯಗಳಿಗೆ ಪರ್ಯಾಯವಾದ ಸಾಧ್ಯತೆಗಳನ್ನು ಕಲ್ಪಿಸುವ ಪ್ರಯತ್ನ ಹಾಗೂ ಹೊಸ ಸಾಮಾಜಿಕ ಮೌಲ್ಯದ ಮಂಡನೆಗಾಗಿ ಈ ನಾಟಕ ರೂಪ ತಳೆದಿದೆಯೆಂದು ಹೇಳಬಹುದು. ಜಲಗಾರನ ಊರಲ್ಲಿ ಶಿವಗುಡಿಯ ಜಾತ್ರೆ. ಅಂದು ಸುಗ್ಗಿಯ ಹಬ್ಬ. ಊರವರೆಲ್ಲ ಶಿವಗುಡಿಗೆ ಹೋಗಿ ಹಣ್ಣುಕಾಯಿಮಾಡಿಸಿ ತೇರೆಳೆಯುವ ಸಂಭ್ರಮ. ರೈತರು, ತರಣರು, ಪಾರ್ವರು ಎಲ್ಲಾ ಹೊಸ ಬಟ್ಟೆತೊಟ್ಟು ಶಿವಪೂಜೆಗೆ ಹೊರಟಿದ್ದಾರೆ. ಜಲಗಾರ ಮಾತ್ರ ಊರ ಬೀದಿಯ ಕಸಗುಡಿಸುವ ಕಾಯಕದಲ್ಲಿ

ತೊಡಗಿದ್ದಾನೆ. ದಲಿತನಾದ ಕಾರಣ ಶಿವಗುಡಿಯೊಳಗೆ ಹೋಗಲು ಸಾಧ್ಯವಾಗದು. ಇದು ಈ ನಾಟಕದ ಮೇಲ್ನೋಟ. ಆದರೆ ಈ ನಾಟಕ ಗೊಡ್ಡು ಸಂಪ್ರದಾಯ, ಮೂಢನಂಬಿಕೆಗಳ ಫಲವಾಗಿ ಶೋಷಣೆಗೆ ಒಳಗಾದ ಧಮನಿತರ ಮೇಲೆ ಬೆಳಕು ಚೆಲ್ಲುತ್ತದೆ. ಜಲಗಾರನಿಗೆ ಶಿವನು ಜಲಗಾರನ ವೇಷದಲ್ಲಿಯೇ ಮೈದೋರಿ

"ಊರ ತೋಟಿಯು ನೀನು ಜಗದ ತೋಟಿಯು ನಾನು"

".......ನೀನೆ ನಾನಾಗಿಹೆನು! ನಾನೇ ನೀನಾಗಿರುವೆ!

ಶಿವ ನೀನು! ಶಿವ ನೀನು!"

ಎಂದು ಹೇಳಿ, ಜನರ ನಂಬಿಕೆಗೆ ವಿರುದ್ದವಾಗಿ ಜಲಗಾರನೇ ಶಿವನಾಗಿ, ಶಿವನೇ ಜಲಗಾರನಾಗಿ ಶಿವ ಇಲ್ಲಿ ಜಲಗಾರನನ್ನು ತನ್ನ ಮಟ್ಟಕ್ಕೇರಿಸುತ್ತಾನೆ. ಇಲ್ಲಿ ಶಿವನು ಮೈದೋರುವುದರ ಮೂಲಕ ತನಗೂ, ತನ್ನ ಕೆಲಸವನ್ನು ನಿಷ್ಠೆಯಿಂದ ಮಾಡುವ ಜಲಗಾರನಿಗೂ, ಯಾವ ಭೇದವೂ ಇಲ್ಲ ಎಂಬ ಸಂದೇಶ ಸಾರಿದಂತಿದೆ. ಸಮಾಜಕ್ಕೆ ಇದರ ಅರಿವು ಮೂಡಿಸುವುದರ ಜೊತೆಗೆ ಅವುಗಳ ನಿವಾರಣೆಗೆಂದೆ ಕುವೆಂಪುರವರು ಈ ನಾಟಕ ಬರೆದಂತಿದೆ.

ಜಲಗಾರ ನಾಟಕದಲ್ಲಿ ಬರುವ ಪಾತ್ರಗಳು ಮತ್ತು ಅವುಗಳಿಂದ ವ್ಯಕ್ತವಾಗುವ ನಮ್ಮ ಸಮಾಜದ ದರ್ಶನ ಸ್ಫುಟವಾಗಿದೆ. ಈ ನಾಟಕದ ಕೇಂದ್ರ ವ್ಯಕ್ತಿ ಜಲಗಾರ ಮತ್ತು ಜಲಗಾರನ ವೇಷದ ಶಿವ. ಇಲ್ಲಿನ ಜಲಗಾರ ಶೊಷಣೆಯ ಎಲ್ಲ ಮಗ್ಗುಲುಗಳನ್ನು ಅರಿತವನು. ಆಧುನಿಕ ವರ್ಣ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಹೋಗಲಾಡಿಸಿ ಹೊಸ ಸಮಾಜವನ್ನು ಕಟ್ಟಬಯಸುವ ಆಶಯವನ್ನೂ ಜಲಗಾರನ ಮಾತುಗಳಲ್ಲಿ ಕಾಣಬಹುದು. ರೈತ, ಭೂದೇವಿ, ತಿರುಕ, ಯುವಕ, ಭಟ್ಟ, ಬಾಲಕರು, ಹಳ್ಳಿಯ ಹುಡುಗಿ, ಪಾರ್ವರು, ತರುಣರು– ಇವರೆಲ್ಲ ಜಲಗಾರನ ಪಾತ್ರಕ್ಕೆ ಪೂರಕವಾಗಿರುವವರು. ಇಲ್ಲಿ ಕುವೆಂಪುರವರು ಆಯಾ ಪಾತ್ರಕ್ಕೆ ತಕ್ಕಂತೆ ಭಾವನೆಗಳನ್ನು ಅಭಿವ್ಯಕ್ತಿಸುತ್ತಾ ಮುನ್ನಡೆಸಿದ್ದಾರೆ. ದೇವರು ದೇವಾಲಯ, ಪೂಜಾ ವಿಧಾನಗಳನ್ನು ವಿಮರ್ಶೆಗೆ ಗುರಿಪಡಿಸುತ್ತಾ ಅಸಮಾನತೆಯ ವಿರುದ್ದ ಧ್ವನಿ ಎತ್ತಿದ್ದಾನೆ.

ಜಲಗಾರನು ತಾನು ಕಂಡುಕೊಂಡ ಶಿವದರ್ಶನ, ಶಿವನನ್ನೇ ಜಲಗಾರನ ಮುಂದೆ ತಂದು ನಿಲ್ಲಿಸಿರುವ ನಡೆ ಅತ್ಯಂತ ಪ್ರಗತಿಪರ ಚಿಂತನೆಯಾಗಿದೆ. ಸಮಾಜದಲ್ಲಿ ಅಸಮಾನತೆಯ ಬೀಜ ಬಿತ್ತುತ್ತಾ ಬಂದವರು ಸಂಪ್ರದಾಯವಾದಿಗಳು. ಪಾರಂಪರಿಕ ಸಮಾಜದ ಮೌಲ್ಯಗಳು ಅವೈಚಾರಿಕ ನೆಲೆಗಳನ್ನು ನಿರಾಕರಿಸಿ ಒಂದು ಸರಳ ನೈತಿಕ ಚೌಕಟ್ಟಾಗಿ ಹೊಸ ಧಾರ್ಮಿಕ ಪರಂಪರೆಯನ್ನು ನಿರ್ಮಿಸುವ ಸಲುವಾಗಿ ಮತ, ಧರ್ಮ ಮತ್ತು ಪುರೋಹಿತಶಾಹಿ

ಇವೆರಡರ ನಡುವಿನ ಸಂಘರ್ಷಗಳ ಚಿತ್ರಣವನ್ನು ಈ ನಾಟಕ ಕಟ್ಟಿಕೊಡುತ್ತದೆ. ಮಾನವೀಯತೆ ಹಾಗೂ ವೈಚಾರಿಕತೆ ಮುಂತಾದ ಮೌಲ್ಯಗಳನ್ನು ಮಂಡಿಸುತ್ತ ಸಮಾಜಮುಖಿ ಚಿಂತನೆಗಳನ್ನು ಹೆಚ್ಚು ಅರ್ಥಗರಭಿತವಾಗಿ ವೈಚಾರಿಕ, ವೈಜ್ಞಾನಿಕ ಮತ್ತು ಮೌಢ್ಯರಹಿತ ಸಮಾಜವನ್ನು ನಿರ್ಮಿಸುವಲ್ಲಿ 'ಜಲಗಾರ' ನಾಟಕ ಸಶಕ್ತವಾಗಿ ಮೂಡಿ ಬಂದಿದೆ.

ಕುವೆಂಪು ಅವರ ಜಲಗಾರ ನಾಟಕ ಬಿಡುಗಡೆಯ ಹಾದಿಯಾಗಿರುವಂತೆ ಭರವಸೆಯ ಬೆಳಕೂ ಆಗಿದೆ. ಇಲ್ಲಿ ಆಧ್ಯಾತ್ಮಿಕತೆಯೂ ಆದರ್ಶದಂತೆ ಸಮಾಜವಾದಿ ಸಮಕಾಲೀನ ಸಾಮಾಜಿಕ ಮೌಲ್ಯವನ್ನು ಎತ್ತಿಹಿಡಿದಿದೆ. ಈ ನಾಟಕದಲ್ಲಿ ಕುವೆಂಪುರವರು ಲೋಕದ ದಮನಿತರ ಬದುಕಿನ ಆಳಕ್ಕೆ ಇಳಿದು ತಿರಸ್ಕಾರ ಮತ್ತು ಅಲಕ್ಷ್ಯಕ್ಕೆ ತುತ್ತಾದವರ ಪರ ನಿಂತು ಪುರೋಹಿತಶಾಹಿ ಮತ್ತು ಅಸ್ಪೃಶ್ಯತೆ ಆಚರಣೆಯನ್ನು ಖಂಡಿಸುತ್ತಾ ಬಂದಿದ್ದಾರೆ. ಈ ನಾಟಕದಲ್ಲಿ ರೈತರು, ಪಾರ್ವರು, ತಿರುಕ ಮತ್ತು ಜಲಗಾರ ಪಾತ್ರದ ಮೂಲಕ ಕಾಯಕದ ಮಹತ್ವವನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಕುವೆಂಪು ಅವರು ಪ್ರಸ್ತುತ ಸಮಾಜದ ಚಿತ್ರಣದೊಂದಿಗೆ ಉಷಾಕಾಲ–ಸಾಯಂಕಾಲ ಇವುಗಳ ರಮ್ಯವಾದ – ಸಂಪ್ರದಾಯಕವಾದ ವರ್ಣನೆಯನ್ನು ತಂದಿದ್ದಾರೆ. ಸಮಾಜದಲ್ಲಿನ ಡಾಂಭಿಕತನವನ್ನು ಬಯಲಿಗೆಳೆದು ಸಮ ಸಮಾಜದ ಅರಿವನ್ನು ಮೂಡಿಸಿದ್ದಾರೆ. ಊರ ಜನರೆಲ್ಲ ಸಂಭ್ರಮದಿಂದ ಶಿವಗುಡಿಯ ಜಾತ್ರೆಗೆ ಹೊರಟಿದ್ದಾರೆ. ಜಲಗಾರ ಮಾತ್ರ ಕಸಗುಡಿಸುವ ಕಾಯಕದಲ್ಲಿ ತೊಡಗಿದ್ದಾನೆ. ಜಾತ್ರೆಯಿರಲಿ ಇಲ್ಲದಿರಲಿ ದಿನವೂ ಊರ ಬೀದಿಯನ್ನು ಸ್ವಚ್ಚ ಮಾಡಲೇಬೇಕು. ಆದರೆ ಶಿವನನ್ನು ಕಂಡು ಪುಣ್ಯ ಪಡೆಯಲು ಗುಡಿಗೆ ಹೊರಟ ಹಲವರನ್ನು ಜಲಗಾರ ಸಂದರ್ಶಿಸುತ್ತಾನೆ. ಮೊದಲಿಗೆ ಜಲಗಾರನನ್ನು ನೇಗಿಲಯೋಗಿಯಾದ

ರೈತನೊಬ್ಬ ಎದುರಾಗಿ

" ಇಂದು ನಮ್ಮೂರ ಶಿವಗುಡಿಯ ಜಾತ್ರೆ!

ಬರುವುದಿಲ್ಲವೇ ನೀನು?

ತೇರೆಳೆಯಲೆಂದನಿಬರೂ ಬರುತಿಹರು"

ಎಂದು ಜಾತ್ರೆಗೆ ಆಹ್ವಾನಿಸುತ್ತಾನೆ. ಅದಕ್ಕೆ ಉತ್ತರವಾಗಿ ಜಲಗಾರ :

"ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು ದೇಗುಲದ ಬಳಿಗೆನ್ನ ಸೇರಿಸರು."

ಎಂದು ಅತಾಶನಾಗಿ ನುಡಿಯುತ್ತಾನೆ. ಕಾರಣ ಜಲಗಾರನೇ ಹೇಳುವಂತೆ

"ನಿನ್ನೆ ದೇಗುಲದೆಡೆಗೆ ಹೋದೆನ್ನ ಕಂದನಂ ಬೈದಿರಿದು ನೂಕಿದರು"

ಎಂದು ತನ್ನ ಅಸಹಾಯಕತೆ ತೋರಿಸುತ್ತಾನೆ. ಹಾಗೆ "ಶಿವಗುಡಿಯ ಶಿವನು

ಜೋಯಿಸರ ಶಿವನಂತೆ, ನನ್ನ ಶಿವನೀ ಮಣ್ಣಿನಲ್ಲಿಹನು. ನನ್ನ ಶಿವ ಕೊಳೆತ ಕಸದೊಳಗಿಹನು. ಕಪ್ಪುರದೊಳಿಲ್ಲ; ಮಂಗಳಾರತಿಯೊಳಿಲ್ಲ;" ಎಂದು ಪ್ರಗತಿಪರ ಚಿಂತನೆಯಿಂದ ಉದ್ಭವಿಸುವ ಸಾಮಾಜಿಕ ಅಸಮಾನತೆಯ ವಿರುದ್ಧ ಧ್ವನಿಎತ್ತಿದ್ದಾನೆ. 'ವೈದಿಕರ ಶಿವ ಗುಡಿಯಲ್ಲಿ, ನನ್ನ ಶಿವ ಕಸದಲ್ಲಿ' ಎನ್ನುವಲ್ಲಿ ನಾಟಕದ ಉದ್ದಕ್ಕೂ ಇಂಥ ಮಾತುಗಳು ವರ್ಣವ್ಯವಸ್ಥೆಗೆ ಮುಖಾಮುಖಿಯಾಗುತ್ತವೆ. ವೈದಿಕರು ಶತಶತಮಾನಗಳಿಂದ ಮುಗ್ದರನ್ನು ದೈವದ ನೆಲೆಯಲ್ಲಿ ಶೋಷಿಸುತ್ತಾ ಬಂದು ಅವರು ಸ್ಥಾಪಿಸಿಕೊಂಡು ಬಂದ ದೈವದ ನೆಲೆಯನ್ನು ಪುಡಿಮಾಡುತ್ತದೆ ಈ ನಾಟಕ.

ಜಲಗಾರ ಏನೂ ತಿಳಿಯದವನೆಂದು ಕೆಲವರು ಗೇಲಿಮಾಡಿದರೆ, ಜಲಗಾರನ ಪಾಡನ್ನು ನೋಡಿ ಕೆಲವರು ಮರುಗುತ್ತಾರೆ. ಆದರೆ ಜಲಗಾರನ ಮಾತಿನಿಂದ ಅವನಿಗೆ ತನ್ನ ಕರ್ತವ್ಯ ನಿಷ್ಠೆಯ ಅರಿವಿದೆ ಎಂಬುದು ತಿಳಿಯುತ್ತದೆ. "ಜಗದ ದೇಗುಲದಲ್ಲಿ ಜಗದುದಯ ಕಾರಣನ ಕಾಣದವನೆಂತು ಕಾಣ್ಬನು ಶಿವನ, ಗುಡಿಯಲ್ಲಿ? ಎಂದು ಜನರ ಮೌಢ್ಯಕ್ಕೆ ಮರುಗಿ ಹಾಡುತ್ತಾನೆ. ಆ ಹಾಡನ್ನು ದೂರದಿಂದ ಕೇಳಿದ ಪಾರ್ವರು ಯಾರೋ ದಿವ್ಯಾತ್ಮನಿರಬೇಕು.ಮಧುರತಮ ಗಾಯನವು ಅಮಲತಮ ಹೃದಯದಿಂದಲ್ಲದೆ ಹೊರಹೊಮ್ಮಲರಿಯದು! ಹಾಡನ್ನು ಹಾಡಿದ್ದು ಯಾರೆಂದು ತಿಳಿಯದೆ ಅದನ್ನು ಗುಡಿಯ ಬಳಿಯಾದರೂ ಹಾಡಬಾರದೇ ಎಂದು ಮಾತನಾಡಿಕೊಳ್ಳುತ್ತಾರೆ. ನಂತರ ಜಲಗಾರನೇ ಹಾಡಿದ್ದು ಎಂದು ತಿಳಿದಾಗ ಅದನ್ನು ಒಪ್ಪಲು ಸಾಧ್ಯವಾಗುತ್ತಿಲ್ಲ. ಆಗ ಅವರ ವರ್ತನೆಯೇ ಬದಲಾಗಿಬಿಡುತ್ತದೆ. ಸಂಗೀತವನಿತೇನು ಮನಮೋಹಿಸುವಂತೆ ಇರಲಿಲ್ಲ. ಗಾನದೇವಿಯು ಹೀನ ಜಲಗಾರನನ್ ಒಲಿಯುವಳೇ? ಎಂದಿಗೂ ಇಲ್ಲ. ಎಂದು ಶ್ರೇಷ್ಠತೆಯನ್ನು ಗುರುತಿಸುವಲ್ಲಿ ಸಫಲರಾದರೂ, ಸಾಮಾಜಿಕ ಕಾರಣದಿಂದ ಅದನ್ನು ಸ್ವೀಕರಿಸುವ ಮನೋಭಾವ ಅವರಿಗಿರುವುದಿಲ್ಲ. ಅವರಿಗೆ. ಅವರ ಪ್ರಕಾರ ಈ ಹಾಡು ಶೂದ್ರನಾದ ಜಲಗಾರನ ಬಾಯಿಂದ ಬರಲು ಸಾಧ್ಯವಿಲ್ಲ. ಯಾಕೆಂದರೆ " ಶೂದ್ರರೋಳ್ ಕವಿವರ್ಯರುದಿಸುವರೇ? ಹುಟ್ಟುವರೇ ಪಂಡಿತರ್? ಜನಿಸುವರೆ ಶಿಲ್ಪಿಗಳ್?" ಎಂದು ಅವರು ಶೂದ್ರರನ್ನು ನೋಡುವ ರೀತಿ, ಪಾರಂಪರಿಕವಾಗಿ ಬಂದ ನಂಬಿಕೆಯನ್ನು ಅವರಿಂದ ಅಲ್ಲಗಳೆಯಲು ಸಾಧ್ಯವಿಲ್ಲ. ಹೀಗೆ ನಾಟಕದಲ್ಲಿ ಬರುವ ಒಂದೊಂದು ಪಾತ್ರದ ಮೂಲಕ ಸಾಮಾಜಿಕ ಸಮಸ್ಯೆಯನ್ನು, ಸಮಾಜದಲ್ಲಿರುವ ಅರಿವಿನ ಕೊರತೆಯ ಜೊತೆಗೆ ಅಮಾನವೀಯತೆಯನ್ನು ಎತ್ತಿ ಹಿಡಿದಿದ್ದಾರೆ ಕುವೆಂಪುರವರು.

ಈ ನಾಟಕದಲ್ಲಿ ಬರುವ ಇಬ್ಬರು ವಿದ್ಯಾವಂತ ತರುಣರು ತಮ್ಮನ್ನು ಮೊದಲು ಶೋಧಿಸಿಕೊಂಡು ಭೇದ ಭಾವನೆಗಳಿಗೆ ಬೆಂಕಿ ಹೊತ್ತಿಸಿ ಸಮಾನತೆಯನ್ನು

ಸಾಧಿಸಿಕೊಳ್ಳಬೇಕಾದರೆ ವೈಚಾರಿಕತೆ ಅಗತ್ಯವೆಂಬುದು ಸ್ಪಷ್ಟವಾಗುತ್ತದೆ. ಪ್ರವೇಶ ನಾಟಕದ ಮುಖ್ಯ ಕ್ರಿಯೆಗೆ ಪೂರಕವಾಗಿ ಬಂದಿದೆ. ಶ್ರೇಣೀಕೃತ ಸಮಾಜದಲ್ಲಿನ ಸಮಸ್ಯೆಗಳ ಬಗ್ಗೆ ತಾರುಣ್ಯಕ್ಕೆ ಸಮನಾದ ವ್ಯಾಖ್ಯಾನಗಳು, ಸಂಪ್ರದಾಯದಲ್ಲಿ ಕಂಡು ಬರುವ ಬೂಟಾಟಿಕೆ, ಅರ್ಥಹೀನ ಆಚರಣೆಗಳನ್ನು ಪ್ರಶ್ನಿಸುವ ರೀತಿ "…..ಜಗದೊಡೆಯನ್ನೆಲ್ಲಿಯೂ ಇರುವನೆಂಬರು ಒಮ್ಮೆ! ಗುಡಿಯಲರಸುವರೊಮ್ಮೆ!" ಎಂಬ ಮಾತುಗಳಿಂದ ಗಮನಿಸಬಹುದು. ಹಾಗೆ ಈ ತರುಣರು ಕಣ್ಣಿಲ್ಲದ ತಿರುಕನನ್ನು ಸುಳ್ಳು ಹೇಳಿಕೊಂಡು ಬೇಡುತ್ತಾನೆ ಎಂದು " ಇವನೇನು ಕುರುಡನೆ, ಬಲು ಸೋಮಾರಿ" ಸುಳ್ಳು ಹೇಳಿಕೊಂಡು ಬೇಡುತ್ತಿದ್ದಾನೆ ಎಂದು ಪರೀಕ್ಷಿಸುವ ಕ್ರಮ ಒಂದು ರೀತಿ ಜೀವನದ ಪ್ರತಿಬಿಂಬದಂತೆ ಮೂಡಿಬಂದಿದೆ. ಇಲ್ಲಿ ಪ್ರಾಯದ ಹುಚ್ಚುಹೊಳೆ ಹೇಗಿರುತ್ತದೆ ಎಂಬುದನ್ನು ತರುಣಜೀವನಕ್ಕೆ ಹೊಂದಿಕೊಂಡಂತೆ ರಚಿಸಿರುವ ಕುವೆಂಪುರವರ ಕೈಚಳಕ ಎದ್ದುಕಾಣುತ್ತದೆ.

ಜಲಗಾರ ತರುಣರನ್ನು ಕಂಡಿಸುತ್ತಾ ತಿರುಕನ ಸಹಾಯಕ್ಕೆ ಬರುತ್ತಾನೆ." ಶತ್ರುಗಳ ಕಾಟವಾದರೂ ಬೇಕು; ನಮಗಾಗಿ ಮಿತ್ರರೆಂಬುವ ನೆಪದಿ ಮರುಕ ತೋರುವ ಜನರ ಕೃತ್ರಿಮದ ಕಾಟ ಬೇಡ!….." ಎಂದು ಹೇಳಿ ಬಡವರನ್ನು ಅರ್ಥಮಾಡಿಕೊಳ್ಳುವುದು ಬಡವನೇ ಹೊರತು, ಶ್ರೀಮಂತನಲ್ಲ ಎಂಬುದನ್ನು ಜಲಗಾರ ಮನಗಾಣುತ್ತಾನೆ. "ಲೋಕದಲಿ ಕಂಬನಿಯನೊಂದನೊರೆಸಿದ ನರನೇ ಧನ್ಯ! ಎಂದು ಜಲಗಾರ ತನ್ನಲ್ಲಿದ್ದ ಅನ್ನವನ್ನು ಆ ತಿರುಕನೊಂದಿಗೆ ಹಂಚಿಕೊಳ್ಳುತ್ತಾನೆ. ಜೇಬಿನಲ್ಲಿ ಕಾಸಿದ್ದು ಕೊಡದೆ ತೆರಳಿದ ತರುಣನೋರ್ವನ ವರ್ತನೆಯನ್ನು ಖಂಡಿಸುವಂತಿದೆ.

ಜಲಗಾರ ಸಾಯಂಕಾಲ ಜಾತ್ರೆಯಿಂದ ಮರಳಿ ಬಂದವರನ್ನು 'ಗುಡಿಯಿಂದ ಏನನ್ನು ತಂದಿರಿ?' ಎಂದು ವೈಚಾರಿಕವಾಗಿ ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರ ದೊರೆಯುವುದಿಲ್ಲ. ಅಲ್ಲಿ ನಡೆಯುವ ಜಾತ್ರೆಯಲ್ಲಿ ಶಿವಗುಡಿ, ಚೆಂದದ ವಿಗ್ರಹ, ಜೋಯಿಸರ ಜರತಾರಿ ಪಂಚೆ ಇವುಗಳನ್ನು ನೋಡಿ ಅಚ್ಚರಿಪಟ್ಟು ಹಿಂದಿರುಗಿದ ರೈತ. ಜೋಯಿಸರು ದೇವರ ಹೆಸರಿನಲ್ಲಿ ಮೂಢ ಜನರನ್ನು ಸುಲಿಗೆಮಾಡಿ ಹೊಟ್ಟೆಗೆ–ಬಟ್ಟೆಗೆ ದಾರಿಮಾಡಿಕೊಂಡದ್ದು.. ಆದರೆ ಜಾತ್ರೆಯೊಂದು ತಿರುಕನಿಗೆ ಹೊಟ್ಟೆ ಹೊರೆಯುವ ಸಾಧನ. ಇದನ್ನೆಲ್ಲ ನೋಡಿ ಟೀಕಿಸುತ್ತಾ ತಮ್ಮ ಜಾಣ್ಮೆಯ ಚರ್ಚೆಗೆ ತಾವೇ ಮೆಚ್ಚುತ್ತಾ ಮಾತಿನ ಮಲ್ಲರಾದ ಆಧನಿಕ ತರುಣರು ಇವರೆಲ್ಲರ ಪಾಲಿಗೆ ಒಂದೊಂದು ತರದಲ್ಲಿ ಅನುಕೂಲಕರವಾದ ಶಿವಗುಡಿಯ ಜಾತ್ರೆ "ಮನೆಯಲ್ಲಿ ಕಾಳಿಲ್ಲ, ಕೂಳಿಲ್ಲ" ಎಂದು ಹಾಡಿಕೊಂಡು ಬರುವ ಹುಡುಗಿಯ ಪಾಲಿಗೆ ಏನೂ ಅಲ್ಲ. ಕಂಡ ಕಂಡ ಕಲ್ಲಿಗೆ ಕೈಮುಗಿದರು

ಅವಳ ಮನೆಯ ತಾಪತ್ರಯ ನೀಗಲಿಲ್ಲ. ಹಾಗಾಗಿ ಜಾತ್ರೆಗೆ ಹೋದಳು. ಹರಕೆ ಹೊತ್ತು ಕಾಣಿಕೆ ತೆತ್ತಳು. ಹೀಗೆ ಸಮಾಜದಲ್ಲಿನ ಬದುಕಿನ ಚಿತ್ರಣ ತೆರೆದುಕೊಳ್ಳುತ್ತದೆ.

ಸಾಮಾಜಿಕ ಸಮಸ್ಯೆಯಾದ ಜಾತಿಪದ್ಧತಿಯಿಂದ ದೇಶದ ಬಹುಪಾಲು ಸಮಸ್ಯೆಗಳು ಉದ್ಭವಿಸುತ್ತವೆ. ಅದನ್ನು ಮನಗಂಡ ಎಷ್ಟೋ ಸಮಾಜ ಸುದಾರಕರು ಅರಿವು ಮೂಡಿಸಲು ಪ್ರಯತ್ನಪಟ್ಟಿದ್ದಾರೆ. ಅದೇ ರೀತಿ ಕುವೆಂಪುರವರು ಸಾಮಾಜಿಕ ಅಸಮಾನತೆಯ ವಿರುದ್ಧ ತಮ್ಮ ಜಲಗಾರ ನಾಟಕದಲ್ಲಿ ವೈಚಾರಿಕತೆಯ ಮೂಲಕ ಸಾಮಾಜಿಕ ಅರಿವು ಮೂಡಿಸಲು ಪ್ರಯತ್ನಿಸಿದ್ದಾರೆ. ಹಾಗೆ ಆರೋಗ್ಯಪೂರ್ಣ ಚರ್ಚೆಯನ್ನು ನಡೆಸುವುದರ ಮೂಲಕ ಶೋಷಿತ ಜನರ ಧ್ವನಿಯಾಗಿದ್ದಾರೆ. ಏಕಮುಖ ವಸ್ತುವಿಗೆ ಸೀಮಿತಗೊಳ್ಳದೆ ಪೌರಾಣಿಕತೆಯಿಂದ ಮೊದಲ್ಗೊಂಡು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯನ್ನು ಚಿಂತನೆಗೊಳಗುಮಾಡಿದ್ದಾರೆ. ಈ ನಾಟಕದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಲಕ್ಷಣಗಳು ಮೇಳೈಸಿರುವುದು ಕಂಡು ಬರುತ್ತದೆ. ಮುಖ್ಯವಾಗಿ ಮಾನವೀಯ ಮೌಲ್ಯಗಳ ಪ್ರತಿಪಾಧನೆಯನ್ನು ಚರ್ಚೆಗೆ ಒಳಪಡಿಸಲಾಗಿದೆ.

ಹೀಗೆ ಕುವೆಂಪುರವರು ತಮ್ಮ ಜಲಗಾರ ನಾಟಕದಲ್ಲಿ ಮಾನವೀಯ ಮೌಲ್ಯಗಳನ್ನು ಕುರಿತು ವಿವರಿಸಿದ್ದಾರೆ. ಸಮಾಜದ ಅದೋಗತಿಗೆ ಕಾರಣವಾಗಿರುವ ಮೂಢ ಸಂಪ್ರದಾಯ ಆಚರಣೆಗಳನ್ನು ಖಂಡಿಸಬೇಕೆಂದು, ಪ್ರತಿಯೊಬ್ಬ ವ್ಯಕ್ತಿಯೂ ಮಾನವತಾವಾದಿಗಳಾಗಬೇಕೆಂದು ಬಯಸುತ್ತಾರೆ. ಈ ಹಿನ್ನೆಲೆಯಲ್ಲಿ ಕುವೆಂಪುರವರ ಸಾಹಿತ್ಯಕೃಷಿಯೂ ಶ್ಲಾಘನೀಯ. ಸಾಮಾಜಿಕ ಸಮಸ್ಯೆಗಳನ್ನು ತೋಲಗಿಸುವ ನೆಪದಲ್ಲಿ ಮೂಲ ಮೌಲ್ಯಗಳನ್ನೆ ನಿರಾಕರಿಸುವಂತಾಗಬಾರದು. ಮೌಲ್ಯಗಳ ಸುತ್ತ ಇರುವ ಕೊಳೆಯನ್ನು ತೆಗೆದು ಅದು ಬೆಳಗುವಂತೆ ಮಾಡಬೇಕು. ಕುವೆಂಪು ಎಲ್ಲಿಯೂ ದೇವರು, ಧರ್ಮವನ್ನು ತಿರಸ್ಕರಿಸಿಲ್ಲ. ಅದರಲ್ಲಿರುವ ಮೌಢ್ಯಾಚರಣೆ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಧರ್ಮದ ಇನ್ನೊಂದು ಮುಖವಾದ ಆಧ್ಯಾತ್ಮಿಕತೆಯ ವಿಚಾರದಲ್ಲಿ ವೈಚಾರಿಕ ನಿಲುವು ಎದ್ದು ಕಾಣತ್ತದೆ. ಮೌಢ್ಯ ವಿರೋಧಿ ನೆಲೆಗಟ್ಟಿನಲ್ಲಿ ವಿಜ್ಞಾನ ಮತ್ತು ಸಮಾಜವನ್ನು ಸಜ್ಜುಗೊಳಿಸಿ ಮಾನವತಾವಾದದ ಸಂದೇಶವನ್ನು ನೀಡಿದ ಕುವೆಂಪು ಅವರು ಒಂದು ವಿವೇಚನಾತ್ಮಕ ಚಿಂತನೆಯನ್ನು ಕಟ್ಟಿಕೊಟ್ಟಿದ್ದಾರೆ ಎನ್ನಬಹುದು.

ಪರಾಮರ್ಶನ ಗ್ರಂಥಗಳು:

1. ಜಲಗಾರ, ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು–1989
2. ನರಹಳ್ಳಿ ಬಾಲಸುಬ್ರಹ್ಮಣ್ಯ–ಕುವೆಂಪು ನಾಟಕಗಳ ಅಧ್ಯಯನ–ಅಂಕಿತ ಪ್ರಕಾಶನ, ಬೆಂಗಳೂರು 2002
3. ಆಧುನಿಕ ಕನ್ನಡ ನಾಟಕ., ಕೆ. ಮರುಳಸಿದ್ಧಪ್ಪ
4. ಉದಯರವಿ ಪ್ರಕಾಶನ, ಮೈಸೂರು, ಇವರು ಪ್ರಕಟಿಸಿದ ಕುವೆಂಪು ನಾಟಕಗಳು.
5. ಕುವೆಂಪು ಸಾಹಿತ್ಯ ಸಮೀಕ್ಷೆ, ವಸಂತ ಪ್ರಕಾಶನ, ಬೆಂಗಳೂರು.
6. ಕುವೆಂಪು(1987) ವಿಭೂತಿ ಪೂಜೆ. ಉದಯರವಿ ಪ್ರಕಾಶನ ಮೈಸೂರು.
7. ಕುವೆಂಪು ಅವರ ವೈಚಾರಿಕತೆ, ಡಾ. ಹೆಚ್.ತಿಪ್ಪೇರುದ್ರಸ್ವಾಮಿ, ಕನ್ನಡ ಅಧ್ಯಾಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1993.

***

ಮಹಿಳಾ ಸಬಲೀಕರಣದಲ್ಲಿ ಕರ್ನಾಟಕ ಶಕ್ತಿ ಯೋಜನೆಯ ಪಾತ್ರ

1 ಡಾ. ಮಂಜುನಾಥ

ರಾಜೀವ್ ಗಾಂಧಿ ಪಂಚಾಯತ್ ರಾಜ್ ಫೆಲೋ

ಚಿಟಗುಪ್ಪಾ ತಾಲೂಕು, ಬೀದರ ಜಿಲ್ಲೆ – 585 412.

kannadamanju1996@gmail.com

'ಮಹಿಳಾ ಸಬಲೀಕರಣ ಮತ್ತು ಮಹಿಳಾ ಸಹಭಾಗಿತ್ವ' ಎಂಬ ಕೂಗು ಮತ್ತು ಅದರ ಜೊತೆ–ಜೊತೆಗೆ ವ್ಯಂಗ್ಯದ ಮಾತುಗಳು ಆಗಾಗ ನಡೆಯುವ ಹಲವು ಸಮಾರಂಭಗಳಲ್ಲಿ ಮತ್ತು ಗೋಷ್ಠಿಗಳಲ್ಲಿ ಕೇಳಿ ಬರುತ್ತವೆ. ಅಂತಹ ಕೆಲವು ಗೋಷ್ಠಿ ಮತ್ತು ಚರ್ಚೆಗಳು ಕೇವಲ ಹೇಳುವುದು ಮತ್ತು ಕೇಳುವುದು ಎಂಬ ತತ್ವವನ್ನು ಆಧರಿಸಿದರೆ, ಇನ್ನೂ ಕೆಲವುಗಳು ಆ ಮೌಲ್ಯಗಳನ್ನು ಆಚರಣೆಗೆ ತರುತ್ತವೆ. ಆಗ ಅವುಗಳು ಹೊಸ ರೀತಿಯ ವ್ಯಾಖ್ಯಾನಗಳಿಗೆ ದಾರಿಮಾಡಿಕೊಡುತ್ತವೆ ಮತ್ತು ಇದುವರೆಗೆ ಇದ್ದ ವ್ಯಾಖ್ಯಾನಗಳ ಆಯಾಮಗಳನ್ನು ವಿಸ್ತರಿಸುತ್ತವೆ. 'ಮಹಿಳಾ ಸಬಲೀಕರಣ' ಎಂಬ ಆಶಯದಲ್ಲಿಯೂ ಕೂಡ ಈ ವಿಸ್ತರಣೆ ಆಗಿದೆ. ಇವತ್ತಿನ ಮಹಿಳೆಯರ ಸಬಲೀಕರಣವನ್ನು ಅಳೆಯಲು 'ಭೌತಿಕ, ಮಾನಸಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಆಯಾಮ'ಗಳಂತಹ ಮಾನದಂಡಗಳನ್ನು ಬಳಸಲಾಗುತ್ತದೆ. ಈ 'ಸಬಲೀಕರಣ' ಎಂಬುದು 'ಕೇಂದ್ರ, ಮಧ್ಯ ಮತ್ತು ಅಂಚು' ಎಂಬ ಮೂರು ಸ್ತರದಲ್ಲಿ ನಿಂತಿರುತ್ತದೆ. ಇಲ್ಲಿನ ಚಲನೆ ಅತ್ಯಂತ ಜಡ ಅಥವಾ ನಿಧಾನಗತಿಯದ್ದು. ಆದರೆ ಜಡ ಸ್ವರೂಪ ತಳೆದು ನಿಂತ ಇಂತಹ ಚಲನೆಗೆ ಚಾಲನೆಯನ್ನು ನೀಡಲು ಪ್ರಜಾಪ್ರಭುತ್ವದ ಆಶಯವನ್ನು ಒಳಗೊಂಡ ರಾಜ್ಯ ಸರ್ಕಾರಗಳು ಕೆಲವು ಸಲ ಕ್ರಿಯಾಶೀಲವಾಗುತ್ತವೆ. ಈ ಕ್ರಿಯಾಶೀಲತೆಯಲ್ಲಿಯೇ 'ಕರ್ನಾಟಕ ಶಕ್ತಿ ಯೋಜನೆ' ಉದಯಿಸಿತು. ಈ ಯೋಜನೆಯ ಅನುಷ್ಠಾನದ ನಂತರ ಮಹಿಳೆಯರ ಈ

ಪುಕ್ಕಟ್ಟೆ ಓಡಾಟದಿಂದ ಅವರ ಸಬಲೀಕರಣ ಹೇಗೆ? ಸಾಧ್ಯ ಎಂಬ ಪ್ರಶ್ನೆ ಮುನ್ನೆಲೆಗೆ ಬಂತು. ಈ ಪ್ರಶ್ನೆಯ ಆಳವನ್ನು ಶೋಧಿಸುವುದು ಮತ್ತು ಅದರ ಹಿಂದಿನ ಮಹತ್ವವನ್ನು ತಿಳಿಸುವುದು ಈ ಬರೆಹಕ್ಕಿರುವ ಜರೂರು. ಒಟ್ಟಾರೆಯಾಗಿ ಈ ಯೋಜನೆ 'ಮಹಿಳೆಯರ ಜೀವನ, ಆಲೋಚನೆ ಮತ್ತು ಆಚರಣೆಯಲ್ಲಿ ತಂದ ಬದಲಾವಣೆ'ಯನ್ನು ಕೆಲವು ಪ್ರಕರಣಗಳ ಅಧ್ಯಯನದ ಮೂಲಕ ತಿಳಿಸಿಕೊಡಲು ಪ್ರಯತ್ನಿಸಲಾಗಿದೆ. ಇದರ ಸ್ಥೂಲ ವಿವರಣೆಗಾಗಿ ಪೀಠಿಕೆ, ಉದ್ದೇಶಗಳು, ವ್ಯಾಪ್ತಿ, ವೈಧಾನಿಕತೆ, ಕಾರಣಗಳು, ಫಲಿತಗಳು, ಸಲಹೆಗಳು, ಕಡೆನುಡಿ, ತಿಳುವಳಿಕೆದಾರರ ಪಟ್ಟಿ, ಪರಾಮರ್ಶನ ಸಾಹಿತ್ಯ ಮೊದಲಾದ ಅಂಶಗಳ ಮೂಲಕ ಲೇಖನದ ಒಟ್ಟು ಸಾರವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಉದ್ದೇಶಗಳು

ಪ್ರತಿ ಬರೆಹವು ತನ್ನದೆಯಾದ ಉದ್ದೇಶಗಳನ್ನು ಬೆನ್ನಿಗೇರಿಸಿಕೊಂಡಿರುತ್ತದೆ. ಅದರಂತೆ ಪ್ರಸ್ತುತ ಲೇಖನವು ತನ್ನದೆಯಾದ ಉದ್ದೇಶಗಳನ್ನು ಹಾಕಿಕೊಂಡು ತನ್ನ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತದೆ. ಅವು,

1. ಕರ್ನಾಟಕ ಶಕ್ತಿ ಯೋಜನೆಯ ಆಶಯವನ್ನು ತಿಳಿಯುವುದು.
2. ಕರ್ನಾಟಕ ಶಕ್ತಿ ಯೋಜನೆಯಿಂದ ಮಹಿಳಾ ಸಮೂಹದಲ್ಲಿ ಆದ ಬದಲಾವಣೆಯನ್ನು ಶೋಧಿಸುವುದು.
3. ಎಲೆಮರೆಯ ಕಾಯಿಯಂತೆ ದುಡಿದು ಬದುಕುವ ಮಹಿಳೆಯರಿಗೆ ಈ ಯೋಜನೆಯಿಂದಾದ ಅನುಕೂಲತೆಯನ್ನು ತಿಳಿಯುವುದು.

ವ್ಯಾಪ್ತಿ

ಪ್ರಸ್ತುತ ಲೇಖನವು 'ಮಹಿಳಾ ಸಬಲೀಕರಣದಲ್ಲಿ ಕರ್ನಾಟಕದ ಶಕ್ತಿಯೋಜನೆಯ ಪಾತ್ರ' ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಇದು ತನ್ನದೇ ಆದ ವ್ಯಾಪ್ತಿಯನ್ನು ಕೂಡ ಹೊಂದಿದೆ. ಮಹಿಳಾ ಸಬಲೀಕರಣದ ಒಟ್ಟು ಆಯಾಮಗಳನ್ನು ನೋಡದೆ ಕೇವಲ ಆರೋಗ್ಯಿಕ ಮತ್ತು ಮಾನಸಿಕ ಎರಡು ಆಯಾಮಗಳನ್ನು ಮಾತ್ರ ಗಮನಹರಿಸಲಾಗಿದೆ. ಹಾಗೆಯೇ ಭೌಗೋಳಿಕ ವ್ಯಾಪ್ತಿಗೆ ಸಂಬಂಧಿಸಿದಂತೆ ಕರ್ನಾಟಕದ ವಿಜಯನಗರ ಜಿಲ್ಲೆಯ ವಿದ್ಯಾರಣ್ಯ ಪ್ರದೇಶದಲ್ಲಿರುವ ಕನ್ನಡ ವಿಶ್ವವಿದ್ಯಾಲಯ ಹಂಪಿಯನ್ನು ಮೇರೆಯಾಗಿ ಗುರುತಿಸಿಕೊಂಡು ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಒಬ್ಬಳು ಅಡುಗೆ ಸಹಾಯಕಿ ಮತ್ತು ಕಸಹೊಡೆಯುವ ಕಾಯಕ ಮಾಡುವ ಮಹಿಳೆಯರ ಯಶೋಗಾಥೆಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕಾರಣ ಇವುಗಳೇ ಈ ಲೇಖನದ ವ್ಯಾಪ್ತಿಯಾಗಿರುತ್ತವೆ.

ವೈಧಾನಿಕತೆ

ಪ್ರಸಕ್ತ ಲೇಖನದ ತಾತ್ವಿಕತೆಯನ್ನು ಕಟ್ಟಿಕೊಡಲು ಅನುವಾಗುವಂತಹ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು 'ಏಕವಿಷಯಕ ಅಧ್ಯಯನ ವಿಧಾನ'ವನ್ನು ಬಳಸಿಕೊಳ್ಳಲಾಗಿದೆ. ಆನುಷಂಗಿಕ ಮಾಹಿತಿಯನ್ನು ಪಡೆಯಲು ಲೇಖನಗಳು, ಪುಸ್ತಕಗಳು ಹಾಗೂ ಪತ್ರಿಕಾ ಬರೆಹಗಳನ್ನು ಪರಾಮರ್ಶಿಸಿ 'ವಿವರಣಾತ್ಮಕ ವಿಧಾನ'ದ ಮೂಲಕ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಕರ್ನಾಟಕ ಶಕ್ತಿ ಯೋಜನೆಯ ಪರಿಚಯ

ಕರ್ನಾಟಕ ಸರ್ಕಾರವು ಕರ್ನಾಟಕದಲ್ಲಿ ಮಹಿಳೆಯರಿಗಾಗಿ ಉಚಿತವಾಗಿ ನೀಡಿದ ಸಾರ್ವಜನಿಕ ಸಾರಿಗೆಯನ್ನು ಒದಗಿಸುವ ಈ ಶಕ್ತಿ ಯೋಜನೆಯನ್ನು ದಿನಾಂಕ 11.6.2023ರಂದು ಪ್ರಾರಂಭಿಸಿತು. ಈ ಯೋಜನೆಯ ಪ್ರಯೋಜನೆಗಳೆಂದರೆ, ಕರ್ನಾಟಕದ ಮಹಿಳೆಯರು ಇಡೀ ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (KSRTC), ಬೆಂಗಳೂರು ಮಹಾನಗರ ರಸ್ತೆ ಸಾರಿಗೆ ನಿಗಮ (BMNTC), ವಾಯುವ್ಯ ಕರ್ನಾಟಕ ಸಾರಿಗೆ ನಿಗಮ (NWKRTC), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (KKRTC) ಈ ಸಂಸ್ಥೆಗಳ (ಹೊರ ರಾಜ್ಯಕ್ಕೆ ಪ್ರಯಾಣಿಸುವ ಬಸ್‌ಗಳನ್ನು ಹೊರತುಪಡಿಸಿ) ಬಸ್‌ಗಳಲ್ಲಿ ಯಾವುದೇ ರೀತಿಯಿಂದ ಹಣ ಪಾವತಿಸದೆ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ. ಮಹಿಳಾ ಸಬಲೀಕರಣಕ್ಕೆ ಕರ್ನಾಟಕ ಶಕ್ತಿ ಯೋಜನೆಯು ಹೇಗೆ ಕೊಡುಗೆ ನೀಡುತ್ತದೆ ಎಂಬುದನ್ನು ತಿಳಿಯಲು ಒಟ್ಟು ಎರಡು ಪ್ರಕರಣಗಳನ್ನು ತೆಗೆದುಕೊಂಡು ಅವರ ಜೀವನದ ಕಥನದ ಮೂಲಕ ಈ ಮುಂದಿನಂತೆ ತಿಳಿಸಲಾಗಿದೆ.

ಪ್ರಕರಣ – 1

'ಶಕ್ತಿ ಯೋಜನೆ'ಯ ಅನುಷ್ಠಾನದಿಂದ ಆಗಿರುವ ಬದಲಾವಣೆಗಳನ್ನು ಮೌಲ್ಯಮಾಪನ ಮಾಡಲು ದಿನಾಂಕ 13.10.2023ರಂದು ಕನ್ನಡ ವಿಶ್ವವಿದ್ಯಾಲಯದಲ್ಲಿರುವ ಅನಿಕೇತನ ಪುರುಷರ ವಸತಿ ನಿಲಯದಲ್ಲಿ ಅಡುಗೆ ಕೆಲಸ ಮಾಡುತ್ತಿರುವ ಶ್ರೀಮತಿ ಗೌರಮ್ಮ (ಮಂಗಳ ಗೌರಿ) ಅವರನ್ನು ಸಂದರ್ಶಿಸಲಾಯಿತು. ಆ ಸಂದರ್ಶನದ ಸಾರವನ್ನು ಅವರ ಮಾತುಗಳಲ್ಲಿಯೇ ಈ ಕೆಳಗಿನಂತೆ ದಾಖಲಿಸಲಾಗಿದೆ.

ಹೆಸರು ಗೌರಮ್ಮ (ಮಂಗಳ ಗೌರಿ), ಗಂಡನ ಹೆಸರು ಉಮೇಶ್. ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇದ್ದಾನೆ. ಹಿರಿಯ ಮಗಳು ಶ್ರೀದೇವಿ (ವಯಸ್ಸು 22) ಮದುವೆಯಾಗಿದೆ. ಎರಡನೇ ಮಗಳು ಪ್ರಿಯಾಂಕ (ವಯಸ್ಸು 19) ಇವರಿಗೂ ಕೂಡ ಮದುವೆಯಾಗಿದೆ. ಮಗ ಷಣ್ಮುಖ (ವಯಸ್ಸು 18) ಬಿ.ಎಸ್.ಸಿ ಓದುತ್ತಿದ್ದಾನೆ. 'ನನ್ನನ್ನು

ಗದುಗಿನ ಹತ್ತಿರವಿರುವ ಕನ್ಯಾಳ (ಕನಗಿನಹಾಳ) ಊರಿಗೆ ಮದ್ವಿ ಮಾಡಿ ಕೊಟ್ಟಿದ್ರು. ನನ್ನ ಗಂಡ ಕುಡಿಯೋದು, ಬಡಿಯೋದು ಮಾಡುತ್ತಿದ್ದ. ಸರಿಯಾಗಿ ನಮ್ಮನ್ನ ನೋಡಿಕೊಳ್ಳುತ್ತಿರಲಿಲ್ಲ ಅದಕ್ಕಾಗಿ ನನ್ನ ಮಗ ಹುಟ್ಟಿದ ಮ್ಯಾಲ ನಾನು ಮತ್ತೆ ನನ್ನ ಗಂಡನ ಮನೆಗೆ ಹೋಗಲಿಲ್ಲ. ಇಲ್ಲೇ ತವರು ಮನಿಯ್ಯಾಗ ಉಳಕಂಡ್ಯಾ. ಕಮಲಾಪುರದ ಬಂಡೆಕೆರೆಯಲ್ಲಿಯೇ 15 ವರ್ಷ ಮ್ಯಾಲಾತು ಇಲ್ಲೇ ಇದೀನಿ. ಮೊದ್ಲು ಏಳು ವರ್ಷ ಕಮಲಾಪುರದ ಸಿನಿಮಾ ಟಾಕೀಸ್ ಹಿಂದೆ ಇರುವ ಗಾರ್ಮೆಂಟ್ಸ್‌ನಲ್ಲಿ ಇಂಗ್ಲಿಷಿನ್ಯಾರು ತೊಡೋ ಬಟ್ಟಿ ಒಲಿಯೋ ಕೆಲಸ ಮಾಡುತ್ತಿದ್ದೆ. ಒಂದು ಪೀಸ್ ಒಲಿದ್ರೆ ಇಷ್ಟು ರೂಪಾಯಿ ಅಂತ ಕೊಡ್ತಿದ್ರು, ಹೆಂಗೋ ಕಷ್ಟಪಟ್ಟು ಒಂದು ತಿಂಗಳಿಗೆ ನಾಲ್ಕರಿಂದ ಆರು ಸಾವಿರ ರೂಪಾಯಿ ದುಡಿತ್ತಿದ್ದೆ. ಆಮೇಲೆ ಹಾಸ್ಟೆಲ್ (ಅನಿಕೇತನ ಪುರುಷರ ವಸತಿ ನಿಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ)ನ್ಯಾಗ ಅಡುಗೆ ಮಾಡಾಕ ಹೊಂಟ್ಯ.

ನಾನು ಮೊದ್ಲು ಇಲ್ಲಿ ಕೆಲಸ ಮಾಡಾಕ ತಿಂಗಳಿಗೆ 8,000 ಕೊಡುತ್ತಿದ್ರು. ಈಗ ಮೂರು ತಿಂಗಳದ ಹಿಂದೆ ಹತ್ತು ವರೆ ಸಾವಿರ (10,500) ಕೊಟ್ಟರು. ಈಗ ನಾಲ್ಕು ತಿಂಗಳ 13,000 ಕೊಡುತ್ತಾರೆ. ಆದ್ರ ಸಂಬಳ ಮಾತ್ರ ಮೂರು ತಿಂಗಳು ನಾಲ್ಕು ತಿಂಗಳಿಗೊಮ್ಮೆ ಕೊಡ್ತಾರೆ. ಮೊದ್ಲು ಬರೋ 8,000 ರೊಕ್ಕದಾಗ ಸ್ವಲ್ಪ–ಸ್ವಲ್ಪ ಕೂಡಿಸಿ ಇಟ್ಟು ಎರಡು–ಮೂರು ಸಂಘದಾಗ ಸಾಲ ಮಾಡಿ ಇಬ್ಬರು ಹೆಣ್ಣು ಮಕ್ಕಳನ್ನು ಮದುವೆ ಮಾಡೀನಿ. ಆಗ ಆ ಸಾಲ ಕಟ್ಟೋದು ದೊಡ್ಡ ಕೆಲಸ ಆಗೈತಿ. ಅದರಾಗ ಬ್ಯಾರೆ ಹಿರೇಮಗಳು ಹೊಟ್ಟೆಲದಾಳ. ಮನಿ ನೋಡಿದ್ರ ಸಣ್ಣ ಮನೆ ಐತಿ. ಆಕಿ ಹೆರಿಗೆಗೆ ಬಂದ್ರ ಹೆಂಗ ಅನ್ನೋ ಚಿಂತೆ ಕಾಡಕತ್ತೈತಿ. ಮಗನಿಗೆ ಬ್ಯಾರೆ ಸಾಲ ಮಾಡಿ ಒಂದು ನಾಲ್ಕು ತಿಂಗಳದ ಹಿಂದ ಸನೇಕ 30,000 ದುಡ್ಡು ಸಾಲಿಗೆ ಕಟ್ಟಿನಿ. ಇನ್ನೂ ಬಟ್ಟಿ, ಬರಿ, ಬಸ್‌ಪಾಸ್, ಬುಕ್ಕಾ ಅದರದ್ದು ಬ್ಯಾರೇ ರೊಕ್ಕ. ಏನು ಮಾಡಬೇಕು ಅಂತ ಗೊತ್ತಾಗ್ತಿಲ್ಲ.'

ನೀವು ದುಡಿಯಲು ಹೋಗುವ ಹಾಸ್ಟೆಲ್ ನಿಮ್ಮ ಮನೆಯಿಂದ ಎಷ್ಟು ದೂರ ಇದೆ ಎಂದು ಗೌರಮ್ಮನವರನ್ನು ಕೇಳಿದರೆ ಅವರು 'ನೋಡಪ್ಪ ನಮ್ಮ ಮನೆಯಿಂದ ಹಾಸ್ಟೆಲ್‌ಗೆ ಒಂದಾರು ಕಿಲೋಮೀಟರ್ ಇರಬಹುದು. ದಿನಾಲೂ ಬೆಳಗಾಮುಂಜಾಲೆ ನಾನು ನಡ್ಕೊಂಡು ಹೋಗ್ತಿದ್ಯಾ, ಮತ್ತ ಸಂಜಿ ಮುಂದ ಅಲ್ಲಿಂದ ನಡ್ಕೊಂಡ್ ಬರೋದ್ರಾಗ ರಾತ್ರಿ ಆಗುತ್ತಿತ್ತು. ಮೊದಲು ಒಂದೆರಡು ವರ್ಷ ಬಸ್ಸಿಗೆ ಹೋಗ್ತಿದ್ದೆ. ಒಮ್ಮೈ ಚಾರ್ಜು 10 ರೂಪಾಯಿ. ದಿನಕ್ಕ 20 ರೂಪಾಯಿ ಅದಕ ಕಳದ್ರ ಹೆಂಗ ಅಂತ ಚಿಂತಿ ಮಾಡಿ ನಡ್ಕೊಂಡು ಹೋಗಕತ್ತಿದ್ಯ.'

ಕೇವಲ ರೂ.20ಗೆ 12 ಕಿಲೋಮೀಟರ್ ನಡಿಯೋದಾ? ಅಂತ ಗೌರಮ್ಮನವರನ್ನು

ಪ್ರಶ್ನಿಸಿದರೆ ಅವರಿಂದ ಬಂದ ಉತ್ತರ ಯಾರ ಮನಸ್ಸನ್ನಾದರೂ ಕದಡುವಂತದ್ದು. ಅದು ಹೀಗಿದೆ 'ನೋಡ್ರಪ್ಪ ನಿಮಗ 20 ರೂಪಾಯಿ ಕಮ್ಮಿ ಅಂತ ತಿಳ್ಕೋತೀರಿ, ಆದ್ರ ನನಗ ಆ 20 ರೂಪಾಯಿನೂ ಬಾಳ ದೊಡ್ಡದು. ದುಡೆ ಮನುಷ್ಯರಿಗೆ ಅದರ ಬೆಲೆ ಏನಂತ ಗೊತ್ತಾಗುತ್ತ. ನಮ್ಮ ಕಷ್ಟ ನಿಮಗ ತಿಳಿಯುವಂಗಿಲ್ಲ. ಅಳಾ ಮಕ್ಕಳ ಕೈಯಾಗ ಒಂದು ರುಪಾಯಿ ರೊಕ್ಕ ಕೊಡಾಕು ಆಗಲ್ಲ' ಅಂತ ಕಣ್ಣೀರು ತೆಗೆದರು.

ಸಮಾಧಾನಪಡಿಸಿ ಸ್ವಲ್ಪ ಸಮಯದ ನಂತರ ಈಗ ಸರಕಾರದವರು ಫ್ರೀ ಬಸ್ ಮಾಡಿದ್ದಾರೆ ಅದರಲ್ಲೆ ಬರುತ್ತಿದ್ದೀರಾ? ಎಂದು ಕೇಳಿದರೆ, ಗೌರಮ್ಮನವರು ನೋವಿನಿಂದ ತುಂಬಿದ ಕಣ್ಣುಗಳು ಮತ್ತು ಮುಖವನ್ನು ನಗುವಿನಿಂದ ಅರಳಿಸುತ್ತಲೆ 'ಹೂಂನಪ್ಪ ಬಸ್ ಫ್ರೀ ಆದಾಗಿಂದ ಆಧಾರ್ ಕಾರ್ಡ್ ತಗೊಂಡು ಅದರಾಗ ಬರ್ತಿದ್ದೀನಿ. ಯಾರಿಗೆ ಏನಾಗುತ್ತೋ ನಂಗೊತ್ತಿಲ್ಲ, ಆದ್ರ ನನಗ ಬಹಳ ಒಳ್ಳೆದಾಗೇತಿ ನೋಡಪ್ಪ' ಎನ್ನುವರು.

ಬಸ್ ಫ್ರೀ ಯಾರು ಮಾಡಿದರು? ಇವರಿಂದ ನಿಮಗೆ ಹೇಗೆ ಒಳ್ಳೆಯದಾಗಿದೆ? ಎಂದು ಗೌರಮ್ಮನವರನ್ನು ಮರು ಪ್ರಶ್ನಿಸಿದರೆ, 'ನೋಡಪ್ಪ ಬಸ್ ಫ್ರೀ ಮಾಡಿದ್ದು ಸಿದ್ದರಾಮಯ್ಯ. ಅದು ಎಲ್ಲಾರಿಗೂ ಗೊತ್ತೈತಿ. ಆತ ಬಸ್ ಫ್ರೀ ಮಾಡಿದ್ದಕ್ಕ ನಾನು ದಿನಾಲು 12 ಕಿಲೋ ಮೀಟರ್ ನಡಿಯೋದು ತಪ್ಪೈತಿ. ಮುಂಜಾಲೆ ಲಗೂನ ಅಯ್ಯಪ್ಪ ಸ್ವಾಮಿ ಗುಡಿ ಮುಂದಕ ಬಂದು ನಿಂತು ಬಿಡ್ತೀನಿ. ಅಲ್ಲಿಗೆ ಏಳು ಗಂಟೆ ಬಸ್ಸು ಬರುತ್ತೈತಿ. ಅಲ್ಲಿಂದ ಬಿಟ್ಟರೆ ಏಳು ಹದಿನೈದು, ಏಳುವರೆಗೆ ಹಾಸ್ಟೆಲ್‌ಗೆ ಬಂದು ಬಿಡ್ತೀನಿ. ಮತ್ತೆ ಸಂಜಿ ಮುಂದ ಐದೂವರೆ ಬಸ್ಸಿಗೆ ಹೋಗಿಬಿಡ್ತೀನಿ ಮನಿ ಸೇರೋದ್ರಾಗ 6ಗಂಟೆ ಆಗಿರತ್ತೈತಿ.

ಇನ್ನೊಂದು ಏನಂದ್ರ ನನ್ನ ಮಕ್ಕಳ ಆರೋಗ್ಯಾನು ಚಲೋ ಆಗೈತಿ.' ಅದೇಗೆ? ಎಂದು ತಕ್ಷಣ ಪ್ರಶ್ನೆ ಕೇಳಿದರೆ, ಫ್ರೀ ಬಸ್ ಬರೋಕಿಂತ ಮುಂಚೆ ರಾತ್ರಿ ಮಲಗೋಕಿಂತ ಮುಂಚೆ ಬ್ಯಾಳಿ ಕುದಿಸಾಕ ಒಲೆಮ್ಯಾಲೆ ಇಟ್ಟು ಮಲಗುತ್ತಿದ್ದೆ. ಮುಂಜಾಲೆ ಮೂರುವರೆಗೆ ಎದ್ದು ಮನೆ ಕೆಲಸ ಮಾಡಿ ಅವರಿಗೆ ಅಡುಗೆ ಮಾಡಿಟ್ಟು ಆರುವರೆ ಅನ್ನೋದ್ರಾಗ ಮನೆ ಬಿಡುತ್ತಿದ್ದೆ. ನನಗೂ ಸರಿಯಾಗಿ ನಿದ್ದಿ ಆಗುತ್ತಿರಲಿಲ್ಲ. ಆದ್ರೂ ಜೀವನ ನೆಡಿಬೇಕಲ್ಲ. ಅದಕ ದೌಡು ಹೇಳುತ್ತಿದ್ದೆ. ಮತ್ತ ಮುಂಜಾಲೆ ಮಾಡಿದ ಅಡಿಗೀನಾ ನನ್ನ ಮಕ್ಕು ಮುಂಜಾಲೆ ಮತ್ತ ಮಧ್ಯಾಹ್ನ ಎರಡು ಹೊತ್ತು ಹಾರಿದ ಕೂಳು ತಿನುತಿದ್ರು. ರಾತ್ರಿ ಕುದಿಸಿದ ಬ್ಯಾಳಿ ಮಧ್ಯಾಹ್ನ ಅನ್ನೋದ್ರಾಗ ಹಳಸಿಬಿಡುತ್ತಿತ್ತು. ಕೆಲವು ಸಲ ಊಟಾನೂ ಬಿಡುತ್ತಿದ್ರು. ಇನ್ನೂ ಕೆಲವು ಸಲ ಹಳಸಿದ್ರೂ ನನ್ನ ಮಕ್ಕು ಅದನ್ನ ಉಂಡು ಕೆಲವು ಸಲ ಹೊಟ್ಟಿ ಹಾಳು ಮಾಡ್ಕೊತಿದ್ರು. ಇದನ್ನು ನೋಡಿದ್ರಾ ನನಗ ಬಾಳ ಸಂಕಟ ಆಗುತ್ತಿತ್ತು ದೇವ್ರು ನಮಗ ಎಷ್ಟು ಕಾಡ್ತಾನ ಅಂತ ಅಳುತ್ತಿದ್ದೆ. ಮತ್ತ ಸಂಜಿ ಮುಂದ ಇಲ್ಲಿಂದ ನಡ್ಕೊಂಡು ಹೋಗಾದ್ರಾಗ

ಆರೂವರೆ ಏಳು ಗಂಟೆ ಆಗೋದು. ಸ್ವಲ್ಪ ಹೊತ್ತು ಸುಧಾರಿಸಿಕೊಳ್ಳಾಕು ಟೈಮ್ ಇರುತ್ತಿರಲಿಲ್ಲ. ಮತ್ತ ಮನೆ ಕೆಲಸ ಮಾಡಿಕೊಂಡು ಅಡುಗೆ ಮಾಡೊದ್ರಾಗ 9:30–10 ಗಂಟೆ ಆಗೋದು. ಕೆಲವು ಸಲ ಮೊದ್ಲ ಹಸ್ಕಂಡಿದ್ದ ಮಕ್ಕಳು ಮಲಗಿರೋರು ಅವರನ್ನ ಎಬ್ಬಿಸಿ ಊಟ ಮಾಡಿಸಬೇಕಿತ್ತು. ಒಮ್ಮೊಮ್ಮೆ ನನಗೂ ಜೀವನ ಸಾಕಾಗಿ ಹೋಗೈತಿ, ಏನ್ ಮಾಡಬೇಕು ಅಂತ ತಿಳಿದೆ ಉಪವಾಸನೆ ಮಲಗಿಬಿಡುತ್ತಿದ್ದೆ. ಹಿಂಗಿದ್ದಾಗ ತಿಂಗಳಿಗೆ ಒಂದೆರಡು ಸಲ ಆಸ್ಪತ್ರೆಗೂ ಹೋಗ್ತಿದ್ದೆ. ಆದ್ರೆ ಈಗ ಹಂಗ ಇಲ್ಲ ಮುಂಜಾಲೆನ ಬ್ಯಾಳಿ ಕುದಿಸಿ ಅಡುಗೆ ಮಾಡಿಟ್ಟು ಬರ್ತೀನಿ. ಮೊದ್ಲು ಮೂರು ಮೂರುವರೆಗೆ ಹೇಳೋಳು ಈಗ ಐದು ವರೆಗೆ(5:30ಕ್ಕೆ) ಹೇಳ್ತಿನಿ. ನನಗೂ ಸ್ವಲ್ಪ ಹೆಚ್ಚು ನಿದ್ದೆ ಮಾಡಾಕ ಟೈಮ್ ಸಿಕ್ಕೈತಿ, ಹಿಂಗಾಗಿ ನನಗೂ ಚೂರು ಆರೋಗ್ಯ ಸರಿಯಾಗೈತಿ.

ಇಷ್ಟಕ್ಕೆಲ್ಲಾ ಈ 'ಶಕ್ತಿ ಯೋಜನೆ'ಯ ಕಾರಣವಾ? ಎಂದು ಅವರನ್ನು ಕೇಳಿದರೆ, 'ಹೌದಪ್ಪ ಸ್ವಲ್ಪ ನೆಮ್ಮದಿಯಿಂದ ಬದುಕ ಕತ್ತಿನಿ ಅಂದ್ರ ಅದಕ್ಕ ಈ ಫ್ರೀ ಬಸ್‌ನೂ ಕಾರಣ ಆಗೈತಿ. ದಿನಕ್ಕ ಏನಿಲ್ಲ ಅಂದ್ರೂ 20 ರೂಪಾಯಿ ಉಳಿತೈತಿ, ಟೈಮು ಕೂಡ ಉಳಿತೈತಿ. ಇದಕ್ಕಿಂತ ಇನ್ನೇನು ಬೇಕು ಜೀವನಕ್ಕ.'

ಗೌರಮ್ಮನವರೇ 20 ರೂಪಾಯಿ ಉಳಿಸಿ ನೀವೇನು ಮಾಡ್ತೀರಾ? ಎಂದು ಕೇಳಿದರೆ, ಸ್ವಲ್ಪ ಅಳುಕಿನ ಮಾತಿನಲ್ಲೇ ಧೈರ್ಯ ತುಂಬಿದಂತೆ 'ಹೆಂಗೂ ನಮಗ ಇರೋಕ ಮನೆ ಇಲ್ಲ. ನನ್ನ ಸಂಬಳದಾಗಾನೂ ಕೂಡಿ ಇಡಾಕ ಆಗತ್ತಿಲ್ಲ. ಇದ 20 ರೂಪಾಯಿ ಒಂದು ಕಡೆ ಕೂಡಿಟ್ರ ತಿಂಗಳಿಗೆ 600 ರೂಪಾಯಿ ಆಗುತ್ತೆ, ಅದಾ ರೊಕ್ಕಾನ ಒಂದು ಸಂಘಾ ಮಾಡಿಕೊಂಡು ತಿಂಗಳಿಗೆ 500 ರೂಪಾಯಿ ಕೂಡಿಡಬೇಕಂತ ಆಲೋಚನೆ ಮಾಡಿ ಈಗ ಎರಡು ತಿಂಗಳ ರೊಕ್ಕ ಕಟ್ಟಿವಿ. ಸ್ವಲ್ಪ ದಿನ ಆದ ಮೇಲೆ ನಾವು ಚೂರು–ಪಾರು ಕೂಡಿಟ್ಟ ರೊಕ್ಕ ಮತ್ತು ಇನ್ನೂ ಬ್ಯಾರೆ ಸಂಘದಾಗಿಂದ ಸಾಲ ತಗೊಂಡು ಅಳ್ಳಿಕೆರೆಯಾಗ ಒಂದು ಜಾಗ ತಗೋಬೇಕು ಅಂತ ಲೆಕ್ಕ ಹಾಕ್ಕೊಂಡಿನಿ. ಇದೊಂದು ಮಾಡಿದ್ರ ಸಾಕು ಅನ್ಸತ್ತೆ. ಮಂದಿ ಎಲ್ಲಾರೂ ಇರೋದು ಒಬ್ಬ ಮಗ ಅದಾನ ನೀನು ಇರೋದ್ರಾಗ ಅವ್ವುಂಗ ಏನಾದ್ರೂ ಮಾಡಿ ಸಾಯಿ. ಇಲ್ಲಂದ್ರ ಅವನ ಕೈಯಾಗ ಬೋಕಿ ಕೊಡಬ್ಯಾಡ ಅಂತ ಹೇಳುತ್ತಾರೆ. ಇದ ನನಗ ಹೆದರಿಕಿ ಆಗಿತ್ತು. ಆದ್ರ ಈ ಹೆದರಿಕೆ ಈಗ ಸ್ವಲ್ಪ ಕಡಿಮಿ ಆಗೈತಿ. ಇದಕ್ಕ ಈ ಫ್ರೀ ಬಸ್ಸು, ಮತ್ತೆ ತಿಂಗಳಿಗೆ 2,000 ಕೊಡ್ತಾರಲ್ಲ ಆದ ಕಾರಣ' ಎಂದು ಗೌರಮ್ಮನವರು ತಿಳಿಸುತ್ತಾರೆ.

ಸರಿ ಎಂದು ಗೌರಮ್ಮನವರಿಗೆ ನಮಸ್ಕರಿಸಿ ಹೇಳುತ್ತಲೇ ಗೌರಮ್ಮನವರು 'ಇನ್ನೊಂದು, ನನ್ನ ಹಿರೇಮಗಳು ಹೊಟ್ಟಿಲ್ಯಾಗ್ಯಾಳ ಆಕೀನ ಹೋಗಿ ಕರ್ಕೊಂಡ್ ಬರಾಕ, ದವಾಖಾನಿಗೆ

ತೋರ್ಸಾಕ ಈ ಫ್ರೀ ಬಸ್ಸು ಅನುಕೂಲ ಆಗೈತಿ. ಮೊನ್ನೆ ಮಂಗಳವಾರ (09.10.2023) ನಾವು ಬೆಂಗಳೂರಿಗೆ ಸ್ಟ್ರೈಕ್ ಮಾಡಾಕ ಅಂತ ನಾನು, ಲಕ್ಷ್ಮಮ್ಮ ಹೋಗಿದ್ವಿ. ಓಗುವಾಗ 300 ರೂಪಾಯಿ ಕೊಟ್ಟು ರೈಲಿನಾಗ ಹೋದ್ವಿ ಆದ್ರೆ ಬರವತ್ನ್ಯಾಗ ಫ್ರೀ ಬಸ್ಸಿನ್ಯಾಗ ಬಂದ್ವಿ. ಬಂದ ಮ್ಯಾಲೆ ನಾನು ಲಕ್ಷ್ಮಮ್ಮ ನಾವು ಹೋಗೋವಾಗ ಫ್ರೀ ಬಸ್ಸಿಗೆ ಹೋಗಿದ್ರ 300 ರೂಪಾಯಿ ಉಳಿತಿತ್ತು ಅಂತ ಮಾತಾಡಿಕೊಂಡ್ವಿ. ನಾವೇನಾದರೂ ಟ್ರೈನಿಗೆ ಬಂದಿದ್ರ ಮತ್ತ 300 ರೂಪಾಯಿ ಹೊಕ್ಕಿತ್ತು. ಫ್ರೀ ಬಸ್ಸಿಗೆ ಬಂದಿದ್ದರಿಂದ ನಮಗ ಆ ರೋಕ್ಕ ಉಳಿತಾಯ ಆತಲ್ಲ ಎಂದು ತಿಳಿಸಿದರು.

ಬೆಂಗಳೂರಿಗೆ ಯಾಕೆ ಸ್ಟ್ರೈಕ್ ಮಾಡೋಕೆ ಹೋಗಿದ್ದು? ಎಂಬ ಪ್ರಶ್ನೆಯನ್ನು ಗೌರಮ್ಮನವರಿಗೆ ಕೇಳಿದರೆ ಅವರು, 'ನಮ್ಮನ್ನ ಖಾಯಂ ಆಗಿ ಅಡುಗೆ ಕೆಲಸಕ್ಕೆ ತೆಗೆದುಕೊಳ್ಳಿ ಮತ್ತು ನಮಗೆ ಬರುವ ಹಣವನ್ನು ನೇರವಾಗಿ ನಮ್ಮ ಬ್ಯಾಂಕಿಗೆ ಹಾಕಿ, ಮತ್ತೆ ನಮ್ಮ ಪಿಎಫ್ ಹಣವನ್ನು ನಮಗೆ ಕೊಡಿ ಎಂದು ಕೇಳಲು ಬೆಂಗಳೂರಿಗೆ ನಮ್ಮ ಸಂಘದಿಂದ ಎಲ್ಲರೂ ಹೋಗಿದ್ವಿ. ಅಲ್ಲಿ ಏನಿಲ್ಲ ಅಂದ್ರು ಒಂದು 1,500 ಮಹಿಳೆಯರು ಬ್ಯಾರೆ–ಬ್ಯಾರೆ ಕಡೆಯಿಂದ ಬಂದಿದ್ರು. ಅತಿ ಹೆಚ್ಚು ಹೆಣ್ಣು ಮಕ್ಕಳೇ ಅಲ್ಲಿ ಸ್ಟ್ರೈಕಿಗೆ ಕೂತಿದ್ವಿ ಇದಕ್ಕ ಈ ಫ್ರೀ ಬಸ್ ಅಂತ ಅನ್ಕೊಂಡಿದ್ದೀನಿ' ಎಂದು ತಿಳಿಸಿದರು.

ಪ್ರಕರಣ – 2

'ಶಕ್ತಿ ಯೋಜನೆ'ಯ ಅನುಷ್ಠಾನದಿಂದ ಆಗಿರುವ ಬದಲಾವಣೆಗಳನ್ನು ಮೌಲ್ಯಮಾಪನ ಮಾಡಲು ದಿನಾಂಕ 17.10.2023ರಂದು ಕನ್ನಡ ವಿಶ್ವವಿದ್ಯಾಲದಲ್ಲಿ ಕಸಹೊಡೆಯುವ ಕೆಲಸ ಮಾಡುತ್ತಿರುವ ಶ್ರೀಮತಿ ಮಂಗಳಮ್ಮ ಅವರನ್ನು ಅನಿಕೇತನ ಪುರುಷರ ವಸತಿ ನಿಲಯದ ಹತ್ತಿರ ಮಧ್ಯಾಹ್ನ ಊಟಕ್ಕೆ ಕುಳಿತಾಗ ಸಂದರ್ಶಿಸಲಾಯಿತು. ಆ ಸಂದರ್ಶನದ ಸಾರವನ್ನು ಅವರ ಮಾತುಗಳಲ್ಲಿಯೇ ಈ ಕೆಳಗಿನಂತೆ ದಾಖಲಿಸಲಾಗಿದೆ.

ಹೆಸರು ಮಂಗಳಮ್ಮ ಗಂಡ ಮಲ್ಲನಗೌಡ. ಊರು ಕಮಲಾಪುರ ಕುಪ್ಪೈಕ್ಯಾಂಪ್. ಇವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂಟು ವರ್ಷಗಳಿಂದ ಕಸಗೂಡಿಸುವ ಕೆಲಸ ಮಾಡುತ್ತಿದ್ದಾರೆ. ಇಲ್ಲಿಗೆ ಬರುವುದಕ್ಕಿಂತ ಮುಂಚೆ ಟೈಲರಿಂಗ್ ಮಾಡುತ್ತಿದ್ದರಂತೆ. ಕಮಲಾಪುರದಲ್ಲಿರುವ 'ಸಿನಿಮಾಬೈಲ್' ಎಂಬ ಸ್ಥಳದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು. ಒಂದು ತಿಂಗಳಿಗೆ ಇಲ್ಲಿ ನಾಲ್ಕರಿಂದ ಐದು ಸಾವಿರ ರೂಪಾಯಿ ಬರುತ್ತಿತ್ತು. ಒಂದು ಫೀಸ್ ಹೊಲಿದರೆ ಹತ್ತರಿಂದ ಹನ್ನೆರಡು ರೂಪಾಯಿ ಸಿಗುತ್ತಿತ್ತು. ಬೇಡಿಕೆ ಹೆಚ್ಚಿದ್ದರೆ ಒಂದೆರಡು ರೂಪಾಯಿ ಹೆಚ್ಚು ಸಿಗುತ್ತಿತ್ತು. ಅದರಲ್ಲಿ 'ಜಿಲೇಬಿ ಪೀಸ್' ಹೊಲೆದರೆ 25ರೂ ಕೊಡುತ್ತಿದ್ದರು. ಪುರುಸೊತ್ತಿಲ್ಲದೆ ಕೆಲಸ ಮಾಡಿದರು ಒಂದು ದಿನಕ್ಕೆ ಬಹಳ ಅಂದರೆ

ಐದು ಪೀಸ್ ಹೊಲಿಯಬಹುದು. ಆ ಕೆಲಸವನ್ನು ಬಿಟ್ಟ ಮೇಲೆ ಇಲ್ಲಿ(ಕನ್ನಡ ವಿಶ್ವವಿದ್ಯಾಲಯ ಹಂಪಿ)ಗೆ ಕೆಲಸಕ್ಕೆ ಬಂದದ್ದು. ಇಲ್ಲಿ ನನಗೆ ತಿಂಗಳಿಗೆ 8,000 ಕೊಡುತ್ತಾರೆ ಎಂದು ಮಂಗಳಮ್ಮನವರು ತಿಳಿಸುವರು.

ಪ್ರಯಾಣದ ಕುರಿತು ಇವರನ್ನು ಕೇಳಿದರೆ, ಮೊದಲು ನಾವು ಕೆಲವು ಸಲ 10 ರೂಪಾಯಿ ಕೊಟ್ಟು ಬಸ್ಸಿಗೆ ಬರುತ್ತಿದ್ದೆವು. ಮುಂಜಾನೆ ಎಂಟು ಗಂಟೆಗೆ ಮನೆಯನ್ನ ಬಿಡುತ್ತಿದ್ದೆವು. ಇಲ್ಲಿಗೆ ಬಂದು ಕೆಲಸ ಮಾಡಿ ಮತ್ತೆ ಇಲ್ಲಿಂದ 4:00ಗೆ ಮನೆಗೆ ಹೋಗುತ್ತಿದ್ದೆವು. ಮನೆಯಲ್ಲಿ ನಾನೊಬ್ಬಳೇ ಹೆಣ್ಣು ಮಗಳು ಇರುವುದರಿಂದ ಮನೆಯ ಎಲ್ಲಾ ಕೆಲಸ ಮಾಡಿಕೊಂಡು ಇಲ್ಲಿಗೆ ನಡೆದು ಬರುವುದು ನನಗೆ ಸಾಕಾಗಿ ಹೋಗ್ತಿತ್ತು. ನನಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಅದರಲ್ಲಿ ಹಿರಿಯ ಮಗ 13ನೇ ಕ್ಲಾಸ್ (ಬಿ.ಸಿ.ಎ) ಓದುತ್ತಿದ್ದಾನೆ. ಇನ್ನೊಬ್ಬ ಮಗ ಐ.ಟಿ.ಐ ಮಾಡುತ್ತಿದ್ದಾನೆ. ಹಿರೇ ಮಗನ ಸಾಲಿಗೆ ವರ್ಷಕ್ಕೆ 25ರಿಂದ 30 ಸಾವಿರ ರೂಪಾಯಿ ಕಟ್ಟಬೇಕು. ಮ್ಯಾಗಳ ಖರ್ಚು ಬಿಟ್ಟು 'ಬಟ್ಟೆ, ಬರೀ, ಬುಕ್ಕು' ಅದರದ್ದು ಬ್ಯಾರೆ ರೊಕ್ಕ. ಒಟ್ಟು ಒಂದು ವರ್ಷಕ್ಕ ಏನೂ ಇಲ್ಲ ಅಂದ್ರು 35,000 ರೊಕ್ಕ ಬೇಕಾಗುತ್ತ.

ಶಕ್ತಿ ಯೋಜನೆಯ ಕುರಿತು ಅವರನ್ನು ಕೇಳಿದರೆ, ನಾವು ಬೆಳಗ್ಗೆ ಬಸ್ಸಿಗೆ ಬರಲು ಆಗುವುದಿಲ್ಲ ಆದರೆ ಕೆಲಸ ಮುಗಿಸಿ ಹೋಗುವಾಗ ಮಾತ್ರ ಈಗ ಫ್ರೀ ಬಸ್ಸಿಗೆ ಹೋಗ್ತೀವಿ. ಇಲ್ಲಿಂದ ನಡೆದುಕೊಂಡು ಹೋಗಿ 'ನೆನ್ನೆ ಒಗೆದ ಬಟ್ಟೆಯನ್ನು ಮಡಿಚಿಟ್ಟು, ಚೂರು ಚಾ ಮಾಡಿಕೊಂಡು ಕುಡಿದು, ಅಡುಗೆ ಸಾಮಾನು ತೊಳೆದು ಮತ್ತೆ ಕಾಲೇವಿಗೆ ಬಟ್ಟೆ ಒಗೆಯೋಕೆ ಹೋಗಬೇಕು. ಅಲ್ಲಿಂದ ಬಂದು ಅಂಗಳ ಮತ್ತು ಮನಿ ಕಸ ಬಳಿದು ಮತ್ತೆ ರಾತ್ರಿ ಅಡಿಗೆ ಮಾಡಬೇಕಿತ್ತು, ಇಷ್ಟು ಮಾಡೋದ್ರಲ್ಲಿ ಜೀವ ಸಾಕಾಗುತ್ತಿತ್ತು. ಆದರೂ ಬದುಕು ಐತಲ್ಲಪ್ಪ ಅದಕ್ಕೆ ಎಷ್ಟು ಕಷ್ಟ ಆದ್ರೂ ಸರಿದೂಗಿಸಿಕೊಂಡು ಹೋಗಬೇಕು. ಆದರೆ ಈಗ ಹಂಗಿಲ್ಲ ಒಂದು ತಾಸು ಅರ್ಧಗಂಟೆ ಟೈಮು ಸಿಗುತೈತೆ. ಮತ್ತೆ ಹತ್ತು ರೂಪಾಯಿ ಕೂಡ ಉಳಿತೈತಿ' ಎಂದು ಮಂಗಳಮ್ಮನವರು ತಿಳಿಸಿದರು.

ನೀವು ರೂ.10ಯನ್ನು ಉಳಿಸಿ ಏನು ಮಾಡಬೇಕೆಂದು ಯೋಚಿಸುತ್ತಿದ್ದೀರಿ ಎಂದು ಅವರನ್ನು ಕೇಳಿದರೆ ಮಂಗಳಮ್ಮನವರು 'ಏನಿಲ್ಲಪ್ಪ ಬಸ್ಸು ಫ್ರೀ ಅಂತ ಹೇಳಿದ್ದಕ್ಕೆ ನಾವು ಬಸ್ಸಿಗೆ ದಿನಾಲು ಹೋಗುತ್ತಿರುವುದು. ಇಲ್ಲಂದ್ರೆ ನಡೆದುಕೊಂಡೆ ಹೋಗುತ್ತೇವೆ.' ತಿಂಗಳಿಗೆ 8000 ದುಡಿಯುವ ನೀವು ದಿನಕ್ಕೆ 20 ರೂಪಾಯಿ ಖರ್ಚು ಮಾಡದಿದ್ದರೆ ಹೇಗೆ? ಎಂದು ಮಂಗಳಮ್ಮನವರನ್ನು ಕೇಳಿದರೆ ಅವರು, 'ಏನಿಲ್ಲಪ್ಪ ನನ್ನ ಮಕ್ಕಳ ಸಾಲಿಗೆ ಎಂದು 50,000 ರೂಪಾಯಿಯನ್ನ ಮಂಜುನಾಥ ಸಂಘದಾಗ ಸಾಲ ತಗೊಂಡಿದೀನಿ. ವಾರಕ್ಕೆ ಏನು ಇಲ್ಲ ಅಂದ್ರು 1,100 ಚಿಲ್ಲರಾ ಕಟ್ಟಬೇಕು. ಜೀವನ ಹೀಗಿದ್ದ ಮೇಲೆ ಎಲ್ಲಿ

ಉಳಿತಾಯ ಮಾಡಬೇಕು ನಾವು. ಇನ್ನು 20 ರೂಪಾಯಿ ಖರ್ಚಾದರೂ ಹೇಗೆ ಮಾಡಬೇಕು. ಅದರಾಗ ಬೇರೆ ಈಗ 6–7 ತಿಂಗಳೂ ಸಂಬಳಾನು ಆಗಿಲ್ಲ ಹಿಂಗಿದ್ರ ನಮ್ಮ ಜೀವನ ಹೆಂಗೆ ನಡಿಬೇಕು.' ಮತ್ತೆ ಫ್ರೀ ಬಸ್ಸಿನಿಂದ ನಿಮಗೆ ಇನ್ನೂ ಏನೇನು ಲಾಭವಾಗಿದೆ? ಎಂದು ಕೇಳಿದರೆ ಮಂಗಳಮ್ಮನವರು, 'ಮೊನ್ನೆ ಶ್ರಾವಣ ಮಾಸದಾಗ 5 ಸೋಮವಾರ ಹಂಪಿಗೆ ಫ್ರೀ ಬಸ್ ನ್ಯಾಗ ಹೋಗಿ ಬಂದೀನಿ ನೋಡಪ್ಪ' ಎಂದು ತಿಳಿಸಿದರು.

ಫಲಿತಗಳು

1. ಕರ್ನಾಟಕ ಶಕ್ತಿಯೋಜನೆಯು ಮಹಿಳೆಯರಿಗೆ ಉಚಿತವಾಗಿ ಟಿಕೇಟ್ ಪಡೆದು ಸಂಚರಿಸಲು ಅನುವುಮಾಡಿಕೊಟ್ಟಿದೆ. ಈ ಉಚಿತ ಪ್ರಯಾಣದಿಂದ ಉಳಿಯುವ ಅಲ್ಪ ಮೊತ್ತದ ಹಣದಿಂದ ಸ್ವಂತ ಸೂರುಗಳನ್ನು ಕಟ್ಟಿಕೊಳ್ಳಲು ಗೌರಮ್ಮನಂತಹ ಅನೇಕ ಮಹಿಳೆಯರಿಗೆ ಸಾಧ್ಯವಾಗುತ್ತಿದೆ.
2. ದಿನಕ್ಕೆ 8 ರಿಂದ 10 ಕಿಲೋಮೀಟರ್‌ನಷ್ಟು ನಡೆದುಕೊಂಡು ಹೋಗಿ ಕೆಲಸ ಮಾಡುವ ಮಹಿಳೆಯರಿಗೆ ಈ ಯೋಜನೆ ಸಹಕಾರಿಯಾಗಿದೆ. ಆ ಮೂಲಕ ಅವರ ಹೆಚ್ಚಿನ ದೈಹಿಕ ಶಕ್ತಿಯ ಹಾಳಾಗುವಿಕೆಯನ್ನು ತಡೆಯುತ್ತಿದೆ. ದಿನಕ್ಕೆ ಎರಡು ಸಲ ನಡೆದುಕೊಂಡು ಹೋಗುವ ಗೌರಮ್ಮನಂತ ಮಹಿಳೆಯರು ಅನುಭವಿಸುವ ರಸ್ತೆ ಅಪಗಾತಗಳಿಂತ ತಪ್ಪಿಸಿಕೊಳ್ಳಲು ಈ ಯೋಜನೆ ಅನುಕೂಲಕರವಾಗಿದೆ.
3. ಈ ಯೋಜನೆಯಿಂದ ಗರ್ಭಿಣಿಯರನ್ನು ನಡೆಸಿಕೊಂಡು ಆಸ್ಪತ್ರೆಗೆ ಕರೆದೊಯ್ಯುವುದು ತಪ್ಪುತ್ತಿದೆ. ಅನೇಕ ಬಡಕುಟುಂಬಗಳು ಹಣವಿಲ್ಲದಿರುವ ಕಾರಣಕ್ಕೆ ವೈದ್ಯರು ಸೂಚಿಸಿದ ದಿನಾಂಕದಂದು ಸರಿಯಾಗಿ ಹೋಗುತ್ತಿರಲಿಲ್ಲ. ಉಚಿತ ಪ್ರಯಾಣವಿರುವುದರಿಂದ ವೈದ್ಯರು ಹೇಳಿದ ದಿನಕ್ಕೆ ಸರಿಯಾಗಿ ಹೋಗುವಂತಾಗಲು, ಆ ಮೂಲಕ ಗರ್ಭಿಣಿಯರ ಆರೋಗ್ಯವನ್ನು ಕಾಪಾಡಿಕೊಳ್ಳಲು ಈ ಯೋಜನೆ ಸಹಕಾರಿಯಾಗಿದೆ.
4. ಕೆಲಸಕ್ಕೆ ಬೇಗನೆ ಎದ್ದು ಹೋಗುವ ಬರದಲ್ಲಿ ನಿನ್ನೆ ರಾತ್ರಿಯೇ ತರಕಾರಿ ಕತ್ತರಿಸಿ, ಬೆಳೆ ಕುದಿಸುವ ಕೆಲಸವನ್ನು ಮಾಡುತ್ತಿದ್ದರು. ಅದರ ಜೊತೆಗೆ ಅವರು ಬೆಳಗ್ಗೆ 3 ಗಂಟೆಗೆ ಏಳಬೇಕಾಗಿತ್ತು. ಇದರಿಂದ ಅವರು ನಿದ್ರಿಸುವ ಸಮಯವು ಕಡಿಮೆ ಮತ್ತು ಆಹಾರದ ಗುಣಮಟ್ಟವು ಕಡಿಮೆಯಾಗುತ್ತಿರುವುದರಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಈ ಯೋಜನೆಯ ಪರಿಣಾಮದಿಂದ ಸರಿಯಾಗಿ ಮಲಗಲು ಮತ್ತು ಸುಚಿಯಾಗಿ ಆಹಾರ ಸೇವಿಸಲು ಆ ಮಹಿಳೆಯರಿಗೆ ಸಮಯ ಸಿಕ್ಕಂತಾಗಿದೆ.
5. ಈ ಯೋಜನೆಯು ಮಕ್ಕಳ ಶಿಕ್ಷಣದ ಖರ್ಚಿನ ಹೊರೆಯನ್ನು ಸಡಿಲಗೊಳಿಸಿದೆ.

ಉಚಿತ ಬಸ್ ಪ್ರಯಾಣದಿಂದ ಬಸ್‌ಪಾಸ್ ತೆಗೆಸುವ ಹಣ ಉಳಿತಾಯವಾಗುತ್ತದೆ ಮತ್ತು ಅದೇ ಹಣದಿಂದ ತಾಂತ್ರಿಕ ಶಿಕ್ಷಣ ಪಡೆಯಲು ಕೂಡ ಸ್ವಲ್ಪ ಮಟ್ಟಿಗೆ ಅನುಕೂಲವಾಗಿದೆ.

ಸಲಹೆಗಳು

1. ಸಾರ್ವಜನಿಕ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುತ್ತಿರುವ ಮಹಿಳೆಯರನ್ನು ನೋಡಿ 'ಅವು ಆಧಾರ್ ಕಾರ್ಡ್‌ಗಳು' ಎಂದು ಗೇಲಿ ಮಾಡುವವರು ಈ ತರಹದ ಮಾನಸಿಕವಾಗಿ ಕೊಲ್ಲುವುದನ್ನು ಬಿಡಬೇಕು.
2. ಉಚಿತ ಪ್ರಯಾಣವಿದೆಯೆಂದು 'ಊರೂರು ತಿರುಗುತ್ತಿದ್ದಾಳೆ, ಚೈನಿ ಮಾಡುತ್ತಾಳೆ' ಎಂದು ಹೇಳುವುದನ್ನು ಸಹ ಬಿಡಬೇಕು. ಆ ಮಾತುಗಳು ಅವರ ಮಾನಸಿಕ ನೆಮ್ಮದಿಯನ್ನು ಹಾಳು ಮಾಡುವುದರ ಜೊತೆಗೆ ಅವರ ಒಟ್ಟಾರೆ ಮುನ್ನಡೆಗೆ ಅಡ್ಡಿಯಾಗುತ್ತದೆ.
3. ಶಾಲಾ–ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು.
4. ವಾಹನ ಚಾಲಕರು ಮತ್ತು ನಿರ್ವಾಹಕರು ಮಹಿಳೆಯರೊಂದಿಗೆ ಸರಿಯಾಗಿ ವರ್ತಿಸಬೇಕು.

ಕಡೆನುಡಿ

ಬಹುಶಃ ಕನ್ನಡ ವಿಶ್ವವಿದ್ಯಾಲಯಕ್ಕೆ ಬರುವ ಸುಮಾರು 35 ರಿಂದ 40 ಜನ ಮಹಿಳೆಯರ ಬದುಕಿನ ಯಶೋಗಾಥೆಗಳು ಕೂಡ ಹೀಗೆ ಇವೆ ಎಂದು ತಿಳಿಯಬಹುದು. ಶಕ್ತಿ ಯೋಜನೆಯು ಈ ಮಹಿಳೆಯರ ಜೀವನದ ಕ್ರಮದಲ್ಲಿ ಸ್ವಲ್ಪ ಆರಾಮಾಗಿ ಬದುಕಲು ಸಹಕಾರವನ್ನು ನೀಡಿದೆ ಎಂದು ಹೇಳಬಹುದು. ಗೌರಮ್ಮನವರ ಪ್ರಕರಣದಿಂದ ತಿಳಿದುಬರುವ ಅಂಶವೆಂದರೆ ಅವರ ಆರೋಗ್ಯ, ಆರ್ಥಿಕತೆ ಮತ್ತು ಮಕ್ಕಳ ಅಕ್ಷರ ಈ ಮೂರು ಕ್ಷೇತ್ರದಲ್ಲಿ ಅಲ್ಪ ಮಟ್ಟಿಗೆ ಬದಲಾವಣೆಯನ್ನು ತರುವಲ್ಲಿ ಶಕ್ತಿ ಯೋಜನೆಯು ಸಹಕಾರಿಯಾಗಿದೆ. ಇದೇ ರೀತಿ ಮಂಗಳಮ್ಮನವರ ಪ್ರಕರಣದಿಂದ ತಿಳಿದುಬರುವ ಅಂಶವೆಂದರೆ ಅವರಿಗೆ ಸಿಗುವ ಅರ್ಧ ಅಥವಾ ಒಂದು ಗಂಟೆ ಕೆಲಸದ ಬಿಡುವು ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸುವಂತದ್ದಾಗಿದೆ. ಕರ್ನಾಟಕ ಸರ್ಕಾರದ ಶಕ್ತಿ ಯೋಜನೆ ಮಹಿಳೆಯರ ಅದರಲ್ಲಿಯೂ ದಿನಗೂಲಿ ಕೆಲಸ ಮಾಡುವ ಮಹಿಳೆಯರ ಬದುಕಿನ ಕ್ರಮದಲ್ಲಿ ಹೊಸ ರೀತಿಯ ಚಲನೆಯನ್ನು ಉಂಟುಮಾಡಲು ಕಾರಣವಾಗಿದೆ ಎಂಬುದನ್ನು ಈ ಪ್ರಕರಣಗಳಿಂದ ತಿಳಿಯಬಹುದಾಗಿದೆ.

ಪರಾಮರ್ಶನ ಸಾಹಿತ್ಯ :

1 ಆಶಾದೇವಿ ಎಂ ಎಸ್. (2016). ನಾರೀಕೇಳಾ. ಬೆಂಗಳೂರು: ಪ್ರಜಾವಾಣಿ ಪ್ರಕಾಶನ.

2 ಕನ್ನಡ ರತ್ನಕೋಶ ಪರಿಷ್ಕೃತ. (2017). ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

3 ಚಂದ್ರ ಪೂಜಾರಿ ಎಂ. (2016). ಅಭಿವೃದ್ಧಿ. ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.

4 ಮಹೇಶ ಚಂದ್ರ ಗುರು ಬಿ.ಪಿ. (2013). ಸಾಹಿತ್ಯ, ಮಹಿಳೆ ಮತ್ತು ಸಬಲೀಕರಣ. ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

5 ಪ್ರಜಾವಾಣಿ ಪತ್ರಿಕೆ, ದಿನಾಂಕ : 03.6.2023. ಪು. 7

6 ಪ್ರಜಾವಾಣಿ ಪತ್ರಿಕೆ, ದಿನಾಂಕ : 10.6.2023. ಪು.8

7 ಪ್ರಜಾವಾಣಿ ಪತ್ರಿಕೆ, ದಿನಾಂಕ : 12.6.2023. ಪು.1,2,4,6,

8 ಪ್ರಜಾವಾಣಿ ಪತ್ರಿಕೆ, ದಿನಾಂಕ : 13.6.2023. ಪು. 1

9 ಪ್ರಜಾವಾಣಿ ಪತ್ರಿಕೆ, ದಿನಾಂಕ : 1.8.2023: ಪು. 5

10 ಪ್ರಜಾವಾಣಿ ಪತ್ರಿಕೆ, ದಿನಾಂಕ : 03.9.2023.

11 ಪ್ರಜಾವಾಣಿ ಪತ್ರಿಕೆ, ದಿನಾಂಕ : 17.11.2023.

12 https://gruhalakshmischeme.in/shakti-scheme-karnataka/

13 https://govtschemes.in/kn/karanaataka-sakatai-sakaiima

***

ಎನ್ನಿಚ್ಚೆಯೊಳ್ ಮೆಚ್ಚಿದಂತೆ ಬಾಳ್ವೆನ್

ಮಲ್ಲೇಶಪ್ಪ ಸಿದ್ರಾಂಪೂರ
ಸಹಾಯಕ ಪ್ರಾಧ್ಯಾಪಕರು
ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

ಹತ್ತನೆಯ ಶತಮಾನದಲ್ಲಿ ರಚನೆಗೊಂಡ 'ವಡ್ಡಾರಾಧನೆ' ಕನ್ನಡದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಕೃತಿ. ಕನ್ನಡದ ಮೊದಲ ಗದ್ಯಗ್ರಂಥವೆಂಬ ಗೌರವವನ್ನು ಪಡೆದಿರುವ ಈ ಕೃತಿ, ಕನ್ನಡ ಕಥನ ಪರಂಪರೆಯ ವೈವಿಧ್ಯತೆ ಮತ್ತು ಅಭಿವ್ಯಕ್ತಿಯ ಶ್ರೀಮಂತಿಕೆಯನ್ನು ಸ್ಪಷ್ಟವಾಗಿ ಅನಾವರಣಗೊಳಿಸಿದೆ. ಹತ್ತೊಂಬತ್ತು ಕಥೆಗಳ ಸಂಕಲನವಾಗಿರುವ ಇದು ಜೈನ ತಾತ್ವಿಕ ಚಿಂತನೆಯ ಚೌಕಟ್ಟಿನಲ್ಲಿ ರೂಪುಗೊಂಡಿದ್ದರೂ, ಅದರ ಒಳಹೊರಗಿನ ಅರ್ಥಸಂದರ್ಭಗಳು ಕೇವಲ ಧಾರ್ಮಿಕ ವಲಯಕ್ಕೆ ಮಾತ್ರ ಸೀಮಿತವಾಗಿಲ್ಲ. ಕೃತಿಕಾರನು ತನ್ನ ಕಾಲದ ಸಾಮಾಜಿಕ–ಸಾಂಸ್ಕೃತಿಕ ವಾಸ್ತವಿಕತೆಯೊಂದಿಗೆ ನಡೆಸಿದ ಸಂವಾದವು ಈ ಕಥೆಗಳಿಗೆ ವಿಶಿಷ್ಟವಾದ ಜೀವಂತಿಕೆಯನ್ನು ನೀಡಿದೆ. ಇಂತಹ ಕೃತಿಯಲ್ಲಿನ 'ಗಜಕುಮಾರನ ಕಥೆ'ಯನ್ನು ಇಲ್ಲಿ ಪರಾಮರ್ಶಿಸಲಾಗಿದೆ. 'ಗಜಕುಮಾರನ ಕಥೆ'ಯನ್ನು ಪರಂಪರಾಗತ ಓದಿನಾಚೆಗೆ ಹೋಗಿ, ತುಸು ಭಿನ್ನ ದೃಷ್ಟಿಕೋನದಲ್ಲಿ ವಿಶ್ಲೇಷಿಸುವುದು ಸಮೀಕ್ಷಾತ್ಮಕವಾಗಿ ಅಗತ್ಯವಾಗಿದೆ. ಈ ನೇಪಥ್ಯದಲ್ಲಿ ಈ ಕಥೆಯನ್ನು ಕೇವಲ ಧಾರ್ಮಿಕ ಅಥವಾ ನೀತಿಪರ ಸಂದೇಶಗಳ ಹೊತ್ತಿಗೆಯಾಗಿ ನೋಡದೆ, ಅದರೊಳಗಿನ ಸಾಮಾಜಿಕ ಅರ್ಥಸಂಕೇತಗಳು, ವ್ಯಕ್ತಿ–ಸಮಾಜದ ಸಂಬಂಧಗಳು ಮತ್ತು ಅಸ್ತಿತ್ವಾತ್ಮಕ ಸಂಕೀರ್ಣತೆಗಳ ಆಧಾರದ ಮೇಲೆ ಪರಾಮರ್ಶಿಸಲಾಗಿದೆ.

ಗಜಕುಮಾರನ ಕಥೆ ಜೈನ ಸಾಹಿತ್ಯದಲ್ಲಿ ಕೇವಲ ಧಾರ್ಮಿಕ ಉಪದೇಶದ ಮಾದರಿಯಲ್ಲ, ಅದು ಸಾಮಾಜಿಕ ಬದುಕಿನ ಲೈಂಗಿಕತೆ, ಅಧಿಕಾರ, ನೈತಿಕತೆ ಮತ್ತು

ಆಧ್ಯಾತ್ಮಿಕತೆಗಳ ನಡುವಿನ ಗಾಢ ಸಂಬಂಧಗಳನ್ನು ಪ್ರತಿಬಿಂಬಿಸುತ್ತದೆ. ಈ ಕಥೆಯನ್ನು ಆಧುನಿಕ ಲೈಂಗಿಕತಾವಾದ (sexism ಹಾಗೂ sexuality discourse)ದ ಹಿನ್ನೆಲೆಯಲ್ಲಿ ಪುನರ್ ಅವಲೋಕಿಸಿದಾಗ, ಇದು ಕಾಲಾಂತರಗಳಲ್ಲಿ ಬದಲಾಗುವ ಮೌಲ್ಯವ್ಯವಸ್ಥೆಗಳ ನಡುವಿನ ಸಂಘರ್ಷವನ್ನು ಮಾತ್ರವಲ್ಲದೆ, ಅವುಗಳ ಒಳಗಿನ ನಿರಂತರತೆಯನ್ನೂ ಅನಾವರಣಗೊಳಿಸುತ್ತದೆ. 'ಲೈಂಗಿಕತಾವಾದ ಮಾನವ ಸಮಾಜದಷ್ಟೇ ಹಳೆಯದು' ಎಂಬ ತಾತ್ವಿಕ ನಿಲುವು ಈ ಕಥೆಯ ವಿಶ್ಲೇಷಣೆಯಲ್ಲಿ ಕೇಂದ್ರ ಸ್ಥಾನದಲ್ಲಿದೆ. ಈ ನಿಲುವು ಸೂಚಿಸುವುದೇನೆಂದರೆ, ಲೈಂಗಿಕ ಅಸಮಾನತೆ ಮತ್ತು ಲಿಂಗಾಧಾರಿತ ಸಂಬಂಧಗಳು ಕೇವಲ ಆಧುನಿಕ ಕಾಲದ ಸಮಸ್ಯೆಗಳಲ್ಲ. ಅವು ಮಾನವ ಸಂಸ್ಕೃತಿಯ ರೂಪುಗೊಳ್ಳುವಿಕೆಯಲ್ಲಿಯೇ ಅಡಗಿರುವ ಮೂಲಭೂತ ರಚನೆಗಳಾಗಿವೆ. ಈ ಹಿನ್ನೆಲೆಯಲ್ಲಿ ಗಜಕುಮಾರನ ಕಥೆ ಕೇವಲ ಒಬ್ಬ ವ್ಯಕ್ತಿಯ ಜೀವನಚರಿತ್ರೆಯಲ್ಲ. ಬದಲಾಗಿ ಒಂದು ಸಮೂಹದ ಚಿಂತನೆ, ಮೌಲ್ಯ ಮತ್ತು ಸಾಮಾಜಿಕ ವ್ಯವಸ್ಥೆಗಳ ಪ್ರತಿನಿಧಿಯಾಗಿದೆ. ಇಲ್ಲಿ ಲೈಂಗಿಕತೆ ಕೇವಲ ಒಂದು ವೈಯಕ್ತಿಕ ಅನುಭವವಾಗಿಯಷ್ಟೇ ಉಳಿಯುವುದಿಲ್ಲ. ಅದು ಸಾಮಾಜಿಕ ನಿಯಂತ್ರಣ, ರಾಜಕೀಯ ಶಕ್ತಿ ಮತ್ತು ನೈತಿಕ ನಿರ್ಧಾರಗಳೊಂದಿಗೆ ಗಾಢವಾಗಿ ಸಂಬಂಧವನ್ನು ಹೊಂದಿದೆ. ಹೀಗಾಗಿ ಈ ಕಥೆಯಲ್ಲಿನ ಲೈಂಗಿಕತೆಯನ್ನು 'ಸ್ವಭಾವಿಕ ಪ್ರೇರಣೆ'ಯಾಗಿ ಮಾತ್ರವಲ್ಲ, ಸಾಮಾಜಿಕವಾಗಿ ರೂಪಿತವಾದ ಅಂಶವಾಗಿಯೂ ಅರ್ಥಮಾಡಿಕೊಳ್ಳಲು ಅವಕಾಶವಿದೆ. ಈ ಅರ್ಥದಲ್ಲಿ ಗಜಕುಮಾರನ ಕಥೆ ಫುಕೋ ಹೇಳುವ ದೇಹ ಮತ್ತು ಲೈಂಗಿಕತೆಗಳ ಮೇಲಿನ ಸಾಮಾಜಿಕ ನಿಯಂತ್ರಣದ ಚರಿತ್ರೆಯನ್ನು ಪ್ರತಿಬಿಂಬಿಸುತ್ತದೆ.

ಗಜಕುಮಾರನ ಜೀವನದ ಪ್ರಾರಂಭಿಕ ಹಂತವು ಭೋಗ, ಆಸಕ್ತಿ ಮತ್ತು ಶಕ್ತಿಯ ತ್ರಿಕೋನದಲ್ಲಿ ನಿರ್ಮಿತವಾಗಿದೆ. ದ್ವಾರಾವತಿಯ ರಾಜನಾದ ವಿಷ್ಣುವು ಪೌದನಪುರದ ರಾಜನಾದ ಅಪರಾಜಿತನನ್ನು ಯಾರು ಸೋಲಿಸುತ್ತಾರೋ ಅವರಿಗೆ ಕೇಳಿದ್ದನ್ನು ಕೊಡುವೆನು ಎಂದು ಡಂಗೂರ ಸಾರಿಸಿದ್ದನ್ನು ಕೇಳಿದ ಗಜಕುಮಾರ ಅಪರಾಜಿತನನ್ನು ಸೋಲಿಸಿ ಅವನನ್ನು ಬಂಧಿಸಿ ಕರೆತರುತ್ತಾನೆ. ಆಗ ರಾಜ ವಿಷ್ಣುವು ನಿನಗೆ ಬೇಕಾದದ್ದನ್ನು ಕೇಳೆಂದಾಗ ಗಜಕುಮಾರನು "ನಿಮ್ಮಂತಪುರಮುಟಿಯೆ ಪೊಟಿ್ಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಚೆಯೊಳ್ ಮೆಚ್ಚಿದಂತೆ ಬಾಟ್ವೆನ್"(ಗಜಕುಮಾರದನ ಕಥೆ) ಎಂದು ಕೇಳಿದಾಗ, ರಾಜ "ಅಂತೆಗೆಯ್ಯೆಂದು" ಅನುಮತಿಯನ್ನು ನೀಡುತ್ತಾನೆ. 'ನಿನ್ನಿಚ್ಛೆಯಂತೆ ಆಗಲಿ' ಎಂಬ ರಾಜಾನುಗ್ರಹದಿಂದ ಗಜಕುಮಾರನಿಗೆ ದೊರೆತ ಸ್ವಾತಂತ್ರ್ಯವು ಕೇವಲ ವೈಯಕ್ತಿಕ ಅನುಗ್ರಹವಲ್ಲ. ಅದು ಒಂದು ಸಾಮಾಜಿಕ–ರಾಜಕೀಯ ವ್ಯವಸ್ಥೆಯ ಪ್ರತಿನಿಧಿಯಾಗಿದೆ. ಈ ವ್ಯವಸ್ಥೆಯಲ್ಲಿ

ಹೆಣ್ಣು ಸ್ವತಂತ್ರಳಾಗಿರದೆ ಪುರುಷನ ಆಸಕ್ತಿಯ ವಸ್ತುವಾಗಿ ಮಾರ್ಪಡುತ್ತಾಳೆ. ಇಲ್ಲಿ ಗಜಕುಮಾರನು ವಿವಿಧ ವರ್ಗಗಳ ಮಹಿಳೆಯರನ್ನು ತನ್ನ ಇಚ್ಛೆಯಂತೆ ಭೋಗಿಸುವುದು ಲೈಂಗಿಕತೆಯ ಮೇಲೆ ಪುರುಷನ ಹಕ್ಕಿನ ಕಲ್ಪನೆಯನ್ನು ದೃಢಪಡಿಸುತ್ತದೆ. ಇದು ಪಿತೃಸತ್ತಾತ್ಮಕ ಸಮಾಜವು ಹೇಗೆ ಹೆಣ್ಣನ್ನು 'ವಸ್ತು'ವಾಗಿ ಪರಿಗಣಿಸುತ್ತಿತ್ತು ಎನ್ನುವ ಮನೋಭಾವಕ್ಕೆ ಸಾಕ್ಷಿ.

ಈ ಅಂಶವನ್ನು ಇನ್ನಷ್ಟು ತಾತ್ವಿಕವಾಗಿ ನೋಡಿದರೆ, ಇಲ್ಲಿ 'ಇಚ್ಛೆ' (desire) ಮತ್ತು 'ಅಧಿಕಾರ' (power) ನಡುವಿನ ಸಂಬಂಧ ಸ್ಪಷ್ಟವಾಗುತ್ತದೆ. ಗಜಕುಮಾರನ ಇಚ್ಛೆಗಳು ಸ್ವತಂತ್ರವಾಗಿಲ್ಲ. ಅವು ಅವನಿಗೆ ದೊರೆತ ಸಾಮಾಜಿಕ ಶಕ್ತಿಯ ಮೂಲಕ ರೂಪುಗೊಂಡಿವೆ. ಅಂದರೆ, ಇಚ್ಛೆಯೂ ಒಂದು ಸಾಮಾಜಿಕ ಉತ್ಪನ್ನವಾಗಿದೆ. ಈ ದೃಷ್ಟಿಯಲ್ಲಿ ಲೈಂಗಿಕತೆಯು ಕೇವಲ ವೈಯಕ್ತಿಕ ಆಸೆಗಿಂತ ಮಿಗಿಲಾಗಿ ಅದೊಂದು ಸಾಮಾಜಿಕ–ರಾಜಕೀಯ ಕ್ರಿಯೆ. ಆಧುನಿಕ ಲೈಂಗಿಕತಾವಾದವು ಇದೇ ಅಂಶವನ್ನು ವಿಶ್ಲೇಷಿಸಿ, ಲೈಂಗಿಕತೆಯ ಹಿಂದೆ ಇರುವ ಅಧಿಕಾರದ ಸಂರಚನೆಗಳನ್ನು ಬಯಲಿಗೆಳೆಯುತ್ತದೆ. ಇದೇ ಸಂದರ್ಭದಲ್ಲಿ, ಹೆಣ್ಣಿನ ಸ್ಥಾನವನ್ನು ಪರಿಶೀಲಿಸಿದಾಗ, ಅವಳ ಅಸ್ತಿತ್ವವು 'ಸ್ವಾಯತ್ತತೆ'ಗಿಂತ 'ಪ್ರತಿನಿಧಿತ್ವ'ದ ಮೂಲಕ ನಿರ್ಧಾರವಾಗುತ್ತದೆ. ಅವಳು ತನ್ನದೇ ಇಚ್ಛೆಗಳ ಮೂಲಕ ಕಾರ್ಯನಿರ್ವಹಿಸುವವಳಲ್ಲ. ಬದಲಾಗಿ, ಪುರುಷನ ಇಚ್ಛೆಗಳ ಮೂಲಕ ನಿರ್ವಚಿಸಲ್ಪಡುವವಳಾಗಿದ್ದಾಳೆ. ಈ ಅಂಶವು ಸಿಮೋನ ದ ಬೋವಾ ಹೇಳುವ 'ಮಹಿಳೆ ಹುಟ್ಟುವುದಿಲ್ಲ; ಅವಳನ್ನು ನಿರ್ಮಿಸಲಾಗುತ್ತದೆ' ಎಂಬ ಮಾತನ್ನು ನೆನಪಿಸುತ್ತದೆ. ಗಜಕುಮಾರನ ಕಥೆಯಲ್ಲಿ ಹೆಣ್ಣು 'ಇತರೆ' (the Other) ಆಗಿ ನಿರ್ಮಿಸಲ್ಪಟ್ಟಿದ್ದಾಳೆ. ಅವಳ ಅಸ್ತಿತ್ವವು ಪುರುಷ ಕೇಂದ್ರಿಕೃತ ದೃಷ್ಟಿಕೋನದ ಸುತ್ತಲೇ ತಿರುಗುತ್ತದೆ.

ಈ ಹಿನ್ನೆಲೆಯಲ್ಲಿ ಆರಂಭದಲ್ಲಿಯೇ ಉಲ್ಲೇಖಿಸಿದಂತೆ 'ಲೈಂಗಿಕತಾವಾದ ಮಾನವ ಸಮಾಜದಷ್ಟೇ ಹಳೆಯದು' ಎಂಬ ಮಾತು ಇನ್ನಷ್ಟು ಗಂಭೀರ ಅರ್ಥವನ್ನು ಪಡೆಯುತ್ತದೆ. ಇದು ಕೇವಲ ಚಾರಿತ್ರಾತ್ಮಕ ಹೇಳಿಕೆಯಲ್ಲ. ಅದು ಮಾನವ ಸಮಾಜದ ಮೂಲಭೂತ ರಚನೆಯ ಕುರಿತ ತಾತ್ವಿಕ ನಿರ್ಣಯವಾಗಿದೆ. ಅಂದರೆ ಲಿಂಗಾಧಾರಿತ ಅಸಮಾನತೆಗಳು ಮತ್ತು ಅಧಿಕಾರದ ಅಸಮತೋಲನಗಳು ಮಾನವ ಸಂಬಂಧಗಳ ಮೂಲದಲ್ಲಿಯೇ ಅಡಗಿವೆ. ಗಜಕುಮಾರನ ಕಥೆ ಈ ಅಂಶವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇಲ್ಲಿ ಲೈಂಗಿಕತೆ, ಅಧಿಕಾರ ಮತ್ತು ನೈತಿಕತೆ ಪರಸ್ಪರ ಅವಿಭಾಜ್ಯವಾಗಿ ಹೊಂದೊಂಡಿವೆ. ಆದರೆ ಈ ಕಥೆಯ ಮಹತ್ವವು ಕೇವಲ ಅಸಮಾನತೆಯನ್ನು ಪ್ರತಿಬಿಂಬಿಸುವುದಲ್ಲ. ಅದು ಅದರ ಮೇಲಿನ ಪ್ರತಿಕ್ರಿಯೆಯನ್ನೂ ತೋರಿಸುತ್ತದೆ. ಜೈನ ಧರ್ಮದ ವೈರಾಗ್ಯಮಾರ್ಗವು ಈ ಸಮಸ್ಯೆಗೆ ನೀಡುವ ಪರಿಹಾರವಾಗಿದೆ.

ಇಲ್ಲಿ ಲೈಂಗಿಕ ಆಸಕ್ತಿಯನ್ನು ನಿಯಂತ್ರಿಸುವುದಲ್ಲ, ಅದನ್ನು ಸಂಪೂರ್ಣವಾಗಿ ಮೀರುವುದೇ ಮುಖ್ಯ. ಈ ದೃಷ್ಟಿಯಲ್ಲಿ, ಲೈಂಗಿಕತೆಯ ಸಮಸ್ಯೆ ಸಾಮಾಜಿಕ ಅಸಮಾನತೆಯಲ್ಲ, ಅದು ಮಾನವನ ಆಸೆಯಲ್ಲಿದೆ. ಈ ನಿಲುವು ತಾತ್ವಿಕವಾಗಿ ಗಾಢವಾದರೂ, ಅದು ಆಧುನಿಕ ದೃಷ್ಟಿಯಲ್ಲಿ ಪ್ರಶ್ನಾರ್ಹವಾಗುತ್ತದೆ, ಏಕೆಂದರೆ ಅದು ಲಿಂಗ ಅಸಮಾನತೆಯ ಮೂಲವನ್ನು ಸ್ಪರ್ಶಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಆಧುನಿಕ ಲೈಂಗಿಕತಾವಾದವು ಲೈಂಗಿಕತೆಯನ್ನು ತ್ಯಜಿಸುವುದನ್ನು ಪರಿಹಾರವೆಂದು ಪರಿಗಣಿಸುವುದಿಲ್ಲ. ಅದು ಲೈಂಗಿಕತೆಯನ್ನು ಮಾನವ ಅಸ್ಮಿತೆಯ ಅವಿಭಾಜ್ಯ ಭಾಗವೆಂದು ಪರಿಗಣಿಸಿ, ಅದನ್ನು ಸಮಾನತೆ ಮತ್ತು ಸಮ್ಮತಿಯ ಆಧಾರದ ಮೇಲೆ ಪುನರ್ವ್ಯಾಖ್ಯಾನಿಸಲು ಪ್ರಯತ್ನಿಸುತ್ತದೆ. ಈ ದೃಷ್ಟಿಯಲ್ಲಿ ಸಮಸ್ಯೆ ಲೈಂಗಿಕತೆಯಲ್ಲ. ಅದನ್ನು ನಿಯಂತ್ರಿಸುವ ಅಸಮಾನ ಸಾಮಾಜಿಕ ವ್ಯವಸ್ಥೆಯಲ್ಲಿದೆ. ಹೀಗಾಗಿ ಆಧುನಿಕ ಚಿಂತನೆಗಳು ವೈರಾಗ್ಯಕ್ಕಿಂತ 'ನ್ಯಾಯ'ವನ್ನು ಪ್ರಮುಖವಾಗಿಸುತ್ತವೆ.

ಈ ಎರಡೂ ದೃಷ್ಟಿಕೋನಗಳ ನಡುವಿನ ಸಂಘರ್ಷವು ಗಜಕುಮಾರನ ಕಥೆಯನ್ನು ಇನ್ನಷ್ಟು ಗಂಭೀರವಾಗಿ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಒಂದೆಡೆ, ಕಥೆ ಲೈಂಗಿಕತೆಯನ್ನು ಮೀರಬೇಕಾದ ಅಂಶವೆಂದು ಹೇಳುತ್ತದೆ. ಮತ್ತೊಂದೆಡೆ, ಆಧುನಿಕ ಚಿಂತನೆಗಳು ಅದನ್ನು ಪುನರ್ವ್ಯಾಖ್ಯಾನಿಸಬೇಕಾದ ಅಂಶವೆಂದು ಹೇಳುತ್ತವೆ. ಈ ವ್ಯತ್ಯಾಸವು ಕೇವಲ ತಾತ್ವಿಕವಲ್ಲ. ಅದು ಮಾನವ ಜೀವನದ ಮೂಲಭೂತ ಅರ್ಥಗಳ ಕುರಿತು ನಡೆಯುವ ಸಂವಾದವಾಗಿದೆ. ಈ ಪಠ್ಯವು ನಮಗೆ ಒಂದು ಪ್ರಮುಖ ಅರಿವನ್ನು ನೀಡುತ್ತದೆ. ಅದೆಂದರೆ ಲೈಂಗಿಕತೆ, ಅಧಿಕಾರ ಮತ್ತು ನೈತಿಕತೆಗಳ ನಡುವಿನ ಸಂಬಂಧಗಳು ಕಾಲಾಂತರಗಳಲ್ಲಿ ಬದಲಾಗುತ್ತಾ ಬಂದರೂ, ಅವುಗಳ ಮೂಲಭೂತ ಬೇರುಗಳು ನಿರಂತರವಾಗಿವೆ. ಗಜಕುಮಾರನ ಕಥೆ ಈ ನಿರಂತರತೆಯ ಒಂದು ಪ್ರಾಚೀನ ರೂಪವಾಗಿದ್ದರೆ, ಈ ಬಗೆಯ ಪರಾಮರ್ಶೆಯು ಆಧುನಿಕ ಲೈಂಗಿಕತಾವಾದದ ಸಮಕಾಲೀನ ಅಭಿವ್ಯಕ್ತಿಯಾಗಿದೆ. ಈ ಎರಡರ ನಡುವಿನ ಸಂವಾದವೇ ಈ ಕಥೆಯನ್ನು ತಾತ್ವಿಕವಾಗಿ ಸಮೃದ್ಧಗೊಳಿಸುತ್ತದೆ ಮತ್ತು ಇಂದಿನ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಅದರ ಪ್ರಾಸಂಗಿಕತೆಯನ್ನು ಉಳಿಸುತ್ತದೆ.

ಇಲ್ಲಿ ಗಮನಿಸಬೇಕಾದುದು, ಈ ಲೈಂಗಿಕ ಸಂಬಂಧಗಳು ಪರಸ್ಪರ ಸಮ್ಮತಿ ಅಥವಾ ವ್ಯಕ್ತಿಯ ಸ್ವಾತಂತ್ರ್ಯದ ಆಧಾರದ ಮೇಲೆ ನಿರ್ಮಿತವಾಗಿಲ್ಲ. ಅವು ಮೂಲತಃ ಅಧಿಕಾರದ ಅಸಮಾನತೆಯ ಮೇಲೆ ನಿಂತಿವೆ. ಗಜಕುಮಾರನಿಗೆ ದೊರೆತ ರಾಜಾನುಗ್ರಹ ಮತ್ತು ಸಾಮಾಜಿಕ ಸ್ಥಾನಮಾನವು ಅವನಿಗೆ ಕೇವಲ ರಾಜಕೀಯ ಪ್ರಾಬಲ್ಯವನ್ನಷ್ಟೇ ಅಲ್ಲ, ಲೈಂಗಿಕ ಸ್ವೇಚ್ಛಾಚಾರದ ಹಕ್ಕನ್ನೂ ನೀಡುತ್ತದೆ. ಈ ಪರಿಸ್ಥಿತಿಯಲ್ಲಿ 'ಇಚ್ಛೆ' ಸ್ವತಂತ್ರ ಮನೋಭಾವದಿಂದ ಹುಟ್ಟಿದ್ದಲ್ಲ. ಅದು ಅಧಿಕಾರದಿಂದ ಪೋಷಿತವಾಗಿರುವ ಒಂದು

ರೂಪ. ಹೀಗಾಗಿ, ಇಲ್ಲಿ ಲೈಂಗಿಕತೆ ವೈಯಕ್ತಿಕ ಸಂಬಂಧವಲ್ಲ, ಅಧಿಕಾರದ ಅಭಿವ್ಯಕ್ತಿಯಾಗಿದೆ. ಇದೇ ಅಂಶವು ಆಧುನಿಕ ಲೈಂಗಿಕತಾವಾದದ ಪ್ರಮುಖ ಚಿಂತನೆಗಳಾದ power dynamics, objectification ಮತ್ತು patriarchyಗಳೊಂದಿಗೆ ನೇರವಾಗಿ ಹೊಂದಿಕೊಳ್ಳುತ್ತದೆ. ಇಂದಿನ ಸಾಂಸ್ಕೃತಿಕ–ಸಾಮಾಜಿಕ ವಿಶ್ಲೇಷಣೆಯಲ್ಲಿ 'sexism' ಎಂದು ಕರೆಯುವ ಅಸಮಾನತೆಯ ರಚನೆಗಳು, ಈ ಕಥೆಯಲ್ಲಿ ಮೂಲರೂಪದಲ್ಲಿಯೇ ಅಸ್ತಿತ್ವದಲ್ಲಿವೆ ಎಂಬುದು ಸ್ಪಷ್ಟವಾಗುತ್ತದೆ.

ಈ ಸಂಬಂಧವನ್ನು ಇನ್ನಷ್ಟು ತಾತ್ವಿಕವಾಗಿ ಗಮನಿಸಿದರೆ, ಗಜಕುಮಾರನ ಕ್ರಿಯೆಗಳು 'ಸ್ವಾತಂತ್ರ್ಯ'ದ ಅಭಿವ್ಯಕ್ತಿ ಅಲ್ಲ. ಅವು 'ಅಧಿಕಾರದ ವಿಸ್ತರಣೆ' (extension of power) ಆಗಿವೆ. ಅವನು ಮಹಿಳೆಯರನ್ನು ಆಯ್ಕೆಮಾಡುವುದಿಲ್ಲ. ಅವನ ಅಧಿಕಾರ ಅವರನ್ನು 'ಆಯ್ಕೆಮಾಡಬಹುದಾದ ವಸ್ತುಗಳಾಗಿ' ರೂಪಿಸುತ್ತದೆ. ಈ ಅಂಶವು objectificationನ ಕೇಂದ್ರ ತತ್ವವನ್ನು ಪ್ರತಿಬಿಂಬಿಸುತ್ತದೆ. ಅಂದರೆ, ವ್ಯಕ್ತಿಯನ್ನು ಒಂದು ಅನುಭವಿಸುವ, ನಿರ್ಧಾರ ಮಾಡುವ ಸಜೀವ ಅಸ್ತಿತ್ವದಿಂದ, ಉಪಯೋಗಿಸಬಹುದಾದ ವಸ್ತುವಾಗಿ ಪರಿವರ್ತಿಸುವ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಹೆಣ್ಣಿನ ಅಸ್ತಿತ್ವವು ಅವಳದೇ ಅರ್ಥವನ್ನು ಕಳೆದುಕೊಂಡು, ಪುರುಷನ ಇಚ್ಛೆಯೊಳಗೆ ಕರಗುತ್ತದೆ. ವಸುಂಧರಿಯ ಪಾತ್ರವು ಈ ವಿಶ್ಲೇಷಣೆಯಲ್ಲಿ ಅತ್ಯಂತ ಗಂಭೀರ ಅರ್ಥವನ್ನು ನೀಡುತ್ತದೆ. ಆಕೆ ಸೌಂದರ್ಯ, ಲಾವಣ್ಯ, ಆಕರ್ಷಣೆ ಎಂಬ ಗುಣಗಳ ಮೂಲಕ ವರ್ಣಿತಳಾಗಿದ್ದರೂ, ಆಕೆಯ ಒಳಜಗತ್ತು, ಆಕೆಯ ಚಿಂತನೆಗಳು, ಭಾವನೆಗಳು, ಆಯ್ಕೆಗಳು– ಇವಾವೂ ಕಥೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ಈ ಮೌನವು ಯಾದೃಚ್ಛಿಕವಲ್ಲ. ಅದು ಒಂದು ರಚನಾತ್ಮಕ ಮೌನ (structural silence). ಅಂದರೆ, ಕಥೆಯ ಒಳಗಿನ ಶಕ್ತಿಸಂರಚನೆಗಳು ಆಕೆಗೆ ದನಿ ನೀಡುವುದನ್ನೇ ನಿರಾಕರಿಸುತ್ತವೆ. ಹೀಗಾಗಿ, ವಸುಂಧರಿ ಕೇವಲ ಒಂದು ಪಾತ್ರವಲ್ಲ. ಅವಳು 'ಪ್ರತಿನಿಧಿತ್ವದ ಕೊರತೆ'ಯ ಸಂಕೇತವಾಗಿದ್ದಾಳೆ. ಈ ಮೌನವನ್ನು ಆಧುನಿಕ ಸ್ತ್ರೀವಾದಿ ದೃಷ್ಟಿಕೋನದಲ್ಲಿ ಓದಿದಾಗ, ಅದು sexismನ ಅತ್ಯಂತ ಸೂಕ್ಷ್ಮ ಮತ್ತು ಗಾಢ ರೂಪವಾಗಿ ಕಾಣುತ್ತದೆ. ಹೆಣ್ಣಿನ ಮೇಲೆ ನಡೆಯುವ ಅಸಮಾನತೆಗಳು ಯಾವಾಗಲೂ ಸ್ಪಷ್ಟವಾಗಿ ಹಿಂಸೆ ಅಥವಾ ದಮನದ ರೂಪದಲ್ಲೇ ವ್ಯಕ್ತವಾಗುವುದಿಲ್ಲ. ಕೆಲವೊಮ್ಮೆ ಅವು 'ಸ್ವರಹರಣ'ದ ಮೂಲಕವೂ ನಡೆಯುತ್ತವೆ. ವಸುಂಧರಿಯ ಮೌನವು ಈ ಸ್ವರಹರಣಕ್ಕೆ ಉತ್ತಮ ನಿದರ್ಶನ. ಆಕೆ ಕಥೆಯಲ್ಲಿ ಇದ್ದರೂ, ಆಕೆಯ ಅನುಭವ ಕಥೆಯ ಭಾಗವಾಗುವುದಿಲ್ಲ. ಇದು ಗಾಯತ್ರಿ ಸ್ಪಿವಾಕ್ ಹೇಳುವ 'Can the subaltern speak?' ಎಂಬ ಪ್ರಶ್ನೆಯನ್ನು ನೆನಪಿಸುತ್ತದೆ. ಅಂದರೆ, ಸಾಮಾಜಿಕವಾಗಿ ಅಂಚಿನಲ್ಲಿರುವವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶ

ಪಡೆಯುತ್ತಾರೆಯೇ? ಹೀಗಾಗಿ, ಗಜಕುಮಾರನ ಕಥೆ ಹೆಣ್ಣಿನ ಅನುಪಸ್ಥಿತಿಯನ್ನು ಮಾತ್ರವಲ್ಲ, ಅವಳ 'ನಿರ್ಮಿತ ಅನುಪಸ್ಥಿತಿಯನ್ನು' ಕೂಡ ತೋರಿಸುತ್ತದೆ. ಇಲ್ಲಿ ಹೆಣ್ಣು ಕಾಣಿಸಿಕೊಳ್ಳುತ್ತಾಳೆ. ಆದರೆ ತನ್ನದೇ ಅರ್ಥದಲ್ಲಿ ಅಲ್ಲ. ಅವಳು ಪುರುಷನ ದೃಷ್ಟಿಯಿಂದ ನಿರ್ಮಿತವಾಗಿರುವ ರೂಪಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದ್ದಾಳೆ. ಈ ಅಂಶವು male gaze ಎಂಬ ಪರಿಕಲ್ಪನೆಯೊಂದಿಗೆ ಕೂಡ ಸಂಬಂಧಿಸಿದೆ. ಅಂದರೆ, ಹೆಣ್ಣಿನ ಅಸ್ತಿತ್ವವು ಪುರುಷನ ದೃಷ್ಟಿಗೆ ತೃಪ್ತಿಕರವಾಗುವ ರೀತಿಯಲ್ಲಿ ರೂಪುಗೊಳ್ಳುತ್ತದೆ.

ಈ ಹಿನ್ನೆಲೆಯಲ್ಲಿ ವಸುಂಧರಿಯ ಪಾತ್ರವನ್ನು 'ಮೌನದ ರಾಜಕೀಯ' (politics of silence) ಎಂದು ಕೂಡ ಓದಬಹುದು. ಆಕೆಯ ಮೌನವು ಕೇವಲ ಕಥೆಯ ಶೈಲಿಯಲ್ಲ. ಅದು ಒಂದು ಸಾಮಾಜಿಕ ವಾಸ್ತವಿಕತೆಗೆ ಸಾಕ್ಷಿ. ಈ ಮೌನವನ್ನು ಗುರುತಿಸುವುದೇ ಆಧುನಿಕ ವಿಮರ್ಶಾತ್ಮಕ ಅಧ್ಯಯನದ ಪ್ರಮುಖ ಕೆಲಸ. ಈ ನೇಪಥ್ಯದಲ್ಲಿ ಗಜಕುಮಾರನ ಕಥೆ ಕೇವಲ ಪಿತೃಸತ್ತಾತ್ಮಕ ಸಮಾಜವನ್ನು ಪ್ರತಿಬಿಂಬಿಸುವುದಲ್ಲ. ಅದು ಆ ಸಮಾಜದ ಒಳಗಿನ ಮೌನಗಳನ್ನೂ, ಅಸಮಾನತೆಗಳನ್ನೂ ಅನಾವರಣಗೊಳಿಸುತ್ತದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಲೈಂಗಿಕತೆಯ ವಿಶ್ಲೇಷಣೆ ಕೇವಲ ಕ್ರಿಯೆಗಳ ಅಧ್ಯಯನವಲ್ಲ. ಅದು ಅಧಿಕಾರದ, ಪ್ರತಿನಿಧಿತ್ವದ ಮತ್ತು ಮೌನದ ಅಧ್ಯಯನವೂ ಆಗಿದೆ. ಗಜಕುಮಾರನ ಕಥೆಯಲ್ಲಿ ಈ ಮೂರು ಅಂಶಗಳು ಪರಸ್ಪರ ಹೊಂದಿಕೊಂಡು, ಜಟಿಲ ಚಾರಿತ್ರಿಕ ಮತ್ತು ತಾತ್ವಿಕ ರೂಪವನ್ನು ಸ್ಪಷ್ಟಪಡಿಸುತ್ತವೆ.

ಈ ಕಥೆಯ ಮತ್ತೊಂದು ಮಹತ್ವದ ಆಯಾಮವೆಂದರೆ 'ಪರಸ್ತ್ರೀ ಸಂಬಂಧ'ದ ಚಿತ್ರಣವನ್ನು ಕೇವಲ ನೈತಿಕ ಉಲ್ಲಂಘನೆಯ ಮಟ್ಟದಲ್ಲಿ ಮಾತ್ರವಲ್ಲ, ಒಂದು ಸಮಾಜದ ಸಾಮಾಜಿಕ–ಸಾಂಸ್ಕೃತಿಕ ಸಂಕೇತವಾಗಿ ಓದಬೇಕಾದುದು. ಗಜಕುಮಾರನ ವರ್ತನೆ ವೈಯಕ್ತಿಕ ಭೋಗಾಸಕ್ತಿಯ ಅಭಿವ್ಯಕ್ತಿಯಷ್ಟೇ ಅಲ್ಲ. ಅದು ಸಮಾಜದ ನೈತಿಕ ಗಡಿ–ರೇಖೆಗಳನ್ನು ಮೀರುವ ಕ್ರಿಯೆಯಾಗಿದೆ. ಇಲ್ಲಿ 'ಪರಸ್ತ್ರೀ' ಎಂಬ ಕಲ್ಪನೆ ಸ್ವತಃ ಒಂದು ಸಾಮಾಜಿಕ ನಿರ್ಮಿತಿ. ಇದು ಸಂಬಂಧಗಳ ಮೌಲ್ಯವ್ಯವಸ್ಥೆಯನ್ನು ನಿರ್ಧರಿಸುವ ಸಾಧನ. ಗಜಕುಮಾರನು ಈ ಗಡಿಯನ್ನು ಮೀರುವುದರಿಂದ, ಅವನು ಕೇವಲ ಒಬ್ಬ ವ್ಯಕ್ತಿಯನ್ನು ನೋಯಿಸುವುದಿಲ್ಲ. ಬದಲಿಗೆ ಇಡೀ ಸಮುದಾಯದ ನೈತಿಕ ವ್ಯವಸ್ಥೆಗೆ ಸವಾಲು ಹಾಕುತ್ತಾನೆ. ಈ ಹಿನ್ನೆಲೆಯಲ್ಲಿಯೇ ಪಂಗುಳನ ಪ್ರತೀಕಾರವನ್ನು ನೋಡಿದಾಗ, ಅದು ಕೇವಲ ವೈಯಕ್ತಿಕ ಕೋಪದ ಪ್ರತಿಕ್ರಿಯೆಯಾಗಿ ಕಾಣುವುದಿಲ್ಲ. ಅದು 'ಸಾಮಾಜಿಕ ನ್ಯಾಯ'ದ ಒಂದು ಹಿಂಸಾತ್ಮಕ ರೂಪವಾಗಿ ಕಾಣಿಸುತ್ತದೆ. ಪಂಗುಳನ ಕ್ರಿಯೆ ವ್ಯಕ್ತಿಗತ ನೋವಿನಿಂದ ಹುಟ್ಟಿದರೂ, ಅದು ಸಮುದಾಯದ ನೈತಿಕತೆಯ ಪರವಾಗಿ ನಡೆಯುವ ಕ್ರಮವಾಗಿ ರೂಪುಗೊಳ್ಳುತ್ತದೆ. ಇಲ್ಲಿ ಸಮಾಜವು ತನ್ನ ಮೌಲ್ಯಗಳನ್ನು

ಕಾಪಾಡಿಕೊಳ್ಳಲು, ವೈಯಕ್ತಿಕ ಹಿಂಸೆಯನ್ನೂ ಸಹ ಸ್ವೀಕರಿಸುವ ಸ್ಥಿತಿಯನ್ನು ಕಾಣಬಹುದು. ಈ ಅಂಶವು ನಮಗೆ ಒಂದು ಪ್ರಮುಖ ತಾತ್ವಿಕ ಪ್ರಶ್ನೆಯನ್ನು ಎತ್ತುತ್ತದೆ. ನೈತಿಕ ಉಲ್ಲಂಘನೆಗೆ ಸಾಮಾಜಿಕ ಪ್ರತಿಕ್ರಿಯೆ ಯಾವ ಮಟ್ಟಿಗೆ ನ್ಯಾಯಸಮ್ಮತವಾಗಿರಬೇಕು? ಈ ಘಟನೆಯ ಮೂಲಕ ಕಥೆ ಒಂದು ಗಾಢವಾದ ಸತ್ಯವನ್ನು ಸೂಚಿಸುತ್ತದೆ. ಅದೆಂದರೆ ಲೈಂಗಿಕತೆ ಕೇವಲ ವೈಯಕ್ತಿಕ ಅನುಭವವಲ್ಲ. ಅದು ಸಾಮಾಜಿಕ ಸಂಬಂಧಗಳ ಜಾಲದಲ್ಲಿ ಬೇರೂರಿರುವ ಒಂದು ಪ್ರಕ್ರಿಯೆ. ಗಜಕುಮಾರನ ಕೃತ್ಯಗಳಿಂದಾಗಿ ಉಂಟಾಗುವ ನೋವು, ದ್ರೋಹ ಮತ್ತು ನಂಬಿಕೆಯ ಭಂಗವು ವ್ಯಕ್ತಿಯ ಮಟ್ಟವನ್ನು ಮೀರಿ, ಸಮುದಾಯದ ಮಟ್ಟಕ್ಕೆ ವಿಸ್ತರಿಸುತ್ತದೆ. ಇದೇ ಅಂಶವು ಆಧುನಿಕ ಸಮಾಜದಲ್ಲಿಯೂ ಮುಂದುವರಿಯುತ್ತಿದೆ. ಇಂದಿನ ಸಂಬಂಧಗಳಲ್ಲಿ 'trust' ಎಂಬ ಅಂಶವು ಕೇಂದ್ರಸ್ಥಾನದಲ್ಲಿದೆ. ಅದರಲ್ಲಿ ಉಂಟಾಗುವ ಭಂಗವು ಕೇವಲ ವೈಯಕ್ತಿಕ ಮನೋವ್ಯಥೆಯಲ್ಲ, ಅದು ಸಂಬಂಧಗಳ ಮೂಲಭೂತ ಅಸ್ತಿತ್ವವನ್ನೇ ಪ್ರಶ್ನಿಸುವ ಘಟನೆ.

ಈ ಕಥೆಯ ನಿಜವಾದ ತಾತ್ವಿಕ ತಿರುವು ಅರಿಷ್ಟನೇಮಿ ಭಟಾರರ ಉಪದೇಶದ ನಂತರ ಕಾಣಿಸುತ್ತದೆ. ಈ ತಿರುವು ಕೇವಲ ಕಥನಾತ್ಮಕವಾಗಿಲ್ಲ. ಅದು ತಾತ್ವಿಕವಾಗಿ ಒಂದು ಪರಿವರ್ತನೆಯ ಘಟ್ಟವಾಗಿದೆ. ಗಜಕುಮಾರನಲ್ಲಿ ಉಂಟಾಗುವ ವೈರಾಗ್ಯವು, ಜೈನ ಧರ್ಮದ ಲೈಂಗಿಕತೆಯ ಮೇಲಿನ ದೃಷ್ಟಿಕೋನವನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಲೈಂಗಿಕ ಆಸಕ್ತಿ ದುಃಖದ ಮೂಲವೆಂದು ಪರಿಗಣಿಸಲಾಗುತ್ತದೆ. 'ಆಸಕ್ತಿ ? ಬಂಧನ ? ದುಃಖ' ಎಂಬ ಕಾರ್ಯಕಾರಣ ಸಂಬಂಧವನ್ನು ಜೈನ ತತ್ವಶಾಸ್ತ್ರವು ನಿರೂಪಿಸುತ್ತದೆ. ದೇಹ ಮತ್ತು ಇಂದ್ರಿಯಸುಖಗಳು ಮಾನವನನ್ನು ಸಂಸಾರ ಚಕ್ರದಲ್ಲಿ ಬಂಧಿಸುವ ಶಕ್ತಿಗಳಾಗಿವೆ. ಅವುಗಳಿಂದ ವಿಮುಕ್ತಿಯೇ ಮೋಕ್ಷದ ಮಾರ್ಗ. ಈ ದೃಷ್ಟಿಯಲ್ಲಿ, ಲೈಂಗಿಕತೆ ಒಂದು ಸ್ವತಂತ್ರ ಮೌಲ್ಯವಲ್ಲ. ಅದು ಮೀರಬೇಕಾದ ಅಡ್ಡಿಯಾಗುತ್ತದೆ. ಇದರಿಂದ ಜೈನ ಧರ್ಮವು ಲೈಂಗಿಕತೆಯನ್ನು 'ನಿಯಂತ್ರಿಸಬೇಕಾದ' ಅಥವಾ 'ತ್ಯಜಿಸಬೇಕಾದ' ಅಂಶವೆಂದು ಪರಿಗಣಿಸುತ್ತದೆ. ಇಲ್ಲಿ ಪರಿಹಾರವು ಸಾಮಾಜಿಕ ಪುನರ್‌ವ್ಯವಸ್ಥೆಯಲ್ಲ, ವೈಯಕ್ತಿಕ ಆತ್ಮಶುದ್ಧಿಯಲ್ಲಿ ಕಂಡುಬರುತ್ತದೆ. ಗಜಕುಮಾರನ ವೈರಾಗ್ಯವು ಈ ಅರ್ಥದಲ್ಲಿ ಕೇವಲ ವೈಯಕ್ತಿಕ ನಿರ್ಧಾರವಲ್ಲ. ಅದೊಂದು ತಾತ್ವಿಕ ಅನುಭವ, ಆಸೆಯಿಂದ ಮುಕ್ತವಾಗುವ ಪ್ರಯತ್ನ. ಇದೇ ಅಂಶವನ್ನು ಆಧುನಿಕ ಲೈಂಗಿಕತಾವಾದದ ದೃಷ್ಟಿಯಿಂದ ನೋಡಿದಾಗ, ಇದು ಸಂಪೂರ್ಣ ವಿಭಿನ್ನವಾಗುತ್ತದೆ. ಆಧುನಿಕ ಚಿಂತನೆಗಳು ಲೈಂಗಿಕತೆಯನ್ನು ಮಾನವನ ಸ್ವಾಭಾವಿಕ ಮತ್ತು ಅವಿಭಾಜ್ಯ ಭಾಗವೆಂದು ಪರಿಗಣಿಸುತ್ತವೆ. ಲೈಂಗಿಕತೆ ಮಾನವನ ಗುರುತಿನ (identity) ಭಾಗವಾಗಿದ್ದು, ಅದನ್ನು ನಿರಾಕರಿಸುವುದು ಅಥವಾ ತ್ಯಜಿಸುವುದು ಮಾನವ ಅನುಭವವನ್ನು

ಸೀಮಿತಗೊಳಿಸುವುದಾಗಿ ಪರಿಗಣಿಸಲಾಗುತ್ತದೆ. ಹೀಗಾಗಿ, ಆಧುನಿಕ ದೃಷ್ಟಿಯಲ್ಲಿ ಸಮಸ್ಯೆ ಲೈಂಗಿಕತೆಯಲ್ಲ. ಅದನ್ನು ನಿಯಂತ್ರಿಸುವ ಮತ್ತು ರೂಪಿಸುವ ಸಾಮಾಜಿಕ ವ್ಯವಸ್ಥೆಯಲ್ಲಿದೆ. ಈ ಕಾರಣಕ್ಕಾಗಿ ಇಲ್ಲಿ ಸಮ್ಮತಿ, ಸ್ವಾಯತ್ತತೆ ಮತ್ತು ಸಮಾನತೆ ಎಂಬ ತತ್ವಗಳು ಕೇಂದ್ರಸ್ಥಾನ ಪಡೆಯುತ್ತವೆ. ಲೈಂಗಿಕ ಸಂಬಂಧಗಳು ಪರಸ್ಪರ ಒಪ್ಪಿಗೆಯ ಮೇಲೆ ನಿಂತಿರಬೇಕು. ಅವು ಅಧಿಕಾರದ ಅಸಮಾನತೆಯಿಂದ ನಿರ್ಧಾರವಾಗಬಾರದು. ಈ ದೃಷ್ಟಿಯಲ್ಲಿ ಗಜಕುಮಾರನ ವರ್ತನೆ ಕೇವಲ ನೈತಿಕ ತಪ್ಪಲ್ಲ. ಅದು ವ್ಯವಸ್ಥಾತ್ಮಕ ಅಸಮಾನತೆಗೆ ನಿದರ್ಶನ. ಆಧುನಿಕ ಚಿಂತನೆಗಳು ಲೈಂಗಿಕತೆಯನ್ನು ತ್ಯಜಿಸುವುದನ್ನು ಪರಿಹಾರವೆಂದು ಪರಿಗಣಿಸುವುದಿಲ್ಲ. ಬದಲಾಗಿ, ಅದನ್ನು ನ್ಯಾಯಸಮ್ಮತ ಮತ್ತು ಸಮಾನತೆಯ ಆಧಾರದ ಮೇಲೆ ಪುನರ್‌ರಚಿಸಲು ಪ್ರಯತ್ನಿಸುತ್ತವೆ.

ಈ ಎರಡು ದೃಷ್ಟಿಕೋನಗಳ ನಡುವಿನ ವ್ಯತ್ಯಾಸವು ಮೂಲಭೂತವಾಗಿದೆ. ಜೈನ ಧರ್ಮವು ಸಮಸ್ಯೆಯನ್ನು 'ಆಸಕ್ತಿ'ಯಲ್ಲಿ ಕಂಡು, ಅದನ್ನು 'ತ್ಯಜಿಸು'ವುದನ್ನು ಪರಿಹಾರವೆಂದು ಸೂಚಿಸಿದರೆ, ಆಧುನಿಕ ಲೈಂಗಿಕತಾವಾದವು ಸಮಸ್ಯೆಯನ್ನು 'ಅಸಮಾನ ಅಧಿಕಾರದ ಸಂಬಂಧಗಳಲ್ಲಿ' ಕಂಡು, ಅದನ್ನು 'ಸರಿಪಡಿಸು'ವುದನ್ನು ಪರಿಹಾರವೆಂದು ಸೂಚಿಸುತ್ತದೆ. ಒಂದರಲ್ಲಿ ವ್ಯಕ್ತಿಯ ಒಳಜಗತ್ತಿನ ಪರಿವರ್ತನೆ ಮುಖ್ಯವಾದರೆ, ಮತ್ತೊಂದರಲ್ಲಿ ಬಾಹ್ಯ ಜಗತ್ತಾದ ಸಾಮಾಜಿಕ ರಚನೆಯ ಪರಿವರ್ತನೆ ಮುಖ್ಯವಾಗುತ್ತದೆ. ಆದರೂ, ಈ ಎರಡೂ ಪರಂಪರೆಗಳ ನಡುವೆ ಒಂದು ಸೂಕ್ಷ್ಮ ಸಾಮ್ಯತೆಯೂ ಇದೆ. ಎರಡೂ ಲೈಂಗಿಕತೆಯ ಪರಿಣಾಮಗಳನ್ನು ಗಂಭೀರವಾಗಿ ಪರಿಗಣಿಸುತ್ತವೆ. ಜೈನ ದೃಷ್ಟಿಯಲ್ಲಿ ಅದು ಆತ್ಮಬಂಧನಕ್ಕೆ ಕಾರಣವಾಗುತ್ತದೆ. ಆಧುನಿಕ ದೃಷ್ಟಿಯಲ್ಲಿ ಅದು ಅನ್ಯಾಯ ಮತ್ತು ನೋವಿಗೆ ಕಾರಣವಾಗಬಹುದು. ಈ ಸಾಮ್ಯತೆ ನಮಗೆ ಒಂದು ಗಾಢವಾದ ಅರಿವನ್ನು ನೀಡುತ್ತದೆ– ಲೈಂಗಿಕತೆ ಮಾನವನ ಜೀವನದಲ್ಲಿ ಕೇವಲ ಸಂತೋಷದ ಮೂಲವಲ್ಲ. ಅದು ಸಂಕೀರ್ಣ ನೈತಿಕ ಮತ್ತು ಸಾಮಾಜಿಕ ಪ್ರಶ್ನೆಗಳ ಮೂಲವೂ ಆಗಿದೆ. ಹೀಗಾಗಿ, ಗಜಕುಮಾರನ ಕಥೆಯ ಈ ಭಾಗವು ಕೇವಲ ಒಂದು ನೈತಿಕ ಪಾಠವಲ್ಲ. ಅದು ಲೈಂಗಿಕತೆ, ನೈತಿಕತೆ ಮತ್ತು ಮುಕ್ತಿಯ ಕುರಿತು ನಡೆಯುವ ಎರಡು ವಿಭಿನ್ನ ತಾತ್ವಿಕ ದೃಷ್ಟಿಕೋನಗಳ ನಡುವಿನ ಸಂವಾದವಾಗಿದೆ. ಈ ಸಂವಾದವೇ ಈ ಕಥೆಯನ್ನು ಕಾಲಾತೀತವಾಗಿಸುತ್ತದೆ ಮತ್ತು ಇಂದಿನ ಅಧ್ಯಯನಗಳಲ್ಲಿ ಅದರ ಪ್ರಾಸಂಗಿಕತೆಯನ್ನು ಹೆಚ್ಚಿಸುತ್ತದೆ.

ಪ್ರಾಚೀನ ಕಾಲದಲ್ಲಿ ಅಸಮಾನತೆಗಳನ್ನು ಪ್ರಶ್ನಿಸುವ ಬದಲು, ಅವುಗಳನ್ನು ಮೀರಲು ಧಾರ್ಮಿಕ ವೈರಾಗ್ಯವನ್ನು ಮಾರ್ಗವಾಗಿ ಸೂಚಿಸಲಾಗುತ್ತಿತ್ತು. ಜೈನ ಧರ್ಮದ ದೃಷ್ಟಿಯಲ್ಲಿ ಸಮಸ್ಯೆ ಲೈಂಗಿಕತೆಯಲ್ಲಿರುವ ಆಸಕ್ತಿಯಲ್ಲಿದೆ. ಆದ್ದರಿಂದ ಅದರ ನಿವೃತ್ತಿಯೇ ಮುಕ್ತಿಯ

ಮಾರ್ಗ. ಈ ನಿಲುವು ವ್ಯಕ್ತಿಯ ಒಳಜಗತ್ತಿನ ಶುದ್ಧೀಕರಣವನ್ನು ಮುಖ್ಯವಾಗಿ ನೋಡುತ್ತದೆ. ಆದರೆ ಆಧುನಿಕ ಸಮಾಜದಲ್ಲಿ, ಇದೇ ಸಮಸ್ಯೆಯನ್ನು ಸಾಮಾಜಿಕ–ರಾಜಕೀಯ ದೃಷ್ಟಿಯಿಂದ ನೋಡಲಾಗುತ್ತದೆ. ಲೈಂಗಿಕ ಅಸಮಾನತೆಗಳು ವೈಯಕ್ತಿಕ ದೋಷಗಳಲ್ಲ. ಅವು ವ್ಯವಸ್ಥಾತ್ಮಕ ಸಮಸ್ಯೆಗಳಾಗಿವೆ ಎಂಬ ಅರಿವು ಬೆಳೆಯುತ್ತಿದೆ. ಹೀಗಾಗಿ, ಪರಿಹಾರವೂ ವೈಯಕ್ತಿಕ ತ್ಯಾಗದಲ್ಲಲ್ಲ. ಬದಲಾಗಿ ಸಮಾನತೆ, ನ್ಯಾಯ ಮತ್ತು ಸಮ್ಮತಿಯ ಆಧಾರದ ಮೇಲೆ ಸಮಾಜವನ್ನು ಪುನರ್‌ರಚಿಸುವುದರಲ್ಲಿ ಕಂಡುಬರುತ್ತದೆ. ಈ ಬದಲಾವಣೆಯು ಕೇವಲ ವಿಧಾನದಲ್ಲಿನ ವ್ಯತ್ಯಾಸವಲ್ಲ. ಅದು ಮಾನವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಕೋನದಲ್ಲಿನ ಮೂಲಭೂತ ಪರಿವರ್ತನೆಯಾಗಿದೆ. ಒಂದೆಡೆ, ಪ್ರಾಚೀನ ಧಾರ್ಮಿಕ ಚಿಂತನೆಗಳು 'ಆಸೆಯಿಂದ ಮುಕ್ತಿಹೊಂದು' ಎಂದು ಹೇಳಿದರೆ, ಮತ್ತೊಂದೆಡೆ ಆಧುನಿಕ ಚಿಂತನೆಗಳು 'ಅಸಮಾನತೆಯನ್ನು ನಿವಾರಿಸು' ಎಂದು ಹೇಳುತ್ತವೆ. ಈ ಎರಡು ನಿಲುವುಗಳ ನಡುವಿನ ವ್ಯತ್ಯಾಸವು ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧವನ್ನು ಹೇಗೆ ಗ್ರಹಿಸುತ್ತೇವೆ ಎಂಬುದರ ಮೇಲೆ ಅವಲಂಬಿತವಾಗಿದೆ.

ಈ ಕಥೆಯ ಅಂತ್ಯವು ಈ ದ್ವಂದ್ವವನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ. ಗಜಕುಮಾರನು ವೈರಾಗ್ಯ ಹೊಂದಿ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯುತ್ತಾನೆ. ಅವನ ಒಳಜಗತ್ತಿನಲ್ಲಿ ಉಂಟಾಗುವ ಬದಲಾವಣೆ, ಅವನನ್ನು ಭೋಗದಿಂದ ಮುಕ್ತಿಯತ್ತ ಕೊಂಡೊಯ್ಯುತ್ತದೆ. ಇಲ್ಲಿ ಮುಕ್ತಿ ಒಂದು ಆಂತರಿಕ ಅನುಭವವಾಗಿದೆ. ಅದು ಸಮಾಜದ ಹೊರಗಿನ ಅಂಶಗಳಿಗಿಂತ ವ್ಯಕ್ತಿಯ ಒಳಗಿನ ಪರಿವರ್ತನೆಯ ಮೇಲೆ ಅವಲಂಬಿತವಾಗಿದೆ. ಆದರೆ ಪಂಗುಳನ ಕ್ರಿಯೆ ಸಂಪೂರ್ಣ ವಿಭಿನ್ನವಾಗಿದೆ. ಅದು ವೈಯಕ್ತಿಕ ನೋವಿನಿಂದ ಹುಟ್ಟಿದರೂ, ಸಾಮಾಜಿಕ ಪ್ರತಿಕ್ರಿಯೆಯ ರೂಪವನ್ನು ಪಡೆಯುತ್ತದೆ. ಇದು ನ್ಯಾಯ, ಪ್ರತೀಕಾರ ಮತ್ತು ನೈತಿಕತೆಯ ನಡುವಿನ ಸಂಕೀರ್ಣ ಸಂಬಂಧವನ್ನು ತೋರಿಸುತ್ತದೆ.

ಈ ಎರಡು ಮಟ್ಟಗಳು ವೈಯಕ್ತಿಕ ಮತ್ತು ಸಾಮಾಜಿಕ ಲೈಂಗಿಕತೆಯ ವಿಶ್ಲೇಷಣೆಯಲ್ಲಿ ಒಂದಕ್ಕೊಂದು ವಿರುದ್ಧವಾಗಿಯೂ, ಪರಸ್ಪರಪೂರಕವಾಗಿಯೂ ಕಾಣುತ್ತವೆ. ಒಂದರಲ್ಲಿ ಶಾಂತಿ ಮತ್ತು ಆತ್ಮಶುದ್ಧಿ ಕಂಡುಬಂದರೆ, ಮತ್ತೊಂದರಲ್ಲಿ ಸಂಘರ್ಷ ಮತ್ತು ನ್ಯಾಯದ ಹುಡುಕಾಟ ಕಾಣುತ್ತದೆ. ತಾತ್ವಿಕವಾಗಿ ನೋಡಿದರೆ, ಈ ಎರಡೂ ಮಾರ್ಗಗಳು ಮಾನವ ಜೀವನದ ಎರಡು ಅನಿವಾರ್ಯ ಆಯಾಮಗಳನ್ನು ಪ್ರತಿಬಿಂಬಿಸುತ್ತವೆ. ವ್ಯಕ್ತಿಯ ಒಳಜಗತ್ತಿನ ಪರಿವರ್ತನೆಯಿಲ್ಲದೆ ಸಾಮಾಜಿಕ ನ್ಯಾಯ ಸಂಪೂರ್ಣವಾಗುವುದಿಲ್ಲ. ಅದೇ ರೀತಿ ಸಾಮಾಜಿಕ ಅಸಮಾನತೆಗಳನ್ನು ಪರಿಹರಿಸದೆ ವೈಯಕ್ತಿಕ ಮುಕ್ತಿಯೂ ಸಮಗ್ರವಾಗುವುದಿಲ್ಲ. ಹೀಗಾಗಿ, ಈ ಕಥೆ ನಮಗೆ ಸೂಚಿಸುವುದೇನೆಂದರೆ– ಲೈಂಗಿಕತೆಯ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು,

ನಾವು ವ್ಯಕ್ತಿ ಮತ್ತು ಸಮಾಜ ಎರಡನ್ನೂ ಸಮಾನವಾಗಿ ಪರಿಗಣಿಸಬೇಕಾಗಿದೆ. ಆಧುನಿಕ ದೃಷ್ಟಿಯಲ್ಲಿ ಈ ಕಥೆಯನ್ನು ಪುನರ್ ಅವಲೋಕಿಸಿದಾಗ, ಅದು ಕೇವಲ ಕೆಲವು ನೈತಿಕ ಪ್ರಶ್ನೆಗಳನ್ನು ಮಾತ್ರವಲ್ಲ, ಮಾನವ ಅಸ್ತಿತ್ವದ ಮೂಲಭೂತ ಪ್ರಶ್ನೆಗಳನ್ನೇ ಎತ್ತುತ್ತದೆ. ಹೆಣ್ಣಿನ ಸ್ವಾಯತ್ತತೆ ಎಲ್ಲಿ? ಸಮ್ಮತಿಯ ಸ್ಥಾನ ಏನು? ಲೈಂಗಿಕತೆಯ ನಿಯಂತ್ರಣ ಯಾರ ಕೈಯಲ್ಲಿ? ಎಂಬ ಪ್ರಶ್ನೆಗಳು ಇಲ್ಲಿ ಕೇವಲ ಸಾಮಾಜಿಕ ಅಥವಾ ಕಾನೂನುಬದ್ಧ ವಿಚಾರಗಳಲ್ಲ. ಅವು ತಾತ್ವಿಕವಾಗಿ 'ಮಾನವ ಸ್ವಾತಂತ್ರ್ಯ' ಮತ್ತು 'ಅಧಿಕಾರದ ಸ್ವರೂಪ'ದ ಕುರಿತು ಆಲೋಚಿಸಲು ನಮ್ಮನ್ನು ಪ್ರೇರೇಪಿಸುತ್ತವೆ. ಈ ಪ್ರಶ್ನೆಗಳು ಆಧುನಿಕ ಸಮಾಜದಲ್ಲಿ ತೀವ್ರವಾಗಿ ವ್ಯಕ್ತವಾಗುತ್ತಿದ್ದರೂ, ಅವುಗಳ ಬೇರುಗಳು ಇತಿಹಾಸದಲ್ಲಿಯೇ ಅಡಗಿವೆ ಎಂಬುದನ್ನು ಗಜಕುಮಾರನ ಕಥೆ ಸ್ಪಷ್ಟಪಡಿಸುತ್ತದೆ. ಅಂದರೆ, ಈ ಕಥೆ ನಮಗೆ ಕೇವಲ ಭೂತಕಾಲದ ಒಂದು ಚಿತ್ರಣವನ್ನೇ ನೀಡುವುದಿಲ್ಲ. ಅದು ಇಂದಿನ ಚಿಂತನೆಗಳ ಮೂಲವನ್ನು ಅರ್ಥಮಾಡಿಕೊಳ್ಳಲು ಸಹ ಸಹಾಯ ಮಾಡುತ್ತದೆ.

ಹೆಣ್ಣಿನ ಸ್ವಾಯತ್ತತೆ ಎಂಬ ಪ್ರಶ್ನೆಯನ್ನು ಈ ಕಥೆಯ ಹಿನ್ನೆಲೆಯಲ್ಲಿಯೇ ಪರಿಗಣಿಸಿದರೆ, ಅದು ಕೇವಲ ವ್ಯಕ್ತಿಯ ಹಕ್ಕಿನ ವಿಚಾರವಲ್ಲ. ಅದು ಪ್ರತಿನಿಧಿತ್ವದ (representation) ಸಮಸ್ಯೆಯಾಗಿದೆ. ಹೆಣ್ಣು ಕಥೆಯಲ್ಲಿ ಕಾಣಿಸಿಕೊಳ್ಳುತ್ತಾಳಾದರೂ, ಅವಳ ಇಚ್ಛೆಗಳು ಮತ್ತು ನಿರ್ಧಾರಗಳು ಕೇಂದ್ರಸ್ಥಾನ ಪಡೆಯುವುದಿಲ್ಲ. ಇದು ನಮಗೆ ಒಂದು ಪ್ರಮುಖ ತಾತ್ವಿಕ ಅರಿವನ್ನು ನೀಡುತ್ತದೆ. ಸ್ವಾಯತ್ತತೆ ಎಂದರೆ ಕೇವಲ ಕ್ರಿಯಾಶೀಲತೆಯಲ್ಲ. ಅದು ಧ್ವನಿಯ ಅಸ್ತಿತ್ವವೂ ಆಗಿದೆ. ಸಮ್ಮತಿಯ ಪ್ರಶ್ನೆಯೂ ಇದೇ ರೀತಿಯಲ್ಲಿ ವಿಸ್ತಾರವಾಗುತ್ತದೆ. ಸಮ್ಮತಿ ಕೇವಲ ಒಪ್ಪಿಗೆ ನೀಡುವ ಕ್ರಿಯೆಯಲ್ಲ. ಅದು ಸಮಾನ ಅಧಿಕಾರದ ಸಂಬಂಧಗಳಲ್ಲಿಯೇ ಅರ್ಥಪೂರ್ಣವಾಗುತ್ತದೆ. ಅಸಮಾನತೆಯ ನಡುವೆ ವ್ಯಕ್ತವಾಗುವ 'ಸಮ್ಮತಿ' ನಿಜವಾದ ಸ್ವಾತಂತ್ರ್ಯವನ್ನು ಪ್ರತಿಬಿಂಬಿಸುವುದಿಲ್ಲ ಎಂಬುದು ಆಧುನಿಕ ಚಿಂತನೆಗಳ ಮೂಲಭೂತ ನಿಲುವಾಗಿದೆ. ಲೈಂಗಿಕತೆಯ ನಿಯಂತ್ರಣದ ಪ್ರಶ್ನೆ ಇನ್ನೂ ಗಂಭೀರವಾಗಿದೆ. ಗಜಕುಮಾರನ ಕಥೆಯಲ್ಲಿ ಈ ನಿಯಂತ್ರಣವು ರಾಜಕೀಯ ಶಕ್ತಿ ಮತ್ತು ಪಿತೃಸತ್ತಾತ್ಮಕ ವ್ಯವಸ್ಥೆಗಳ ಕೈಯಲ್ಲಿದೆ. ಆದರೆ ಆಧುನಿಕ ಸಮಾಜದಲ್ಲಿ, ಈ ನಿಯಂತ್ರಣವು ಕಾನೂನು, ಸಂಸ್ಕೃತಿ, ಮಾಧ್ಯಮ ಮತ್ತು ಸಾಮಾಜಿಕ ನಿಯಮಗಳ ಮೂಲಕ ವಿಭಜಿತವಾಗಿರುತ್ತದೆ. ಹೀಗಾಗಿ, ಲೈಂಗಿಕತೆಯ ನಿಯಂತ್ರಣವು ಏಕಕೇಂದ್ರಿತ ಪ್ರಕ್ರಿಯೆಯಲ್ಲ. ಅದು ಬಹುಮಟ್ಟಿನ ಅಧಿಕಾರದ ಸಂರಚನೆಗಳ ನಡುವೆ ಹಂಚಲ್ಪಟ್ಟಿದೆ. ಈ ಅಂಶವು ನಮಗೆ ಲೈಂಗಿಕತೆಯನ್ನು 'ಸ್ವಾಭಾವಿಕ' ಅಥವಾ 'ವೈಯಕ್ತಿಕ' ಎಂದು ಮಾತ್ರ ಅರ್ಥಮಾಡಿಕೊಳ್ಳುವುದರಿಂದ ಅದರ ಸಂಪೂರ್ಣ ಅರ್ಥವನ್ನು ಗ್ರಹಿಸಲು ಸಾಧ್ಯವಿಲ್ಲ ಎಂಬುದನ್ನು ತಿಳಿಸುತ್ತದೆ.

ಈ ಹಿನ್ನೆಲೆಯಲ್ಲಿ, ಗಜಕುಮಾರನ ಕಥೆ ಒಂದು ಮಹತ್ವದ ತಾತ್ವಿಕ ನಿರ್ಣಯಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಲೈಂಗಿಕತೆ ಮಾನವ ಜೀವನದ ನಿರಂತರ ಅಂಶವಾಗಿದ್ದರೂ, ಅದರ ಅರ್ಥ ಮತ್ತು ನಿಯಂತ್ರಣವು ಕಾಲಾನುಸಾರ ಬದಲಾಗುತ್ತವೆ. ಪ್ರಾಚೀನ ಕಾಲದಲ್ಲಿ ಲೈಂಗಿಕತೆಯನ್ನು ಆತ್ಮಬಂಧನದ ಕಾರಣವೆಂದು ಕಂಡು, ಅದನ್ನು ಮೀರಲು ಪ್ರಯತ್ನಿಸಲಾಗುತ್ತಿತ್ತು. ಆದರೆ ಆಧುನಿಕ ಕಾಲದಲ್ಲಿ ಅದನ್ನು ಮಾನವ ಅಸ್ಮಿತೆಯ ಭಾಗವೆಂದು ಪರಿಗಣಿಸಿ, ಅದರ ಸುತ್ತಲಿನ ಅಸಮಾನತೆಯನ್ನು ನಿವಾರಿಸಲು ಪ್ರಯತ್ನಿಸಲಾಗುತ್ತಿದೆ. ಈ ಬದಲಾವಣೆವು ಕೇವಲ ನೈತಿಕ ಮೌಲ್ಯಗಳಲ್ಲಿ ಅಲ್ಲ. ಅದು ಮಾನವ ಅಸ್ತಿತ್ವವನ್ನು ಅರ್ಥಮಾಡಿಕೊಳ್ಳುವ ವಿಧಾನದಲ್ಲಿಯೂ ಉಂಟಾದ ಪರಿವರ್ತನೆಯಾಗಿದೆ.

ಗಜಕುಮಾರನ ಕಥೆಯನ್ನು ಆಧುನಿಕ ವಿಮರ್ಶಾತ್ಮಕ ದೃಷ್ಟಿಕೋನದಲ್ಲಿ ಪುನರ್ ಅವಲೋಕಿಸಿದಾಗ, ಅದು ಕೇವಲ ಇತಿಹಾಸದ ನೆನಪಿನ ಸಂಕಲನವಾಗಿರದೆ, ವರ್ತಮಾನವನ್ನು ವ್ಯಾಖ್ಯಾನಿಸುವ ಸಜೀವ ಸಂವಾದಾತ್ಮಕ ಪಠ್ಯವಾಗಿ ಪರಿಣಮಿಸುತ್ತದೆ. ಈ ಕಥೆಯೊಳಗಿನ ಅರ್ಥಸಂಚಿತವು ಕಾಲಾತೀತ ಮಾನವ ಅನುಭವಗಳ ಸಂಕೇತಶಾಸ್ತ್ರವನ್ನು ಅನಾವರಣಗೊಳಿಸುತ್ತದೆ. ಅಂದರೆ, ಆಸೆಗಳ ರೂಪಾಂತರ, ಅಧಿಕಾರದ ವಿನ್ಯಾಸಗಳು ಮತ್ತು ನೈತಿಕ ಸಂಕೀರ್ಣತೆಗಳು ಕಾಲಕ್ರಮೇಣ ಬದಲಾಗುವಂತೆ ಕಾಣಿಸಿದರೂ, ಅವುಗಳ ಆಂತರಿಕ ತತ್ವಸಂಬಂಧಗಳು ನಿರಂತರತೆಯನ್ನು ಕಾಪಾಡಿಕೊಂಡಿರುತ್ತವೆ. ಈ ನಿರಂತರತೆಯನ್ನು ಗುರುತಿಸುವುದು ಕೇವಲ ಚಾರಿತ್ರಿಕ ಜ್ಞಾನವಲ್ಲ. ಅದು ತಾತ್ವಿಕ ಅರಿವಿನ ಮೂಲಾಧಾರವಾಗಿದೆ. ಏಕೆಂದರೆ, ಇಂದಿನ ಸಮಾಜದಲ್ಲಿ ನಾವು ಎದುರಿಸುತ್ತಿರುವ ಲೈಂಗಿಕ ಅಸಮಾನತೆಗಳು ಮತ್ತು ಅಧಿಕಾರದ ಸಂಬಂಧಗಳ ವೈಷಮ್ಯಗಳು ಏಕಾಏಕಿ ಹುಟ್ಟಿದ ಘಟನಾವಳಿಗಳಲ್ಲ, ಬದಲಾಗಿ ದೀರ್ಘಕಾಲಿಕ ಸಾಂಸ್ಕೃತಿಕ–ಸಂರಚನಾ ಪ್ರಕ್ರಿಯೆಗಳ ಫಲಿತಾಂಶಗಳಾಗಿವೆ. ಈ ದೃಷ್ಟಿಯಿಂದ, ಗಜಕುಮಾರನ ಕಥೆ ಒಂದು ಪಠ್ಯವಷ್ಟೇ ಅಲ್ಲ, ಅದು 'ಅರ್ಥ ನಿರ್ಮಾಣ' (meaning-making) ಮತ್ತು 'ಸಾಂಸ್ಕೃತಿಕ ಸ್ಮೃತಿ' (cultural memory) ಯ ಮಧ್ಯೆ ನಡೆಯುವ ಸಂವಹನದ ವೇದಿಕೆಯಾಗಿದೆ. ಹೀಗಾಗಿ ಗಜಕುಮಾರನ ಕಥೆ ಮತ್ತು ಆಧುನಿಕ ಲೈಂಗಿಕತಾವಾದದ ನಡುವಿನ ಸಂಬಂಧವನ್ನು ಕೇವಲ ತುಲನಾತ್ಮಕ ಅಧ್ಯಯನದ ಮಟ್ಟದಲ್ಲಿ ನಿಲ್ಲಿಸದೇ, ಒಂದು ಗಂಭೀರ ತಾತ್ವಿಕ ಅನ್ವೇಷಣೆಯನ್ನಾಗಿ ಪರಿಗಣಿಸಬೇಕು. ಇದು ಮಾನವ ಸಮಾಜದ ಆಂತರಿಕ ರಚನೆಗಳು, ಅದರ ರಾಜಕೀಯ ಶಕ್ತಿ ಮತ್ತು ನೈತಿಕ ಚಲನೆಗಳ ಬಗ್ಗೆ ಆಳವಾದ ಮನನವನ್ನು ಪ್ರೇರೇಪಿಸುತ್ತದೆ. ಈ ರೀತಿಯ ಓದು, ಪಠ್ಯವನ್ನು ಭೂತಕಾಲದಿಂದ ಮುಕ್ತಗೊಳಿಸಿ, ಅದನ್ನು ವರ್ತಮಾನ ಮತ್ತು ಭವಿಷ್ಯವನ್ನು ಪ್ರಶ್ನಿಸುವ ಸಕ್ರಿಯ ಚಿಂತನೆಯ ಕ್ಷೇತ್ರವಾಗಿ ರೂಪಿಸುತ್ತದೆ.

ಆಕರಗಳು

1. ಕ್ರೆನ್‌ಶಾ ಕಿಂಬರ್ಲೆ, ಆನ್ ಇಂಟರ್‌ಸೆಕ್ಷನಾಲಿಟಿ: ಎಸೆನ್ಶಿಯಲ್ ರೈಟಿಂಗ್ಸ್, ದ ನ್ಯೂ ಪ್ರೆಸ್, 2017
2. ನರಸಿಂಹಾಚಾರ್ ಡಿ.ಎಲ್. (ಸಂ), ಶಿವಕೋಟಾಚಾರ್ಯ ವಿರಚಿತ ವಡ್ಡಾರಾಧನೆ, ಡಿ.ವಿ.ಕೆ.ಮೂರ್ತಿ, ಮೈಸೂರು, 1996 (9ನೆಯ ಮುದ್ರಣ).
3. ಮಿಲ್ಲೆಟ್ ಕೇಟ್, ಸೆಕ್ಶುಯಲ್ ಪಾಲಿಟಿಕ್ಸ್, ಕೊಲಂಬಿಯಾ ಯೂನಿವರ್ಸಿಟಿ ಪ್ರೆಸ್, 2016.
4. ಸಿಮೋನ್ ದ ಬೋವಾ, ದಿ ಸೆಕೆಂಡ್ ಸೆಕ್ಸ್, ಅನು:ಎಚ್.ಎಂ.ಪಾರ್ಷ್ಲೆ, ವಿಂಟೇಜ್ ಬುಕ್ಸ್, 1989
5. ಹುಕ್ಸ್ ಬೆಲ್, ಫೆಮಿನಿಸಮ್ ಇಸ್ ಫಾರ್ ಎವ್ರಿಬಡಿ: ಪ್ಯಾಶನೇಟ್ ಪಾಲಿಟಿಕ್ಸ್, ಸೌತ್ ಎಂಡ್ ಪ್ರೆಸ್, 2000.

***

'ಜೈನ ವೈದ್ಯಕೀಯ ಪರಂಪರೆ'–ಒಂದು ಅವಲೋಕನ

1 **ಡಾ. ಗುರುಸ್ವಾಮಿ ಹಿರೇಮಠ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ನವನಗರ, ಬಾಗಲಕೋಟೆ.

ಜ್ಞಾನ ಪರಂಪರೆಯು ಪ್ರಕೃತಿಯನ್ನು ಅರಿಯುವ ಮತ್ತು ಅದನ್ನು ಮೀರುವ ಪ್ರಯತ್ನದಲ್ಲಿ ನಿರಂತರವಾಗಿ ತೊಡಗಿಕೊಂಡಿದೆ. ಅದು ಪ್ರಾಚೀನ ಕಾಲದಿಂದ ಪ್ರಾರಂಭವಾಗಿ ಅರ್ವಾಚೀನ ಸಂದರ್ಭದಲ್ಲಿಯೂ ಮುಂದುವರೆದಿರುವ ಸಂಗತಿ. ಮಾತ್ರವಲ್ಲ; ಅದೊಂದು ಪ್ರಮುಖ ಪರಂಪರೆಯಾಗಿ ಮುಂದುವರೆಯುತ್ತಿದೆ. ಅದರಲ್ಲೂ ಈ ಸಮಗ್ರ ಜ್ಞಾನವನ್ನು ಲೌಕಿಕ ಮತ್ತು ಪಾರಮಾರ್ಥಿಕ ಶಾಖೆಗಳಾಗಿ ವಿಶೇಷವಾದ ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಹಾಗೆಯೇ ಈ ಪ್ರಕೃತಿಯೊಡ್ಡುವ ಸವಾಲುಗಳನ್ನು ಎದುರಿಸಿ ದೈಹಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ತನ್ನ ಅಸ್ಮಿತೆಯನ್ನು ರೂಪಿಸಿಕೊಳ್ಳುವಲ್ಲಿ ಈ ಪರಂಪರೆಯು ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಹಾಗಾಗಿ ಪುರುಷಾರ್ಥಗಳ ಸಾಧನೆಯಲ್ಲಿ ಈ ಜ್ಞಾನ ಪರಂಪರೆಗಳು ಅತ್ಯಂತ ಮಹತ್ವದ್ದಾಗಿವೆ. ಆದ್ದರಿಂದ ಪ್ರತಿಯೊಂದು ಮತ, ಪಂಥ, ಧರ್ಮಗಳ ಅನುಯಾಯಿಗಳು ತಮ್ಮದೇಯಾದ ಜ್ಞಾನ ಪರಂಪರೆಗಳೊಂದಿಗೆ ಪ್ರಯೋಗಶೀಲ ಮತ್ತು ಗತಿಶೀಲ ವ್ಯವಸ್ಥೆಯೊಂದಿಗೆ ರೂಪಿಸಿಕೊಂಡವರಾಗಿದ್ದಾರೆ. ಅದರಲ್ಲೂ ಭಾರತೀಯ ಜ್ಞಾನ ಪರಂಪರೆಯು ಧರ್ಮದ ಭಾಗವಾಗಿಯೇ ಪುರುಷಾರ್ಥಗಳನ್ನು ರೂಪಿಸಿರುವ ಕಾರಣ ವೈವಿಧ್ಯಮಯವಾದ ಆಲೋಚನೆಗಳ ಆಗರವಾಗಿ ಬೆಳೆದು ಬಂದಿದೆ. ಬಹು ಉಪಾಸನೆಗಳು, ಧರ್ಮಾಚರಣೆಗಳು ಭಾರತೀಯರನ್ನು ವೈವಿಧ್ಯಮವಾಗಿ ರೂಪಿಸಿವೆ. ಅದರಲ್ಲೂ ವೈದ್ಯಕೀಯ ಜ್ಞಾನ ಪರಂಪರೆಯಂತೂ ಧರ್ಮದ ಭಾಗವಾಗಿ ಬೆಳೆದು ಬಂದಿದೆ.

ಅದು ವ್ಯಕ್ತಿಯನ್ನು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ಸಬಲವಾಗಿಸುವ, ಆ ಮೂಲಕ ಪಾರಮಾರ್ಥಿಕ ಬದುಕನ್ನು ಸಹಜವಾಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಈ ನಿಟ್ಟಿನಲ್ಲಿ ಜೈನ ವೈದ್ಯಕೀಯ ಪರಂಪರೆಯು ಮಹತ್ವದ ಶಾಖೆಯಾಗಿ ಬೆಳೆದು ಬಂದಿದೆ. ಈ ಪರಂಪರೆಯು ರೂಪಿಸಿ ಮತ್ತು ರೂಢಿಸಿಕೊಂಡು ಬಂದಿರುವ ವಿಚಾರಗಳನ್ನು ಪ್ರಸ್ತುತ ಲೇಖನಕ್ಕೆ ಬಳಸಿಕೊಳ್ಳಲಾಗಿದೆ.

ಭಾರತೀಯ ವೈದ್ಯಕೀಯ ಪರಂಪರೆಯು ಗುರುಕುಲದೊಂದಿಗೆ ಪ್ರಾರಂಭವಾಗಿ ಇಂದು ವಿಶ್ವವಿದ್ಯಾಲಯದವರೆಗಿನ ಅಧ್ಯಯನ ವಿಷಯವಾಗಿ ಬೆಳೆದುಬಂದಿದೆ. ಮಾತ್ರವಲ್ಲದೇ ಈ ವೈದ್ಯಕೀಯ ಕ್ಷೇತ್ರವು ಜ್ಞಾನಪರಂಪರೆಯೊಂದಿಗೆ ಉದ್ಯಮಕ್ಷೇತ್ರವಾಗಿಯೂ ಜಾಗತಿಕವಾಗಿ ಬೆಳೆಯುತ್ತಿದೆ. ಜೊತೆಗೆ ಜನಸಾಮಾನ್ಯರನ್ನು, ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನು ಮತ್ತು ಈ ಕ್ಷೇತ್ರದ ಸಂಶೋಧಕರನ್ನು ಮುಖ್ಯವಾಗಿಸಿಕೊಂಡು ಅನೇಕ ಕಾರ್ಯಯೋಜನೆಗಳು ಜಾರಿಗೆ ಬರುತ್ತಿವೆ. ಅದರಲ್ಲೂ ಪ್ರತಿಯೊಂದು ದೇಶಗಳು ತಮ್ಮದೇಯಾದ ದೇಶಿಯ ಚಿಂತನಾಕ್ರಮಗಳನ್ನು ಜಾಗೃತಗೊಳಿಸಿಕೊಂಡಿವೆ. ಹೀಗಾಗಿ ತನ್ನ ಸಂಸ್ಕೃತಿಯೊಳಗೆ ತನ್ನನ್ನು ಶೋಧಿಸಿಕೊಳ್ಳುವ, ಅಂತಹ ಅಧ್ಯಯನಗಳಿಗೆ ಮಹತ್ವವೂ ಹೆಚ್ಚುತ್ತಿದೆ. ಪ್ರತಿಯೊಂದು ನೆಲವೂ ತನ್ನದೇಯಾದ ವೈಶಿಷ್ಟ್ಯತೆಯೊಂದಿಗೆ ಮತ್ತು ಇದುವರೆಗೆ ನಿರ್ಲಕ್ಷಿತವಾಗಿದ್ದ ಸಂಗತಿಗಳನ್ನು ಮರು ಶೋಧಿಸುವ ಕಾರ್ಯದಲ್ಲಿವೆ.

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉದಾತ್ ಚಿಂತನೆಗಳಿಂದ ಸಾಂಸ್ಕೃತಿಕ ಪರಂಪರೆಯೊಂದಿಗೆ ಜನಜೀವನದ ಅಂತರಂಗ ಮತ್ತು ಬಹಿರಂಗದ ಬದುಕಿನ ಅನಾವರಣವೂ ದಾಖಲಾಗುತ್ತಾ ಬಂದಿದೆ. ಇದರಲ್ಲಿ ವೈದ್ಯಕೀಯ ಅಧ್ಯಯನಗಳು ಹೊರತಾಗಿಲ್ಲ. ಈ ಎಲ್ಲವುಗಳ ಮದ್ಯದಲ್ಲಿ ಪ್ರಸ್ತುತ 'ಜೈನ ವೈದ್ಯಕೀಯ ಪರಂಪರೆ' ಒಂದು ವಿಶಿಷ್ಟ ಕೃತಿಯಾಗಿದ್ದು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಇದನ್ನು ಪ್ರಕಟ ಮಾಡಿದೆ. ಡಾ. ಧನ್ಯಾಕುಮಾರ ಇಜಾರಿ ಈ ಕೃತಿಯ ಲೇಖಕರು. ಈ ಕೃತಿಯು ದೇಸಿ, ಸಾಂಪ್ರದಾಯಿಕ ಮತ್ತು ಆಧುನಿಕ ವಿಚಾರಧಾರೆಗಳನ್ನು ಮುಖಾಮುಖಿಯಾಗಿಸುವ ಪ್ರಯತ್ನದ ಭಾಗವಾಗಿ ರೂಪು ತಾಳಿದೆ.

'ಜೈನ ವೈದ್ಯಕೀಯ ಪರಂಪರೆ' ಕೃತಿಯು ಭಾರತೀಯ ವೈದ್ಯಶಾಸ್ತ್ರಕ್ಕೆ ನೀಡಿದ ಒಂದು ಅಪರೂಪದ ಕೊಡುಗೆ. ಅದರಲ್ಲಿಯೂ ಜೈನಧರ್ಮ ಮತ್ತು ಜೈನ ಸಮಾಜ ಸಹಸ್ರಾರು ವರ್ಷಗಳಿಂದ ರೂಪಿಸಿಕೊಂಡು ಬಂದಿರುವ ಪರಂಪರಾಗತ ವೈದ್ಯಕೀಯ ಅನುಭವಗಳನ್ನು ಹಿರಿಯರ ಬೋಧನೆಗಳ ರೂಪದಲ್ಲಿ ಉಳಿಸಿಕೊಂಡು ಬಂದಿರುವುದು ಒಂದು ವಿಶಿಷ್ಟ ಪ್ರಯತ್ನ. ಇಂತಹ ಒಂದು ಅನನ್ಯ ವೈದ್ಯಕೀಯ ಪರಂಪರೆಯ ವಿಚಾರಗಳನ್ನು ಕಟ್ಟಿಕೊಡುವಲ್ಲಿ

ಲೇಖಕರ ಶ್ರಮ ಮತ್ತು ಆಸಕ್ತಿ ಕೂಡಾ ಅಷ್ಟೇ ಅನನ್ಯವಾದುದು'.–ಡಾ. ಹಿ.ಚಿ.ಬೋರಲಿಂಗಯ್ಯ (ಕನ್ನಡವೇ ಸತ್ಯ, ಕನ್ನಡವೇ ನಿತ್ಯ... ಜೈನ ವೈದ್ಯಕೀಯ ಪರಂಪರೆ ಪು.ಸಂ–4)

'ಮಾನವ ಜೀವನದ ಮತ್ತು ದೇಹದ ಸುಸೂಕ್ಷ್ಮ ಅಂಗೋಪಾಂಗಗಳ ಕಾರ್ಯ ವಿಧಾನಗಳನ್ನು, ಅವುಗಳ ಬಹುಬಳಕೆಯಿಂದಾಗುವ ಅಥವಾ ಅವುಗಳ ಬಗ್ಗೆ ನಿರಂತರ ಗಮನ ಕೊಡದ ಕಾರಣದಿಂದಾಗಿ ಅವುಗಳಿಗೆ ಬಂದೊದಗುವ ವಿವಿಧ ಬಗೆಯ ನ್ಯೂನತೆಗಳನ್ನು ಮತ್ತು ಅವುಗಳ ಪರಿಹಾರ ಕ್ರಮಗಳನ್ನು ಅದ್ಭುತವಾಗಿ ವಿಶ್ಲೇಷಿಸುವ ವೈದ್ಯಕೀಯವನ್ನು ಕುರಿತ ವಿಸ್ತಾರ ಗ್ರಂಥರಾಶಿಯಲ್ಲಿ ಜೈನ ವೈದ್ಯಕೀಯ ಪರಂಪರೆಗೆ ಸಂಬಂಧಿಸಿದ ಒಂದು ಮುಖ್ಯ ಗ್ರಂಥ ಇದಾಗಿದೆ.–ಡಾ.ಹೆಚ್.ಜೆ. ಲಕ್ಕಪ್ಪಗೌಡ (ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ..ಜೈನ ವೈದ್ಯಕೀಯ ಪರಂಪರೆ ಪು.ಸಂ–7)

'ಜೈನಾಚಾರ್ಯರ ವೈದ್ಯಕೀಯ ಪರಂಪರೆ ತುಂಬಾ ದೊಡ್ಡದಿದೆ. ಸಮಂತಭದ್ರಾಚಾರ್ಯರ ಕಾಲ ಕ್ರಿ.ಶ.400 ರಿಂದ ನಡೆದುಕೊಂಡು ಬಂದು ಪೂಜ್ಯಪಾದರು, ಉಗ್ರದಿತ್ಯಾಚಾರ್ಯರು, ಶಿವಮಾರದೇವ, ಚಂದ್ರರಾಜ, ಕೀರ್ತಿವರ್ಮ, ಜಗದ್ದಳ ಸೋಮನಾಥ, ದೇವೇಂದ್ರಮುನಿ, ಜನ್ನ, ಮಂಗರಸ, ಶ್ರೀಧರದೇವ, ಸಾಳ್ವ, ಲಕ್ಷ್ಮಣ ಪಂಡಿತ, ಪಾತ್ರಕೇಸರಿ, ಮೇಘನಾದ, ಸಿಂಹನಾದ ಹೀಗೆ 18ನೇ ಶತಮಾನದವರೆಗೆ ಅಖಂಡವಾಗಿ ನಡೆದು ಬಂದಿದೆ. ಇವು ಇಂದು ಲಭ್ಯವಿರುವ ವಿವರಗಳು. ಕ್ರಿಸ್ತಪೂರ್ವ ಕಾಲದಲ್ಲೂ ಸಹ ಜೈನಾಚಾರ್ಯರು ಆಯುರ್ವೇದ ಗ್ರಂಥಗಳನ್ನು ರಚಿಸಿದ್ದಾರೆ ಎಂಬುದಕ್ಕೆ ಆಧಾರಗಳಿವೆ.'–ಡಾ. ಧನ್ಯಕುಮಾರ ಇಜಾರಿ(ಮೊದಲ ಮಾತು, ಜೈನ ವೈದ್ಯಕೀಯ ಪರಂಪರೆ ಪು.ಸಂ–10)

ಪ್ರಸ್ತುತ ಕೃತಿಯೊಳಗೆ ಚರ್ಚಿತವಾಗಿರುವ ವಿಷಯಗಳಲ್ಲಿ ಪ್ರಮುಖವಾದ ಸಂಗತಿಗಳನ್ನು ಇಲ್ಲಿ ಗಮಿಸಿಕೊಳ್ಳಲಾಗಿದೆ. ಅವುಗಳಲ್ಲಿ 'ಜೈನಾಯುರ್ವೇದ ಹುಟ್ಟಿದ ಬಗೆ', 'ವೈದ್ಯಕೀಯ ಶಾಸ್ತ್ರಕ್ಕೆ ಜೈನರ ಕೊಡುಗೆ', 'ಜೈನಾಯುರ್ವೇದದ ವೈಶಿಷ್ಟ್ಯಗಳು', ಜೈನ ಆಯುರ್ವೇದ ಪರಂಪರೆ', 'ಕಲ್ಯಾಣಕಾರಕ ಒಂದು ಅಧ್ಯಯನ', 'ಖಗೇಂದ್ರಮಣಿ ದರ್ಪಣ', 'ಜಗದ್ದಳ ಸೋಮನಾಥನ – ಕರ್ನಾಟಕ ಕಲ್ಯಾಣಕಾರಕ', 'ಚಾವುಂಡರಾಯನ ಲೋಕೋಪಕಾರ ಒಂದು ಅಧ್ಯಯನ (ನರವೈದ್ಯ, ಪಶುವೈದ್ಯ, ವೃಕ್ಷಾಯುರ್ವೇದ)', 'ಕಾಮಶಾಸ್ತ್ರ ಹಾಗೂ ಇತರ ಜೈನಗ್ರಂಥಗಳಲ್ಲಿ ಲೈಂಗಿಕ ವಿಚಾರಗಳು', 'ಶರೀರ ರಚನೆ', 'ಆರೋಗ್ಯ ಜೀವನ', 'ಋತುಚರ್ಯೆ', 'ಮಗುವಿನ ಪಾಲನೆ–ಪೋಷಣೆ', 'ಆಯುರ್ವೇದ ಮೂಲ ಸಿದ್ಧಾಂತಗಳು', 'ದ್ರವ್ಯಗಳ ರಸ, ವೀರ್ಯ, ವಿಪಾಕ, ಪ್ರಭಾವಗಳು', 'ಕೆಲ ಉಪಯುಕ್ತ ಮನೆಮದ್ದುಗಳು', 'ದ್ರವ್ಯಗುಣ, ಔಷಧ ತಯಾರಿಕೆ ಹಾಗೂ ಪಥ್ಯಕ್ರಮಗಳು', 'ರಸೌಷಧಗಳು',

'ರೋಗ ಕಾರಣಗಳು ಹಾಗು ಪ್ರತಿಬಂಧಕೋಪಾಯಗಳು', 'ರೋಗನಿದಾನ ಹಾಗು ರೋಗಿ ಪರೀಕ್ಷೆ', 'ಚಿಕಿತ್ಸೆಯ ಮೂಲ ಸೂತ್ರಗಳು', 'ಸಾಮಾನ್ಯ ರೋಗಗಳ ಚಿಕಿತ್ಸೆ', ಮತ್ತು ಇಲ್ಲಿ ಬಳಸಿಕೊಳ್ಳಲಾದ ಆಧಾರ ಗ್ರಂಥಗಳ ಮಾಹಿತಿಯನ್ನು ಒಳಗೊಂಡಿದೆ.

ಸಾಮಾನ್ಯವಾಗಿ ವೈದ್ಯಪರಂಪರೆಯು ವೈದ್ಯನ ಕರ್ತವ್ಯಗಳು, ರೋಗ ಮತ್ತು ರೋಗಿಯ ಲಕ್ಷಣಗಳ ಕುರಿತಾಗಿ ನಡೆಸಿರುವ ಪ್ರಯೋಗಗಳನ್ನು ಒಳಗೊಂಡ ಅಧ್ಯಯನವಾಗಿದೆ. ವೈದ್ಯಕೀಯ ಶಾಸ್ತ್ರವನ್ನು ಪುರುಷ, ರೋಗ, ಔಷಧ ಹಾಗು ಕಾಲಗಳೆಂದು ನಾಲ್ಕು ಭೇದಗಳಲ್ಲಿ ವಿಭಜಿಸಿ ಅವುಗಳ ಲಕ್ಷಣ, ಭೇದ, ಪ್ರಭೇದ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಪ್ರಮುಖವಾಗಿ ರೋಗ ರುಜಿನಗಳಿಂದ ಬಳಲುವ ವಿಶ್ವದ ಜನತೆಗೆ ಅವುಗಳ ಪರಿಹಾರ ಸ್ವರೂಪವಾಗಿ ಆಹಾರ, ಔಷಧಿಗಳನ್ನು ಹಾಗು ರೋಗಬಾರದಂತೆ ಆಚರಿಸಬೇಕಾದ ಆರೋಗ್ಯ ಕ್ರಮಗಳನ್ನು ಕುರಿತು ಸುದೀರ್ಘವಾದ ಚರ್ಚೆಗಳ ವಿವರಗಳು ಪರಂಪರೆಯ ಭಾಗವಾಗಿವೆ. ಅಲ್ಲದೆ ಈ ಪರಂಪರೆಯು ವಿಶ್ವದ ಸಮಸ್ತ ಜೀವಿಗಳ ಹಿತಕ್ಕಾಗಿ ಮುಂದುವರೆಯುತ್ತಿರುವ ಮತ್ತು ಇದರೊಂದಿಗೆ ಸ್ವ–ಪರ ಕಲ್ಯಾಣಕಾರಕವಾದ ವಿಚಾರಗಳನ್ನು ಜಾಗೃತಗೊಳಿಸುವ ಒಂದು ತಪಶ್ಚರ್ಯವಾಗಿ ಆಚಾರ್ಯರು, ಮುನಿಗಳು ಮಾಡಿದ ಕಾರ್ಯವಾಗಿದೆ.

ಅದರಂತೆ ವೈದ್ಯಶಾಸ್ತ್ರವು ಸಮುದ್ರದಂತೆ ಆಳವಾದುದು. ಇದರ ಆಳ–ವಿಸ್ತಾರಗಳು ಗಂಭೀರವಾಗಿದೆ, ವ್ಯಾಪಕವಾಗಿದೆ. ಇದನ್ನು ಸರಿಯಾದ ಮಾರ್ಗ ಮತ್ತು ಮಾರ್ಗದರ್ಶನದಲ್ಲಿ ತಿಳಿಯಬೇಕಾದ ಅಗತ್ಯವನ್ನು ಆಧರಿಸಿದೆ. ಅದಕ್ಕಾಗಿ ಪ್ರತ್ಯಕ್ಷ ದರ್ಶನ ಹಾಗು ಅನುಭವಗಳ ಅಗತ್ಯತೆ, ಈ ಕ್ಷೇತ್ರದಲ್ಲಿ ಅರ್ಪಿಸಿಕೊಂಡಿರುವ ವೈದ್ಯರ ಮಾರ್ಗದರ್ಶನ, ವೈದ್ಯಗ್ರಂಥಗಳ ಅನುಭವಜನ್ಯ ಅಧ್ಯಯನ ಒಂದು ಭಾಗವಾದರೆ; ಆರೋಗ್ಯ, ಬುದ್ಧಿ, ವಿನಯ, ಪ್ರಯತ್ನ ಹಾಗು ಈ ಜ್ಞಾನವನ್ನು ಪಡೆಯಬೇಕೆಂಬ ತೀವ್ರತರವಾದ ವಾಂಛೆಗಳು ಇರಬೇಕೆಂಬುದನ್ನು ಆದ್ಯ ಗ್ರಂಥಗಳಾದಿಯಾಗಿ ದಾಖಲಿಸಿವೆ. ಇವು ಇಂದಿನ ವಿದ್ಯಾರ್ಥಿಗಳಿಗೂ ಇರಬೇಕಾದ ಪ್ರಮುಖ ಸಾಧನಗಳಾಗಿವೆ.

ಇದನ್ನೇ 'ಯಾವ ಮುನಿ/ವೈದ್ಯ/ವಿದ್ಯಾರ್ಥಿಯಾದವನು ಆರೋಗ್ಯಶಾಸ್ತ್ರವನ್ನು ಚೆನ್ನಾಗಿ ತಿಳಿದುಕೊಂಡು ಅದರಂತೆ ಆಹಾರ–ವಿಹಾರ–ವಿಚಾರಗಳನ್ನು ಶುದ್ಧೀಕರಿಸಿಕೊಂಡು ತನ್ನ ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳುತ್ತಾನೆಯೋ; ಆತನು ಸಿದ್ಧಸುಖದ ಮಾರ್ಗವನ್ನು ಪ್ರಾಪ್ತಿಮಾಡಿಕೊಳ್ಳುತ್ತಾನೆ. ಇದರ ಹೊರತಾಗಿರುವವನು ತನ್ನ ಆರೋಗ್ಯವನ್ನು ಚೆನ್ನಾಗಿ ರಕ್ಷಿಸಿಕೊಳ್ಳಲಾರದೆ ರೋಗಪೀಡಿತನಾಗಿ ಅನೇಕ ರೋಗ ಪ್ರಕಾರಗಳ ದುಷ್ಪರಿಣಾಮಗಳಿಂದ ಕರ್ಮಬಂಧ ಮಾಡಿಕೊಳ್ಳುತ್ತಾನೆ' (ಜೈನ ವೈದ್ಯಕೀಯ ಪರಂಪರೆ ಪು.ಸಂ–3) ಎಂಬುದನ್ನು

ಆಚಾರ್ಯಪರಂಪರೆಯು ಎಚ್ಚರಿಸುತ್ತದೆ.

ಹಾಗೆಯೇ ವೈದ್ಯನಾಗುವ ವ್ಯಕ್ತಿ ಸ್ನೇಹವನ್ನು ಗಳಿಸುವ ಸ್ವಭಾವ, ರೋಗಿಗಳಲ್ಲಿ ದಯೇ, ವೈದ್ಯವೃತ್ತಿಯಲ್ಲಿ ಪ್ರೀತಿ, ಅತಿಯಾಗಿ ಮನಸ್ಸಿಗೆ ಹಚ್ಚಿಕೊಳ್ಳದಿರುವಿಕೆ(ರೋಗಿಗಳ ಬಗ್ಗೆ) ಈ ನಾಲ್ಕು ಗುಣಗಳನ್ನು ಹೊಂದುವುದು ಅವಶ್ಯಕವೆಂಬುದನ್ನು ತಿಳಿಸಿಕೊಡುತ್ತದೆ. (ಜೈನ ವೈದ್ಯಕೀಯ ಪರಂಪರೆ ಪು.ಸಂ–4) ಮುಂದುವರೆದು ಕಾಲನ ಮೋಸಗಾರಿಕೆಯಿಂದಾಗಿ ರೋಗಿಗೆ ಯಾವ ಹೊತ್ತಿಗೆ ಏನಾಗುವುದೋ ಹೇಳಬಾರದು; ಆದ್ದರಿಂದ ವೈಧ್ಯನಾದವನು ಶರೀರದಲ್ಲಿ ಪ್ರಾಣ ಇರುವವರೆಗೂ, ಇಂದ್ರೀಯಗಳು ಕೆಲಸ ಮಾಡುತ್ತಿರುವವರೆಗೂ ತನ್ನ ಚಿಕಿತ್ಸಾಕಾರ್ಯವನ್ನು ಬಿಡಕೂಡದು. ಅಲ್ಲದೇ ವೈದ್ಯನು ಸದಾ ಅಧ್ಯಯನಶೀಲನಾಗಿರಬೇಕು. ತನ್ನ ಬುದ್ಧಿ ಮತ್ತು ಜ್ಞಾಪಕಶಕ್ತಿಗಳನ್ನು ಹೆಚ್ಚಿಸಿಕೊಳ್ಳುತ್ತಿರಬೇಕು. ಮಾತ್ರವಲ್ಲದೇ ತನ್ನ ವೃತ್ತಿಗೆ ಸಂಬಂಧಿಸಿ ನಡೆಯುವ ವಾದ–ವಿವಾದಗಳ ಅರಿವು–ಜಾಗೃತಿಗಳನ್ನು ಹೊಂದಿರಬೇಕು. ಅದಕ್ಕಾಗಿ ಬೇರೆಯವರ ಗ್ರಂಥಗಳನ್ನು ಅವಲೋಕಿಸುತ್ತಿರಬೇಕು. ಗ್ರಂಥಕಾರ್ಯದಲ್ಲಿರುವ ವಿದ್ವಾಂಸರ ಸೇವೆಯನ್ನು ಮಾಡುತ್ತಾ ಶ್ರೇಷ್ಠತೆಗೆ ತನ್ನ ವೃತ್ತಿಬದುಕನ್ನು ಸಜ್ಜುಗೊಳಿಸಿಕೊಳ್ಳಬೇಕು. ಜೊತೆಗೆ ಪೂರ್ವಾಪರವಾದ ಚಿಂತನೆಗಳೊಂದಿಗೆ ದೃಢವಾದ ಅಧ್ಯಯನವಂತನಾಗಿ ಅನುಭವವನ್ನು ಪಡೆಯುತ್ತಾ ಲೋಕೋಪಕಾರಕ್ಕೆ ಸಾಕ್ಷಿಯಾಗುವ ಚಿಂತನೆಯನ್ನು ಹೊಂದಿದವನಾಗಿರಬೇಕು. ಎಂಬುದನ್ನು ಈ ಪರಂಪರೆಯು ನೆನೆಪಿಸುತ್ತದೆ.

ವೈದ್ಯಪರಂಪರೆಯು ಜೀವಜಾಲದ ಮೂಲ ಸಿದ್ಧಾಂತವು ಪಂಚ ಮಹಾಭೂತಗಳು, ತ್ರಿದೋಷಗಳು, ಸಪ್ತಧಾತುಗಳು ಮತ್ತು ಮಲಗಳ ಆಧಾರದ ಮೇಲೆ ರೂಪಿತವಾಗಿದೆ. ಎಂಬ ವಿಚಾರಗಳಲ್ಲಿ ನಂಬಿಕೆಯನ್ನು ಹೊಂದಿದೆ. ವೈದ್ಯಕೀಯ ವಿಚಾರಗಳನ್ನು ಪ್ರಸ್ತಾಪಿಸಿರುವ ಕೆಲ **ಪ್ರಮುಖ ಗ್ರಂಥಗಳನ್ನು** ಇಲ್ಲಿ ಪಟ್ಟೀಕರಿಸಲಾಗಿದೆ.

- ‘ಕಲ್ಯಾಣಕಾರಕ’(ಪಂಡಿತ ವರ್ಧಮಾನ ಶಾಸ್ತ್ರಿ),
- ‘ಖಗೇಂದ್ರಮಣಿ ದರ್ಪಣ’(ಮಂಗರಸ),
- ‘ಜೈನಧರ್ಮ’(ಮಿರ್ಜಿ ಅಣ್ಣರಾಯ),
- ‘ಸರ್ವಾರ್ಥಸಿದ್ಧಿ’(ಸಂ; ಡಿ.ಪದ್ಮನಾಭಶರ್ಮ)
- ‘ಕರ್ನಾಟಕ ಆಯುರ್ವೇದ ಇತಿಹಾಸ’(ಡಾ.ಶ್ರೀಕಂಠಮೂರ್ತಿ),
- ಶ್ರೀ ಕ್ಷೇತ್ರ ಕನಕಗಿರಿ(ಪ.ನಾಗರಾಜಯ್ಯ),
- ‘ಆಯುರ್ವೇದ ವಿಜ್ಞಾನ’(ಡಾ.ಧನ್ಯಾಕುಮಾರ ಇಜಾರಿ),
- ‘ಆಧುನಿಕ ಆಯುರ್ವೇದ ಚಿಕಿತ್ಸೆ’(ಡಾ.ಧನ್ಯಾಕುಮಾರ ಇಜಾರಿ),
- ‘ಆಯುರ್ವೇದದಲ್ಲಿ ಮಕ್ಕಳ ಆರೋಗ್ಯ’(ಡಾ.ಧನ್ಯಾಕುಮಾರ ಇಜಾರಿ),

- ‘ಯೋಗ’(ಡಾ.ಕೆ.ಎನ್.ಉಡುಪ),
- ‘ದೀರ್ಘಾಯುಷ್ಯ’(ಡಾ.ಕೆ.ಎನ್.ಉಡುಪ),
- ‘ಆಯುರ್ವೇದ ಸಾರ’(ಪ.ರಾಮಕೃಷ್ಣಯ್ಯ),
- ‘ಸ್ವಸ್ಥ ಜೀವನ’ (ಡಾ.ಎಂ.ಗೋಪಾಲಕೃಷ್ಣರಾವ್),
- ‘ಮಾನಸರೋಗ ವಿಜ್ಞಾನ–ಹಿಂದಿ(ಡಾ.ಬಾಲಕೃಷ್ಣ ಅಮರಜಿ ಪಾಠಕ),
- ‘ರೋಗಿ ಪರೀಕ್ಷಾ ವಿಧಾನ’(ಡಾ.ಪ್ರಿಯವ್ರತಶರ್ಮ),
- ‘ದ್ರವ್ಯಗುಣ ವಿಜ್ಞಾನ’(ಡಾ.ಪ್ರಿಯವ್ರತಶರ್ಮ),
- ‘ನೀತಿವಾಕ್ಯಾಮೃತಂ’(ಸಂ; ಜಿ.ಎಸ್.ದೀಕ್ಷಿತ್, ಬಿ.ರಾಮಸ್ವಾಮಿ, ಶ್ರೀನಿವಾಸ ರಿತ್ತಿ),
- ‘ಸಿರಿ ಭೂವಲಯ–ಒಂದು ಮಿಂಚುನೋಟ’(ಸುಧಾರ್ಥಿ),
- ‘ಕರ್ನಾಟಕ ಕಲ್ಯಾಣಕಾರಕ’(ಸಂ;ಡಾ.ಕೆ.ಆರ್.ಶ್ರೀಕಂಠಮೂರ್ತಿ),
- ‘ಚಾವುಂಡರಾಯನ ಲೋಕೋಪಕಾರ–ಒಂದು ಅಧ್ಯಯನ’(ಡಾ.ಎ. ರಂಗಸ್ವಾಮಿ),
- ‘ಕನ್ನಡದ ಸೂಪಶಾಸ್ತ್ರ ಸಾಹಿತ್ಯ’(ಡಾ.ಬಿ.ಮಂಜುಳಾ),
- ‘ಜೈನ ಲೌಕಿಕ ಸಾಹಿತ್ಯ ಸಂಪದ’(ಡಾ.ಧನ್ಯಾಕುಮಾರ ಇಜಾರಿ),
- ‘ಸುಮನಸ ಚಿಕಿತ್ಸೆ–ಕಾಯಾ–ಮನಸಾ ಹಾಗೂ ವಿಷವೈದ್ಯ ಕುರಿತ ಲೇಖನ’(ಡಾ.ಸತ್ಯನಾರಾಯಣ ಭಟ್)

ಒಟ್ಟು ಜೈನ ವೈದ್ಯಕೀಯ ಪರಂಪರೆಯು ಭಾರತೀಯ ವೈದ್ಯಕೀಯ ಇತಿಹಾಸದ ಒಂದು ಪ್ರಮುಖ ಭಾಗವಾಗಿ ಬೆಳೆದು ಬೆಸೆದುಕೊಂಡು ಬಂದಿದೆ. ಈ ಪರಂಪರೆಯು ಅಹಿಂಸೆಯ ತತ್ವದ ಮೇಲೆ ಆಧಾರವಾಗಿದ್ದುಕೊಂಡು ಆಯುರ್ವೇದದ ಜ್ಞಾನವನ್ನು ತನ್ನ ನೈತಿಕ ತಳಹದಿಯನ್ನಾಗಿ ಮತ್ತು ಅದನ್ನು ಚೌಕಟ್ಟಾಗಿ ಅಳವಡಿಸಿಕೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಈ ಮುಖ್ಯಾಂಶಗಳನ್ನು ಒಳಗೊಂಡಿದೆ. ಚಿಕಿತ್ಸೆ ಅಹಿಂಸೆಯಾಧಾರವಾಗಿದ್ದು ಚಿಕಿತ್ಸೆಯಲ್ಲಿ ಮಾಂಸ, ಜೇನುತುಪ್ಪ, ಮತ್ತು ಮದ್ಯದಂತಹ ಪ್ರಾಣಿಜನ್ಯ ಪದಾರ್ಥಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿಕೊಂಡು ಇವುಗಳಿಗೆ ಪರ್ಯಾಯವಾಗಿ ಸಸ್ಯಜನ್ಯ ಮತ್ತು ಖನಿಜಾಧಾರಿತ ಔಷಧಿಗಳನ್ನು ಬಳಸಿಕೊಂಡು ಬಂದಿದೆ. ನೈತಿಕ ಚೌಕಟ್ಟಿನ ಭಾಗವಾಗಿ ಔಷಧಿಗಳನ್ನು ದಾನರೂಪದಲ್ಲಿ ನೀಡುವುದನ್ನು ಒಂದು ಪ್ರಮುಖ ಧರ್ಮಕಾರ್ಯವೆಂದೇ ಪಾಲಿಸಿಕೊಂಡು ಬರಲಾಗುತ್ತದೆ. ಅಲ್ಲದೆ ರೋಗಿಗಳಿಗೆ ಮತ್ತು ಅಸಹಾಯಕ ಸನ್ಯಾಸಿಗಳಿಗೆ ಚಿಕಿತ್ಸೆಯನ್ನು ನೀಡುವುದನ್ನು ಸಹ ಧಾರ್ಮಿಕ ಕಾರ್ಯದಂತೆ ಪರಿಭಾವಿಸಲಾಗುತ್ತಿದೆ.

ರೋಗಗಳನ್ನು ವಾತ, ಪಿತ್ತ ಮತ್ತು ಶ್ಲೇಷ್ಮ ದೋಷಗಳ ಆಧಾರದ ಮೇಲೆ ವರ್ಗೀಕಸಿಕೊಂಡು ಚಿಕಿತ್ಸೆಯನ್ನು ನೀಡಲಾಗುತ್ತದೆ. ಇದರೊಂದಿಗೆ ರೋಗಕಾರಕ ವ್ಯವಸ್ಥೆಯನ್ನು ತಡೆಗಟ್ಟಲು ಆಹಾರ ಮತ್ತು ಜೀವನಶೈಲಿಗೂ ಇನ್ನಿಲ್ಲದ ಮಹತ್ವವನ್ನು ನೀಡಲಾಗಿದೆ. ಅದಕ್ಕಾಗಿ ಶುದ್ಧಶಾಖಾಹಾರ, ಸಮಯಕ್ಕೆ ಸರಿಯಾಗಿ ಊಟಮಾಡುವುದು ಮತ್ತು ಉಪವಾಸದಂತಹ ವ್ರತ–ನಿಯಮಾದಿಗಳನ್ನು ಪರಿಶುದ್ಧವಾದ ಮನೋಭಾವದೊಂದಿಗೆ ಪಾಲಿಸುವುದು. ಜೊತೆಗೆ ವಿಶೇಷ ಚಿಕಿತ್ಸಾ ವಿಧಾನಗಳೊಂದಿಗೆ ಪ್ರಾಚೀನ ಮತ್ತು ಆಧುನಿಕ ಚಿಕಿತ್ಸಾ ಪದ್ಧತಿಗಳನ್ನು ವೈದ್ಯಮನೋಧರ್ಮಕ್ಕೆ ಅನುಸಾರವಾಗಿ ರೂಪಿಸಲಾಗುತ್ತದೆ. ರೋಗಗಳನ್ನು ಕರ್ಮ ಫಲಗಳಾಗಿಯೇ ಪರಿಭಾವಿಸುವ ಪರಂಪರೆಯು ನಿಚ್ಚಳವಾಗಿದೆ. ಅಲ್ಲದೆ ಈ ದೈಹಿಕ ಬಾಧೆಯನ್ನು ಸಹಿಸುವ ಮತ್ತು ಆಧ್ಯಾತ್ಮಿಕ ಸಾಧನೆಯ ಭಾಗವಾಗಿ ಪರಿಗಣಿಸಲಾಗುತ್ತಿದೆ. ಇದು ಸಾರ್ವಜನಿಕ ಸೇವಾಭಾಗವಾಗಿ ಜನಸಾಮಾನ್ಯರಿಗೂ ಈ ಸೇವೆಯನ್ನು ತಲುಪಿಸುವ ಸಂಶ್ಲೇಷಿತ ಜ್ಞಾನ ವ್ಯವಸ್ಥೆಯಾಗಿ ಬೆಳೆದು ಬಂದಿದೆ. ಆರೋಗ್ಯಕರ ಜೀವನಶೈಲಿಯ ಭಾಗವಾಗಿ ಸೂರ್ಯಾಸ್ತದ ಮೊದಲು ರಾತ್ರಿಯ ಭೋಜನವನ್ನು ಶುದ್ಧ ಮತ್ತು ಸಾತ್ವಿಕವಾಗಿ ಕಟ್ಟಿಕೊಳ್ಳುವುದನ್ನು ನಿರ್ದೇಶಿಸುತ್ತದೆ. ಹಾಗೆಯೆ ಜೈನ ಆಗಮಗಳಾದಿಯಾಗಿ ಗ್ರಂಥಗಳಲ್ಲಿ ಅಡಗಿರುವ ಜ್ಞಾನವನ್ನಾಧಾರವಾಗಿಸಿಕೊಂಡು ಭ್ರೂಣಶಾಸ್ತ್ರ ಮತ್ತು ಶರೀರಶಾಸ್ತ್ರವನ್ನು ವೈಚಾರಿಕ ಮತ್ತು ವೈಜ್ಞಾನಿಕ ಮಾದರಿಯನ್ನು ಅಳವಡಿಸಿಕೊಂಡು ಈ ಪರಂಪರೆಯು ಬೆಳೆದು ಬರುತ್ತಿದೆ. ಇದಕ್ಕೆ ಜೈನ ಸಮುದಾಯವೂ ಭಾರತದಾದ್ಯಂತ ಸಾವಿರಾರು ಉಚಿತ ಔಷಧಾಲಯಗಳನ್ನು, ಆಸ್ಪತ್ರೆಗಳನ್ನು ಮತ್ತು ಪ್ರಾಣಿಗಳ ಚಿಕಿತ್ಸಾ ಕೇಂದ್ರಗಳನ್ನು ನಡೆಸುತ್ತಾ ಸಾರ್ವಜನಿಕ ಆರೋಗ್ಯ ಕ್ಷೇತ್ರಗಳನ್ನು ನಡೆಸುತ್ತಾ ಈ ವೈದ್ಯಕೀಯ ಪರಂಪರಾ ಕ್ಷೇತ್ರಕ್ಕೆ ಮಹತ್ವದ ಕೊಡುಗೆಗಳನ್ನು ನೀಡುತ್ತಿದೆ.

ಪರಾಮರ್ಶನ ಗ್ರಂಥ:

1. 'ಜೈನ ವೈದ್ಯಕೀಯ ಪರಂಪರೆ' ಡಾ. ಧನ್ಯಾಕುಮಾರ ಇಜಾರಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

***

ನಾಮ ವಿಜ್ಞಾನ ಅಧ್ಯಯನದ ಸಾಧ್ಯತೆಗಳು

ಡಾ. ನಟರಾಜು ಜೆ. ಆರ್.

ಕನ್ನಡ ಅಧ್ಯಾಪಕರು, ಕನ್ನಡ ವಿಭಾಗ,

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಭಾಷಾ ವಿಜ್ಞಾನ ಕ್ಷೇತ್ರವನ್ನು ಅಧ್ಯಯನ ಮಾಡುವಲ್ಲಿ ಇಂದಿನ ಯುವ ಪೀಳಿಗೆ ಬಹಳ ಅನಾಸಕ್ತಿಯನ್ನು ತೋರುತ್ತಿರುವ ಈ ಸಂದರ್ಭದಲ್ಲಿ ನಾಮ ವಿಜ್ಞಾನ ಅಧ್ಯಯನಗಳು ಮತ್ತೂ ಕಡೆಗಣನೆಗೆ ಒಳಗಾಗುತ್ತಿರುವುದು ತುಂಬಾ ನೋವಿ ಸಂಗತಿ. ಇಂದಿನ ಯುವ ಸಂಶೋಧಕರಿಗೆ ನಾಮ ವಿಜ್ಞಾನದಲ್ಲಿ ವಿಫುಲ ಅವಕಾಶಗಳಿದ್ದರೂ, ಹೆಚ್ಚು ಶ್ರಮದಾಯಕವಾದ ಕ್ಷೇತ್ರವಾಗಿರುವುದರಿಂದ ಈ ವಲಯವನ್ನು ಆಯ್ಕೆ ಮಾಡಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಕರ್ನಾಟಕದಲ್ಲಿ ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಅಧ್ಯಯನ ನಿರೀಕ್ಷಿತ ಪ್ರಮಾಣದಲ್ಲಿ ನಡೆದಿಲ್ಲ. ಈ ಕ್ಷೇತ್ರದ ಬಗ್ಗೆ ಭಾಷಾ ವಿದ್ವಾಂಸರು ಲೇಖನಗಳು ಮತ್ತು ಕೃತಿಗಳ ಮೂಲಕ ಕೆಲಮಟ್ಟಿಗೆ ಪ್ರಯತ್ನ ಪಟ್ಟಿದ್ದರೂ ಯುವ ಸಂಶೋಧಕರಿಗೆ ಈ ಕ್ಷೇತ್ರ ಇನ್ನೂ ಆಕರ್ಷಕವಾಗಿಲ್ಲ. ಇದ್ದುದರಲ್ಲಿ ಸ್ಥಳನಾಮಗಳ ಅಧ್ಯಯನ ಕ್ಷೇತ್ರದಲ್ಲಿ ಪರವಾಗಿಲ್ಲವೆಂಬಂತೆ ಕೆಲಸ ನಡೆದಿದೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡದಲ್ಲಿ ನಾಮ ವಿಜ್ಞಾನ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಸಂಶೋಧಕರಿಗೆ ಡಾ.ಎಂ.ಎಂ.ಕಲಬುರ್ಗಿ, ಡಾ.ಎಂ.ಚಿದಾನಂದಮೂರ್ತಿ, ಕೆಂಪೇಗೌಡ, ಸೋಮಶೇಖರಗೌಡ, ಕೆ.ವಿ.ನಾರಾಯಣ, ಕುಶಾಲಪ್ಪಗೌಡ, ವಿವೇಕ ರೈ, ದೇಜಗೌ ಮುಂತಾದ ಭಾಷಾ ವಿಜ್ಞಾನಿಗಳು ಹಲವು ಸಾಧ್ಯತೆಗಳನ್ನು ಗುರುತಿಸಿ ಕೊಟ್ಟಿದ್ದಾರೆ. ಇವರೆಲ್ಲರಲ್ಲಿ ಪ್ರಮುಖವಾಗಿ ಡಾ.ಎಂ.ಎಂ.ಕಲಬುರ್ಗಿ ಅವರ ಕನ್ನಡ ನಾಮ ವಿಜ್ಞಾನ ಕೃತಿ ಸಂಶೋಧಕರಿಗೆ ಹಲವು ಮಾರ್ಗಗಳನ್ನು ತಿಳಿಸಿಕೊಡುತ್ತದೆ. ಆ ನಿಟ್ಟಿನಲ್ಲಿ ನಾಮ ವಿಜ್ಞಾನದ ಸಾಧ್ಯತೆಗಳನ್ನು

ತಿಳಿಯುವ ಉದ್ದೇಶವನ್ನು ಈ ಲೇಖನವು ಒಳಗೊಂಡಿದೆ.

ಈ ಲೇಖನದಲ್ಲಿರುವ ಸಂಶೋಧನಾ ಪರಿಕಲ್ಪನೆಗಳು :

ನಾಮ ವಿಜ್ಞಾನ, ವಾರ್ಗಿಕ, ನಿರ್ದಿಷ್ಟ, ವ್ಯಕ್ತಿನಾಮ, ಸ್ಥಳನಾಮ, ಕುಲನಾಮ, ಕುಟುಂಬನಾಮ, ದೈವನಾಮ, ಭಾವನಾಮ, ಅಡ್ಡಹೆಸರು, ಪುರುಷವಾಚಿ, ಸ್ತ್ರೀವಾಚಿ, ಪ್ರಾಣಿವಾಚಿ, ಸಸ್ಯವಾಚಿ, ಪ್ರಕೃತಿವಾಚಿ, ವಿಸ್ಕೃತ, ಅವಿಸ್ಕೃತ, ಕಾಲವಾಚಿ, ದೇಶವಾಚಿ, ಸಾಮಾಜಿಕ ಶ್ರೇಣೀವಾಚಿ ಮುಂತಾದವು.

ಕಲಬುರ್ಗಿ ಎಂ.ಎಂ ಅವರ 'ಕನ್ನಡ ನಾಮ ವಿಜ್ಞಾನ'(2010) ಎಂಬ ಕೃತಿ ಹೆಸರುಗಳ ಬಗೆಗೆ ಪ್ರಾಥಮಿಕ ಮಾಹಿತಿ ನೀಡುತ್ತದೆ. ಈ ಕೃತಿಯಲ್ಲಿ ಲೇಖಕರು ವ್ಯಕ್ತಿಯನ್ನು ಸಮೂಹದಿಂದ ಬೇರ್ಪಡಿಸಿ ಗುರುತಿಸುವಂತಹ ಸಾಧನಗಳಲ್ಲಿ ಹೆಸರು ಪ್ರಮುಖವಾದುದು ಎಂದಿದ್ದಾರೆ. ವ್ಯಕ್ತಿನಾಮಗಳೆಲ್ಲ ಅಂಕಿತ ನಾಮಗಳೇ ಆಗಿರುವುದರಿಂದ ಇವುಗಳನ್ನಿಟ್ಟ ಹಿರಿಯರ ಒತ್ತಾಸೆಗಳೆಲ್ಲವೂ ಇವುಗಳಲ್ಲಿಯೇ ಅಡಗಿರುತ್ತದೆ. ಹಾಗಾಗಿ ವ್ಯಕ್ತಿನಾಮಗಳ ಸಂಸ್ಕೃತಿಯ ಅಧ್ಯಯನಕ್ಕೆ ಉಪಯುಕ್ತ ಆಕರ ಸಾಮಗ್ರಿಯಾಗಿದೆ. ವ್ಯಕ್ತಿನಾಮದ ಅಧ್ಯಯನಕ್ಕೆ ಬೇಕಾದಂತಹ ಎಲ್ಲಾ ರೀತಿಯ ಆಕರಗಳು, ವಿಧಾನಗಳು, ಮಾಡಬೇಕಾದ ಕಾರ್ಯಗಳು ಮುಂತಾದ ಅಂಶಗಳ ಕುರಿತಂತೆ ಹೊಸ ಅಧ್ಯಯನಕಾರರಿಗೆ ಮಾರ್ಗದರ್ಶಿ ಕೈಪಿಡಿಯಂತೆ ಈ ಕೃತಿ ಮೂಡಿ ಬಂದಿದೆ. ಇದರ ಆಧಾರದ ಮೇಲೆ ಅಧ್ಯಯನಕಾರರು ತಮಗೆ ಬೇಕಾದಂತಹ ಪೂರಕ ಆಕರಗಳನ್ನು ಸಂಗ್ರಹಿಸಿ ಮಾಹಿತಿ ಸಂಗ್ರಹಿಸಲು ಸಹಾಯಕವಾಗುತ್ತದೆ. ಯಾವ ಮಾರ್ಗದ ಮೂಲಕ ಯಾವ ಕೆಲಸ ಮಾಡಬೇಕು ಎಂಬಂತಹ ಅಂಶಗಳನ್ನು ಸಂಶೋಧಕರಿಗೆ ಒದಗಿಸಿಕೊಡುತ್ತದೆ. ವ್ಯಕ್ತಿನಾಮದ ಮೂಲರೂಪವನ್ನು ನಾಮ ವಿಜ್ಞಾನಿಗಳು ಹೇಗೆ ಪತ್ತೆ ಹಚ್ಚ ಬೇಕೆಂಬುದನ್ನು ತಿಳಿಸಿಕೊಟ್ಟಿದ್ದಾರೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಹೆಸರುಗಳಲ್ಲಾದಂತಹ ಬದಲಾವಣೆಗಳನ್ನು ಗಮನಿಸಿದಾಗ ವಿಭಿನ್ನ ಅಂಶಗಳು ಕಂಡುಬರುತ್ತದೆ. ಆರಂಭದಲ್ಲಿ ವ್ಯಕ್ತಿಗಳಿಗೆ ಹೆಸರುಗಳೇ ಇರಲಿಲ್ಲ ಎಂಬುದು ಇಲ್ಲಿ ನೀಡಿರುವ ಪ್ರಾಚೀನ ಆಧಾರಗಳಿಂದ ತಿಳಿದುಕೊಳ್ಳಬಹುದಾಗಿದೆ. ತದನಂತರದಲ್ಲಿ ಗುಂಪು ಗುಂಪಾಗಿ ಜೀವಿಸುತ್ತಿದ್ದ ಮನುಷ್ಯ ಒಬ್ಬರಿಂದ ಮತ್ತೊಬ್ಬರನ್ನು ಗುರುತಿಸುವುದಕ್ಕಾಗಿ ಹೆಸರುಗಳು ಹುಟ್ಟಿಕೊಂಡಿರಬೇಕು. ಆದರೆ ಪ್ರಸ್ತುತ ಸಂದರ್ಭದಲ್ಲಿ ಹುಟ್ಟಿಗಿಂತ ಮೊದಲಿಗೆ ಮಗುವಿನ ಹೆಸರನ್ನು ನಿರ್ಧರಿಸಿಕೊಳ್ಳುವಂತಹ ಉದಾಹರಣೆಗಳನ್ನು ನೋಡಬಹುದು. ಈ ಎಲ್ಲಾ ಅಂಶಗಳು ಇರುವ ಕೃತಿಯ ಈ ಭಾಗ ವ್ಯಕ್ತಿನಾಮಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ಬೆಳೆದುಬಂದ ಬಗೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಹೆಸರುಗಳನ್ನು ಭಾಷಿಕವಾಗಿ ನಿರ್ದಿಷ್ಟ ಮತ್ತು ವಾರ್ಗಿಕ ಎಂಬುದಾಗಿ ವಿಂಗಡಿಸಿಕೊಂಡು ಅವುಗಳ ರಚನಾ ಸ್ವರೂಪವನ್ನು

ತಿಳಿಯಲು ಸಹಾಯಕವಾಗಿದೆ. ಮುಂದುವರೆದು ಈ ಎರಡು ಘಟಕಗಳನ್ನೇ ಕಾಲವಾಚಿ, ದೇಶವಾಚಿ, ಸಾಮಾಜಿಕ ಶ್ರೇಣೀವಾಚಿಯಾಗಿಯೂ ಅಧ್ಯಯನ ಮಾಡಬಹುದೆಂದು ತಿಳಿಸಲಾಗಿದೆ. ಹೆಸರನ್ನು ಕರೆಯುವ ಸಂದರ್ಭದಲ್ಲಿ ಹಲವಾರು ಕಾರಣಗಳಿಂದ ವ್ಯತ್ಯಾಸಗಳನ್ನು ಕಾಣಬಹುದು. ಅವುಗಳು ಉದ್ದೇಶ ಪೂರ್ವಕವಾಗಿಯಾದರೂ ಬದಲಾಗಬಹುದು ಅಥವಾ ಅನುದ್ದೇಶಿತವಾಗಿಯಾದರೂ ಬದಲಾಗಬಹುದು. ಅಂದರೆ ರೂಪಾಂತರ, ಭಾಷಾಂತರ, ನಾಮಾಂತರ ಮುಂತಾದ ವಿಧಾನಗಳಲ್ಲಿ ಬದಲಾವಣೆಗಳಾಗುವುದನ್ನು ಇಲ್ಲಿ ತಿಳಿಸಲಾಗಿದೆ. ಪ್ರಾಚೀನ ಕಾಲಘಟ್ಟದಲ್ಲಿ ದಾಖಲಾಗಿರುವ ಹೆಸರುಗಳನ್ನು ಪುರುಷವಾಚಿ ನಾಮಗಳು ಮತ್ತು ಸ್ತ್ರೀವಾಚಿ ನಾಮಗಳೆಂದು ವಿಂಗಡಿಸಿಕೊಂಡು ಅವುಗಳು ಆಯಾ ಕಾಲಘಟ್ಟದಲ್ಲಿ ಮಾಡಿಕೊಂಡಂತಹ ಬದಲಾವಣೆಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ. ಆಧುನಿಕ ಕಾಲದಲ್ಲಿಯೂ ಕೂಡ ಹೆಸರುಗಳು ಆಧುನೀಕರಣಕ್ಕೆ ತಕ್ಕಂತೆ ಬದಲಾಗುತ್ತಾ ಹೋಗುತ್ತವೆ. 20ನೇ ಶತಮಾನವು ಯಾಂತ್ರಿಕ ಯುಗವಾಗಿದ್ದು ಇದರಿಂದ ಆಂತರಿಕ ಭಾವನೆಯಲ್ಲಿ, ಬಾಹ್ಯ ಜೀವನದಲ್ಲಿ ವೇಗವಾದ ಬದಲಾವಣೆಗಳು ಸಂಭವಿಸುತ್ತಿವೆ. ಇದರ ಪರಿಣಾಮ ಹೆಸರಿನ ಮೇಲೂ ಆಗಿದ್ದು ಹೆಸರಿಡುವ ದೃಷ್ಟಿಕೋನ, ಹೆಸರಿನ ಸ್ವರೂಪದಲ್ಲಿನ ಬದಲಾವಣೆ ಇಟ್ಟ ಹೆಸರಿನ ಬದಲಾವಣೆ ಮುಂತಾದ ಅಂಶಗಳನ್ನು ಗಮನಿಸಲಾಗಿದೆ. ಇವೆಲ್ಲದರ ಪರಿಣಾಮ ಆಧುನಿಕ ಕಾಲಘಟ್ಟದಲ್ಲಿ ಹೆಸರುಗಳು ಹೇಗೆ ಆಧುನಿಕತೆಗೆ ತಮ್ಮನ್ನು ಒಡ್ಡಿಕೊಳ್ಳುತ್ತದೆ ಎಂಬುದನ್ನು ಈ ಲೇಖನದಲ್ಲಿ ಗುರ್ತಿಸಬಹುದಾಗಿದೆ.

"ನಾಮಗಳು ವ್ಯಕ್ತಿಯ ರೂಪ–ಗುಣಗಳಿಗೆ ಅನುಗುಣವಾಗಿದ್ದಿರಬೇಕು. ಅಂದರೆ ಅನ್ವರ್ಥಕ ನಾಮಗಳಾಗಿರಬೇಕು. ಇವುಗಳಲ್ಲಿಯೇ ಮೊದಮೊದಲು ರೂಪವನ್ನು ಆ ಮೇಲೆ ಗುಣವನ್ನು ಗಮನಿಸಿ ಹೆಸರಿಡುವ ಪದ್ಧತಿ ಬೆಳೆದಿರಬೇಕು. ಈ ಕಾಲದಲ್ಲಿ ಹೆಣ್ಣು–ಗಂಡು ಬೇಧವಿಲ್ಲದೆ ರೂಪ–ಗುಣಗಳನ್ನವಲಂಭಿಸಿ ಎಲ್ಲರಿಗೂ ಏಕ ಪ್ರಕಾರದ ಹೆಸರಿಡುತ್ತಿರಬಹುದು. ಹೀಗಾಗಿ ಈ ಕಾಲಾವಧಿಯ ವ್ಯಕ್ತಿನಾಮಗಳೆಲ್ಲ ಅನ್ವರ್ಥಕ ನಾಮಗಳೇ ಆಗಿರಬಹುದು. ಆದುದರಿಂದ ನಾಮದ ಇತಿಹಾಸದಲ್ಲಿ ಅನ್ವರ್ಥಕ ನಾಮಗಳೇ ಪ್ರಥಮ ಮತ್ತು ಪ್ರಾಚೀನವೆಂದು ತೋರುತ್ತದೆ" ಎಂದಿದ್ದಾರೆ(ಪು.11).

ಉದಾ:

ವ್ಯಕ್ತಿಯು ದಪ್ಪವಾಗಿದ್ದರೆ: ಡುಮ್ಮ, ದುಬ್ಲಿ, ಡುಮ್ಮಿ, ದಡಿಯ, ದೊಡ್ಡ

ವ್ಯಕ್ತಿಯು ಸಣ್ಣಗಿದ್ದರೆ: ಸಣ್ಣ, ಸಣ್ಣಿ, ಚಿಕ್ಕ, ಚಿಕ್ಕಿ

ವ್ಯಕ್ತಿಯ ಬಣ್ಣ ಕೆಂಪಗಿದ್ದರೆ: ಕೆಂಪ, ಕೆಂಪಿ, ಕೆಂಚ, ಕೆಂಚಿ

ವ್ಯಕ್ತಿಯು ಬಣ್ಣದಲ್ಲಿ ಕಪ್ಪಗಿದ್ದರೆ: ಕರಿಯ, ಕರ್ರಿ

ವ್ಯಕ್ತಿಯು ಕುಳ್ಳಗಿದ್ದರೆ: ಕುಳ್ಳ, ಕುಳ್ಳಿ, ಗಿಡ್ಡ, ಗಿಡ್ಡಿ

ವ್ಯಕ್ತಿಯು ಎತ್ತರವಾಗಿದ್ದರೆ: ಲಂಬೂ

ವ್ಯಕ್ತಿಯ ಸೊಂಟ ಊನವಾಗಿದ್ದರೆ: ಹೆಳವ, ಹೆಳವಿ

ವ್ಯಕ್ತಿಯ ಕೈ ಊನವಾಗಿದ್ದರೆ: ಮೋದ, ಮೋದಿ

ವ್ಯಕ್ತಿಯು ಎಡಗೈಯನ್ನು ಹೆಚ್ಚು ಬಳಸುತ್ತಿದ್ದರೆ : ರೊಡ್ಡ>ಲೊಡ್ಡ, ರೊಡ್ಡಿ>ಲೊಡ್ಡಿ

ವ್ಯಕ್ತಿಗೆ ಮಾತು ಬಾರದಿದ್ದರೆ : ಮೂಗ, ಮೂಗಿ

ವ್ಯಕ್ತಿಯು ದೃಷ್ಟಿಹೀನವಾಗಿದ್ದರೆ : ಕುರುಡ, ಕುರುಡಿ

ವ್ಯಕ್ತಿಗೆ ಕಿವಿ ಕೇಳಿಸದಿದ್ದರೆ : ಕಿವುಡ, ಕಿವುಡಿ, ಕೆಪರ, ಕೆಪರಿ

ವ್ಯಕ್ತಿಯು ಬೆಳ್ಳಗಿದ್ದರೆ : ಬಿಳಿಯ

ವ್ಯಕ್ತಿಗೆ ಕಾಲು ಊನವಾಗಿದ್ದರೆ : ಕುಂಟ, ಕುಂಟಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿ ಹೇಳುವುದಾದರೆ ಆರಂಭದಲ್ಲಿ ಗುಣ ವಿಶೇಷಣಗಳಿಂದ ವ್ಯಕ್ತಿ, ವ್ಯಕ್ತಿಗಳನ್ನು ಗುರ್ತಿಸಿ ಸಂವಹನ ನಡೆಯುತ್ತಿತ್ತು ಮತ್ತು ಆ ಸಂದರ್ಭದಲ್ಲಿ ಗುಣವಿಶೇಷಣಗಳಿಗೆ ವಾರ್ಗಿಕಗಳು ಸೇರದೆ ನಿರ್ದಿಷ್ಟವಾಗಿ ಬಳಕೆಯಾಗಿರಬಹುದು. ಆದರೆ ಕಲಬುರ್ಗಿಯವರು ಕನ್ನಡ ನಾಮ ವಿಜ್ಞಾನ (ಪು.11) ಕೃತಿಯಲ್ಲಿ ಅನ್ವರ್ಥಕ ನಾಮಗಳ ಕುರಿತು ಹೇಳುವಾಗ ವಾರ್ಗಿಕಗಳನ್ನು ಸೇರಿಸಿ ಉದಾಹರಣೆಯಾಗಿ ಸಣ್ಣಗಿದ್ದರೆ ಸಣ್ಣಪ್ಪ, ವೀರನಿದ್ದರೆ ಕಲಿಯಪ್ಪ, ಕಪ್ಪಗಿದ್ದರೆ ಕರಿಯಪ್ಪ, ಕೆಂಪಗಿದ್ದರೆ ಕೆಂಚಪ್ಪ ಇವುಗಳನ್ನು ಕೊಟ್ಟಿದ್ದಾರೆ. ಗುಣವಾಚಕಗಳು ಆರಂಭವಾದ ಅವಧಿಯಲ್ಲಿಯೇ ಸಂಬಂಧವಾಚಕಗಳು ವಾರ್ಗಿಕಗಳಾಗಿ ಬಳಕೆಯಾಗಿವೆ ಎಂಬುದನ್ನು ನಂಬಲು ಸಾಧ್ಯವಾಗುವುದಿಲ್ಲ. ಈ ವಿಷಯ ಕುರಿತು ಅಧ್ಯಯನ ನಡೆಸಲು ಅವಕಾಶಗಳಿವೆ ಎಂದು ಹೇಳಬಹುದು.

ಆದರೆ ಕಲಬುರ್ಗಿ ಎಂ.ಎಂ., ಅವರು ಆರಂಭದ ಕಾಲದಲ್ಲಿಯೇ ಅನ್ವರ್ಥ ನಾಮಗಳಿಗೆ ವಾರ್ಗಿಕಗಳು ಸೇರಿವೆ ಎಂದು ಹೇಳಿರುವುದನ್ನು ಕುರಿತಂತೆ ಮತ್ತೊಮ್ಮೆ ಚರ್ಚಿಸಿ ತೀರ್ಮಾನಕ್ಕೆ ಬರುವ ಅಗತ್ಯವಿದೆ. ಏಕೆಂದರೆ ಇವರು ಗುಣವಾಚಕ/ಅನ್ವರ್ಥನಾಮಗಳಿಗೆ ಸಂಬಂಧವಾಚಕಗಳಾದ ಅಪ್ಪ, ಅಯ್ಯ, ಅಣ್ಣ, ಅಕ್ಕ, ಅಮ್ಮ ಮುಂತಾದ ವಾರ್ಗಿಕಗಳನ್ನು ಸೇರಿಸಿ ಹೇಳಿರುವುದನ್ನು (ಉದಾ:– ದೊಡ್ಡಪ್ಪ, ಸಣ್ಣಪ್ಪ, ಕೆಂಚಪ್ಪ, ಕರಿಯಪ್ಪ, ಕಲಿಯಪ್ಪ) (ಪು–11) ಕಾಣುತ್ತೇವೆ. ಈ ವಾರ್ಗಿಕಗಳು ಆರಂಭದ ಕಾಲದಲ್ಲಿ ವ್ಯಕ್ತಿನಾಮಗಳಿಗೆ ಅಂಟಿರಲು ಸಾಧ್ಯವಿಲ್ಲ ಎನಿಸುತ್ತದೆ. ಆರಂಭದ ಕಾಲಘಟ್ಟದಲ್ಲಿ ವ್ಯಕ್ತಿನಾಮಗಳೆಲ್ಲವೂ ಅನ್ವರ್ಥ ನಾಮಗಳೇ ಆಗಿರಬಹುದು ಮತ್ತು ಈ ಅನ್ವರ್ಥ ನಾಮಗಳೇ ಪ್ರಥಮ ಹಾಗೂ

ಪುರಾತನವಾದವುಗಳೆಂದು ಗ್ರಹಿಸಬಹುದಾಗಿದೆ.

ಸೂರ್ಯ, ಚಂದ್ರ, ಭೂಮಿ, ಮರ, ಗಿಡ, ನೀರು, ಹೂ, ಕಲ್ಲು, ಗಾಳಿ, ಮಳೆ ಮುಂತಾದವುಗಳಿಂದ ವ್ಯಕ್ತಿಯು ಪ್ರಭಾವಿತನಾಗಿ ಅವುಗಳಿಗೆ ಅಂದಿನ ಸಂದರ್ಭದಲ್ಲಿ ತಾನು ಅಂದುಕೊಂಡಿದ್ದಂತಹ ಹೆಸರುಗಳನ್ನು ಸಮುದಾಯದ ವ್ಯಕ್ತಿಗಳಿಗೆ ಬಳಸಿರುವ ಸಾಧ್ಯತೆಯಿದೆ. ಈ ಅವಧಿಯಲ್ಲಿ "ನಾಮತ್ವಕ್ಕೂ ವ್ಯಕ್ತಿತ್ವಕ್ಕೂ ಅರ್ಥಸಂಬಂಧವಿಲ್ಲ" (ಪು.12) ಎನ್ನಬಹುದು. ಇದನ್ನೇ ಗಮನಿಸಿದ ಕೇಶಿರಾಜ "ಅಂಕಿತನಾಮಂ ಪೆಸರನಿಡುವನಿಷ್ಟದಿಂದೆಂತಾದೊಡ ಮಿರ್ಪುದು" ಎಂದು ಹೇಳಬೇಕಾಯಿತು(ನರಸಿಂಹಾಚಾರ್ ಡಿ.ಎಲ್., 014, ಶಬ್ದಮಣಿದರ್ಪಣ, ಪು.106, ಸೂತ್ರಸಂಖ್ಯೆ–86).

ಒಟ್ಟಾರೆಯಾಗಿ ಈ ಅವಧಿಯಲ್ಲಿ ತಾನು ರೂಢಿಸಿಕೊಂಡ ದೇವರ ಹೆಸರುಗಳನ್ನು ಮತ್ತು ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ನೈಸರ್ಗಿಕ ಸಕಲ ವಸ್ತುಗಳ ಹೆಸರುಗಳನ್ನು ವ್ಯಕ್ತಿನಾಮಗಳಾಗಿ ಬಳಸಿರುವ ಸಾಧ್ಯತೆಯಿದೆ. ಆದರೆ ಕಲ್ಬುರ್ಗಿಯವರು ಈ ಅವಧಿಯಲ್ಲಿ ಸತ್ತು ಹೋದ ಪಿತೃಗಳ ಹೆಸರನ್ನು ಇಡುತ್ತಿದ್ದಿರಬಹುದು ಎಂದಿದ್ದಾರೆ. ಆದರೆ ಆಗಿನ್ನು ಅಂಕಿತ ನಾಮಗಳು ಪ್ರವೇಶ ಪಡೆದಿರುವ ಸಾಧ್ಯತೆ ಇರುವುದರಿಂದ ಪಿತೃಗಳ ಹೆಸರನ್ನು ಇಡುತ್ತಿದ್ದರು ಎಂಬುದನ್ನು ಕುರಿತು ಮತ್ತೊಮ್ಮೆ ಪರಿಶೀಲಿಸುವ ಅಗತ್ಯವಿದೆ.

ಗೌರವವಾಚಿ ವಾರ್ಗಿಕಗಳು

ಪುರುಷವಾಚಿ	ಸ್ತ್ರೀವಾಚಿ
ದೇವ	ದೇವಿ
ಸ್ವಾಮಿ	ಗೊರವಿ
ಒಡೆಯ	ಕಂತಿ
ರಾಯ	
ರಾಸಿ	
ಜೀಯ	
ಭಟ್ಟ	

ಈ ಮೇಲಿನ ಪಟ್ಟಿಯಲ್ಲಿರುವ ರಾಸಿ, ಜೀಯ, ಭಟ್ಟ, ಗೊರವಿ, ಕಂತಿ(ಪು–18)ಇವುಗಳನ್ನು ಕಲಬುರ್ಗಿಯವರು ಗುರ್ತಿಸಿದ್ದಾರೆ. ಆದರೆ ಪ್ರಸ್ತುತದಲ್ಲಿ ಈ ಪ್ರಕಾರದ ವಾರ್ಗಿಕಗಳು ಬಳಕೆಯಲ್ಲಿಲ್ಲ.

ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ತಿಳಿದುಕೊಳ್ಳುವ ಮೊದಲು ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅಂದರೆ ವ್ಯಕ್ತಿನಾಮದಲ್ಲಿ ಪುರುಷವಾಚಿ

ಮತ್ತು ಸ್ತ್ರೀವಾಚಿ ಎಂದು ಎರಡು ಪ್ರಕಾರಗಳನ್ನು ಕಾಣುತ್ತೇವೆ. ಈ ಎರಡು ಪ್ರಕಾರಗಳನ್ನು ಭಾಷಿಕವಾಗಿ ಪೂರ್ವ ಮತ್ತು ಉತ್ತರ ಘಟಕಗಳೆಂದು ಕರೆಯಲಾಗುತ್ತದೆ. ಇಲ್ಲಿ ಪೂರ್ವಘಟಕವನ್ನು ವ್ಯಕ್ತಿಯ ನಿಜನಾಮವೆಂತಲೂ, ಉತ್ತರ ಘಟಕವನ್ನು ವಾರ್ಗಿಕ ಎಂದು ಕರೆಯುತ್ತಾರೆ(ಪು.15). ಈ ನಿರ್ದಿಷ್ಟ ಮತ್ತು ವಾರ್ಗಿಕಗಳ ಪೂರ್ಣಘಟಕವನ್ನು ವ್ಯಕ್ತಿನಾಮ ಎಂದು ಕರೆಯುತ್ತೇವೆ.

ಕಲಬುರ್ಗಿ ಅವರು ವ್ಯಕ್ತಿನಾಮಗಳ ರಾಚನಿಕ ಸ್ವರೂಪವನ್ನು ಆರು ಬಗೆಯ ವಿನ್ಯಾಸಗಳಲ್ಲಿ ತಿಳಿಸಿದ್ದಾರೆ(ಪು.16).

ನಿರ್ದಿಷ್ಟವಾಚಿ ವ್ಯಕ್ತಿನಾಮ

ಪುರುಷವಾಚಿ	**ಸ್ತ್ರೀವಾಚಿ**
ರಾಮ	ಸೀತೆ
ಲಕ್ಷ್ಮಣ	ಲಕ್ಷ್ಮೀ
ಭರತ	ಗಂಗಾ
ಚಂದ್ರ	ತುಂಗಾ
ಸೂರ್ಯ	ರಾಧಾ
ಭೀಮ	ಉಷಾ
ಅರ್ಜುನ	ರಮಾ
ನಕುಲ	
ಕೃಷ್ಣ	

ನಿರ್ದಿಷ್ಟ+ವಾರ್ಗಿಕವಾಚಿ ವ್ಯಕ್ತಿನಾಮ

ಪುರುಷವಾಚಿ		**ಸ್ತ್ರೀವಾಚಿ**			
ಚಂದ್ರ	+ಅಪ್ಪ= ಚಂದ್ರಪ್ಪ	ಲಕ್ಷ್ಮಿ	+	ಅಮ್ಮ	= ಲಕ್ಷ್ಮಮ್ಮ
ರಾಮ	+ಅಪ್ಪ= ರಾಮಪ್ಪ	ಗಂಗ	+	ಅಕ್ಕ	= ಗಂಗಕ್ಕ
ರಂಗ	+ಅಯ್ಯ= ರಂಗಯ್ಯ	ಸೀತಾ	+	ಅವ್ವ	= ಸೀತವ್ವ
ನಿಂಗ	+ಅಣ್ಣ= ನಿಂಗಣ್ಣ	ರಂಗ	+	ಅಮ್ಮ	= ರಂಗಮ್ಮ
ಸಿದ್ದ	+ಅಯ್ಯ= ಸಿದ್ದಯ್ಯ	ನಿಂಗ	+	ಅಮ್ಮ	= ನಿಂಗಮ್ಮ
ರಾಮ	+ಅಣ್ಣ= ರಾಮಣ್ಣ	ಸಿದ್ದ	+	ಅಮ್ಮ	= ಸಿದ್ದಮ್ಮ

ವಿಸ್ತೃತ ನಿರ್ದಿಷ್ಟವಾಚಿ ವ್ಯಕ್ತಿನಾಮ

ಪುರುಷವಾಚಿ

ಬಸವ +ರಾಜ = ಬಸವರಾಜ

ಸೀತಾ +ರಾಮ = ಸೀತಾರಾಮ

ಉಮಾ +ಶಂಕರ = ಉಮಾಶಂಕರ

ಲಕ್ಷ್ಮಿ +ಕಾಂತ = ಲಕ್ಷ್ಮೀಕಾಂತ

ಸ್ತ್ರೀವಾಚಿ

ಸೀತಾ +ಲಕ್ಷ್ಮಿ = ಸೀತಾಲಕ್ಷ್ಮಿ

ನಾಗ +ಲಕ್ಷ್ಮಿ = ನಾಗಲಕ್ಷ್ಮಿ

ಉಷಾ +ರಾಣಿ = ಉಷಾರಾಣಿ

ಉಮಾ +ಗೌರಿ = ಉಮಾಗೌರಿ

ಸುಬ್ಬ +ಲಕ್ಷ್ಮಿ = ಸುಬ್ಬಲಕ್ಷ್ಮಿ

ವಿಸ್ತೃತ ನಿರ್ದಿಷ್ಟ + ಅವಿಸ್ತೃತ ವಾರ್ಗಿಕ

ಪುರುಷವಾಚಿ

ಪಾಂಡು+ರಂಗ+ಅಯ್ಯ=ಪಾಂಡುರಂಗಯ್ಯ

ಸೀತಾ+ರಾಮ+ಅಪ್ಪ=ಸೀತಾರಾಮಪ್ಪ

ರಾಮ+ಚಂದ್ರ+ಅಣ್ಣ=ರಾಮಚಂದ್ರಣ್ಣ

ರಾಧ+ಕೃಷ್ಣ+ಅಯ್ಯ= ರಾಧಕೃಷ್ಣಯ್ಯ

ವಸಂತ+ಕುಮಾರ+ಅಯ್ಯ = ವಸಂತಕುಮಾರಯ್ಯ

ಅಶ್ವಥ+ನಾರಾಯಣ+ಅಪ್ಪ = ಅಶ್ವಥನಾರಾಯಣಪ್ಪ

ಲಕ್ಷ್ಮೀ+ನಾರಾಯಣ+ಅಪ್ಪ = ಲಕ್ಷ್ಮೀನಾರಾಯಣಪ್ಪ

ಸಿದ್ದ+ರಾಮ+ಅಯ್ಯ = ಸಿದ್ದರಾಮಯ್ಯ

ಸ್ತ್ರೀವಾಚಿ

ನಾಗ+ಲಕ್ಷ್ಮಿ+ಅಮ್ಮ = ನಾಗಲಕ್ಷ್ಮಮ್ಮ

ಸುಬ್ಬ+ಲಕ್ಷ್ಮಿ+ಅಮ್ಮ =ಸುಬ್ಬಲಕ್ಷ್ಮಮ್ಮ

ಸಿದ್ದ+ರಾಮ+ಅಕ್ಕ=ಸಿದ್ದರಾಮಕ್ಕ

ಅವಿಸ್ತೃತ ನಿರ್ದಿಷ್ಟ+ವಿಸ್ತೃತ ವಾರ್ಗಿಕ ವ್ಯಕಿನಾಮ

ಪುರುಷವಾಚಿ

ರಾಮ+ಅಪ್ಪ+ಗೌಡ =ರಾಮಪ್ಪಗೌಡ

ಕೃಷ್ಣ+ಅಯ್ಯ+ಗೌಡ= ಕೃಷ್ಣಯ್ಯಗೌಡ

ರಂಗ+ಅಪ್ಪ+ನಾಯ್ಕ = ರಂಗಪ್ಪನಾಯ್ಕ

ರಂಗ+ಸ್ವಾಮಿ+ಅಯ್ಯ = ರಂಗಸ್ವಾಮಯ್ಯ

ಚಂದ್ರ+ಅಯ್ಯ+ಗೌಡ = ಚಂದ್ರಯ್ಯಗೌಡ

ಸ್ತ್ರೀವಾಚಿ

ಕರಿ+ಬಸವ+ಅಮ್ಮ = ಕರಿಬಸಮ್ಮ

ಸಣ್ಣ+ಬಸವ+ಅಮ್ಮ= ಸಣ್ಣಬಸಮ್ಮ

ವಿಸ್ತೃತ ನಿರ್ದಿಷ್ಟ + ವಿಸ್ತೃತವಾರ್ಗಿಕ

ಪುರುಷವಾಚಿ

ಸೀತಾ+ರಾಮ+ಅಪ್ಪ+ಗೌಡ=ಸೀತಾರಾಮಪ್ಪಗೌಡ

ಸ್ತ್ರೀವಾಚಿ

ಸೀತಾ+ರಂಗ+ಅಮ್ಮ+ಗೌಡಿ=ಸೀತಾರಂಗಮ್ಮಗೌಡಿ

ರಾಮ+ಚಂದ್ರ+ಅಯ್ಯ+ಗೌಡ=ರಾಮಚಂದ್ರಯ್ಯಗೌಡ ಲಕ್ಷ್ಮಿ+ನರಸ+ಅಮ್ಮ+ಗೌಡಿ=ಲಕ್ಷ್ಮೀನರಸಮ್ಮಗೌಡಿ

ಲಕ್ಷ್ಮಿ+ನರಸಿಂಹ+ಸ್ವಾಮಿ+ನಾಯ್ಕ=ಲಕ್ಷ್ಮೀನರಸಿಂಹಸ್ವಾಮಿನಾಯ್ಕ

ಕಲಬುರ್ಗಿಯವರು ಹೇಳಿರುವ ಪ್ರಕಾರಗಳ ಜೊತೆಗೆ ಇದೇ ಮಾದರಿಯ ಇನ್ನು ಹಲವು ರೀತಿಯ ಸಾಧಿತ ರೂಪಗಳ ವರ್ಗೀಕರಣ ಮಾಡಿಕೊಳ್ಳಬಹುದಾಗಿದೆ.

ವಿಸ್ತೃತ ವಾರ್ಗಿಕಗಳು

ಪುರುಷವಾಚಿ	**ಸ್ತ್ರೀವಾಚಿ**
ಅಪ್ಪ+ಅಣ್ಣ = ಅಪ್ಪಣ್ಣ	ಅಕ್ಕ+ಅಮ್ಮ = ಅಕ್ಕಮ್ಮ
ಅಪ+ಅಯ್ಯ= ಅಪ್ಪಯ್ಯ	ಅಣ್ಣ+ಅಮ್ಮ= ಅಣ್ಣಮ್ಮ
ಅಯ್ಯ+ಅಪ್ಪ= ಅಯ್ಯಪ್ಪ	ಸಣ್ಣ+ಅಮ್ಮ= ಸಣ್ಣಮ್ಮ
ಅಣ್ಣ+ಅಪ್ಪ= ಅಣ್ಣಪ್ಪ	ದೊಡ್ಡ+ಅಮ್ಮ= ದೊಡ್ಡಮ್ಮ
ಅಣ್ಣ+ಅಪ್ಪ+ಸ್ವಾಮಿ=ಅಣ್ಣಪ್ಪಸ್ವಾಮಿ	ಚಿಕ್ಕ+ಅಮ್ಮ= ಚಿಕ್ಕಮ್ಮ
ಚಿಕ್ಕ+ಅಪ್ಪ= ಚಿಕ್ಕಪ್ಪ	ಸಣ್ಣ+ಅಕ್ಕ= ಸಣ್ಣಕ್ಕ
ಚಿಕ್ಕ+ಅಯ್ಯ= ಚಿಕ್ಕಯ್ಯ	ಸಣ್ಣ+ತಂಗಿ= ಸಣ್ಣತಂಗಿ
ಚಿಕ್ಕ+ಅಣ್ಣ= ಚಿಕ್ಕಣ್ಣ	
ಚಿಕ್ಕ+ಅಪ್ಪ+ಗೌಡ= ಚಿಕ್ಕಪ್ಪಗೌಡ	
ತಮ್ಮ+ಅಣ್ಣ= ತಮ್ಮಣ್ಣ	
ದೊಡ್ಡ+ ಅಪ್ಪ= ದೊಡ್ಡಪ್ಪ	
ತಮ್ಮ+ಅಯ್ಯ = ತಮ್ಮಯ್ಯ	

ಅವಿಸ್ತೃತ ವಾರ್ಗಿಕ + ಅವಿಸ್ತೃತ ನಿರ್ದಿಷ್ಟ

ಪುರುಷವಾಚಿ	**ಸ್ತ್ರೀವಾಚಿ**
ದೊಡ್ಡ+ಬಸವ= ದೊಡ್ಡಬಸವ	ದೊಡ್ಡ+ಲಕ್ಷ್ಮಿ= ದೊಡ್ಡಲಕ್ಷ್ಮಿ
ಚಿಕ್ಕ+ರಂಗ= ಚಿಕ್ಕರಂಗ	ಸಣ್ಣ+ಲಕ್ಷ್ಮಿ= ಸಣ್ಣಲಕ್ಷ್ಮಿ
ಸಣ್ಣ+ರಾಮ= ಸಣ್ಣರಾಮ	ಕೆಂಪ+ಲಕ್ಷ್ಮಿ= ಕೆಂಪಲಕ್ಷ್ಮಿ
ಸಣ್ಣ+ರಂಗ= ಸಣ್ಣರಂಗ	
ಕೆಂಪ+ರಂಗ= ಕೆಂಪರಂಗ	
ಕೆಂಪ+ರಾಜ= ಕೆಂಪರಾಜ	
ಕೆಂಪ+ಮಂಜ= ಕೆಂಪಮಂಜ	

ಅವಿಸ್ತೃತ ವಿಶೇಷಣ + ವಿಸ್ತೃತ ನಿರ್ದಿಷ್ಟ

ಪುರುಷವಾಚಿ	**ಸ್ತ್ರೀವಾಚಿ**
ದೊಡ್ಡ+ ರಾಮ+ ಕೃಷ್ಣ= ದೊಡ್ಡರಾಮಕೃಷ್ಣ	ಕರಿ+ಸುಬ್ಬ+ಲಕ್ಷ್ಮಿ= ಕರಿಸುಬ್ಬಲಕ್ಷ್ಮಿ
ಚಿಕ್ಕ+ಬಸವ+ರಾಜ = ಚಿಕ್ಕ ಬಸವರಾಜ	ದೊಡ್ಡ+ನಾಗ+ಲಕ್ಷ್ಮಿ= ದೊಡ್ಡನಾಗಲಕ್ಷ್ಮಿ
ದೊಡ್ಡ+ಶಿವ+ರಾಮ= ದೊಡ್ಡಶಿವರಾಮ	
ಕರಿ+ಬಸವ+ರಾಜ = ಕರಿಬಸವರಾಜ	

ಈ ಮೇಲಿನ ಪಟ್ಟಿಯಲ್ಲಿರುವ ವ್ಯಕ್ತಿನಾಮಗಳಲ್ಲಿ ಪೂರ್ವಘಟಕದಲ್ಲಿ ವಿಶೇಷಣಗಳು ಬಂದಾಗ ಈ ನಿಯಮ ಅನ್ವಯವಾಗುತ್ತದೆ.

ಅವಿಸ್ತೃತ ವಾರ್ಗಿಕ + ಅವಿಸ್ತೃತ ನಿರ್ದಿಷ್ಟ + ಅವಿಸ್ತೃತ ವಾರ್ಗಿಕ

ಪುರುಷವಾಚಿ	**ಸ್ತ್ರೀವಾಚಿ**
ಸಣ್ಣ+ ರಂಗ+ಅಯ್ಯ= ಸಣ್ಣರಂಗಯ್ಯ	ಸಣ್ಣ+ರಂಗ+ಅಮ್ಮ = ಸಣ್ಣರಂಗಮ್ಮ
ಚಿಕ್ಕ+ತಿಮ್ಮ+ಅಣ್ಣ= ಚಿಕ್ಕತಿಮ್ಮಣ್ಣ	ದೊಡ್ಡ+ಬಸವ+ಅಮ್ಮ= ದೊಡ್ಡಬಸಮ್ಮ
ದೊಡ್ಡ+ನಿಂಗ+ಅಯ್ಯ= ದೊಡ್ಡನಿಂಗಯ್ಯ	ಕೆಂಪ+ಲಕ್ಷ್ಮಿ+ಅಮ್ಮ = ಕೆಂಪಲಕ್ಷ್ಮಮ್ಮ
ಕರಿ+ಬಸವ+ಅಯ್ಯ= ಕರಿಬಸವಯ್ಯ	ಕರಿ+ಬಸವ+ಅಮ್ಮ = ಕರಿಬಸಮ್ಮ

ಹೆಸರುಗಳಿಂದಲೇ ಜಾತಿಗಳನ್ನು ಗುರ್ತಿಸಲು: "ಸಮಾಜದಲ್ಲಿ ವರ್ಣ, ವರ್ಗಗಳು ಶ್ರೇಣಿಯನ್ನು ಕಲ್ಪಿಸುತ್ತವೆ. ಇಲ್ಲಿ ಮೇಲು ವರ್ಣ–ಮೇಲು ವರ್ಗ, ಕೀಳು ವರ್ಣ–ಕೀಳು ವರ್ಗಗಳ ನಾಮನಿರ್ದೇಶನ ಪದ್ಧತಿ ನಿರ್ದಿಷ್ಟ ಮತ್ತು ವಾರ್ಗಿಕಗಳಿಂದಲೂ ಭಿನ್ನವಾಗಿರುತ್ತದೆ"(ಪು.20). ಆದರೆ ಈ ಕ್ರಮ ಬದಲಾಗಿ ಯಾವೂದೇ ಜಾತಿಯವರು ಯಾವುದೇ ಹೆಸರನ್ನಿಟ್ಟುಕೊಳ್ಳುವ ಸ್ಥಿತಿ ಇಂದು ಇರುವುದರಿಂದ ಕೇವಲ ಹೆಸರುಗಳಿಂದಲೇ ಜಾತಿಗಳನ್ನು ಗುರ್ತಿಸಲು ಸಾಧ್ಯವಾಗುತ್ತಿಲ್ಲ.

ಕುಲನಾಮಗಳು: ಕುಲನಾಮಗಳನ್ನು ಕುರಿತಂತೆ "ಸಮೂಹದಿಂದ ಒಬ್ಬ ವ್ಯಕ್ತಿಯನ್ನು ಸರಿಯಾಗಿ ಪ್ರತ್ಯೇಕಿಸಿಕೊಡಲು ಅವರ ಹೆಸರು ಅಸಮರ್ಥವಾದಲ್ಲಿ ಜೊತೆಗೆ ತಂದೆಯ ಹೆಸರನ್ನು, ಅದೂ ಅಸಮರ್ಥವಾದಲ್ಲಿ ಹೆಚ್ಚಿನದಾಗಿ ಇನ್ನೊಂದು ಹೆಸರನ್ನು ಸೇರಿಸುವುದು ಚಲಾವಣೆಯಲ್ಲಿ ಬಂದಿರಬೇಕು. ಆದುದರಿಂದ ಒಬ್ಬನನ್ನು ಗುರುತಿಸುವಲ್ಲಿ ಬಳಸುವ ವ್ಯಕ್ತಿನಾಮ, ಪಿತೃನಾಮಗಳಲ್ಲದ ಮೂರನೆಯ ನಾಮವೇ ಕುಟುಂಬನಾಮ ಅಥವಾ ಅಡ್ಡಹೆಸರು ಅಥವಾ ಕುಲನಾಮ–ಎಂದು ವ್ಯಾಖ್ಯಾನಿಸಬಹುದು. ಸಮೂಹದಿಂದ ವ್ಯಕ್ತಿಯನ್ನು ಪ್ರತ್ಯೇಕಿಸಿ ಕೊಡುವುದೇ ಈ ಮೂರನೆಯ ಹೆಸರಿನ ಮುಖ್ಯ ಉದ್ದೇಶವಾಗಿದ್ದರೂ ಅದು ಆ ವ್ಯಕ್ತಿಯ ಇಲ್ಲವೇ ಆತನ ಪೂರ್ವಜರ ನೆಲೆ, ವೃತ್ತಿ ಇಲ್ಲವೆ ಚಿತ್ತವೃತ್ತಿಗಳನ್ನು ಪ್ರತಿನಿಧಿಸುತ್ತದೆ"

ಎಂದಿದ್ದಾರೆ (ಪು.37).

ವ್ಯಕ್ತಿನಾಮಗಳ ಸಾಮಾಜಿಕ ನೆಲೆಗಳು: ಹೆಸರಿಗೂ ಮತ್ತು ಸಮಾಜಕ್ಕೂ ಪರಸ್ಪರ ಸಂಬಂಧವಿದೆ. ಅದೇ ರೀತಿ ಮತ್ತು ಸಮಾಜದಲ್ಲಿ ಜೀವಿಸುವ ಸಮುದಾಯದ ಜಾತಿ, ವೃತ್ತಿ, ಸಂಸ್ಕೃತಿ, ಆರ್ಥಿಕತೆ, ಧರ್ಮ, ಲಿಂಗ ಮುಂತಾದವುಗಳಿಗೂ ಪರಸ್ಪರ ಸಂಬಂಧವಿದೆ. ಈ ಹೇಳಿಕೆಗೆ ಪೂರಕವಾಗಿ ಒಂದು ಪದ್ಯವನ್ನು ನೋಡಬಹುದು.

ಅಯ್ಯನಾರ ಹುಡುಗ
'ಬಸಯ್ಯ' ಅಂತ
ಗೌಡರ ಹುಡುಗ
'ಬಸವನಗೌಡ' ಅಂತ
ಬಣಜಗೇರು (ಉಳಿದ ಲಿಂಗಾಯಿತ) ಹುಡುಗ
'ಬಸವರಾಜ' ಅಂತ
ಆ ಕುರುಬರ ಹುಡುಗ
ಬಸಪ್ಪ ಅಂತ
ನಾ 'ಬಸ್ಯ' ಅಂತ

ಯಾಕಂದ್ರ ನಾ ಹೊಲ್ಯಾ ಅಂತ (ಮೂಲ: ಸಿದ್ಧನಗೌಡಪಾಟೀಲ, ನಾ ಬಸ್ಯಾ ಅಂತ, 1983, ಪು.23, ಉಲ್ಲೇಖ:ಕಲಬುರ್ಗಿ ಎಂ.ಎಂ., 2010, ಕನ್ನಡ ನಾಮ ವಿಜ್ಞಾನ, ಪು.23).

ಈ ಮೇಲಿನ ಪದ್ಯವನ್ನು ಗಮನಿಸಿ ಹೇಳುವುದಾದರೆ ಒಂದು ನಿರ್ದಿಷ್ಟ ಸಮಾಜದ ರಚನೆ ಅಥವಾ ಸಾಮಾಜಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ವ್ಯಕ್ತಿನಾಮಗಳು ಸಹಾಯಕವಾಗುತ್ತವೆ. ಹಾಗಾಗಿ ಹೆಸರುಗಳು ವ್ಯಕ್ತಿ ಮತ್ತು ಸಮಾಜದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತವೆ. ವ್ಯಕ್ತಿನಾಮಗಳು ಸಂಪ್ರದಾಯಬದ್ಧವಾಗಿದ್ದು ವಂಶಪಾರಂಪರ್ಯವಾಗಿ ಬಳಕೆಯಲ್ಲಿರುತ್ತವೆ. ವ್ಯಕ್ತಿನಾಮಗಳು ಸಮುದಾಯದ ನಂಬಿಕೆಯ ಭಾಗವಾಗಿಯೂ ಬಳಕೆಯಲ್ಲಿವೆ.

ಹೀಗೆ ನಾಮ ವಿಜ್ಞಾನದಲ್ಲಿ ಕಲಬುರ್ಗಿಯವರು ವ್ಯಕ್ತಿನಾಮ, ಸ್ಥಳನಾಮ, ಕುಲನಾಮಗಳನ್ನು ಕುರಿತು ಅಧ್ಯಯನ ಮಾಡುವ ಹಲವು ಮಾರ್ಗಗಳನ್ನು ತಿಳಿಸಿಕೊಟ್ಟಿದ್ದಾರೆ. ಈ ಪುಟ್ಟ ಕೃತಿಯು ನಾಮ ವಿಜ್ಞಾನದ ಹೊಸ ಹೊಸ ಹೊಳಹುಗಳನ್ನು ತೆರೆದಿಟ್ಟು ಸಂಶೋಧನ ಕ್ಷೇತ್ರಕ್ಕೆ ಮುನ್ನುಡಿ ಬರೆದಿದೆ. ಈ ಹೊಸ ಮಾದರಿಗಳನ್ನು ಬಳಸಿಕೊಂಡು ಇಂದಿನ ಸಂಶೋಧಕರು ಮುನ್ನೆಡೆಯುವ ಕೆಲಸವನ್ನು ಮಾಡಬೇಕಾಗಿದೆ.

ಆಕರ ಗ್ರಂಥ :

1. ಕಲಬುರ್ಗಿ ಎಂ.ಎಂ., 2012, ಕನ್ನಡ ನಾಮವಿಜ್ಞಾನ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

ಹೆಣ್ಣು, ಪ್ರೇಮ, ಕಾಮ ಮತ್ತು ಆತ್ಮರತಿಯ ಸಂಗಮ: ಒಲವಿನ ಕೈಬುಟ್ಟಿ

1 **ಡಾ. ಸೈಯದ್ ಮುಯಿನ್**

ಕನ್ನಡ ಸಹಾಯಕ ಪ್ರಾಧ್ಯಾಪಕ

ಕ್ರಿಸ್ತು ಜಯಂತಿ ಪರಿಗಣಿತ ವಿಶ್ವವಿದ್ಯಾಲಯ

ಬೆಂಗಳೂರು–560077

ರವಿಶಂಕರ ಎ.ಕೆ. ಅವರ ಸಾಹಿತ್ಯಿಕ ವ್ಯಕ್ತಿತ್ವ ಮತ್ತು 'ಒಲವಿನ ಕೈಬುತ್ತಿ' ಕವನ ಸಂಕಲನದ ಸಾಹಿತ್ಯಿಕ ಅಂಶಗಳು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆಯಬಹುದಾಗಿರುವ ಕೃತಿಯಾಗಿದೆ. ಈ ಕವನಸಂಕಲನದಲ್ಲಿ ಪ್ರೀತಿ, ಮಾನವೀಯತೆ, ಜೀವನಾನುಭವ, ಸಂವೇದನೆ ಮತ್ತು ಸಾಮಾಜಿಕ ಮೌಲ್ಯಗಳು ಸೂಕ್ಷ್ಮವಾಗಿ ಅಭಿವ್ಯಕ್ತವಾಗಿವೆ. ಕವಿಯೇ ಹೇಳುವಂತೆ ಅವರ ರಚನೆಯನ್ನು ಸಮಾಜಕ್ಕೆ ನೀಡಿದ್ದಾರೆ, ಅದನ್ನು ಗ್ರಹಿಸುವವರು ತಮ್ಮ ಅನುಭವಕ್ಕೆ ತಕ್ಕ ಹಾಗೆ ಅರ್ಥೈಸಿಕೊಳ್ಳುವ ಸ್ವಾತಂತ್ರ್ಯ ಹೊಂದಿರುವವರಾಗಿರುತ್ತಾರೆ. ಅಂತೆಯೇ ನಾನು ಕೂಡ ಈ ಕೃತಿಯಲ್ಲಿ ಕಂಡ ಅನುಭವಿಸಿದ ಕೆಲವು ಭಾವನೆಗಳನ್ನು ಲೇಖನದ ಮೂಲಕ ನೀಡುತ್ತಿದ್ದೇನೆ.

ಪ್ರಮುಖ ಪದಗಳು – *ಒಲವಿನ ಕೈಬುಟ್ಟಿ, ಸಖಿ ಶಾರದೆ, ನಲ್ಲ ನಲ್ಲೆಯ ವಸಂತ, ಕಾವ್ಯಸೃಷ್ಟಿ*

ರವಿಶಂಕರ ಎ.ಕೆ. ಅವರು ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಗಂಭೀರ, ಗಮನಾರ್ಹ ಕವಿ, ವಿಮರ್ಶಕ ಮತ್ತು ಅಧ್ಯಯನಕಾರರಾಗಿದ್ದಾರೆ. ಅವರ ಬರವಣಿಗೆಯು ಸರಳತೆಯೊಂದಿಗೆ ಆಳವಾದ ಅರ್ಥವ್ಯಾಪ್ತಿಯನ್ನು ಹೊಂದಿದೆ. "ಒಲವಿನ ಕೈಬುಟ್ಟಿ" ಕವನಸಂಕಲನವು ಅವರ ಕಾವ್ಯಪ್ರಪಂಚದ ಒಂದು ಪ್ರಾತಿನಿಧಿಕ ಕೃತಿ. ನಾಲ್ಕು ಭಾಗಗಳುಳ್ಳ ಈ ಕೃತಿಯಲ್ಲಿ ಕ್ರಮವಾಗಿ 1. ನೂರೊಂದು ಚುಟುಕುಗಳು 2. ನೂರೊಂದು ಹಾಯ್ಕುಗಳು, 3. ಸಖಿ ಶಾರದೆ 4.

ನಲ್ಲ ನಲ್ಲೆಯ ವಸಂತ ಎಂಬ ಭಾಗಗಳಿದ್ದು ಇವೆಲ್ಲ ಮೂರು–ನಾಲ್ಕು ವರ್ಷಗಳ ಕಾವ್ಯಸೃಷ್ಟಿಗಳಾಗಿವೆ. ಈ ನನ್ನ ಲೇಖನದ ವಸ್ತುವಿಗೆ ಪ್ರವೇಶಿಸುವ ಮೊದಲು ಈ ಕೃತಿಯಲ್ಲಿರುವ ಇತರೆ ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ ಬರೆದ ನಂತರ ಪ್ರಮುಖ ವಿಷಯಕ್ಕೆ ಹೊರಳುವೆ. ಏಕೆಂದರೆ ಕೃತಿಯು ಓದುಗರಿಗೆ ಹಲವಾರು ವಿಷಯಗಳನ್ನು ಒಮ್ಮೆಲೆ ಹೊಮ್ಮಿಸಿ ಮಾಯವಾಗಬಹುದು, ಅಂತಹದ್ದೇ ಹೊಳಹು ನನಗೆ ಹೊಳೆದಿದ್ದು ಈ ಕೃತಿಯನ್ನು ಮೊದಲಿಗೆ ಓದಿದಾಗ ಇದೇ ವಿಷಯದ ಕುರಿತು ಲೇಖನ ಬರೆಯಬೇಕೆಂದು ನಿರ್ಧರಿಸಿ ಬರೆಯುತ್ತಿದ್ದೇನೆ.

ಕವನಸಂಕಲನದ ಶೀರ್ಷಿಕೆಯ ಅರ್ಥ

‘ಒಲವಿನ ಕೈಬುಟ್ಟಿ’ ಎಂಬ ಶೀರ್ಷಿಕೆಯೆ ಪ್ರೀತಿಯ ಸೌಮ್ಯತೆಯನ್ನು ಮತ್ತು ಮಾನವೀಯ ಸ್ಪರ್ಶವನ್ನು ಸೂಚಿಸುತ್ತದೆ. ‘ಕೈಬುಟ್ಟಿ’ ಎಂಬ ಪದವು ಅಂಧಕಾರದಲ್ಲಿ ಬೆಳಕು ತೋರಿಸುವ ದೀಪದಂತೆ, ಜೀವನದಲ್ಲಿ ಪ್ರೀತಿ ದಾರಿದೀಪವಾಗುವುದನ್ನು ಪ್ರತಿನಿಧಿಸುತ್ತದೆ.

ಪ್ರೀತಿ ಮತ್ತು ಮಾನವೀಯತೆ: ಈ ಸಂಕಲನದ ಪ್ರಮುಖ ಅಂಶ ಪ್ರೀತಿ. ಕವಿ ಪ್ರೀತಿಯನ್ನು ಕೇವಲ ವೈಯಕ್ತಿಕ ಭಾವನೆಯಾಗಿ ಮಾತ್ರವಲ್ಲದೆ, ಸಾಮಾಜಿಕ ಸಂಬಂಧಗಳ ಬಲವಾಗಿ ಚಿತ್ರಿಸುತ್ತಾರೆ. ಮಾನವೀಯ ಮೌಲ್ಯಗಳ ಮಹತ್ವವನ್ನು ಕವನಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ರವಿಶಂಕರ ಅವರ ಭಾಷೆ ಸರಳ, ಸುಗಮ ಮತ್ತು ಓದುಗರಿಗೆ ಹತ್ತಿರವಾಗಿರುತ್ತದೆ. ರೂಪಕ, ಉಪಮೆ, ದೃಶ್ಯಚಿತ್ರಣಗಳ ಬಳಕೆ ಕವನಗಳಿಗೆ ಕಲಾತ್ಮಕ ಸೊಬಗು ನೀಡುತ್ತದೆ. ಪ್ರತಿ ಕವನದಲ್ಲೂ ಜೀವನದ ಸಣ್ಣಸಣ್ಣ ಕ್ಷಣಗಳನ್ನು ಸೂಕ್ಷ್ಮವಾಗಿ ಹಿಡಿದಿಡಲಾಗಿದೆ. ಈ ಸಂಕಲನದಲ್ಲಿ ಕೇವಲ ವೈಯಕ್ತಿಕ ಭಾವನೆಗಳಷ್ಟೇ ಅಲ್ಲ, ಸಮಾಜದ ವಿವಿಧ ಮುಖಗಳೂ ಪ್ರತಿಬಿಂಬಿತವಾಗಿವೆ. ಅನ್ಯಾಯ, ಅಸಮಾನತೆ, ಮತ್ತು ಮಾನವ ಸಂಬಂಧಗಳ ಸಂಕೀರ್ಣತೆಗಳನ್ನು ಕವಿ ಸೂಕ್ಷ್ಮವಾಗಿ ಅನಾವರಣಗೊಳಿಸುತ್ತಾರೆ.

ಕವನಗಳು ಜೀವನದ ಅರ್ಥವನ್ನು ಹುಡುಕುವ ಪ್ರಯತ್ನವಾಗಿವೆ. ದುಃಖ–ಸಂತೋಷ, ಆಶೆ–ನಿರಾಶೆ, ಪ್ರೀತಿ–ವಿಯೋಗ ಇವುಗಳ ನಡುವೆ ಮಾನವ ಜೀವನದ ದಾರಿಯನ್ನು ಕವಿ ತೋರಿಸುತ್ತಾರೆ. ಒಟ್ಟಿನಲ್ಲಿ, “ಒಲವಿನ ಕೈಬುತ್ತಿ” ಕವನಸಂಕಲನವು ರವಿಶಂಕರ ಎ.ಕೆ. ಅವರ ಸಾಹಿತ್ಯಿಕ ಪಕ್ವತೆಯನ್ನು ಮತ್ತು ಭಾವನಾತ್ಮಕ ಆಳವನ್ನು ತೋರಿಸುವ ಕೃತಿ. ಪ್ರೀತಿ ಮತ್ತು ಮಾನವೀಯ ಸಂಬಂಧಗಳು ಎಂಬ ಶಾಶ್ವತ ಮೌಲ್ಯಗಳನ್ನು ಮನದಟ್ಟು ಮಾಡಿಸುವ ಈ ಸಂಕಲನ ಕನ್ನಡ ಕಾವ್ಯಪ್ರಪಂಚಕ್ಕೆ ಅಮೂಲ್ಯ ಕೊಡುಗೆ ಎಂದು ಹೇಳಬಹುದು. ಲೇಖನದ ಮುಖ್ಯ ಉದ್ದೇಶಕ್ಕೆ ಪ್ರವೇಶ ಮಾಡಿದರೆ ‘ಒಲವಿನ ಕೈಬುಟ್ಟಿ’ ಕವನ ಸಂಗ್ರಹದ ಸಖಿ ಶಾರದೆ ಮತ್ತು ನಲ್ಲ ನಲ್ಲೆಯ ವಸಂತ ಕವನ ಸಂಗ್ರಹದ ಪದ್ಯಗಳ ಕುರಿತಾಗಿ

ವಿವೇಚನೆಯನ್ನು ಮಾಡಲಾಗಿದೆ. ಕಾರಣ ಕೆಲವು ವಿಷಯಗಳು ಚರ್ವಿತ ಚರ್ವಣವಾಗಬಾರದೆಂಬ ಉದ್ದೇಶದಿಂದ ನನಗೆ ಪ್ರಮುಖವೆನಿಸಿದ, ಸೊಗಯಿಸಿದ ಕವನಗಳನ್ನು ಆಯ್ಕೆ ಮಾಡಿಕೊಂಡು ವಿವೇಚಿಸಲಾಗಿದೆ. ಹಾಗೆಯೇ ಸಂಶೋಧನ ಲೇಖನದ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಮಿತಿಯನ್ನು ಎಳೆಯಲಾಗಿದೆ. ಈ ಕವನ ಸಂಗ್ರಹದ ಮುಖ್ಯ ಕೇಂದ್ರ ಹೆಣ್ಣು, ಮಾನವೀಯ ಗುಣ, ಸ್ವಯಂಪ್ರವೃತಿಯ ಗುಣಗಳು ಆಗಿರುವುದನ್ನು ಕಾಣಬಹುದು. ಗಂಡಿನ ನಿವೇದನೆ, ಗಂಡಿನ ಭಾವಗಳ–ಅರ್ಥಗಳ ಮೂಲ ಸ್ವರೂಪವನ್ನು, ತನ್ನ ಜ್ಞಾನವನ್ನು ಮತ್ತೊಬ್ಬರಿಗೆ ಪ್ರಚೋದಿಸುವ ಮೊದಲಾದ ಅಂಶಗಳನ್ನು ಕಾಣಬಹುದು, ಹಾಗೆಯೇ ಹೆಣ್ಣಿನ ಕುರಿತಾಗಿರುವ ಭಾವಾನಾತ್ಮಕ ಪರಿಪೇಕ್ಷೆಯನ್ನು ಅರ್ಥೈಸುವ ಪ್ರಯತ್ನವನ್ನು ಮಾಡಲಾಗಿದೆ. ಹೆಣ್ಣನ್ನು ತನ್ನ ಸಖೀಯನ್ನಾಗಿ, ಆತ್ಮಸಂಗಾಗಿತಯನ್ನಾಗಿ ಕಂಡಿರುವುದಷ್ಟೇ ಅಲ್ಲ ಜಗತ್ತಿನ ಆದಿಶಕ್ತಿಯನ್ನಾಗಿ, ಜಗದ ಕಣ್ಣಾಗಿಯೂ ಕಂಡಿರುವುದನ್ನು ಕಾಣಬಹುದು. 'ಸಖೀ ಶಾರದೆ'ಯ ಮೊದಲ ಕವಿತೆಯಲ್ಲಿ ಮಹಿಳೆಯ ದೃಷ್ಟಿಕೋನವನ್ನು (ಸ್ತ್ರೀ ಪರಿಕಲ್ಪನೆ) ಸೂಕ್ಷ್ಮವಾಗಿ, ಗೌರವಪೂರ್ಣವಾಗಿ ಮತ್ತು ತತ್ವಚಿಂತನೆಯ ಮೂಲಕ ಚಿತ್ರಿಸಲಾಗಿದೆ. ಇದರ ಪ್ರಮುಖ ಅಂಶಗಳನ್ನು ನೋಡಿದರೆ ಇದರ ಗಹನತೆ ಅರ್ಥವಾಗುತ್ತದೆ.

ಸ್ತ್ರೀ = ಆತ್ಮಬಂಧು (ಆತ್ಮೀಯ ಸಂಗಾತಿ): 'ನೀನು ನನ್ನಂತೆ ಆತ್ಮಬಂಧು' ಎಂಬ ಸಾಲಿನಲ್ಲಿ ಸ್ತ್ರೀಯನ್ನು ಕೇವಲ ಪ್ರೇಮಿಕೆಯಾಗಿ ಅಲ್ಲ, ಆತ್ಮೀಯ ಸಹಯಾತ್ರಿಯಾಗಿ ನೋಡಲಾಗಿದೆ. ಅವಳು ಜೀವನದ ಒಳಗಣ್ಣಿನ ಭಾಗ.

ಸ್ತ್ರೀ = ಜ್ಞಾನ ಮತ್ತು ಶಕ್ತಿ (ಶಾರದೆ ರೂಪ):"ನೀನು ಹೆಣ್ಣು ಅಂದರೆ ಶಾರದೆ" ಎಂಬುದರಿಂದ ಸ್ತ್ರೀಯನ್ನು ಜ್ಞಾನ ದೇವತೆ ರೂಪದಲ್ಲಿ ಕಾಣಲಾಗಿದೆ. ಇಲ್ಲಿ ಸ್ತ್ರೀ ಬೌದ್ಧಿಕತೆ, ಕಲಾತ್ಮಕತೆ ಮತ್ತು ಸೃಜನಶೀಲತೆಯ ಸಂಕೇತ.

ಸ್ತ್ರೀ = ಸೃಷ್ಟಿಯ ಮೂಲಶಕ್ತಿ: "ಸೃಷ್ಟಿಯೂ ಹೊಸ ದೃಷ್ಟಿಗಳನ್ನು ಜಗತ್ತಿಗೆ ಪಸರಿಸುತ್ತಾ ಸಾಗುತ್ತದೆ" – ಈ ಸಾಲುಗಳಲ್ಲಿ ಸ್ತ್ರೀಯನ್ನು ಸೃಷ್ಟಿಯ ಚಲನೆಯ ಕೇಂದ್ರವಾಗಿಯೇ ಕಾಣಲಾಗಿದೆ. ಅವಳು ಹೊಸ ದೃಷ್ಟಿ, ಹೊಸ ಚಿಂತನೆಗಳನ್ನು ನೀಡುವ ಶಕ್ತಿ.

ಸ್ತ್ರೀ = ಅರ್ಥಪೂರ್ಣ ಜೀವನದ ಕಾರಣ: "ಕಾರ್ಯಕ್ಕಾಗಿ ಜೀವಾತ್ಮಗಳ ಕೊಡುಗೆ" – ಸ್ತ್ರೀಯು ಜೀವನಕ್ಕೆ ಅರ್ಥ ನೀಡುವ ಒಂದು ಮುಖ್ಯ ಶಕ್ತಿ. ಅವಳಿಂದಲೇ ಜೀವನದ ಗುರಿ ಮತ್ತು ಮೌಲ್ಯಗಳು ರೂಪುಗೊಳ್ಳುತ್ತವೆ.

ವಿಜ್ಞಾನ ಮತ್ತು ಕಲೆಗಳ ಸಮನ್ವಯದಲ್ಲಿ ಸ್ತ್ರೀ: "ವಿಜ್ಞಾನದಿಂದ ಇದೊಂದು ಜೀವ! ಕಲೆಯಿಂದ ಅರ್ಥಪೂರ್ಣ ಭಾವ" – ಸ್ತ್ರೀ ಕೇವಲ ಜೀವಶಾಸ್ತ್ರೀಯ ಅಸ್ತಿತ್ವವಲ್ಲ; ಅವಳು ಭಾವ, ಕಲೆ ಮತ್ತು ಅರ್ಥವನ್ನು ತುಂಬುವ ಶಕ್ತಿ.

ಸ್ತ್ರೀ = ಪ್ರೇರಣೆ ಮತ್ತು ಸತ್ಯದ ಪ್ರತಿಬಿಂಬ: "ಪ್ರತಿ ಮನವೂ ನಿನ್ನ ದೃಷ್ಟಿಯ ಪ್ರದೀಪ" – ಸ್ತ್ರೀ ಇತರರ ಮನಸ್ಸನ್ನು ಬೆಳಗಿಸುವ ದೀಪದಂತೆ.

"ನಾನು ಎಂಬುದೇ ಕಾರಣ, ನೀನು ಎಂಬುದೇ ನಿಜ" – ಸ್ತ್ರೀಯ ಅಸ್ತಿತ್ವವೇ ಸತ್ಯದ ಮೂಲವೆಂದು ಹೇಳಲಾಗಿದೆ. ಈ ಕವಿತೆಯಲ್ಲಿ ಸ್ತ್ರೀಯನ್ನು ಕೇವಲ ಪ್ರೇಮದ ವಸ್ತುವಾಗಿ ಅಲ್ಲ, ಜ್ಞಾನಸ್ವರೂಪಿಣಿ, ಸೃಷ್ಟಿಯ ಶಕ್ತಿ, ಆತ್ಮೀಯ ಸಂಗಾತಿ, ಜೀವನದ ಅರ್ಥದ ಮೂಲ ಎಂದು ಮಹತ್ವಪೂರ್ಣವಾಗಿ ಚಿತ್ರಿಸಲಾಗಿದೆ. ಅದರ ಮೂಲಕ ಕವಿ ಸ್ತ್ರೀಯನ್ನು ಅತ್ಯುನ್ನತ ಸ್ಥಾನದಲ್ಲಿ ಸ್ಥಾಪಿಸುತ್ತಾನೆ – ಅವಳು ಜೀವನದ ಸೌಂದರ್ಯ ಮತ್ತು ಸತ್ಯದ ಕೇಂದ್ರಬಿಂದು. 'ನಲ್ಲ ನಲ್ಲೆಯ ವಸಂತ' ಭಾಗದ 'ಎನ್ನರಸಿ' ಕವನವು ವಸಂತ ಋತುವಿನ ಸೌಂದರ್ಯವನ್ನು, ಶೃಂಗಾರಭಾವವನ್ನು ಮತ್ತು ಸಂಸ್ಕೃತಿಯ ಸಾಂಪ್ರದಾಯಿಕ ರೂಪಕಗಳನ್ನು ಒಟ್ಟುಗೂಡಿಸಿ ಚಿತ್ರಿಸುವ ಲಾಲಿತ್ಯಪೂರ್ಣ ಕಾವ್ಯವಾಗಿದೆ.

ಇದರ ಸಾಹಿತ್ಯ ವಿಮರ್ಶೆಯನ್ನು ವಿವಿಧ ಆಯಾಮಗಳಲ್ಲಿ ನೋಡಬಹುದು:

ಕವನದ ಕೇಂದ್ರಭಾವ "ವಸಂತ" – ಇದು ಕೇವಲ ಋತು ಮಾತ್ರವಲ್ಲ, ಪ್ರೀತಿ, ಯೌವನ, ಸೌಂದರ್ಯ ಮತ್ತು ಜೀವಂತಿಕೆಯ ಸಂಕೇತವಾಗಿದೆ. "ಎನ್ನರಸಿ", "ಚೈತ್ರವರ್ಣೆ", "ಶೃಂಗಾರ" ಇಂತಹ ಪದಗಳು ಪ್ರೇಮಭಾವವನ್ನು ಹೆಚ್ಚು ಸ್ಪಷ್ಟಗೊಳಿಸುತ್ತವೆ. ಕವಿ ತನ್ನ ಮನಸ್ಸಿನಲ್ಲಿರುವ ಸೌಂದರ್ಯವತಿ/ನಾರಿಯನ್ನು ವಸಂತದ ರೂಪದಲ್ಲಿ ಕಂಡುಕೊಳ್ಳುತ್ತಾನೆ. ಈ ಕವನದಲ್ಲಿ ಮುಖ್ಯವಾಗಿ ಶೃಂಗಾರ ರಸವೇ ಪ್ರಾಬಲ್ಯ ಹೊಂದಿದೆ. "ನಾರಿ ಶೃಂಗಾರ ತೋರಿ ವಿಶ್ವ ಕರೆಯ", "ನಗುಜಾರಿ ಬಂದಳು ಮನಕೆ" ಇಂತಹ ಸಾಲುಗಳು ಸೌಂದರ್ಯ ಮತ್ತು ಆಕರ್ಷಣೆಯ ಭಾವನೆಗಳನ್ನು ಜೀವಂತವಾಗಿ ಮೂಡಿಸುತ್ತವೆ. ಪ್ರೇಮ ಮತ್ತು ವಿರಹ ಎರಡೂ ಸೂಕ್ಷ್ಮವಾಗಿ ಇಲ್ಲಿ ಅಡಕವಾಗಿವೆ.

ಕವಿ ಪ್ರಕೃತಿಯನ್ನು ಮಾನವ ರೂಪದಲ್ಲಿ ಚಿತ್ರಿಸಿದ್ದಾರೆ. "ವಸಂತ", "ಚೈತ್ರವರ್ಣೆ", "ಶ್ರಾವಣ ವಾಸಂತಿ" ಎಂಬ ರೂಪಕಗಳು ಋತುಗಳನ್ನು ಜೀವಂತ ವ್ಯಕ್ತಿಗಳಂತೆ ತೋರಿಸುತ್ತವೆ. "ಸಿಂಧೂರ ಸಾರಿ ಹರಿಯ" ಎಂಬುದು ಸೂರ್ಯೋದಯ ಅಥವಾ ಪ್ರಕೃತಿಯ ಉಜ್ವಲತೆಯನ್ನು ಸೂಚಿಸುತ್ತದೆ. ಈ ರೂಪಕಗಳು ಕವನಕ್ಕೆ ದೃಶ್ಯಾತ್ಮಕ ಸೌಂದರ್ಯವನ್ನು ನೀಡುತ್ತವೆ.

ಕವನದ ಭಾಷೆ ಲಾಲಿತ್ಯಪೂರ್ಣ ಮತ್ತು ಸಂಸ್ಕೃತ ಸಮೃದ್ಧವಾಗಿದೆ. "ಸಂಸ್ಕೃತಿಯ ಸಿರಿದೇವಿ", "ಪಲ್ಲಕ್ಕಿಯೇರು" ಇಂತಹ ಪದಗಳು ಕಾವ್ಯದ ಗಂಭೀರತೆಯನ್ನು ಹೆಚ್ಚಿಸುತ್ತವೆ. ಅಲಂಕಾರಗಳ ಬಳಕೆ (ರೂಪಕ, ಉಪಮೆ, ಅನುರಾಗ) ಕವನದ ರಸವತ್ತತೆಯನ್ನು ಹೆಚ್ಚಿಸುತ್ತದೆ.

ಈ ಕವನದಲ್ಲಿ ಗೇಯಪರ ಸ್ವಭಾವ ಇದೆ. ಪದಗಳ ಮೃದುವಾದ ಲಯ,

ಪುನರಾವರ್ತನೆ (ಎನ್ನರಸಿ)ಗೆ ಅನುವು ಮಾಡಿಕೊಡುತ್ತದೆ, ಧ್ವನಿಯ ಸೌಂದರ್ಯ ಕವನವನ್ನು ಹಾಡಲು ಅನುಕೂಲವಾಗಿಸುತ್ತದೆ.

"ಪಲ್ಲಕ್ಕಿಯೇರು", "ಸಂಸ್ಕೃತಿಯ ಸಿರಿದೇವಿ" ಎಂಬ ಪದಗಳು ಸಂಸ್ಕೃತಿಯ ವೈಭವವನ್ನು ಪ್ರತಿಬಿಂಬಿಸುತ್ತವೆ. ಕವಿ ತನ್ನ ಪ್ರಿಯೆಯನ್ನು ಕೇವಲ ಸೌಂದರ್ಯವತಿಯಾಗಿ ಮಾತ್ರವಲ್ಲ, ಸಂಸ್ಕೃತಿಯ ಪ್ರತಿರೂಪವಾಗಿ ಕಾಣುತ್ತಾನೆ. ಕವನವು ಶೃಂಗಾರ ಮತ್ತು ಪ್ರಕೃತಿ ವರ್ಣನೆಯಲ್ಲಿ ಶ್ರೀಮಂತವಾಗಿದ್ದರೂ, ಕೆಲವೆಡೆ ಅರ್ಥಸ್ಪಷ್ಟತೆಯ ಕೊರತೆ ಕಾಣಬಹುದು. ರೂಪಕಗಳ ಗಾಢತೆಯಿಂದ ಸಾಮಾನ್ಯ ಓದುಗರಿಗೆ ಅರ್ಥಗ್ರಹಣ ಸ್ವಲ್ಪ ಕಷ್ಟವಾಗಬಹುದು. ಆದರೆ ಇದೇ ಅದರ ಕಾವ್ಯಮೌಲ್ಯವನ್ನು ಹೆಚ್ಚಿಸುವ ಅಂಶವೂ ಆಗಿದೆ. ಈ ಕವನವು ವಸಂತದ ಸೌಂದರ್ಯವನ್ನು ಶೃಂಗಾರಭಾವದ ಮೂಲಕ ವ್ಯಕ್ತಪಡಿಸುವ ಲಾಲಿತ್ಯಪೂರ್ಣ ಗೀತೆ. ಕವಿ ಪ್ರಕೃತಿ, ಪ್ರೀತಿ ಮತ್ತು ಸಂಸ್ಕೃತಿಯನ್ನು ಒಂದೇ ದಾರಿಯಲ್ಲಿ ಜೋಡಿಸಿ, ಓದುಗರ ಮನಸ್ಸಿನಲ್ಲಿ ಸೌಂದರ್ಯಭಾವವನ್ನು ಮೂಡಿಸುತ್ತಾನೆ. ಇದು ಸಂಗೀತಾತ್ಮಕತೆ, ರೂಪಕಸೌಂದರ್ಯ ಮತ್ತು ಸಂಸ್ಕೃತಿಮೌಲ್ಯಗಳಿಂದ ಸಮೃದ್ಧವಾದ ಕವನಗಳಾಗಿದೆ.

"ಇವಳು" ಕವಿತೆಯು ಮಹಿಳೆಯ ಅಂತರಂಗ, ಮೌನ, ತ್ಯಾಗ, ಮತ್ತು ಅವಳ ಅಸ್ತಿತ್ವದ ಸೂಕ್ಷ್ಮತೆಯನ್ನು ಬಹಳ ಸಂವೇದನಾಶೀಲವಾಗಿ ವ್ಯಕ್ತಪಡಿಸುತ್ತದೆ. ಮೌನ ಮತ್ತು ಅಂತರಂಗದ ಅಭಿವ್ಯಕ್ತಿ– ಕವಿತೆಯ ಆರಂಭವೇ ಮಹಿಳೆಯ ಮೌನದಿಂದ: "ಧ್ವನಿಸುವುದಿಲ್ಲ ಅನಿಸುವುದು ಹೆಣ್ಣು ಹೇಳದ ಕಣ್ಣಿನಾಳದ ಕಂಪಿಸುವ ಅನುಕಂಪನ" ಇಲ್ಲಿ ಹೆಣ್ಣಿನ ಭಾವನೆಗಳು ಶಬ್ದವಾಗಿ ಹೊರಬರುವುದಿಲ್ಲ; ಅವು ಕಣ್ಣಿನೊಳಗೆ, ಮನಸ್ಸಿನ ಆಳದಲ್ಲಿ ಕಂಪಿಸುವ ಅನುಕಂಪನವಾಗಿ ವ್ಯಕ್ತವಾಗುತ್ತವೆ. ಇದು ಸಮಾಜದಲ್ಲಿ ಮಹಿಳೆಗೆ ಮಾತಿನ ಸ್ವಾತಂತ್ರ್ಯ ಕಡಿಮೆ ಇರುವ ಸ್ಥಿತಿಯನ್ನೂ ಸೂಚಿಸುತ್ತದೆ.

"ಉರಿಯುವಳು ಕರ್ಪೂರದಂತೆ ಹಚ್ಚಿದಾಗ ಸ್ವಚ್ಛವಾಗಿ"–ಕರ್ಪೂರದಂತೆ ಸುಟ್ಟು ಹೋಗುವ ಉಪಮೆ ಮಹಿಳೆಯ ತ್ಯಾಗವನ್ನು ಸೂಚಿಸುತ್ತದೆ. ಕರ್ಪೂರವು ಸುಟ್ಟಾಗ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ, ಆದರೆ ಶುದ್ಧತೆಯನ್ನು ಉಳಿಸುತ್ತದೆ. ಜಗಕೆ ಬೆಳಕನ್ನು ನೀಡುತ್ತದೆ. ಇದೇ ರೀತಿ ಮಹಿಳೆಯ ಜೀವನದಲ್ಲಿ ತ್ಯಾಗ ಪ್ರಮುಖವಾದ ಅಂಶವಾಗಿದೆ. ಪಿತೃತ್ವ ವ್ಯವಸ್ಥೆಯ ಸೂಚನೆ–"ಅಪ್ಪನ ಧೀರದೆತ್ತರಕೆ ಅಮ್ಮನ ಮೇರು ಉತ್ತರಕೆ ತಲೆಬಾಗುವ ತಾಳಿ ಇವಳು" ಇಲ್ಲಿ ಮಹಿಳೆ ತಂದೆ ಮತ್ತು ತಾಯಿಯ ಮೌಲ್ಯಗಳಿಗೆ ತಲೆಬಾಗುವ ವ್ಯಕ್ತಿಯಾಗಿ ಚಿತ್ರಿಸಲಾಗಿದೆ. "ತಾಳಿ" ಎಂಬ ಪದ ವಿವಾಹ ಮತ್ತು ಸಾಮಾಜಿಕ ಬಂಧನವನ್ನು ಸೂಚಿಸುತ್ತದೆ. ಇದು ಪಿತೃತ್ವದ ಪ್ರಭಾವವನ್ನು ಸೂಚಿಸುತ್ತದೆ. ಮಹಿಳೆ ತನ್ನ ಸ್ವಾತಂತ್ರ್ಯವನ್ನು ತ್ಯಜಿಸಿ ಕುಟುಂಬದ ಮೌಲ್ಯಗಳಿಗೆ ಒಳಪಡುವ ಸ್ಥಿತಿ. 'ತಾಳಿ' ಎಂಬುದು ಮಹಿಳೆಯ

ತಾಳ್ಮೆಯ ಗುಣವನ್ನು ಎತ್ತಿತೋರಿಸುತ್ತದೆ.

"ದೋಣಿಯ ಹಿಂಬಾಲುತನವ ಹಿಂದೆಸೆದು ಬದುಕು ಸೂರಿನ ಅಡಿಚಿತ್ತತೆಗೆ" ಇಲ್ಲಿ ಮಹಿಳೆ ತನ್ನ ಹಿಂಬಾಲುತನವನ್ನು ತೊರೆದು ಜೀವನದ ಹೊರೆ ಹೊತ್ತುಕೊಳ್ಳುವ ವ್ಯಕ್ತಿಯಾಗಿ ಕಾಣಿಸುತ್ತಾಳೆ. "ಸೂರಿನ ಅಡಿಚಿತ್ತತೆ" ಎನ್ನುವುದು ಮನೆಮಂದಿಯ ಜವಾಬ್ದಾರಿಯನ್ನು ಸೂಚಿಸುತ್ತದೆ.

"ಏಕಾಂತದ ಬಿಸಿಲಿಗೆ ಮುಡಿಬಿಚ್ಚಿ ಮತ್ತೆ ಹೂ ಗುಚ್ಚವಾಗುವ" ಇದು ಮಹಿಳೆಯ ಜೀವನದ ಮತ್ತೊಂದು ಮುಖ. ಅವಳು ಏಕಾಂತದಲ್ಲೂ ನೋವನ್ನು ಅನುಭವಿಸಿ, ಮತ್ತೆ ಹೂವಿನಂತೆ ಅರಳುತ್ತಾಳೆ. ಇದು ಅವಳ ಸಹನಶೀಲತೆ ಮತ್ತು ಪುನರುತ್ಥಾನದ ಸಂಕೇತ. ಮೌನದ ಬೆಳಕು ಮತ್ತು ಆಧ್ಯಾತ್ಮಿಕತೆ–"ಮೌನ ದೀಪದಿ ಮನ ಬೆಳಗುವ ವಿಶ್ವ ವಸಂತತೆ! ವಿಶ್ವಾಸಗೀತೆ!" ಮಹಿಳೆ ಮೌನದಲ್ಲಿಯೇ ಬೆಳಕು ನೀಡುವ ದೀಪವಾಗಿ ಚಿತ್ರಿತವಾಗಿದ್ದಾಳೆ. ಅವಳು ಪ್ರೀತಿ, ವಿಶ್ವಾಸ ಮತ್ತು ವಸಂತದ ಸಂಕೇತ.

ಕವಿತೆ ಮಹಿಳೆಯನ್ನು ತ್ಯಾಗಮಯಿ, ಮೌನಸ್ವಭಾವಿ, ಸಹನಶೀಲ ವ್ಯಕ್ತಿಯಾಗಿ ಚಿತ್ರಿಸುತ್ತದೆ. ಆದರೆ ಇದರಲ್ಲಿ ಒಂದು ಪರಂಪರೆಯ ಮಹಿಳಾ ರೂಪಕ ಇದೆ. ಅವಳು ಸದಾ ತ್ಯಾಗ ಮಾಡುವವಳು, ಕುಟುಂಬಕ್ಕೆ ಒಳಪಡುವವಳು. ಇಂದಿನ ಸ್ತ್ರೀವಾದದ ದೃಷ್ಟಿಯಿಂದ ನೋಡಿದರೆ, ಈ ಚಿತ್ರಣ ಮಹಿಳೆಯ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವವನ್ನು ಸೀಮಿತಗೊಳಿಸುತ್ತದೆ ಎಂಬ ಟೀಕೆ ಕೂಡ ಸಾಧ್ಯ. 'ಇವಳು' ಕವಿತೆಯು ಮಹಿಳೆಯ ಒಳಜಗತ್ತಿನ ಮೌನ, ತ್ಯಾಗ ಮತ್ತು ಪುನರುತ್ಥಾನವನ್ನು ಕಾವ್ಯಾತ್ಮಕವಾಗಿ ಚಿತ್ರಿಸುತ್ತದೆ. ಆದರೆ ಅದೇ ಸಮಯದಲ್ಲಿ, ಇದು ಪಾರಂಪರಿಕ ಸಮಾಜದಲ್ಲಿ ಮಹಿಳೆಗೆ ನೀಡಲ್ಪಟ್ಟ ಪಾತ್ರವನ್ನು ಪ್ರತಿಬಿಂಬಿಸುತ್ತದೆ. ಅವಳು ಬೆಳಕಾದರೂ, ತನ್ನದೇ ಆದ ಧ್ವನಿಯನ್ನು ಮೌನದಲ್ಲೇ ಉಳಿಸಿಕೊಳ್ಳುವವಳು.

'ಸಖೀ ಶಾರದೆ'ಯ 17ನೇಯ ಕವಿತೆಯಲ್ಲಿ *ಪ್ರೇಮ ಮತ್ತು *ಸ್ವಯಂ–ಮೋಹ / ಸ್ವಯಂ–ಕೇಂದ್ರಿತತೆ ಎರಡೂ ಸೂಕ್ಷ್ಮವಾಗಿ ವ್ಯಕ್ತವಾಗಿವೆ. ಅವುಗಳನ್ನು ಪ್ರತ್ಯೇಕವಾಗಿ ಗಮನಿಸಬಹುದು: "ನಾನು ಅಂಬಿಗ ನೀನು ನನ್ನೊಳಗಿನ ನಂಬಿಗ"– ಇಲ್ಲಿ ಪ್ರೇಮಿಯು ತನ್ನನ್ನು ಮಾರ್ಗದರ್ಶಕನಾಗಿ (ಅಂಬಿಗ) ಕಾಣಿಸಿಕೊಂಡು, ಪ್ರೇಮಿಕೆಯನ್ನು ತನ್ನೊಳಗಿನ ನಂಬಿಕೆಯ ರೂಪವಾಗಿ ಕಾಣುತ್ತಾನೆ. ಇದು ಪರಸ್ಪರ ಅವಲಂಬಿತ ಪ್ರೀತಿ ಮತ್ತು ಆತ್ಮೀಯ ಸಂಬಂಧವನ್ನು ಸೂಚಿಸುತ್ತದೆ.

ತಂಗಾಳಿ ಪ್ರೇಮದ ಸೌಮ್ಯತೆ, ಮೃದುತ್ವ ಮತ್ತು ಶಾಂತಿಯನ್ನು ಪ್ರತಿನಿಧಿಸುತ್ತದೆ. ಇಲ್ಲಿ ಪ್ರೇಮವು ಒತ್ತಡವಿಲ್ಲದ, ಸ್ವಾಭಾವಿಕ ಅನುಭವವೆಂಬ ಸೂಚನೆ. "ತೆರೆದ ಮನಸ್ಸುಗಳು ಸೃಷ್ಟಿಸಿಕೊಳ್ಳುವ ಸ್ವರ್ಗವಿದು"– ಎಂಬುದರಲ್ಲಿ ಪ್ರೀತಿ ಎಂಬುದು

ಮುಕ್ತತೆಯ ಮೇಲೆ ಆಧಾರಿತವಾಗಿದೆ ಎಂಬ ಅರ್ಥ. ಎರಡು ಹೃದಯಗಳು ಒಂದಾಗಿದಾಗ ಸ್ವರ್ಗದಂತ ಅನುಭವ ಸೃಷ್ಟಿಯಾಗುತ್ತದೆ.

"ಆ ಸ್ವರ್ಗದಲ್ಲಿ ಯಾವ ಕೊರತೆಯೂ ಇರುವುದಿಲ್ಲ": ಸಂಪೂರ್ಣತೆಯ ಭಾವನೆ ? ಪ್ರೀತಿ ಎಲ್ಲವನ್ನು ಪೂರೈಸುವ ಶಕ್ತಿ ಎಂದು ತೋರಿಸುತ್ತದೆ.

ಸ್ವಯಂ–ಮೋಹ – ಸ್ವಯಂರತಿಯ ಅಂಶಗಳು

ಕವಿ ತನ್ನನ್ನು ನಾಯಕನಾಗಿ, ಮಾರ್ಗದರ್ಶಕನಾಗಿ ಸ್ಥಾಪಿಸುತ್ತಾನೆ. ಇದು ಸ್ವಲ್ಪ ಮಟ್ಟಿಗೆ ಸ್ವಯಂ–ಕೇಂದ್ರಿತ ದೃಷ್ಟಿಕೋನವನ್ನು ಸೂಚಿಸುತ್ತದೆ.

"ನೀನು ನನ್ನೊಳಗಿನ ನಂಬಿಗ": ಪ್ರೇಮಿಕೆಯನ್ನು ತನ್ನೊಳಗಿನ ಒಂದು ಭಾಗವಾಗಿ ಮಾತ್ರ ಕಾಣುವುದು ? ಅವಳ ಸ್ವತಂತ್ರತೆಯನ್ನು ಕಡಿಮೆ ಮಾಡುತ್ತದೆ. ಇದು ಪ್ರೀತಿಯ ಜೊತೆಗೆ ಸ್ವಾಮಿತ್ವ ಭಾವನೆಯನ್ನು ತೋರಿಸುತ್ತದೆ.

*ಸ್ವರ್ಗದ ಕಲ್ಪನೆ: "ನಾವು ಸೃಷ್ಟಿಸಿದ ಸ್ವರ್ಗದಲ್ಲಿ ಕೊರತೆ ಇಲ್ಲ" ಎಂಬುದು ತನ್ನ ಅನುಭವವನ್ನು ಪರಿಪೂರ್ಣ ಎಂದು ಅತಿರೇಕವಾಗಿ ಕಲ್ಪಿಸುವುದು ? self-idealization ಲಕ್ಷಣವನ್ನು ಸ್ಪಷ್ಟವಾಗಿ ಕಾಣಬಹುದು.

ಒಟ್ಟಾರೆ ವಿಶ್ಲೇಷಣೆಯಲ್ಲಿ ಈ ಕವಿತೆ ಪ್ರೇಮದ ಮೃದುತ್ವತೆ, ನಂಬಿಕೆ ಮತ್ತು ಆಂತರಿಕ ಸಂಬಂಧವನ್ನು ಸುಂದರವಾಗಿ ತೋರಿಸುತ್ತದೆ. ಆದರೆ ಅದೇ ಸಮಯದಲ್ಲಿ, ಕವಿ ತನ್ನ ಪಾತ್ರವನ್ನು ಹೆಚ್ಚಾಗಿ ಕೇಂದ್ರದಲ್ಲಿಟ್ಟು, ಪ್ರೇಮಿಕೆಯನ್ನು ತನ್ನೊಳಗಿನ ಭಾಗವಾಗಿ ಮಾತ್ರ ನಿರೂಪಿಸುವ ಮೂಲಕ ಸ್ವಯಂ–ಕೇಂದ್ರಿತ ಪ್ರೀತಿಯ ಸೂಚನೆ ನೀಡುತ್ತಾನೆ.

ಪ್ರೇಮ = ಸಹಭಾಗಿತ್ವ + ನಂಬಿಕೆ + ಮುಕ್ತತೆ

ಆತ್ಮಕೇಂದ್ರೀಯತೆ= ನಾನು ಕೇಂದ್ರ + ನೀನು ನನ್ನೊಳಗಿನ ಒಂದು ಭಾಗ

'ಸಖೀ ಶಾರದೆ'ಯ 6ನೇ ಕವನದಲ್ಲಿ "ಸ್ವಯಂ ಆಸಕ್ತಿ / ಆತ್ಮಕೇಂದ್ರಿತತೆ ಸೂಕ್ಷ್ಮವಾಗಿ ವ್ಯಕ್ತವಾಗಿರುವ ಕೆಲವು ಅಂಶಗಳನ್ನು ಹೀಗೆ ಗುರುತಿಸಬಹುದು:

'ಸಖೀ ಶಾರದೆ'ಯ 6ನೇ ಕವಿತೆಯ ಸಾಲುಗಳು ಹೀಗಿವೆ–"ನನ್ನ ಪ್ರೇಮದ ಕಾವ್ಯ ಬರೆದಂತೆ ಬಾಳಿಹುದು" ಇಲ್ಲಿ ಕವಿ ತನ್ನ ಜೀವನವನ್ನೇ ತನ್ನ ಪ್ರೇಮದ ಕಾವ್ಯವಾಗಿ ಕಾಣುತ್ತಿದ್ದಾನೆ. ಇದು ಸ್ವಯಂ ಅನುಭವ ಮತ್ತು ತನ್ನ ಭಾವನೆಗಳ ಮೇಲಿನ ಹೆಚ್ಚಿನ ಕೇಂದ್ರೀಕರಣವನ್ನು ತೋರಿಸುತ್ತದೆ.

'ನಾ ಪ್ರೇಮ ತಪಸ್ವಿ' ಎಂದು ಹೇಳುವುದರಿಂದ, ತನ್ನನ್ನು ತಾನೇ ಒಂದು ಉನ್ನತ ಪ್ರೇಮದ ಸಾಧಕನಾಗಿ ಚಿತ್ರಿಸಿಕೊಂಡಿದ್ದಾನೆ. ಇದು ಸ್ವಭಾವದ ಮಹತ್ವವನ್ನು ಹೆಚ್ಚಾಗಿ ಕಾಣುವ ಸ್ವಯಂಮೇಲಿನ ಆಸಕ್ತಿಯ ಸೂಚನೆ.

ಪ್ರೇಮವನ್ನು ತನ್ನ ಮನಸ್ಸಿನ ತಪಸ್ಸಾಗಿ ವಿವರಿಸುವುದು, ತನ್ನ ಒಳಭಾವನೆಗಳ ಮೇಲಿನ ಆಳವಾದ ಗಮನವನ್ನು ತೋರಿಸುತ್ತದೆ. ಇಲ್ಲಿ ಬಾಹ್ಯ ಜಗತ್ತಿಗಿಂತ ತನ್ನ ಅಂತರಂಗವೇ ಮುಖ್ಯವಾಗುತ್ತದೆ.

ಪ್ರಿಯೆಯ ನಂಬಿಕೆಯನ್ನು "ನನ್ನ ಪ್ರೇಮದಲಿ" ಎಂದು ತನ್ನ ಪ್ರೇಮದ ಭಾಗವಾಗಿ ಪರಿಗಣಿಸುತ್ತಾನೆ. ಇದು ಸಂಬಂಧವನ್ನೂ ತನ್ನ ಪ್ರೇಮದ ಕೇಂದ್ರಕ್ಕೆ ತರುವ ಆತ್ಮಕೇಂದ್ರಿತ ನೋಟ.

ಎಲ್ಲಾ ನಂಬಿಕೆಗಳನ್ನೂ ಪ್ರೇಮದ ಸಂಕೇತಗಳೆಂದು ಸಾಮಾನ್ಯೀಕರಿಸುವುದು, ತನ್ನ ಭಾವನೆಗೆ ಜಗತ್ತನ್ನೇ ಹೊಂದಿಸಲು ಯತ್ನಿಸುವ ಮನೋಭಾವ.

ಈ ಕವನದಲ್ಲಿ ಸ್ವಯಂಕೇಂದ್ರೀಯತೆಯು ನೇರವಾಗಿ ಅಹಂಕಾರವಾಗಿ ಕಾಣಿಸಿಕೊಳ್ಳುವುದಿಲ್ಲ. ಆದರೆ ತನ್ನ ಪ್ರೇಮ, ತನ್ನ ಅನುಭವ, ತನ್ನ ಮನಸ್ಸು ಇವೆಲ್ಲವೂ ಕೇಂದ್ರವಾಗಿರುವುದು ಪ್ರಿಯೆಯ ಭಾವನೆಗಳನ್ನೂ ತನ್ನ ಪ್ರೇಮದ ಭಾಗವಾಗಿ ಒಳಗೊಂಡುಕೊಳ್ಳುವುದು ಇವು "ಸೂಕ್ಷ್ಮ ಆತ್ಮಕೇಂದ್ರಿತ ಪ್ರೇಮ"ವನ್ನು ತೋರಿಸುತ್ತವೆ.
'ಹಿಂದೆ–ಮುಂದೆ' ಎಂಬ ಕವಿತೆಯಲ್ಲಿ ಸ್ವಯಂ–ಮೋಹ ಅಂಶಗಳನ್ನು ಕೆಳಗಿನಂತೆ ಗುರುತಿಸಬಹುದು.

"ನಾ ನಿನ್ನ ಹಿಂದೆ ಯಶೋಸೃಷ್ಟಿಯ ಮಧುರ ಮುಂದೆ"– ಇಲ್ಲಿ ಕವಿ ತನ್ನ ಅಸ್ತಿತ್ವವನ್ನು ಯಶಸ್ಸಿನ ಸೃಷ್ಟಿಯೊಂದಿಗೆ ಜೋಡಿಸಿಕೊಂಡು, ತನ್ನ ಜೀವನವೇ ಒಂದು ಮಹತ್ವದ ಸಾಧನೆ ಎಂಬ ಭಾವನೆ ವ್ಯಕ್ತಪಡಿಸುತ್ತಾನೆ. ಇದು ಸ್ವಕೇಂದ್ರಿತ ಚಿಂತನೆಗೆ ಉದಾಹರಣೆ.

"ನೀ ಎನ್ನ ಅರ್ಪಿಸಲು ಜಗಕೆ ಬಾ"– ಇಲ್ಲಿ "ನೀ" ಎಂಬ ವ್ಯಕ್ತಿಯನ್ನೂ ತನ್ನ ಮೂಲಕವೇ ಜಗತ್ತಿಗೆ ಅರ್ಪಿಸಬೇಕೆಂದು ಹೇಳುವುದು, ತನ್ನನ್ನೇ ಕೇಂದ್ರವಾಗಿ ನೋಡಿಕೊಳ್ಳುವ ಸ್ವಭಾವವನ್ನು ತೋರಿಸುತ್ತದೆ.

"ಅಧರ ತೇದು ವಿಶ್ವಕೆ ವಿಶ್ವಾಸಕೆ"–ತನ್ನ ಭಾವನೆಗಳು ಅಥವಾ ಮಾತುಗಳು ವಿಶ್ವಾಸವನ್ನು ನೀಡಬಲ್ಲವು ಎಂಬ ಭಾವನೆ, ತನ್ನ ಪ್ರಭಾವದ ಮೇಲೆ ಹೆಚ್ಚಿದ ನಂಬಿಕೆಯನ್ನು ಸೂಚಿಸುತ್ತದೆ.

"ಭಾವನೆಯ ವಾಸಂತಿಯಲ್ಲಿ"– ತನ್ನ ಭಾವನೆಗಳನ್ನು ವಸಂತದಂತೆ ಸುಂದರ, ಜೀವಂತ ಎಂದು ಚಿತ್ರಿಸುವುದು, ತನ್ನ ಒಳಜಗತ್ತಿನ ಮೆಲುಕು ಮತ್ತು ಅದರಲ್ಲಿ ಮಗುಚಿರುವ ಸ್ವಯಂ–ಆಸಕ್ತಿ.

ಕವಿತೆಯಲ್ಲೆಲ್ಲಾ "ನಾ", "ನನ್ನ", "ಎನ್ನ" ಎಂಬ ಪದಗಳ ಪ್ರಾಬಲ್ಯದಿಂದ ಕವಿ

ತನ್ನ ಅಸ್ತಿತ್ವ, ಭಾವನೆ ಮತ್ತು ಪಾತ್ರವನ್ನು ಕೇಂದ್ರವಾಗಿ ಇಟ್ಟುಕೊಂಡಿದ್ದಾನೆ. ಇದು ಸ್ವಯಂ–ಮೋಹದ ಪ್ರಮುಖ ಲಕ್ಷಣ. ಈ ಕವಿತೆಯಲ್ಲಿ ಸ್ವಯಂ–ಮೋಹವು ಸೂಕ್ಷ್ಮವಾಗಿ, ಸೌಂದರ್ಯಾತ್ಮಕವಾಗಿ ವ್ಯಕ್ತವಾಗಿದ್ದು, ಕವಿಯ ಆತ್ಮಕೇಂದ್ರಿತ ಭಾವನೆಗಳು ಮತ್ತು ತನ್ನ ಪ್ರಭಾವದ ಮೇಲಿನ ನಂಬಿಕೆ ಮುಖ್ಯವಾಗಿ ಕಾಣಿಸುತ್ತವೆ.

'ನಾದಕ್ಕೆ ಉನ್ಮಾದ' ಪದ್ಯದಲ್ಲಿ "ಕಾಮ/ಶೃಂಗಾರ" ಅಂಶಗಳು ನೇರವಾಗಿ ಸ್ಪಷ್ಟವಾಗಿ ಅಲ್ಲದಿದ್ದರೂ, ಸೂಕ್ಷ್ಮ ಸೂಚನೆಗಳ ರೂಪದಲ್ಲಿ ಕಾಣಿಸುತ್ತವೆ. ಅವನ್ನು ಹೀಗಾಗಿ ಗುರುತಿಸಬಹುದು:

ಕಾಮಾತ್ಮಕತೆ/ಶೃಂಗಾರ ಸೂಚನೆಗಳ ವಿಶ್ಲೇಷಣೆ: "ದೇಹ ದಾಹಗಳೆಷ್ಟೋ": ಇಲ್ಲಿ "ದೇಹದ ದಾಹ" ಎಂದರೆ ಶಾರೀರಿಕ ಆಸೆಗಳು, ಕಾಮಬಯಕೆಗಳನ್ನು ಸೂಚಿಸುತ್ತದೆ. ಇದು ಕಾವ್ಯದ ಪ್ರಮುಖ ಲೈಂಗಿಕ/ಶೃಂಗಾರ ಸಂಕೇತ.

"ನಾದಕ್ಕೆ ಉನ್ಮಾದ": "ನಾದ" ಮತ್ತು "ಉನ್ಮಾದ" (ಮತ್ತೆ/ಆವೇಶ) – ಇವು ಭಾವನಾತ್ಮಕ ಹಾಗೂ ಶಾರೀರಿಕ ಆಕರ್ಷಣೆಯ ಸೂಚನೆ. ಇದು ಪ್ರೇಮ ಅಥವಾ ಕಾಮದ ಉಲ್ಲಾಸವನ್ನು ಸೂಚಿಸುತ್ತದೆ.

"ಬಯಸಿದ್ದು ಮನಸು": ಮನಸ್ಸಿನ ಆಸೆ–ಇದು ಸಾಮಾನ್ಯವಾಗಿ ಪ್ರೇಮ/ಕಾಮದ ಬಯಕೆಯ ಸಂಕೇತವಾಗಬಹುದು.

"ಇರುವಷ್ಟು ಬಳಸು": ಈ ಸಾಲು ಹೆಚ್ಚು ತೀವ್ರವಾದ ಅರ್ಥ ಕೊಡುತ್ತದೆ–ಇರುವ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡು ಬದುಕು ಎಂಬುದು ಅನುಭವ ಜನ್ಯ ಸಾಲುಗಳಾಗಿವೆ.

ದೃಷ್ಟಿ ಮತ್ತು ಮನಸ್ಸಿನ ಸಂಬಂಧ (ಕಣ್ಣು – ಮನಸ್ಸು): "ಕಣ್ಣು ತಿಳಿಯಾದಷ್ಟು ಮನಸ್ಸು ಹಿತವಾಗುತ್ತದೆ" ಎಂಬ ಸಾಲಿನಲ್ಲಿ, ಪ್ರಿಯ ವ್ಯಕ್ತಿಯನ್ನು ನೋಡುವುದು ಮನಸ್ಸಿಗೆ ಶಾಂತಿ ಮತ್ತು ಸಂತೋಷವನ್ನು ನೀಡುತ್ತದೆ ಎಂಬ ಭಾವ ವ್ಯಕ್ತವಾಗಿದೆ. ಇದು ಪ್ರೀತಿಯ ಮೊದಲ ಲಕ್ಷಣ.

ಕಾಣಿಕೆಯ ಪ್ರಭಾವ (ನೀನು ಕಂಡಷ್ಟೂ): "ನೀನು ಕಂಡಷ್ಟೂ ಹೃದಯ ಮಿಡಿಯುತ್ತದೆ"–ಪ್ರಿಯತಮೆಯನ್ನು ನೋಡುವಾಗ ಹೃದಯದ ಸ್ಪಂದನೆ ಹೆಚ್ಚುವುದು, ಉತ್ಸಾಹ, ಆತುರ ಇತ್ಯಾದಿ ಭಾವಗಳು ಪ್ರೀತಿಯ ಗಾಢತೆಯನ್ನು ತೋರಿಸುತ್ತವೆ.

ಆತ್ಮ–ಭಾವಗಳ ಏಕೀಕರಣ: "ಜೀವ ನನ್ನದು – ಭಾವ ನಿನ್ನದು" ಎಂಬ ಸಾಲಿನಲ್ಲಿ, ಇಬ್ಬರ ನಡುವಿನ ಆತ್ಮೀಯತೆ ಮತ್ತು ಪರಸ್ಪರ ಅವಲಂಬನೆ ವ್ಯಕ್ತವಾಗುತ್ತದೆ. ಜೀವ ನನ್ನದಾದರೂ, ಅದರಲ್ಲಿ ಇರುವ ಭಾವನೆಗಳು ನಿನ್ನದೇ ಎಂಬ ಅರ್ಥ – ಇದು ಪ್ರೀತಿಯ

ಪರಮ ಸ್ಥಿತಿ.

ನಿಶ್ಯಬ್ದ ಅನುಭವದ ಪ್ರೀತಿ: ಕವನದಲ್ಲಿ ಸ್ಪಷ್ಟವಾಗಿ ಪ್ರೀತಿಯ ಘೋಷಣೆ ಇಲ್ಲದಿದ್ದರೂ, ಮೌನದ ಮೂಲಕ ವ್ಯಕ್ತವಾಗುವ ಭಾವಗಳು ಗಾಢವಾದ ಪ್ರೀತಿಯನ್ನು ಸೂಚಿಸುತ್ತವೆ.

ಸರಳತೆ ಮತ್ತು ಆಳತೆ: ಸರಳ ಪದಗಳಲ್ಲಿ ಹೇಳಿದರೂ, ಅದರೊಳಗಿನ ಭಾವನೆಗಳು ತುಂಬ ಆಳವಾಗಿವೆ, ಇದು ನಿಜವಾದ ಪ್ರೀತಿಯ ಲಕ್ಷಣ. ಈ ಕವನದಲ್ಲಿ ಪ್ರೀತಿ ದೃಷ್ಟಿಯಿಂದ ಆರಂಭವಾಗಿ, ಹೃದಯದ ಸ್ಪಂದನೆ ಮೂಲಕ ಬೆಳೆಯುತ್ತಾ, ಆತ್ಮೀಯ ಏಕೀಕರಣದ ಮಟ್ಟಕ್ಕೆ ತಲುಪುತ್ತದೆ.

ಸಂಖ್ಯೆ 21ರ ಕವಿತೆಯಲ್ಲಿ ಲೈಂಗಿಕತೆ ಸೂಕ್ಷ್ಮವಾಗಿ, ಭಾವನಾತ್ಮಕ ಹಾಗೂ ತತ್ವಮಯವಾಗಿ ವ್ಯಕ್ತವಾಗಿದೆ. ನೇರ ಶೃಂಗಾರವಲ್ಲ, ಆದರೆ ದೇಹ ಮನಸ್ಸಿನ ಸಂಬಂಧದ ಮೂಲಕ ಅದು ವ್ಯಕ್ತವಾಗುತ್ತದೆ.

"ತಾನು ಕಾಯಬೇಕು, ಈ ತನುವು ಮಾಯಬೇಕು"–ಇಲ್ಲಿ "ತನುವು" ಎಂಬ ಪದ ದೇಹದ ಆಸೆಗಳನ್ನು ಸೂಚಿಸುತ್ತದೆ. ದೇಹದ ಅಸ್ಥಿರತೆ ಮತ್ತು ಅದರ ಅಗತ್ಯಗಳನ್ನು ಒಪ್ಪಿಕೊಳ್ಳುವ ಮನೋಭಾವ ಇದೆ. ಲೈಂಗಿಕತೆಯು ಕ್ಷಣಿಕವಾದ ದೇಹಾಧಾರಿತ ಅನುಭವ ಎಂದು ತೋರ್ಪಡಿಸುತ್ತದೆ.

"ತಾನೇ ತಾ ಬರುವ ತನಕ"– ಸ್ವಯಂ ಪ್ರೇರಣೆ ಅಥವಾ ಸ್ವತಃ ಹುಟ್ಟುವ ಭಾವನೆಗಳ ನಿರೀಕ್ಷೆ ಇದೆ. ಇದು ದೇಹದ ಸಹಜವಾದ ಲೈಂಗಿಕ ಉದ್ದೀಪನೆಯನ್ನು ಸೂಚಿಸುತ್ತದೆ.

"ತನುವಿನ ತೃಪ್ತಿಯು"– ಇದು ಸ್ಪಷ್ಟವಾಗಿ ದೇಹದ ತೃಪ್ತಿಯನ್ನು ಸೂಚಿಸುತ್ತದೆ. ಲೈಂಗಿಕ ತೃಪ್ತಿ ಎಂಬ ಅರ್ಥ ಇಲ್ಲಿ ಅಡಕವಾಗಿದೆ.

"ಮನಕೆ ಚಿರಶಾಂತಿ"– ದೇಹದ ತೃಪ್ತಿಯಿಂದ ಮನಸ್ಸಿಗೆ ಶಾಂತಿ ದೊರಕುತ್ತದೆ ಎಂಬ ಸಂದೇಶ. ದೇಹ ಮನಸ್ಸಿನ ಸಂಬಂಧದಲ್ಲಿ ಲೈಂಗಿಕತೆಯ ಪಾತ್ರವನ್ನು ಸೂಚಿಸುತ್ತದೆ. ಈ ಕವಿತೆಯಲ್ಲಿ ಲೈಂಗಿಕತೆ ನೇರವಾಗಿ ಬರದೆ ಶೃಂಗಾರದ ರೂಪವಾಗಿ ಅವತರಿಸಿದೆ. ದೇಹದ ತೃಪ್ತಿ, ನಿರೀಕ್ಷೆ ಮತ್ತು ಮನಸ್ಸಿನ ಶಾಂತಿ ಎಂಬ ತತ್ವಮಯ ಕೋಣೆಯಿಂದ ವ್ಯಕ್ತವಾಗಿದೆ. ಇದು ಕಾಮದ ಅಭಿವ್ಯಕ್ತಿ ಮಾತ್ರವಲ್ಲ, ದೇಹ ಮನಸ್ಸಿನ ಸಮತೋಲನದ ಬಗ್ಗೆ ಹೇಳುತ್ತದೆ.

"ಒಲವಿನ ಕೈಬುಟ್ಟಿ"ಯ 29ನೇ ಕವಿತೆಯು ಮಾನವ ಸಂಬಂಧಗಳಲ್ಲಿ ಪ್ರೀತಿ, ಆಧಿಪತ್ಯ, ಮತ್ತು ಲೈಂಗಿಕತೆಯ ಸೂಕ್ಷ್ಮ ಮಿಶ್ರಣವನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಲೈಂಗಿಕತೆ

ಕೇವಲ ದೇಹಾತ್ಮಕ ಆಸಕ್ತಿ ಮಾತ್ರವಲ್ಲದೆ, ಜೀವಸೃಷ್ಟಿಯ ಮೂಲ ಶಕ್ತಿ ಹಾಗೂ ಸಾಮಾಜಿಕ ಸಮಾನತೆಯ ಪ್ರತಿಬಿಂಬವಾಗಿದೆ.

ಆಧಿಪತ್ಯ ಮತ್ತು ಲೈಂಗಿಕತೆಯ ಸಂಬಂಧ– "ಸಾಂಗತ್ಯ ಇಲ್ಲದ ಆಧಿಪತ್ಯ ನಮ್ಮದು"– ಈ ಸಾಲಿನಲ್ಲಿ, ಲೈಂಗಿಕ ಸಂಬಂಧವು ಒಂದು ಪಕ್ಷೀಯ ಆಧಿಪತ್ಯಕ್ಕೆ ವಿರುದ್ಧವಾಗಿ ಚಿತ್ರಿತವಾಗಿದೆ. ಸಾಂಗತ್ಯವಿಲ್ಲದ ಆಧಿಪತ್ಯವು ಶಾರೀರಿಕ ಅಥವಾ ಲೈಂಗಿಕ ಸಂಬಂಧದಲ್ಲಿ ಅಸಮತೋಲನವನ್ನು ಸೂಚಿಸುತ್ತದೆ. ಇದು ಲೈಂಗಿಕತೆಯ ಸಕಾರಾತ್ಮಕ ರೂಪವು ಪರಸ್ಪರ ಒಪ್ಪಿಗೆ ಮತ್ತು ಸಮಾನತೆಯ ಮೇಲೆ ನಿಂತಿರಬೇಕು ಎಂಬ ಸಂದೇಶವನ್ನು ನೀಡುತ್ತದೆ. ಗಂಡು ಹೆಣ್ಣು ಸಂಬಂಧದ ಪ್ರಶ್ನೆ–"ಗಂಡೆಂಬ ಕೋಡು ಹೆಣ್ಣೆಂಬ ಬೀಡಿನಲಿ ಮೂಡಬಹುದೇ?" – ಈ ಸಾಲು ಲೈಂಗಿಕತೆಯ ಸಾಮಾಜಿಕ ರೂಪವನ್ನು ಪ್ರಶ್ನಿಸುತ್ತದೆ: "ಕೋಡು" ಮತ್ತು "ಬೀಡು" ಎಂಬ ರೂಪಕಗಳು ಪುರುಷ –ಸ್ತ್ರೀಯ ಪಾತ್ರಗಳನ್ನು ಸೂಚಿಸುತ್ತವೆ. ಲೈಂಗಿಕತೆಯು ಕೇವಲ ಜೀವಶಾಸ್ತ್ರೀಯ ಕ್ರಿಯೆಯಲ್ಲ, ಅದು ಸಾಂಸ್ಕೃತಿಕ ಮತ್ತು ಮಾನಸಿಕ ಅನುಬಂಧವಾಗಿದೆ.

ಕಾಮ ಮತ್ತು ಪ್ರೀತಿಯ ವ್ಯತ್ಯಾಸ–"ಒಲವಿಲ್ಲದ ಚೆಲುವು ಸುಮ್ಮನೆ ಕಾಮದಲಿ ಕಾಡಬಹುದೇ!" ಈ ಸಾಲಿನಲ್ಲಿ ಕವಿ ಸ್ಪಷ್ಟವಾಗಿ ಹೇಳುತ್ತಾರೆ. ಪ್ರೀತಿಯಿಲ್ಲದ ಸೌಂದರ್ಯವು ಕೇವಲ ಕಾಮಪ್ರೇರಿತವಾಗುತ್ತದೆ. ಲೈಂಗಿಕತೆ ಇಲ್ಲಿ ಎರಡು ರೂಪಗಳಲ್ಲಿ ಕಾಣಿಸುತ್ತದೆ 1.ಶುದ್ಧ ಕಾಮ 2. ಪ್ರೀತಿ ಆಧಾರಿತ ಲೈಂಗಿಕತೆ ಕವಿ ಎರಡನೆಯದನ್ನು ಮೆಚ್ಚುತ್ತಾರೆ. ಪ್ರೀತಿ, ಪರಸ್ಪರ ಸಹಕಾರವಿಲ್ಲದ ಕಾಮವು ಶೋಷಣೆಯಾಗಿ ಪರಿವರ್ತಿತವಾಗುತ್ತದೆ.

ಏಕತೆಯ ಆಹ್ವಾನ– "ಬಾ ಬೇಗ ಭೇದವಳಿಸಿ ನಾದವಾಗೋಣ!" –ಇದು ಲೈಂಗಿಕತೆಯ ಉನ್ನತ ರೂಪ: "ನಾದ" ಎಂಬುದು ಸಂಗಮದ ಸಂಕೇತವಾಗಿದೆ. ಇಲ್ಲಿ ಲೈಂಗಿಕತೆ ದೇಹ – ಮನ – ಆತ್ಮಗಳ ಏಕತೆಯಾಗಿ ರೂಪಾಂತರಗೊಳ್ಳುತ್ತದೆ.

ಸೃಷ್ಟಿ ತತ್ತ್ವ ಮತ್ತು ಲೈಂಗಿಕತೆ– "ಗಂಡು ಹೆಣ್ಣು ಜೀವ ಸೃಷ್ಟಿಯ ಎರಡು ಪಿಂಡಗಳು"– ಈ ಸಾಲು ಲೈಂಗಿಕತೆಯ ತಾತ್ವಿಕ ಅರ್ಥವನ್ನು ತೋರಿಸುತ್ತದೆ. ಪುರುಷ ಮತ್ತು ಸ್ತ್ರೀ ಸೃಷ್ಟಿಯ ಎರಡು ಮೂಲ ಅಂಶಗಳು. ಲೈಂಗಿಕತೆ ಇಲ್ಲಿ ಜೀವದ ನಿರಂತರತೆಯ ಶಕ್ತಿಯಾಗಿ ಕಾಣಿಸುತ್ತದೆ.

ಶಕ್ತಿ–ಯುಕ್ತಿ ಸಿದ್ಧಾಂತ–"ಶಕ್ತಿ – ಯುಕ್ತಿಯ ಮೇಲೆ ಕಾರ್ಯ ಕಾರಣವಿದೆ" ಇದು ಅತ್ಯಂತ ತಾತ್ವಿಕ ಅಂಶವಾಗಿದೆ. "ಶಕ್ತಿ" (ಸ್ತ್ರೀ ತತ್ವ) ಮತ್ತು "ಯುಕ್ತಿ" (ಪುರುಷ ತತ್ವ)– ಈ ಎರಡರ ಸಂಯೋಜನೆಯೇ ಸೃಷ್ಟಿಯ ಮೂಲ ಕಾರಣ. ಲೈಂಗಿಕತೆ ಇಲ್ಲಿ ಸೃಷ್ಟಿ ತತ್ತ್ವದ ವೈಜ್ಞಾನಿಕ ಮತ್ತು ದಾರ್ಶನಿಕ ರೂಪವಾಗಿ ವ್ಯಕ್ತವಾಗಿದೆ. ಈ ಕವಿತೆಯಲ್ಲಿ ಲೈಂಗಿಕತೆ

ಅಶ್ಲೀಲತೆಯ ರೂಪದಲ್ಲಿ ಕಾಣಿಸದೆ, ಸಮಾನತೆ, ಪ್ರೀತಿ ಮತ್ತು ಕಾಮದ ವ್ಯತ್ಯಾಸ, ಪುರುಷ–ಸ್ತ್ರೀ ಪರಸ್ಪರ ಅವಲಂಬನೆ, ಸೃಷ್ಟಿಯ ಮೂಲ ಶಕ್ತಿ.

ಇವೆಲ್ಲವನ್ನು ಒಳಗೊಂಡ ಒಂದು ಉನ್ನತ ಮಾನವೀಯ ಮತ್ತು ತಾತ್ವಿಕ ಅಭಿವ್ಯಕ್ತಿಯಾಗಿ ಕಾಣಿಸುತ್ತದೆ. ಹೀಗಾಗಿ, ಈ ಕವಿತೆಯ ಲೈಂಗಿಕತೆ ದೇಹಾತ್ಮಕ ಆಸಕ್ತಿಯನ್ನು ಮೀರಿದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಅರ್ಥವನ್ನು ಹೊಂದಿದೆ. ಈ ಕವಿತೆಗಳಲ್ಲಿರುವ ಲೈಂಗಿಕತೆ ಅಂಶಗಳನ್ನು ವಿಶ್ಲೇಷಿಸುವಾಗ, ಇದು ಅಶ್ಲೀಲತೆ ಅಥವಾ ಶುದ್ಧ ಕಾಮಪ್ರೇರಣೆ ಅಲ್ಲ; ಬದಲಾಗಿ, ಮಾನವ ಸಂಬಂಧದ ಸ್ವಾಭಾವಿಕ ಶಕ್ತಿ, ಪುರುಷ–ಸ್ತ್ರೀ ಸಮನ್ವಯ, ಮತ್ತು ಜೀವಸೃಷ್ಟಿಯ ತಾತ್ವಿಕ ಅರ್ಥವನ್ನು ಒಳಗೊಂಡಿದೆ.

ಪರಾಮರ್ಶನ ಗ್ರಂಥಗಳು :

1. ಒಲವಿನ ಕೈಬುಟ್ಟಿ., ರವಿಶಂಕರ ಎ.ಕೆ, ಎಸ್.ಎಲ್.ಎನ್. ಪಬ್ಲಿಕೇಷನ್ಸ್, ಬೆಂಗಳೂರು, 2026.

***

ಇಹದಲ್ಲೇ ಪರಶಿವನ ದಿವ್ಯ ಕಾಣ್ಕೆ–'ಜಾತ್ರೆಯಲ್ಲಿ ಶಿವ'

1 ಎಂ.ಎನ್. ಅರ್ಚನ ತೇಜಸ್ವಿ
ಸಹ ಪ್ರಾಧ್ಯಾಪಕರು
ಶೇಷಾದ್ರಿಪುರಂ ಕಾಲೇಜು. ಬೆಂಗಳೂರು

ಸವಿತಾ ನಾಗಭೂಷಣರವರ ಕಾವ್ಯಗುಣ, ವಿಶೇಷತೆಯೆಂದರೆ ನಿರಾಡಂಬರತೆ ಮತ್ತು ಸರಳತೆ. ಅಂತಹ ಸರಳತೆಯಲ್ಲೇ ರೂಪುಗೊಂಡಿರುವ ಕಾವ್ಯ 'ಜಾತ್ರೆಯಲ್ಲಿ ಶಿವ'. ದೇವರಾಗಿ 'ಶಿವ'ನ ಬಗ್ಗೆ ಇರುವ ಕಲ್ಪನೆಗಳನ್ನು ಪುನರ್ ಮನನ ಮಾಡಿಕೊಳ್ಳುವಂತೆ ಮಾಡುತ್ತದೆ, ಈ ಕಾವ್ಯ. ದೇವರೆಂದರೇನು, ಆತ ಎಲ್ಲಿದ್ದಾನೆ ಎಂಬ ಪ್ರಶ್ನೆಗಳಿಗೆ ಬಹುಶಃ ನಮ್ಮಲ್ಲಿ ನಿಖರವಾದ ಉತ್ತರವಿಲ್ಲದಿರಬಹುದು. ಆದರೆ ಆತ ಎಲ್ಲಿಯೂ ಇರಬಹುದೆಂದು ತೋರಿಸುವ ಪ್ರಯತ್ನ ಮಾಡುತ್ತದೆ. ಈ ಕವಿತೆ ಇಹ–ಪರ ಎರಡನ್ನು ಕವಿತೆ ಒಂದುಗೂಡಿಸಿದೆ. ಮಾನವೀಯತೆ, ಜೀವನಪ್ರೀತಿ, ಬದುಕಿನ ಸಂಕಷ್ಟಗಳನ್ನು ಎದುರಿಸುವ ಛಲ, ಧೈರ್ಯಗಳಿಂದ ಕೂಡಿರುವ ಒಬ್ಬ ಸಾದಾರಣ ಶಿವನ ವೇಷದಾರಿಯಲ್ಲೇ ಶಿವನನ್ನು ಕಾಣಬಹುದು ಎಂಬುದನ್ನು ಕವಿತೆ ನಮಗೆ ಅರಿವಾಗಿಸುತ್ತದೆ. ಸಹ ಮಾನವ ಪ್ರೇಮವೊಂದೆ ನಮ್ಮ ಲೌಕಿಕ ಬದುಕನ್ನು ಹಸನಾಗಿಸಬಲ್ಲದು ಎಂಬ ಸಂಗತಿ ಈ ಕವಿತೆ ಓದುವ ಪ್ರತಿಯೊಬ್ಬನಿಗೂ ಅರಿವಾಗದೇ ಇರದು.

ಪ್ರಮುಖ ಪದಗಳು : ಜಾತ್ರೆ, ಶಿವ, ಲೌಕಿಕ, ಅಲೌಕಿಕ, ರವಿಕೆ, ಪೀಪಿ, ವಾಚು, ಗಿರಿಜೆ, ಗಣಪ, ರುದ್ರ.

ಸವಿತಾ ನಾಗಭೂಷಣ ಅವರು ಕನ್ನಡದ ಸಂವೇದನಾಶೀಲ, ಹೆಮ್ಮೆಯ ಕವಯಿತ್ರಿ. ಅವರ ಕವಿತೆಗಳು ಸದಾ ಹೊಸತನಕ್ಕೆ, ಹೊಸ ವಸ್ತು–ವಿಷಯಗಳಿಗೆ ತೆರೆದುಕೊಳ್ಳುತ್ತದೆ. ಸುತ್ತಲಿನ ಪರಿಸರಕ್ಕೆ ಆಳವಾಗಿ ಸ್ಪಂದಿಸುತ್ತವೆ. ನೆಲದ ಭಾಷೆ–ಸಂವೇದನೆಗಳು ಅವರ

ಕವನಗಳಲ್ಲಿ ದಟ್ಟವಾಗಿ ಮೂಡಿ ನಿಂತಿವೆ. ಜಿ.ಎಸ್.ಎಸ್. ಅವರ ಮಾತಿನಲ್ಲಿ ಹೇಳುವುದಾದರೆ "ಸಮಕಾಲೀನ ಕನ್ನಡ ಕವಯತ್ರಿಯರ ನಡುವೆ ವಿಭಿನ್ನವೂ, ವಿಶಿಷ್ಟವೂ ಆದ ವ್ಯಕ್ತಿತ್ವವನ್ನುಳ್ಳ ಸವಿತಾ ಅವರ ಕವಿತೆ, ಬದುಕನ್ನು ಉತ್ಕಟವಾಗಿ ಪ್ರೀತಿಸುವ ಎಲ್ಲರ ಧ್ವನಿಯೂ ಆಗಿದೆ".[1]

ಸವಿತಾ ಅವರ ಕವಿತೆಗಳು ಭೂಮಿ, ಬೆಟ್ಟ, ಗಾಳಿ, ಬಾನು, ಚಂದ್ರ, ಹಕ್ಕಿ, ಹೀಗೆ ಹಲವು ನಿಸರ್ಗದ ಸಂಗತಿಗಳೊಂದಿಗೆ ಸಂಭಾಷಣೆಗಿಳಿಯುತ್ತವೆ. ಇವೇ ಅವರ ಕವನಗಳಿಗಿರುವ ಮಾಂತ್ರಿಕ ಶಕ್ತಿ. ಅವರ ಕಾವ್ಯ ಸಂವೇದನೆ ತುಂಬಾ ಸೂಕ್ಷ್ಮವಾದುದು. ಪದ ಬಳಕೆಯಲ್ಲೂ ಅವರು ಅಷ್ಟೇ ಎಚ್ಚರವಹಿಸುತ್ತಾರೆ. ಅವರ ಕಾವ್ಯ ನಿರ್ಭಿಡೆಯಿಂದ ಸಾಗದೆ, ಪ್ರಬುದ್ಧವಾಗಿ ಅರಳೀ ನಮ್ಮ ಮುಂದೆ ಹೊಸ ಲೋಕವೊಂದನ್ನೇ ತೆರೆದಿಡುತ್ತವೆ. ಮಲೆನಾಡಿನ ಹಿನ್ನೆಲೆಯುಳ್ಳ ಅವರ ಕಾವ್ಯದಲ್ಲಿ ಶಿವಮೊಗ್ಗೆಯ ಬೆಟ್ಟ, ಗುಡ್ಡ, ಕಾಡು ಬಿಸಿಲುಗಳ ಛಾಯೆ ಕಾಣಿಸುತ್ತವೆ.

ಕೆಲವು ಕನ್ನಡ ಕವಿತೆಗಳು ಗಂಬೀರವಾಗುತ್ತಾ, ಸಂಕೀರ್ಣವಾಗುತ್ತಾ ಜನರ ಮನಸ್ಸಿನಿಂದ ದೂರವಾಗಿ ಬಿಡುತ್ತಿವೆ. ಆದರೆ ಸವಿತಾ ಅವರ ಕಾವ್ಯಗಳಿಗೆ ಆ ಆತಂಕವಿಲ್ಲ. ಶಬ್ಧಗಳ ಆಡಂಬರವಿಲ್ಲದೆ, ಭಾವಗಳ ಭಾರವಿಲ್ಲದೆ ಓದುಗರು ಅರ್ಥಮಾಡಿಕೊಳ್ಳಲು ಹೆಣಗಾಡಬೇಕಾದ ಅಗತ್ಯವಿಲ್ಲದೆ ಓದುಗರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಅವರ ಕಾವ್ಯ ಶೈಲಿ, ಸಹಜತೆ– ಸರಳತೆಗಳೇ ಅವರ ಕಾವ್ಯ ಚೆಲುವಿಕೆಗೆ ಕಾರಣ. ಸುತ್ತಣ ಪ್ರಪಂಚದ ವಿವಿಧ ವಿಷಯಗಳಿಗೂ ಅವರ ಕವಿತೆಗಳು ಸ್ಪಂದಿಸುವುದು ವಿಶೇಷ. ತಾವು ಬದುಕುತ್ತಿರುವ ನೋವು–ನಲಿವುಗಳಿಗೆ ಧ್ವನಿಯಾಗುತ್ತಲೇ, ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ಗುಣ ಅವರ ಕವಿತೆಯಲ್ಲಿ ಕಾಣುತ್ತದೆ. ಜೀವ ಸಂವೇದನೆ, ಜೀವ ಕಾರುಣ್ಯಗಳು ಈ ಕವಿತೆಗಳ ಸ್ಥಾಯೀಭಾವ. ಅಷ್ಟೇ ಅಲ್ಲದೆ, ಬುದ್ಧ–ಬಸವ–ಗಾಂಧಿ–ಅಂಬೇಡ್ಕರ್ ಚಿಂತನೆಯ ಎಳೆಗಳು ಇಲ್ಲಿ ವಿಶಿಷ್ಟವಾಗಿ ಮೂಡಿವೆ.

ಹೂವು–ಚುಕ್ಕಿ– ಚಂದ್ರ ಮೊದಲಾದ ನಿರ್ಜೀವ ವಸ್ತುಗಳು ಅವರ ಕವಿತೆಗಳಲ್ಲಿ ಜೀವಂತವಾಗಿರುವಂತೆ ರಾಮ–ಕೃಷ್ಣ–ಶಿವ–ಬುದ್ದರೂ ಕಾಣಸಿಗುತ್ತಾರೆ. ಪುರಾಣ ಪಾತ್ರಗಳಾದ ಶ್ರೀರಾಮ, ಶಿವ, ಕೃಷ್ಣರು, ಪರಂಪರೆಯ ಬುದ್ಧ, ಅವರ ಕಾವ್ಯಗಳಲ್ಲಿ ವಿನೂತನವಾಗಿ ರೂಪ ತಳೆಯುತ್ತಾರೆ. ಈ ಪೌರಾಣಿಕ, ಪಾರಂಪರಿಕ ಪಾತ್ರಗಳ ಬಗ್ಗೆ ನಮಗಿರುವ ನಂಬಿಕೆ, ಕಲ್ಪನೆಗಳನ್ನು ಮಾರ್ಪಡಿಸುವಂತೆ, ಪ್ರಶ್ನಿಸುವಂತೆ ಅವರ ಕವನಗಳು ಬೆಳೆಯುತ್ತಾ ಹೋಗುತ್ತವೆ. ಭಾರತದ ಧರ್ಮ, ಭಕ್ತಿ ಪರಂಪರೆಗಳಲ್ಲಿ ದೇವರ ಕಲ್ಪನೆಯ ಸ್ವರೂಪವೇ ವಿಭಿನ್ನ. ಈ ಅಲೌಕಿಕ ಪಾತ್ರಗಳನ್ನು ಸವಿತಾ ನಾಗಭೂಷಣರ ಕವಿತೆಗಳು, ಲೌಕಿಕದೊಂದಿಗೆ ಹೊಂದಿಸುವ ಪರಿ ಇನ್ನೂ ವಿಶಿಷ್ಟವಾದುದು. ಅವರ 'ಜಾತ್ರೆಯಲ್ಲಿ ಶಿವ" ಇಂತಹ ಅಚ್ಚರಿ ಹುಟ್ಟಿಸುವ ಕವನಗಳಲ್ಲಿ ಒಂದು.

ಲೌಕಿಕ ಶಿವ– ಅಲೌಕಿಕ ಶಿವ

ಈ ಕವಿತೆ ಲೌಕಿಕ–ಅಲೌಕಿಕ, ಮಾನವತೆ ದೈವಿಕತೆಗಳನ್ನು ಬೆಸೆಯುವ ವಿಶಿಷ್ಟ ಪ್ರಯತ್ನ, ಶಿವನ ಬಗ್ಗೆ ನಮಗಿರುವ ಪರಿಕಲ್ಪನೆಯನ್ನೇ ಬುಡಮೇಲು ಮಾಡಿ, ಇನ್ನೊಂದು ಅದ್ಭುತ ಚಿತ್ರಣವನ್ನೇ ಕವಿತೆ ಕಟ್ಟಿಕೊಡುತ್ತದೆ. ಶಿವ ಸದಾ ಲೋಕಸಂಚಾರಿ, ಸ್ಮಶಾನವಾಸಿ, ತಿರುಕ, ಬಡವ, ಮೈ ತುಂಬ ಬೂದಿ ಬಳಿದುಕೊಂಡವನಾದರೂ ಮಂಗಳ ಸ್ವರೂಪಿಯಾಗಿಯೇ ಗೋಚರಿಸುತ್ತಾನೆ. ಇಂತಹ "ಶಿವನ ದರ್ಶನ" ಓದುಗರಿಗೆ ಜಾತ್ರೆಯೊಳಗಾಗುತ್ತವೆ. ಇತರ ದೇವರುಗಳಿಗಿಂತ 'ಶಿವ' ಜನಸಮಾನ್ಯನಿಗೆ ಹೆಚ್ಚು ಹತ್ತಿರ. ಅಂತಹ ಶಿವನನ್ನು ಕವಿತೆ ಇನ್ನಷ್ಟೂ ಹತ್ತಿರವಾಗಿಸಿ, ಆತ ಇಲ್ಲಿಯೇ ಇದ್ದಾನಲ್ಲಾ! ಎಂಬ ನಂಬಿಕೆ ಮೂಡಿಸುತ್ತದೆ.

ಸವಿತಾ ನಾಗಭೂಷಣರ ಕಾವ್ಯ ಗುಣವೇ ಸರಳತೆ–ನಿರಾಡಂಬರತೆ. ಆ ಕಾವ್ಯ ಗುಣವೇ ಇಲ್ಲಿನ ಶಕ್ತಿ . ಕವಿತೆಯಲ್ಲಿ ಇಬ್ಬರೂ ಶಿವನಿದ್ದಾರೆ. ಒಬ್ಬ ಲೌಕಿಕ ಶಿವನಾದರೆ, ಇನ್ನೊಬ್ಬ ಅಲೌಕಿಕ ಶಿವ. ವಾಸ್ತವವಾಗಿ ಅಲೌಕಿಕ ಶಿವ ಇಲ್ಲಿ ಗೌಣ. ಲೌಕಿಕ ಶಿವನ ಮೂಲಕವೇ ಅಲೌಕಿಕ ಶಿವನನ್ನು ಸಾಕ್ಷಾತ್ಕಾರಗೊಳಿಸುವುದು ಕವಿತೆಯ ಚಮತ್ಕಾರ. ಲೌಕಿಕದ ಎಲ್ಲಾ ಆಗು ಹೋಗುಗಳು ಕಷ್ಟ–ಸುಖಗಳಿಗೆ ತಲೆಕೊಡಬೇಕಾದ ಒಬ್ಬ ಸಾಮಾನ್ಯ ವ್ಯಕ್ತಿ ಪರಶಿವನ ಅವತಾರವೇ ಆಗಿ ಕಾಣುವವರೆಗೆ ಕವಿತೆ ಸಾಗುವ ರೀತಿ ಅನನ್ಯವಾಗಿದೆ. ಮನುಷ್ಯನಿಗೆ ಸಹಜವಾಗಿರುವ ನೋವು ನಲಿವುಗಳು, ಸಂಸಾರದ ಜಂಜಡ, ಜೀವನ ಪ್ರೀತಿ, ಹಸಿವು, ಅಕ್ಕರೆ, ಮಾನವ ಸಂಬಂಧಗಳ ದಟ್ಟ ವಿವರಣೆ ಕವಿತೆಯಲ್ಲಿ ಹಾಸುಕೊಕ್ಕಾಗಿವೆ. ಜಾತ್ರೆಯ ಸೂಕ್ಷ್ಮ ವಿವರಗಳನ್ನು ಬಹಳ ಅಚ್ಚುಕಟ್ಟಾಗಿ ಕಾವ್ಯ ಚಿತ್ರಿಸುತ್ತಾ ಹೋಗುತ್ತದೆ. ಕಾಲದಿಂದ ಕಾಲಕ್ಕೆ , ಬೇರೆ–ಬೇರೆ ಸಿದ್ಧಾಂತಗಳ ಚೌಕಟ್ಟಿನೊಳಗೆ ಇಳಿದು–ಬೆಳೆದು ಬಂದಿರುವ 'ಶಿವ' – ಇಲ್ಲಿ ಒಬ್ಬ ಸಾಧಾರಣ ವ್ಯಕ್ತಿಯೊಳಗೆ ರೂಪು ತಳೆಯುತ್ತಾನೆ. ಕವಿತೆ ಮುಗಿರುವ ಹೊತ್ತಿಗೆ ಲೌಕಿಕದ ಶಿವ, ಪರ ಶಿವನೇ ಆಗಿಬಿಡುವ ಅಭೇದ್ಯತೆಯನ್ನು ಕವಿತೆ ನಮಗೆ ಅರಿವಿಲ್ಲದಂತೆಯೇ ಸೃಷ್ಟಿಸಿಬಿಡುತ್ತದೆ. ಕವಿತೆಯ ಪ್ರಾರಂಭ ಶಿವನ ವೇಷಧಾರಿಯನ್ನು ಪರಿಚಯಿಸುತ್ತದೆ. ಕವಿಯಿದ್ದ ಬಸ್ಸಿನಲ್ಲೇ ಇದ್ದ ಶಿವನ ವೇಷಧಾರಿ. ಇವರೊಂದಿಗೆ ಬಸ್ಸಿಳಿದ. ಹೇಗಿದ್ದ ಈ ವೇಷಧಾರಿ? ಕವಿತೆ ಅವನ ಬಾಹ್ಯ ವಿವರಗಳನ್ನು ನೀಡುತ್ತದೆ. ತೇಗದ ಮರದಂತೆ ಸಪೂರ, ಮೋಡದ ಮೈ ಬಣ್ಣ, ಮಿಂಚಿನ ನಗು, ತಗಡಿನ ಚಂದ್ರ, ತೋಳಿಗೆ ಕಣಗಿಲೆ ಹೂವು, ಕೊರಳಲ್ಲಿ ಪ್ಲಾಸ್ಟಿಕ್ ಹಾವು, ಹುಲಿ ಚರ್ಮದ ಚಿತ್ರದ ಮಾಸಿದ ಲುಂಗಿ, ಕಾಲಿಗೆ, ಹವಾಯಿ ಚಪ್ಪಲಿ. ಈ ವಿವರಗಳಲ್ಲಿ ಅವನ ಸಂಕಷ್ಟಗಳ ಸೂಚನೆಯಿದೆ. ವಾಸ್ತವವಾಗಿ ಅವನಿರುವ ಪರಿಸ್ಥಿತಿಯ ಅನಾವರಣವಿದೆ. ಬೆರಗಿನಿಂದ ನೋಡುತ್ತಾ ನಿಂತ ಕವಿಗೆ ಅವನ

ಡಮರುಗ, ತ್ರಿಶೂಲ, ಕಾಲ್ಗೆಜ್ಜೆಯ ಗಲಗಲವೇ ಉತ್ತರ. ಅದನ್ನು ಇನ್ನಷ್ಟು ಸ್ಪಷ್ಟಗೊಳಿಸುವವನಂತೆ 'ನಾ ಶಿವ'–ಎನ್ನುತ್ತಾನೆ ಆತ. ಸ್ಪಷ್ಟ ಉತ್ತರ ಅವನದ್ದು.

ಮುಂದೆ ಜಾತ್ರೆಯ ತುಂಬೆಲ್ಲಾ ಅವನೇ ಆವರಿಸಿಕೊಳ್ಳುತ್ತಾ ಹೋಗುತ್ತಾನೆ. ಜಾತ್ರೆಯ ಚಿತ್ರಣವೂ ಸಹಜ ವಿವರಗಳೊಂದಿಗೆ ಕಣ್ಣ ಮುಂದೆ ತೆರೆದುಕೊಳ್ಳುತ್ತದೆ. ಅವನನ್ನೇ ಹಿಂಬಾಲಿಸುತ್ತಾ ಕವಿತೆ ಮುಂದೆ–ಮುಂದೆ ಸಾಗುತ್ತದೆ. ಗಿಲೀಟು ಒಡವೆ ಅಂಗಡಿಯಲ್ಲಿ ಮೂಗುತಿಯನ್ನು ಹಿಡಿದು – ಈ ವಜ್ರಕ್ಕೆಷ್ಟಪ್ಪಾ ಬೆಲೆ ಎಂದು ಅಂಗಡಿಯಯವನ ಕಾಲೆಳೆಯುತ್ತಾನೆ. ಅವನ ಪಾಲಿಗೆ ಅದೇ ವಜ್ರವೂ ಹೌದು. ಬದುಕಿನ ಹಲವು ನೋವು–ಪರಿಮಿತಿಗಳಾಚೆ ಬದುಕನ್ನು ಆನಂದಿಸುವ ಅವನ ಜೀವನ ಪ್ರೀತಿ ಎಂತಹವರಿಗೂ ಆದರ್ಶಪ್ರಾಯ.

ಅವನ ಮುಂದಿನ ಧಾಳಿ'ಪುಗ್ಗೆಯಂಗಡಿಗೆ'. ಒಂದೊಂದು ಪುಗ್ಗೆಯ ಮೇಲೂ ಮೃದುವಾಗಿ ಕೈಯಾಡಿಸಿ, ಅದರಿಂದ ಬರುವ ಪರಪರ ಶಬ್ಧಕ್ಕೆ ಕಿವಿಗೊಟ್ಟು ಖುಷಿಪಡುತ್ತಾನೆ. ಸಣ್ಣ–ಸಣ್ಣ ಸಂಗತಿಗಳಲ್ಲೇ ಸಂತೋಷ ಹುಡುಕಿಕೊಳ್ಳುವ ರೀತಿಯನ್ನು ಆತ ಕರಗತ ಮಾಡಿಕೊಂಡಿದ್ದಾನೆ. ಜೊತೆಗೆ ಆತ ಆಶುಕವಿಯೂ ಹೌದು. ಸ್ಥಳದಲ್ಲೇ ಪದ ಕಟ್ಟಿ ಹಾಡಿ ತನ್ನ ಮಕ್ಕಳಿಗಾಗಿ ಪೀಪಿ–ವಾಚು ಪುಕ್ಕಟೆಯಾಗಿ ಪಡೆದ. ಹಾಡಿನ ಪದವೂ ಎರಡೇ ಸಾಲಿನದ್ದು. 'ಬಾಗಿಲು ದಾಟುವುದರೊಳಗೆ ಠುಸ್ಸೆನ್ನುವುದೀ ಪುಗ್ಗೆ, ಜೊತೆಗೆ ಹಿಗ್ಗಿನ ಬುಗ್ಗೆ'. ಎರಡೇ ಸಾಲು ಜೀವನದ ಸಾರಸರ್ವಸ್ವವನ್ನೂ ಒಳಗೊಂಡಿದೆ. ಎರಡೇ ಸಾಲಿನಲ್ಲಿ ಜೀವನದ ಅಶಾಶ್ವತತೆ–ನಶ್ವರತೆ, ನಶ್ವರತೆಯ ಮಧ್ಯೆಯೂ ಆನಂದ ಪಡೆದುಕೊಳ್ಳಬಹುದಾದ ಸಾಧ್ಯತೆಗಳನ್ನು ಮನವರಿಕೆ ಮಾಡಿಕೊಡುತ್ತದೆ. ಇಲ್ಲಿ ನಮ್ಮ ಗಮನ ಸೆಳೆಯುವುದು ಅವನು ಪುಕ್ಕಟೆಯಾಗಿ ಪಡೆದ ಪೀಪಿ–ವಾಚು.

ಪರಶಿವನ ಸಾಕ್ಷಾತ್ಕಾರ

ಕವಿತೆಯ ಮುಂದಿನ ಭಾಗದಲ್ಲಿ ಜಾತ್ರೆಯ ವರ್ಣನೆ ಮುಂದುವರೆಯುತ್ತದೆ. ಅಂಗಡಿ, ವ್ಯಾಪಾರ, ಆಟ, ಮೋಜು, ಬಣ್ಣದ ಶರಬತ್ತು, ಕಡಲೆಪುರಿ ಗುಡ್ಡ–ಒಂದೊಂದೇ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಅಂಗಡಿಯಲ್ಲಿ ಬಣ್ಣ–ಬಣ್ಣದ ಪರಕಾರಗಳನ್ನೆಲ್ಲಾ ತೆಗೆಸಿ, ಅಂಗಡಿಯೆಲ್ಲಾ ಎಳೆದಾಡಿಸಿ, ಚೌಕಾಸಿ ಮಾಡಿ ಒಂದು ಗಜ ರವಿಕೆಯ ಬಟ್ಟೆ ಕೊಂಡ ಶಿವನ ವೇಷಧಾರಿ. ಬಹುಶಃ ತನ್ನ ಹೆಂಡತಿಗಾಗಿಯೇ ಇರಬಹುದು.

ಜಾತ್ರೆಯುಲ್ಲಿರುವ ಬಹುತೇಕ ಮಂದಿ ಆತನಿಗೆ ಪರಿಚಿತರಿರಬೇಕು. ಶರಬತ್ತಿನಂಗಡಿಯವನೊಡನೆ, ಗಿಣಿ ಶಾಸ್ತ್ರದವನೊಡನೆ, ಕರಡಿ ವೇಷದವನೊಡನೆ ಇವನ ಹರಟೆ ಎಡೆಬಿಡದೆ ಸಾಗಿದೆ. ಜಾತ್ರೆಯ ಉದ್ದಗಲಕ್ಕೂ ಈ ಶಿವನ ವೇಷಧರಿಯೇ

ಆವರಿಸಿಬಿಟ್ಟಿದ್ದಾನೆ. ಅಥವಾ ಕವಯತ್ರಿಯ ದೃಷ್ಟಿಯೆಲ್ಲಾ ಆತನ ಮೇಲೆ ಕೇಂದ್ರೀಕೃತವಾಗಿದೆ.

ಬೀಡಿ ಸೇದುತ್ತಾ ಕಡಲೆಪುರಿ ಗುಡ್ಡವನ್ನು ದಾಟಿ, 'ಹೋದ' ಎನ್ನುವಷ್ಟರಲ್ಲಿಯೇ ಬತ್ತಾಸಿನ ಅಂಗಡಿಯ ಮುಂದೆ ಮತ್ತೆ ಪ್ರತ್ಯಕ್ಷನಾದ. ಈ ಬಾರಿ ಆತನ ಮುಖದಲ್ಲಿ ಪರಿಚಿತ ನಗೆಯಿದೆ. ಆತನೂ ಕವಯಿತ್ರಿಯನ್ನು ಗಮನಿಸುತ್ತಲೇ ನಡೆದಿದ್ದಾನೇನೋ. ಮೆಲ್ಲನೆ ನಿರೂಪಕಿಯ ಬಳಿ ಬಂದು ತಲೆ ತಗ್ಗಿಸಿ, ತನ್ನ ಗೋಳನ್ನೆಲ್ಲಾ ಅವರ ಮುಂದೆ ಹರಡುತ್ತಾನೆ. ಆತನ ಹೆಂಡತಿಗೆ ಖಾಯಿಲೆ, ಮಗ ಹಸಿದಿದ್ದಾನೆ. ಇದನ್ನೆಲ್ಲಾ ಹೇಳುತ್ತಾ ಆತ ಅಳುತ್ತಿದ್ದಾನೆ. 'ಗಣಪ ಹಸಿದಿದ್ದಾನೆ, ಗಿರಿಜೆಗೆ ಖಾಯಿಲೆ'–ಎಂದು ಹೇಳುವುದರ ಮೂಲಕ, ಶಿವನ ವೇಷಧಾರಿ ಶಿವನೇ ಆಗಿಬಿಡುವುದಕ್ಕೆ ಮುನ್ನುಡಿಯಾಗುತ್ತದೆ. ಅವನ ಅಳು ನೋಡಿ ನಿರೂಪಕಿಗೆ ಅನ್ನಿಸುತ್ತದೆ– ಹೆಂಡತಿ ಮಕ್ಕಳಿಗಾಗಿ ಶಿವನಲ್ಲದೆ ಭವಿ ಅಳುವನೇ? ತನ್ನ ಹೆಂಡತಿ ಮಕ್ಕಳಿಗಾಗಿ ಅಳುವವನು, ಅವರಿಗಾಗಿ ಕಷ್ಟಪಡುವವನು ನಿಜವಾದ ಪುರುಷ. ಆತ ಶಿವನ ಅವತಾರಿಯಲ್ಲದೆ ಮತ್ತೇನು? ಗಂಡಸು ಅಳುವುದಿಲ್ಲ ಎಂಬ ರೂಢಿಗೆ ಇದು ತದ್ವಿರುದ್ಧ. ಅತ್ತು ಹಗುರಾಗುವುದು ದುರ್ಬಲತೆಯಲ್ಲ. 'ಅಳು'ವಿನ ಮೂಲಕ ದುಃಖವನ್ನು ಹೊರಹಾಕಿ ಮತ್ತೆ ಗಟ್ಟಿಯಾಗುವುದು, ಎಂಬುದನ್ನು ಕವಿತೆ ಸಾಬೀತು ಮಾಡುತ್ತದೆ. ಹೀಗೆ ಅಪರಿಚಿತರ ಮುಂದೆ ದುಃಖ ಹೇಳಿಕೊಂಡು ಅಳಲು ಧೈರ್ಯ ಬೇಕಲ್ಲವೇ?

ನಿರೂಪಕಿಯ ಮುಂದೆ ತನ್ನ ಕಷ್ಟಗಳನ್ನೆಲ್ಲಾ ಹರವಿಕೊಂಡು ನಿಂತ ಈ ಲೌಕಿಕ ಶಿವ ಬೊಗಸೆಯೊಡ್ಡಿ ಭಿಕ್ಷೆ ಭೇಡುತ್ತಾನೆ. ನಿರೂಪಕಿ ಪರ್ಸಿನ ಮೂಲೆಯೆಲ್ಲಾ ತಡವಿ , ಐದರ ನೋಟು ಹುಡುಕಿ ಇರಿಸಿ, ಇಷ್ಟೇ ಎನುತ್ತಾರೆ. ಇರಿಸಿದ್ದು 'ರುದ್ರನೊಡ್ಡಿದ ಬೊಗಸೆಗೆ'. ಕವಿತೆಯುದ್ದಕ್ಕೂ 'ಶಿವ' ಎಂಬ ಪದವೇ ಬಳಕೆಯಾಗಿದ್ದು, ಈ ಭಾಗದಲ್ಲಿ 'ರುದ್ರ' ಎಂಬ ಪದ ಬಳಕೆಯನ್ನು ಉದ್ದೇಶ ಪೂರ್ವಕವಾಗಿಯೇ ತರಲಾಗಿದೆ.

'ಬೇಡುವಿಕೆ' ಅಥವಾ 'ಭಿಕ್ಷೆ ಬೇಡುವುದು' 'ಶಿವ' ನ ಬಹುದೊಡ್ಡ ಗುರುತು. ಅವನ ಅಸ್ತಿತ್ವ, ಭಿಕ್ಷೆ ಬೇಡುವುದು ಕೇವಲವಾದದ್ದಲ್ಲ. ತನ್ನ ಆತ್ಮಾಭಿಮಾನವನ್ನು ಪಣಕ್ಕಿಟ್ಟು ಇನ್ನೊಬ್ಬರ ಮುಂದೆ ಕೈ ಒಡ್ಡುವುದುಕ್ಕೂ ಸಾಕಷ್ಟು ಧೈರ್ಯವಿರಬೇಕು. ಭಿಕ್ಷೆ ಬೇಡುವುದು ಕ್ಷುಲ್ಲಕವಲ್ಲ ಎಂಬುದನ್ನು ಅರಿವು ಮಾಡಿಕೊಟ್ಟವನೇ ಶಿವ. ಇದು ದುರ್ಬಲತೆಯಲ್ಲ ಶಕ್ತಿ. ಆ ಶಕ್ತಿಯನ್ನು 'ರುದ್ರ' ಎಂಬ ಪದ ಸಮರ್ಥವಾಗಿ ಧ್ವನಿಸುತ್ತಿದೆ. ಅದೂ ಈತ ಕೈಯೊಡ್ಡಿ ನಿಂತಿರುವುದು ತನಗಾಗಿ ಅಲ್ಲ, ತನ್ನ ಹೆಂಡತಿ ಮಕ್ಕಳಿಗಾಗಿ.

ಬೊಗಸೆಗೆ ನೋಟು ಬಿದ್ದ ತಕ್ಷಣ ಆತ ಸಾಕ್ಷಾತ್ ನಟರಾಜನ ಭಂಗಿಯಲ್ಲಿ ಮಿಂಚಂತೆ ಹೊಳೆದು ನಾಟ್ಯವಾಡಿ, ಅರ್ಧನಿಮೀಲಿತ ನೇತ್ರನಾಗಿ ನಿಲ್ಲುತ್ತಾನೆ. ಆ ಕ್ಷಣ ನಿರೂಪಕಿ ಕಣ್ಣು, ಬಾಯಿ ಬಿಟ್ಟು ಕೈ ಜೋಡಿಸಿ ಮೈದುಂಬಿ ನುಡಿದರು 'ಸಾಕ್ಷಾತ್ ಶಿವ'!.

ಇದೇ ಅಲೌಕಿಕ ಶಿವ, ಲೌಕಿಕ ಶಿವ ಇಬ್ಬರೂ ಒಂದಾದ ಅದ್ಭುತ ಘಳಿಗೆ. ಲೌಕಿಕ ಶಿವನ ವೇಷಧಾರಿಯಲ್ಲೇ ಕವಿ, ಅಲೌಕಿಕ ಶಿವನ ದರ್ಶನ ಮಾಡಿದ್ದಾರೆ, ಮಾಡಿಸಿದ್ದಾರೆ.

ಲೌಕಿಕ ಶಿವನಲ್ಲೇ ಪರಶಿವನನ್ನು ಕಾಣುವುದಕ್ಕೆ ಕವಿತೆ ಸಾಕಷ್ಟು ಕಾರಣಗಳನ್ನು ಕೊಡುತ್ತದೆ. ಗುಡಿ–ವಿಗ್ರಹಗಳಲ್ಲೇ ಶಿವನನ್ನು ಕಾಣಬೇಕೆಂಬ ಅಗತ್ಯವಿಲ್ಲ. ಆತ ನಮ್ಮ ಸುತ್ತಲೇ ಇರಬಹುದು. ಕಾಣುವ ದೃಷ್ಟಿ ಬೇಕಷ್ಟೇ. ಲೋಕ ವ್ಯಾಪಾರವೇ ಒಂದು ಜಾತ್ರೆಯಂತೆ. ಅದನ್ನೇ ಇಲ್ಲಿನ ಜಾತ್ರೆ ಸಂಕೇತಿಸಿದೆ. ಪರ ಶಿವನಂತೆ ಈತನೂ ಇಲ್ಲಿ ಜಾತ್ರೆಯ ತುಂಬಾ ಸಂಚಾರಿ. ಮನೆಯ ಬಡತನ, ಖಾಯಿಲೆ, ಹಸಿವು, ಹೆಂಡತಿ–ಮಕ್ಕಳ ಆರೈಕೆಗಾಗಿ ಆತನ ಬವಣೆ. ಎಷ್ಟೆಲ್ಲಾ ನೋವುಗಳ ಮಧ್ಯೆಯೂ ಆತನ 'ಜೀವನ ಪ್ರೀತಿ' ಸ್ವಲ್ಪವೂ ಮಾಸಿಲ್ಲ. ಸಣ್ಣ ಸಂಗತಿಗಳಲ್ಲಿ ನಗು–ಖುಷಿಯನ್ನು ಕಂಡುಕೊಳ್ಳುವ ಕಲೆ ಆತನಿಗಿದೆ. ಜೀವನದ ಸವಾಲುಗಳನ್ನು ಎದುರಿಸುವ ಎದೆಗಾರಿಕೆ ಇದೆ. ತನ್ನವರಿಗಾಗಿ ಪರರ ಮುಂದೆ ಕೈ ಚಾಚಿ ನಿಲ್ಲುವ ಧೈರ್ಯವೂ ಆತನಲ್ಲಿದೆ. ಇಡೀ ಜಾತ್ರೆಯ ತುಂಬಾ ಸುತ್ತಾಡಿ, ಆತ ಪಡೆದುಕೊಂಡದ್ದು, ಕೊಂಡದ್ದು–ಪೀಪಿ, ವಾಚು, ರವಿಕೆ ಮಾತ್ರ. ತನಗಾಗಿ ಏನನ್ನು ಕೊಳ್ಳಲಿಲ್ಲ, ಬೇಡಲಿಲ್ಲ. ತನ್ನ ದೇಹದ ಅರ್ಧಭಾಗವನ್ನು 'ಹೆಂಡತಿ'ಗೆ ಬಿಟ್ಟುಕೊಟ್ಟ ಆ'ಶಿವ'ನಿಗಿಂತ 'ಈ ಶಿವ'ನೇನೂ ಕಡಿಮೆಯಿಲ್ಲ.

ನಿಮ್ಮ ಕವಿತೆಗಳೆಲ್ಲಾ ಮಧುರ ಧ್ವನಿಯವು. 'ಜಾತ್ರೆಯಲ್ಲಿ ಶಿವ' ನಿಮ್ಮೆಲ್ಲಾ ಹಿಂದಿನ ಕವಿತೆಗಳಿಗಿಂತ ಒಂದು ಹೆಜ್ಜೆ ಮುಂದಿದೆ. ಇದರ ಸರಳತೆ ಹಾಗೂ ತಿರುವುಗಳು ಬಹುಶಃ ನಿಮ್ಮ ಒಟ್ಟಾರೆ ಕಾವ್ಯದಲ್ಲೇ ವಿಶಿಷ್ಟವೆನಿಸುವಂಥವು'–ಕೆ.ವಿ.ತಿರುಮಲೇಶ್.[2]

ಅಪ್ಪಟ ಮಾನವೀಯ ಘನತೆಯ ಪ್ರತಿರೂಪವಾದ ಶಿವನ ವೇಷಧಾರಿಯನ್ನೇ 'ಸಾಕ್ಷಾತ್ ಶಿವ'ನಾಗಿ ಕವಿತೆ ಕಂಡಿರುವುದು ಅಚ್ಚರಿಯೇನಲ್ಲ.

ಅಡಿ ಟಿಪ್ಪಣಿಗಳು :

1. ಸವಿತಾ ನಾಗಭೂಷಣ., ಜಾತ್ರೆಯಲ್ಲಿ ಶಿವ., ಅಕ್ಷರ ಪ್ರಕಾಶನ., ಬೆನ್ನುಡಿ., 2023.
2. ಸವಿತಾ ನಾಗಭೂಷಣ., ಜಾತ್ರೆಯಲ್ಲಿ ಶಿವ., ಅಕ್ಷರ ಪ್ರಕಾಶನ., ಬೆನ್ನುಡಿ., 2023

ಪರಾಮರ್ಶನ ಗ್ರಂಥ :

1. ಕಾವ್ಯ ಕಾರಣ., ವಿನೂತನ ಶಿವನ ಸಾಕ್ಷಾತ್ಕಾರದೊಡನೆ., ಎಂ.ಎಸ್.ವೇದಾ., 2013 ಪ್ರಜಾವಾಣಿ., ಲೇಖನ.
2. ಜಾತ್ರೆಯಲ್ಲಿ ಶಿವ., ಕವಿತೆಗಳು – ಸವಿತಾ ನಾಗಭೂಷಣ, ಅಕ್ಷರ ಪ್ರಕಾಶ, ಹೆಗ್ಗೋಡು, ಸಾಗರ, –2023 [3ನೇ ಮುದ್ರಣ]

***

ಭಗವಾನ್ ವೇದವ್ಯಾಸರು – ಪೆರುನ್ದೇವನಾರ್ – ಪಂಪ

ಡಾ. ವಾಣಿಶ್ರೀ ಬಿ. ಎಂ.
ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಂ. ಇ. ಎಸ್. ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು,
ಮಲ್ಲೇಶ್ವರಂ, ಬೆಂಗಳೂರು – 560003

ರಾಮಾಯಣ, ಮಹಾಭಾರತಗಳು ಕೇವಲ ಮಹಾ ಕಾವ್ಯಗಳಷ್ಟೇ ಅಲ್ಲ. ಅವು ಭರತ ಖಂಡದ ಜನರ ಜೀವನ ಕ್ರಮ. ಇವೆರಡೂ ಕಾವ್ಯಗಳು ಮನುಷ್ಯನ ಬದುಕಿಗೆ ದಾರಿ ತೋರುವ ಕೃತಿಗಳು. ರಾಮಾಯಣ ಜೀವನದಲ್ಲಿ ಹೇಗಿರಬೇಕು ಎಂದು ತಿಳಿಸಿದರೆ, ಮಹಾಭಾರತ ಬದುಕಿನಲ್ಲಿ ಏನನ್ನು ಮಾಡಬಾರದು ಎಂದು ಕಲಿಸುತ್ತದೆ. ಆದರ್ಶಗಳ ಕಾವ್ಯ ರಾಮಾಯಣಕ್ಕಿಂತ ಮಹಾಭಾರತ ಜನ ಮಾನಸಕ್ಕೆ ಹೆಚ್ಚು ಹತ್ತಿರವಾಗುತ್ತದೆ. ಅಲ್ಲಿ ದ್ವೇಷ, ಅಸೂಯೆ, ಅಸಹನೆ, ಲೋಭ, ಮೋಹ, ಮೊದಲಾದ ಮಾನವ ಸಹಜ ದೌರ್ಬಲ್ಯಗಳಿವೆ. ಇಂದಿಗೆ ಮಹಾಭಾರತ ಕಥೆ ಹೆಚ್ಚು ಪ್ರಸ್ತುತವಾಗುತ್ತದೆ. ವೇದವ್ಯಾಸರು ಈ ಕಾವ್ಯವನ್ನು ಗಣಪನನ್ನು ಲಿಪಿಕಾರನಾಗಿಸಿ ರಚಿಸಿದರು. ಕೃಷ್ಣನೇ ನಾಯಕನಾದ ಈ ಕಾವ್ಯದಲ್ಲಿ ಧರ್ಮ ಅಧರ್ಮಗಳ ಸಂಘರ್ಷವಿದೆ. ವಿಭಿನ್ನ ಮಾನಸಿಕ ಹಿನ್ನೆಲೆಯುಳ್ಳ ನೂರಾರು ಪಾತ್ರ ಚಿತ್ರಣವಿದೆ. ವೇದವ್ಯಾಸರು ಪರಾಶರ ಮುನಿಗಳ ಪುತ್ರನಾಗಿ, ಮಹರ್ಷಿಯಾಗಿ, ರಾಜ ಸಲಹೆಗಾರರಾಗಿ, ಮಹಾನ್ ಶಿಕ್ಷಣ ತಜ್ಞರಾಗಿ, ತತ್ವಜ್ಞಾನಿಯಾಗಿ ಅಸಾಧಾರಣವಾದ ಮಹಾಕಾವ್ಯ ರಚನೆ ಮಾಡಿದ್ದಾರೆ. ಭಗವಾನ್ ವ್ಯಾಸರ ಮಹಾಭಾರತವನ್ನು ಆಧರಿಸಿ ಪೆರುನ್ದೇವನಾರ್ ಭಾರತ ವೆಣ್ಬ ಕೃತಿಯನ್ನು, ಪಂಪನು ವಿಕ್ರಮಾರ್ಜುನ ವಿಜಯವನ್ನು, ನನ್ನಯನು ನನ್ನಯ ಭಾರತವನ್ನು ರಚಿಸಿದ್ದಾರೆ. ಈ ಎಲ್ಲ ದಕ್ಷಿಣ ಭಾರತೀಯ ಮಹಾಭಾರತ ಕಥೆಗಳ ತೌಲನಿಕ ಅಧ್ಯಯನವಾದ 'ಮಹಾಭಾರತ ದರ್ಶನ' ಕೃತಿಯ

ಕನ್ನಡ ಆವೃತ್ತಿಯು ಇತ್ತೀಚೆಗೆ ಬಿಡುಗಡೆಯಾಗಿದೆ. ಇಂಗ್ಲಿಷ್ ಮೂಲದ ಈ ಕೃತಿಯು ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾಗಿದೆ.

Mahabharata and Variations ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿದೆ. ಇದರ ಕರ್ತೃ ಡಾ. ಕಂಬಾಲೂರು ವೆಂಕಟೇಶಾಚಾರ್ಯರು. ಇವರು ಶ್ರೀಮನ್ಮಾಧವತೀರ್ಥಮಠ, ತಂಬಿಹಳ್ಳಿ ಇಲ್ಲಿಯ ಪೀಠಾಧಿಪತಿಗಳಾಗಿದ್ದವರು. ಆಶ್ರಮ ನಾಮ ಶ್ರೀ ವಿದ್ಯಾಸಾಗರ ಮಾಧವತೀರ್ಥರು. ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತೆಲುಗು ಬಿ. ಎ.(ಆನರ್ಸ್) ಪದವೀಧರರಾದ ಇವರು 1979ನೆಯ ಇಸವಿಯಲ್ಲಿ ಪ್ರಸ್ತುತ ಗ್ರಂಥವನ್ನು ರಚಿಸಿ ಡಾಕ್ಟರೇಟ್ ಪದವಿಯನ್ನು ಪಡೆದರು. ಯತ್ಯಾಶ್ರಮ ಸ್ವೀಕರಿಸಿದ ಮೇಲೆ ದಾಸ ಸಾಹಿತ್ಯವನ್ನು ರಚಿಸಿ ಅವರ ಆರಾಧ್ಯ ಮೂರ್ತಿ ವೀರರಾಮನಿಗೆ ಅರ್ಪಿಸಿದ್ದಾರೆ.

ಪೂರ್ವಾಶ್ರಮದಲ್ಲಿ ಶ್ರೀಗಳು ಸಂಸ್ಕೃತ ಮೂಲದ ಭಗವಾನ್ ವೇದವ್ಯಾಸ ಪ್ರಣೀತ ಮಹಾಭಾರತ, ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ' ತಮಿಳು ಕವಿ ಪೆರುನ್ದೇವನಾರ್ ರಚಿಸಿದ 'ಭಾರತ ವೆಣ್ಬ' ಮತ್ತು ತೆಲುಗು ಕವಿ ನನ್ನಯ ರಚಿಸಿರುವ ಭಾರತ ಕೃತಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಆಂಗ್ಲ ಭಾಷೆಯಲ್ಲಿ ಈ ಗ್ರಂಥವನ್ನು ರಚಿಸಿದ್ದಾರೆ. ಸಂಸ್ಕೃತ, ಕನ್ನಡ, ಆಂಗ್ಲ, ತಮಿಳು, ತೆಲುಗು ಭಾಷೆಗಳಲ್ಲಿ ಪ್ರಭುತ್ವ ಹೊಂದಿದ್ದ ಶ್ರೀಗಳ ಈ ಕೃತಿಯು 1981ನೇ ಇಸವಿಯಲ್ಲಿ ಮೊದಲ ಮುದ್ರಣ ಕಂಡಿತು. ಈ ಗ್ರಂಥವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪಂಡಿತರ ಮೆಚ್ಚುಗೆಗೆ ಪಾತ್ರವಾಗಿವೆ. ಮೂರು ಭಾರತೀಯ ಭಾಷೆಗಳಲ್ಲಿನ ಕೃತಿಗಳ ತೌಲನಿಕ ಅಧ್ಯಯನವನ್ನು ಆಂಗ್ಲ ಭಾಷೆಯಲ್ಲಿ ರಚಿಸುವುದು ಸಾಮಾನ್ಯವಲ್ಲ. ಅಂತಹ ಒಂದು ಅಸಾಮಾನ್ಯ ಕೃತಿ ಪಂಪನ ಕನ್ನಡಿಗರಿಗೂ, ಪೆರುನ್ದೇವನಾರನ ತಮಿಳರಿಗೂ, ನನ್ನಯನ ತೆಲುಗು ಭಾಷಿಕರಿಗೂ ಹೆಚ್ಚು ಪರಿಚಿತವಾಗಲಿಲ್ಲ. ಆಂಗ್ಲ ಭಾಷಾ ಪ್ರೇಮಿಗಳೂ ಇದರೆಡೆಗೆ ಹೆಚ್ಚು ಗಮನ ಹರಿಸಲಿಲ್ಲ. ಈ ಅನುಪಮ ಕೃತಿಯು ಏಕೆ ಪ್ರಸ್ತುತವೆಂದರೆ, ಈ ಕೃತಿಯು ಈಗ ಕನ್ನಡ ಭಾಷೆಗೆ ಅನುವಾದಗೊಂಡು ಬಿಡುಗಡೆಯಾಗಿದೆ. ನಗರದ ಪ್ರತಿಷ್ಠಿತ ವಿಜಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರೊ .ಎಸ್. ಬಿಳಿಗಿರಿವಾಸನ್ ಅವರು ಈ ಕೃತಿಯನ್ನು 'ಮಹಾಭಾರತ ದರ್ಶನ' ಎಂಬ ಹೆಸರಿನಲ್ಲಿ ಅನುವಾದ ಮಾಡಿದ್ದಾರೆ. ತೆಲುಗು, ಆಂಗ್ಲ, ಭಾಷೆಗಳಿಂದ ಕನ್ನಡಕ್ಕೆ ಅನೇಕ ಗ್ರಂಥಗಳನ್ನು ಅನುವಾದ ಮಾಡಿದ ಅನುಭವವು ಇವರಿಗಿದೆ. ಮೂಲಗ್ರಂಥವನ್ನು ಆಳವಾಗಿ ಅಧ್ಯಯನ ಮಾಡಿ ಮೂಲಕ್ಕೆ ಚ್ಯುತಿ ಬಾರದಂತೆ ಪರಿಶ್ರಮದಿಂದ ಅನುವಾದ ಮಾಡಿದ್ದಾರೆ. ಈ ಮೂಲಕ ಅತ್ಯಮೂಲ್ಯ ಕೃತಿಯೊಂದರ ಪರಿಚಯವನ್ನು ಕನ್ನಡಿಗರಿಗೆ ಮಾಡಿಸುವ ಸಾರ್ಥಕ ಕೆಲಸ ಮಾಡಿದ್ದಾರೆ.

ಮಹಾಭಾರತ ದರ್ಶನ

ಭಗವಾನ್ ವ್ಯಾಸರು – ಪೆರುನ್ದೇವನಾರ್ – ಪಂಪ ಈ ಮೂವರ ಮಹಾಭಾರತ ಕೃತಿಗಳ ತೌಲನಿಕ ಅಧ್ಯಯನವನ್ನು ಈ ಕೃತಿ ತೆರೆದಿಡುತ್ತದೆ. ದಕ್ಷಿಣ ಭಾರತದ ಭಾಷೆಗಳಲ್ಲಿನ ಮಹಾಕಾವ್ಯಗಳ ವಿವಿಧ ಆವೃತ್ತಿಗಳನ್ನು ಅಧ್ಯಯನ ಮಾಡಿ ಈ ಕೃತಿ ರಚನೆಯಾಗಿದೆ. ಈ ಕೃತಿಗಳ ಆಕರ್ಷಕ ಪರಿವರ್ತನೆಗಳನ್ನು, ವಿಸ್ಮಯಕಾರಕ ಹೋಲಿಕೆಗಳನ್ನು ಸಮೀಕ್ಷಿಸಲಾಗಿದೆ. ಈ ಕೃತಿಯಲ್ಲಿ ನಾಲ್ಕು ವಿಭಾಗಗಳಿದ್ದು ಮೂರು ವಿಭಾಗಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಭಗವಾನ್ ವ್ಯಾಸರ ಮಹಾಕಾವ್ಯದ ಪರಿವರ್ತನೆಗಳ ಮೇಲೆ ಗಮನ ಕೇಂದ್ರೀಕರಿಸಲಾಗಿದೆ. ತಮಿಳು ಕವಿ ಪೆರುನ್ದೇವನಾರನ 'ಭಾರತ ವೆಣ್ಬ', ಪಂಪನ 'ವಿಕ್ರಮಾರ್ಜುನ ವಿಜಯ' ಇವುಗಳನ್ನು ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

ಪೆರುನ್ದೇವನಾರ್: 9ನೆಯ ಶತಮಾನದ ಭಾರತ ಕವಿ ಪೆರುನ್ದೇವನಾರ್. ಪಂಪನ ಮೇಲೆ ಈ ಕವಿಯ ಪ್ರಭಾವವಿದೆ. ಭಾರತ ವೆಣ್ಬ ಮತ್ತು ವಿಕ್ರಮಾರ್ಜುನ ವಿಜಯಗಳಲ್ಲಿ ಹಲವಾರು ಸಾಮ್ಯತೆಗಳಿವೆ. ಪಂಪ ಭಾರತ ಮತ್ತು ಸಂಸ್ಕೃತ ಭಾರತದ ಅಧ್ಯಯನಗಳು ಹಲವಾರು ನಡೆದಿವೆ. ಆದರೆ ಭಾರತ ವೆಣ್ಬ ಮತ್ತು ಪಂಪ ಭಾರತದ ಸಂಬಂಧಾಂತರಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಈ ಲೇಖನದ ಮುಖ್ಯ ಉದ್ದೇಶ 'ಮಹಾಭಾರತ ದರ್ಶನ' ಕೃತಿಯನ್ನು ಪರಿಚಯಿಸುವುದಾಗಿದೆ. ಪಂಪ ಮತ್ತು ಪೆರುನ್ದೇವನಾರರ ಕೃತಿಗಳಲ್ಲಿನ ಸಾಮ್ಯತೆಗಳನ್ನು, ವೈರುಧ್ಯಗಳನ್ನು ತಿಳಿಸುವುದಾಗಿದೆ. ಪೆರುನ್ದೇವನಾರನ ಕಾಲವನ್ನು ಹಲವಾರು ಸಾಹಿತ್ಯ, ಶಾಸನಗಳ ಮೂಲಗಳಿಂದ ಶೋಧಿಸಿ 815–870 ಎಂಬ ನಿರ್ಣಯಕ್ಕೆ ಬರಲಾಗಿದೆ. ಕವಿಯ ಆಶ್ರಯದಾತ ತೇಟಾರೇರಿಂದ್ರ – 3ನೆಯ ನಂದಿವರ್ಮ, ಪಲ್ಲವ ಅರಸ. ಅರಸನು 'ಪಂಡಿತನಾಲಯನ್' ಆಗಿ ಹಲವಾರು ಪ್ರಸಿದ್ಧ ಕವಿಗಳಿಗೆ ಆಶ್ರಯದಾತನಾಗಿದ್ದನು. ವೈಷ್ಣವ ಧರ್ಮಾವಲಂಬಿಯಾದ ಈತ ಪೆರುನ್ದೇವನಾರನ ಆಶ್ರಯದಾತ.

ಭಾರತ ವೆಣ್ಬ: ವೆಣ್ಬ ತಮಿಳು ಭಾಷೆಯ ಒಂದು ಛಂದಸ್ಸಿನ ಪ್ರಕಾರ. ಅದರಲ್ಲಿ ಪೆರುನ್ದೇವನಾರನು ಭಾರತ ಕೃತಿ ರಚಿಸಿರುವುದರಿಂದ ಅದು ಭಾರತ ವೆಣ್ಬ ಎಂದೇ ಪ್ರಸಿದ್ಧವಾಗಿದೆ. ಮಣಿಪ್ರವಾಳ ಛಂದಸ್ಸು ಈತನೇ ಮೊದಲು ಬಳಸಿದ್ದು ಎಂದು ಕೃತಿಕಾರರು ಹೇಳುತ್ತಾರೆ. ಪೆರುನ್ದೇದೇವನು ವೆಣ್ಬ ಛಂದಸ್ಸನ್ನು ಆರಿಸಿಕೊಂಡ ಕಾರಣವನ್ನು ನೀಡಿದ್ದಾರೆ. ಇದು ತಮಿಳಿನ ಒಂದು ಛಂದಸ್ಸು. ಇದು ಬ್ರಾಹ್ಮಣ ಜಾತಿಯ ಛಂದಸ್ಸಾಗಿದ್ದು ಇದರ ವರ್ಣ ಶ್ವೇತ ವರ್ಣ. ವೆಣ್ಬ ಛಂದಸ್ಸು ಕಠಿಣವೂ ಕ್ಲಿಷ್ಟವೂ ಆಗಿರುವಂತಹದ್ದು. ಸಮರ್ಥ ಕವಿಗಳು ಮಾತ್ರ ಇದನ್ನು ಆರಿಸಿಕೊಂಡು ಕೃತಿ ರಚನೆ ಮಾಡಬಲ್ಲರು. ಅಂತಹ ಛಂದಸ್ಸಿನಲ್ಲಿ ಭಾರತ ವೆಣ್ಬ ರಚಿಸಿದ ಪೆರುನ್ದೇವನಾರ್‌ನಿಗೆ ಅದು ಒಂದು ಪವಿತ್ರ ಗ್ರಂಥ. 'ತಿರುಮಲ್'ನ(ಕೃಷ್ಣ)

ಸ್ತುತಿಗೀತೆ. ಕಾವ್ಯ ನಾಯಕ ವಾಸುದೇವ. ಈ ಭಾರತದ ಕಥೆ ಅವನ ಸುತ್ತಲೇ ಸುತ್ತುತ್ತದೆ. ಆಳ್ವಾರರ ವೈಷ್ಣವ ಧರ್ಮದಿಂದ ಪ್ರಭಾವಿತನಾಗಿ ಭಾರತ ಕತೆಯನ್ನು 'ವಾಸುದೇವ ಕೃಷ್ಣ ಕಥೆಯಾಗಿ ನಿರೂಪಿಸಿದ್ದಾನೆ. ತನ್ನ ಪೂರ್ವದ ಕೃಷ್ಣ ಕಥೆಗಳಿಂದ ಪೆರುನ್ದೇವನಾರ ಕೃಷ್ಣನನ್ನೇ ನಾಯಕನಾಗಿಸಿದರೂ ಮೂಲ ಭಾರತಕ್ಕೆ ಹಲವಾರು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಶ್ವೇತನ ಪ್ರಸಂಗ, ಶಲ್ಯ ಪ್ರಸಂಗ, ಪಾರ್ಥನ ಸಾರಥಿಯಾದುದು, ಕೃಷ್ಣಸಂಧಾನ, ಧರ್ಮರಾಜ ವಿದುರನ ಬಿಲ್ಲಿಗೆ ಹೆದರುವುದು., ಸಹದೇವನಿಗೂ ವಿಶ್ವರೂಪ ದರ್ಶನ, ಕರ್ಣ ಕೃಷ್ಣರ ಪ್ರಸಂಗ, ವೇಣೀ ಸಂಹಾರ, ಭಾನುಮತಿ ನೆತ್ತದ ಪ್ರಸಂಗ, ಮೊದಲಾದ ಅನೇಕ ವಿಚಾರಗಳನ್ನು ಪೆರುನ್ದೇವನಾರ್ ಹೇಳುವುದು ಮೂಲದಿಂದ ಭಿನ್ನವಾಗಿದೆ.

ಪಂಪ: ಪಂಪನ ಹೆಸರು ಕೇಳದ ಕನ್ನಡಿಗರಿಲ್ಲ. ಜನನ ಕ್ರಿ. ಶ. 902 ಸುಂದರ ಬನವಾಸಿ ಕ್ಷೇತ್ರದ ಪ್ರಕೃತಿಯ ಮಡಿಲಲ್ಲಿ ಬೆಳೆದವನು. ಪಂಪ ಜನಿಸಿದ್ದು ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ. ನಂತರ ಅವನ ತಂದೆ ಸೋಮಯಾಜಿಗಳು ಜೈನ ಧರ್ಮ ಸ್ವೀಕರಿಸಿದರು. ಅವನ ಕುಟುಂಬವು ವೆಂಗಿಪಟುವಿನಿಂದ ಬನವಾಸಿಗೆ ಬಂದಿತು. "ಗೌರವವನ್ನು ಸ್ಥಾಪಿಸಿಕೊಂಡಿದ್ದ ಸಾಂಪ್ರದಾಯಿಕ ಕುಟುಂಬದಲ್ಲಿನ ಧಾರ್ಮಿಕ ಪರಿವರ್ತನೆಯು ಕುಟುಂಬವನ್ನು ಅತ್ಯಂತ ಮೆದುಗೊಳಿಸಿರಬಹುದು ಹಾಗೂ ಸ್ಥಳೀಯ ಪ್ರದೇಶದಿಂದ ಬಹಿಷ್ಕರಿಸಿರಬಹುದು."[1] ಬಹಿಷ್ಕಾರ, ಪಿತೂರಿ, ಅವಮಾನಗಳಿಂದಾಗಿ ವಲಸೆ ಬಂದಿರಬಹುದು. ಮೂಲ ಧರ್ಮಕ್ಕಿಂತ ಹೊಸದಾಗಿ ಆಲಂಗಿಸಿಕೊಂಡ ಧರ್ಮ ಹೆಚ್ಚು ಪರಿಣಾಮ ಬೀರಿತ್ತು. ಪಂಪ ಅವನ ಕೃತಿಯಲ್ಲಿ ಜಾತಿಯ ವಿಚಾರ ಹೇಳಿದ್ದಾನೆ. ಮೂಲ ಮಹಾಭಾರತದಲ್ಲಿ ಇದಿಲ್ಲ. ಅರಿಕೇಸರಿ ಪಂಪನ ಆಶ್ರಯದಾತ. ಅರ್ಜುನನಿಗೆ ಸಮೀಕರಿಸಿ ಪಂಪ ಅರಿಕೇಸರಿಯನ್ನು ವಿಕ್ರಮಾರ್ಜುನ ಎನ್ನುತ್ತಾನೆ. ಪಂಪನಿಗೆ ಇದು ಲೌಕಿಕ ಕಾವ್ಯ ಮಾತ್ರ. ಅರಿಕೇಸರಿಯ ವೈಭವೀಕರಣವೇ ಅವನ ಕಾವ್ಯದ ಉದ್ದೇಶ. ಅದಕ್ಕಾಗಿ ಲೋಕೋತ್ತರ ಪರಾಕ್ರಮಿ ಅರ್ಜುನನನ್ನು ಅರಿಕೇಸರಿಗೆ ಹೋಲಿಸಿದ. ಪಂಪನಿಗೆ ದ್ರೌಪದಿಯ ಪಂಚ ವಲ್ಲಭತ್ವ ಸರಿಯೆನಿಸದೆ ಅರ್ಜುನನೊಡನೆ ಮಾತ್ರ ವಿವಾಹ ಮಾಡಿಸುತ್ತಾನೆ. ನಂತರ ಹಲವಾರು ತೊಡಕುಗಳು ಎದುರಾಗುತ್ತವೆ. ಕೀಚಕ ಪ್ರಸಂಗದಲ್ಲಿ ದ್ರೌಪದಿ ತನ್ನ ಅಳಲನ್ನು ಭೀಮನಿಗೇಕೆ ಹೇಳಿದಳು? ತನ್ನ ಪತ್ನಿಯಲ್ಲದ ತಮ್ಮನ ಪತ್ನಿಯನ್ನು ಯುಧಿಷ್ಠಿರ ಹೇಗೆ ಪಣಕ್ಕಿಟ್ಟನು ಇತ್ಯಾದಿ. ಕೊನೆಗೆ ಪಂಪ ಅರ್ಜುನ ಸುಭದ್ರೆಯರಿಗೆ ಪಟ್ಟ ಕಟ್ಟಿ, ಯುಧಿಷ್ಠಿರನಿಗೆ ವೈರಾಗ್ಯ ಮೂಡಿಸಿ ವನವಾಸಕ್ಕೆ ಕಳುಹಿಸಿದ್ದಾನೆ. ಇಲ್ಲಿ ದ್ರೌಪದಿಯ ಉಲ್ಲೇಖವಿಲ್ಲ.

ವ್ಯಾಸರು, ಪೆರುನ್ದೇವ, ಪಂಪನ ಭಾರತಗಳಲ್ಲಿಯ ಕೆಲವು ಪ್ರಸಂಗಗಳು:

ಕುಂತಿಗೆ ಉಪದೇಶಿಸಿದ ಮಂತ್ರ : ಭಗವಾನ್ ವ್ಯಾಸರ ಪ್ರಕಾರ ದೂರ್ವಾಸರು ಕುಂತಿಗೆ ಉಪದೇಶಿಸಿದ್ದು ಒಂದೇ ಮಂತ್ರ. ಅದನ್ನು ಪಠಿಸಿ ಯಾವ ದೇವತೆಯನ್ನು ನೆನೆಯುವಳೋ ಅವರಿಂದ ಅವಳ ಅಭೀಷ್ಟವು ಸಿದ್ಧಿಸುವುದು. ನನ್ನಯನು ಮೂಲಕ್ಕೆ ನಿಷ್ಠನಾಗಿ 'ಒಕ ಮಂತ್ರಂಬು' ಎಂದಿದ್ದಾನೆ. ಇದನ್ನು ಪೆರುನ್ದೇವನಾರನು ಐದು ಮಂತ್ರಗಳನ್ನು ನೀಡಿದರು ಎನ್ನುತ್ತಾನೆ. "ಪೆರುನ್ದೇವನಾರನ ನಂತರ ಐದು ಮಂತ್ರಗಳನ್ನು ಮಾಡಿದವರಲ್ಲಿ ಪಂಪನು ಮೊದಲಿಗನು."[2] ನಂತರ ವಿಲ್ಲಿ, ನನ್ನಯ, ಎಲ್ಲರೂ ಐದು ಮಂತ್ರ ಎಂದೇ ಹೇಳುತ್ತಾರೆ. ಮೂಲದಲ್ಲಿ ಮಹಾಭಾರತದಲ್ಲಿ ಸೂರ್ಯ ಕುಂತಿಯರ ಸಂಯೋಗದಿಂದ ಕರ್ಣ ಜನಿಸಿದನು. ಪೆರುನ್ದೇವನಾರನು ಸೂರ್ಯನು ಅವಳಿಗೆ ತಕ್ಷಣ ಮಗು ನೀಡಿದನು ಎನ್ನುತ್ತಾನೆ. ಪಂಪನೂ ಅದನ್ನೇ ಅನುಸರಿಸಿದ್ದಾನೆ.

ವ್ಯಾಸರು ಶಾಂತಿ ಪರ್ವವನ್ನು ವಿಸ್ತಾರವಾಗಿ, ಪೆರುನ್ದೇವನಾರನು ಉದ್ಯೋಗ ಪರ್ವವನ್ನು, ಪಂಪನು ಆದಿ ಪರ್ವವನ್ನು ಲಂಬಿಸಿ ಹೇಳಿದ್ದಾರೆ. ಪಂಪ, ಪೆರುನ್ದೇವನಾರ್ ಹೇಳುವ ಉಚ್ಚಿಷ್ಟ ಪ್ರಸಂಗ ದುರ್ಯೋಧನನು ಕರ್ಣನ ಎಂಜಲನ್ನು ತಿಂದ ಪ್ರಸಂಗ ಮೂಲದಲ್ಲಿಲ್ಲ. ಮೂಲದಲ್ಲಿ ಭಗವದ್ಗೀತೆ ವಿಸ್ತಾರವಾಗಿದೆ. ಪೆರುನ್ದೇವನಾರ್ ಕೆಲವು ವೆಣ್ಬ ಕೆಲವು ಗದ್ಯ ಸಾಲು ಹಾಗೂ ಪಂಪ 1–2 ಪದ್ಯಗಳಲ್ಲಿ ಮುಗಿಸಿದ್ದಾರೆ. ಪಂಪನ ಕರ್ಣ ಹಾಗೂ ಪೆರುನ್ದೇವನಾರನ ಕರ್ಣ ಇಬ್ಬರೂ ಒಂದೇ ರೀತಿ ಚಿತ್ರಿಸಲ್ಪಟ್ಟಿದ್ದಾರೆ.

ಭಾನುಮತಿಯ ನೆತ್ತದ ಪ್ರಸಂಗ: ಪಂಪ ಹೇಳುವ 'ಭಾನುಮತಿ ನೆತ್ತ'ದ ಪ್ರಸಂಗವು ಮೂಲ ಮಹಾಭಾರತದಲ್ಲಿ ಇಲ್ಲ. ಇದು ಪೆರುನ್ದೇವನದೇ ಕಲ್ಪನೆ. ಕೃಷ್ಣ ಸಂಧಾನಕ್ಕೆ ಬಂದಾಗ ಕರ್ಣನನ್ನು ಮಾತನಾಡಿಸಿ, ಭೇದೋಪಾಯದಿಂದ ಅವನ ಜನ್ಮ ವೃತ್ತಾಂತವನ್ನು ಅರುಹುತ್ತಾನೆ. ಆಗ ಕರ್ಣ ದುರ್ಯೋಧನ ಮತ್ತು ತನ್ನ ಸ್ನೇಹದ ಅಗಾಧತೆಯನ್ನು ಹೇಳುತ್ತಾನೆ. ತನ್ನನ್ನು ಅರಸನನ್ನಾಗಿಸಿ, ತಮ್ಮಂದಿರಿಗಿಂತಲೂ ಅಧಿಕ ಪ್ರೀತಿ ತೋರುತ್ತ ತನ್ನ ಎಚ್ಚಿಲ್ (ಎಂಜಲು) ತಿನ್ನುವಷ್ಟರ ಮಟ್ಟಿಗೆ ಸ್ನೇಹ ತೋರುವ ಒಡೆಯನನ್ನು ಹೇಗೆ ತ್ಯಜಿಸಿ ಪಾಂಡವರೊಡನೆ ಸೇರಲಿ ಎಂದು ಹೇಳುತ್ತಾನೆ. ತಮ್ಮಿಬ್ಬರ ಸ್ನೇಹದ ಆಳವನ್ನು ಕೃಷ್ಣನಿಗೆ ತಿಳಿಸಲು ನೆತ್ತದ ಪ್ರಸಂಗವನ್ನು ನಿರೂಪಿಸುತ್ತಾನೆ. ಕರ್ಣ ಭಾನುಮತಿಯರು ನೆತ್ತವಾಡಿ ಭಾನುಮತಿ ಸೋಲುತ್ತಾಳೆ. ಕರ್ಣ ಸೋತದಕ್ಕಾಗಿ ಅವಳ ಆಭರಣವನ್ನು ಬಲವಂತವಾಗಿ ಕಿತ್ತುಕೊಳ್ಳುತ್ತಾನೆ. ಪೆರುನ್ದೇವನು ಹೇಳುವಂತೆ ಅವಳ ಕಂಕಣವು ಬಿದ್ದು ಅಮೂಲ್ಯ ರತ್ನಗಳು ಚಲ್ಲಾಪಿಲ್ಲಿಯಾಗಿ ಬೀಳುತ್ತವೆ. ಇದನ್ನು ಕಂಡ ದುರ್ಯೋಧನ ನಗುತ್ತಾ ವಜ್ರಗಳನ್ನು ಆಯ್ದುಕೊಳ್ಳಲು ಸಹಾಯ ಬೇಕೆ ಎನ್ನುತ್ತಾನೆ. ಇಲ್ಲಿ ದುರ್ಯೋಧನನ

ರಾಣಿಯ ಹೆಸರು ಲಕ್ಷಣೈ. ಪಂಪ ಭಾನುಮತಿಯ ಕುತ್ತಿಗೆಯಲ್ಲಿದ್ದ ಮುತ್ತಿನ ಹಾರವನ್ನು ಕರ್ಣ ಹಿಡಿದು ಎಳೆದಾಗ ಅದು ಹರಿದು ಮುತ್ತು ಚಲ್ಲಾಪಿಲ್ಲಿಯಾಯಿತು ಎನ್ನುತ್ತಾನೆ.

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆ ಯೇವಮಿಲ್ಲದಿವನಾಯ್ತುದೊ ತಪ್ಪದೆ ಪೇಱಿಮೆಂಬ ಭೂ
ಪೊತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ ॥ – ಪಂಪ ಭಾರತ

ದುರ್ಯೋಧನನು ನಗುತ್ತಾ ಮುತ್ತುಗಳನ್ನು ಆಯ್ದು ಕೊಡಲೇ ಎಂದನು. ಕೃಷ್ಣನಿಗೆ ಹೀಗೆ ಹೇಳಿದ ಕರ್ಣ ತನ್ನ ಸ್ವಾಮಿಯ ಪರ ವಹಿಸುತ್ತಾನೆ. ತನ್ನ ಆತ್ಮೀಯ ಗೆಳೆಯನಾದ ದುರ್ಯೋಧನನ ಪ್ರೀತಿ, ವಿಶ್ವಾಸಗಳಿಗೆ ದ್ರೋಹ ಬಗೆಯಲಾರೆ ಎನ್ನುತ್ತಾನೆ.

ಧ್ವಜಗಳ ಲಾಂಛನ: ವೇದವ್ಯಾಸರ ಕಥೆಯಲ್ಲಿ ದುರ್ಯೋಧನ ನಾಗಕೇತನ. ನಾಗ ಪದಕ್ಕೆ ಹಾವು, ಸರ್ಪ, ಆನೆ ಎಂಬ ಅರ್ಥಗಳಿವೆ. ವ್ಯಾಸರ ದುರ್ಯೋಧನ ಹಸ್ತಿಕೇತನ ಅಥವಾ ಗಜಕೇತನ.

ಯಥಾ ಶ್ವೇತೋ ಮಹಾನಾಗೋ ದೇವರಾಜ ಚಮೂಮ್ ಯಥಾ
ನಾಗೋ ಮಣಿಮಯೋ ರಾಜ್ಞೋ ಧ್ವಜಃ ಕನಕ ಸಂವೃತಂ
ದ್ರೋಣ ಪರ್ವ 105–26

ಇಂದ್ರನ ಸೈನ್ಯಕ್ಕೆ ಶ್ವೇತನಾಗವು ಘನತೆ ತರುವಂತೆ, ದುರ್ಯೋಧನನ ಸೈನ್ಯಕ್ಕೆ ವಜ್ರದಲ್ಲಿ ಕೆತ್ತಿರುವ ನಾಗಧ್ವಜವು ಶೋಭೆಯನ್ನು ತರುತ್ತದೆ. "ಯಾವಾಗ ಇಂದ್ರನ ಶ್ವೇತ ಗಜಕ್ಕೆ ಹೋಲಿಸಲಾಯಿತೋ ಖಂಡಿತವಾಗಿ ಅದೊಂದು ಗಜ ಲಾಂಛನ, ಯಾರೂ ಸಹಾ ಹಾವನ್ನು ಗಜಕ್ಕೆ ಅದರಲ್ಲಿಯೂ ಶ್ವೇತ ಗಜಕ್ಕೆ ಹೋಲಿಸುವುದಿಲ್ಲ."[3] ದುರ್ಯೋಧನ ನಾಗಪುರಾಧೀಶ, ನಾಗಕೇತನ. ಭೀಮ ಆ ನಾಗನ ಬೇಟೆಗಾರ. ಭೀಮನ ಧ್ವಜ ಲಾಂಛನ ಸಿಂಹ. ಸಿಂಹ ಆನೆಗಳು ಪರಸ್ಪರ ವೈರಿಗಳು. ದುರ್ಯೋಧನನೆಂಬ ಆನೆಗೆ ಸಿಂಹನಾದವನು ಭೀಮಸೇನ. ಭೀಮಸೇನ ದುರ್ಯೋಧನರು ಸಿಂಹ ಆನೆಗಳಂತೆ ಶತೃತ್ವವುಳ್ಳವರು. ಸಿಂಹ ಆನೆಯನ್ನು ಕೊಲ್ಲುತ್ತದೆ. ಅವರ ಧ್ವಜ ಲಾಂಛನಗಳು ಅದನ್ನೇ ಪ್ರತಿನಿಧಿಸುತ್ತವೆ.

ಸಂಸ್ಕೃತ ವಿದ್ವಾಂಸರನ್ನು ಚಕಿತಗೊಳಿಸಿದ ಪ್ರಯೋಗ ನಾಗ ಧ್ವಜ. ಮೂಲ ಮಹಾಭಾರತದಲ್ಲಿ ಎಲ್ಲೆಡೆಯೂ ದುರ್ಯೋಧನ ನಾಗಕೇತನ ಎಂದಿದೆ. ಇದನ್ನು ಪೆರುನ್ದೇವನಾರ್ ಸರ್ಪ ಧ್ವಜ ಎಂದು ಬಿಟ್ಟಿದ್ದಾನೆ. ನಂತರದಲ್ಲಿ ಅವನನ್ನು ಅನುಸರಿಸಿ ಪಂಪ, ರನ್ನ, ಕುಮಾರವ್ಯಾಸ, ವಿಲ್ಲಿ ಎಲ್ಲರೂ ಸರ್ಪಧ್ವಜ ಎಂದೇ ಬಳಸುತ್ತಾರೆ. ಪೆರುನ್ದೇವನಾರನು ನಾಗಧ್ವಜವನ್ನು ಸರ್ಪಧ್ವಜ ಎಂದು ಸ್ವೀಕರಿಸಿದ್ದಾನೆ. ನಂತರದ ಎಲ್ಲರೂ ಉರಗಪತಾಕ ಎಂದೇ ಭಾವಿಸಿ ಸ್ವೀಕರಿಸಿದ್ದಾರೆ.

ದ್ರೌಪದಿಯ ಶಪಥ: ವ್ಯಾಸ ಭಾರತದಲ್ಲಿ ದ್ರೌಪದಿ ದುರ್ಯೋಧನ ದುಶ್ಯಾಸನರ ಸಂಹಾರವಾಗುವವರೆಗೆ ಮುಡಿಯನ್ನು ಕಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಲಿಲ್ಲ. ಭಟ್ಟನಾರಾಯಣ ವೇಣೀ ಸಂಹಾರದಲ್ಲಿ ಈ ವಿಚಾರ ಸೃಷ್ಟಿಸಿದ್ದಾನೆ. ಅದನ್ನು ಅನುಸರಿಸಿ ಪೆರುನ್ದೇವನು ದ್ರೌಪದಿಯಿಂದ ಪ್ರತಿಜ್ಞೆ ಮಾಡಿಸಿದ್ದಾನೆ. ಪಂಪನ ವಿಚಾರಕ್ಕೆ ಬಂದರೆ, ಅಲ್ಲಿ ದ್ರೌಪದಿಯ ವಸ್ತ್ರಾಹರಣವಾಗುವುದಿಲ್ಲ. ಏಕೆಂದರೆ ಇದು ಅವನ ಆಶ್ರಯದಾತನಿಗೆ ಅವಮಾನವಾಗುವ ಪ್ರಸಂಗ. ಹಾಗಾಗಿ ದುಶ್ಯಾಸನನು ಅವಳ ಮುಡಿಗೆ ಕೈ ಹಾಕುತ್ತಾನೆ. ಅವಳಿಂದ ಪ್ರತಿಜ್ಞೆ ಮಾಡಿಸುತ್ತಾನೆ

ವ್ಯಾಸರು ಹೇಳುವ ಮಾಂಡವ್ಯ ಉಪಾಖ್ಯಾನ ಪಂಪ ಪೆರುನ್ದೇವನಾರರಲ್ಲಿಲ್ಲ. ಹೀಗೆ ಕಥೆಯಲ್ಲಿ ಹಲವಾರು ಪ್ರಸಂಗಗಳನ್ನು ಕೈಬಿಟ್ಟಿರುವುದು ಹಾಗೂ ಸೇರಿಸಿರುವುದು ಕಂಡು ಬರುತ್ತದೆ. ಪ್ರಸ್ತುತ ಈ ಕೃತಿಯನ್ನು ಓದುತ್ತಾ ಹೋದರೆ ಮೂಲದಲ್ಲಿನ ಕತೆಯನ್ನು ಹೇಗೆಲ್ಲಾ ಬದಲಾವಣೆಗೆ ಒಳಪಡಿಸಿರುವರೆನ್ನುವುದು ತಿಳಿಯುತ್ತದೆ. ಪಂಪ ಪೆರುನ್ದೇವನಾರನಿಂದ ಸ್ಫೂರ್ತಿ ಪಡೆದು ಕಾವ್ಯ ರಚಿಸಿರಬಹುದೆಂಬ ವಿಚಾರ ಮೊದಲಿನಿಂದಲೂ ಇದೆ. ಪೆರುನ್ದೇವನಾರನ ನಾಯಕ ಕೃಷ್ಣ ಆದರೆ ಪಂಪನ ನಾಯಕ ಅರ್ಜುನ. ಕೃಷ್ಣನ ಪಾತ್ರಕ್ಕೆ ಅಷ್ಟು ಮಹತ್ವವಿಲ್ಲ.

ಪಂಪನ ಮೇಲೆ ಪೆರುನ್ದೇವನಾರನ ಪ್ರಭಾವ:

ಪೆರುನ್ದೇವನ ಕಾಲ 9 ನೆಯ ಶತಮಾನ. ಪಂಪ ತಮಿಳುನಾಡಿನಿಂದ ಬಂದವನು. ಪಂಪನಿಗೆ ಪೆರುನ್ದೇವನ ವೆಣ್ಬವನ್ನು ನೋಡಲು ಸಾಕಷ್ಟು ಅವಕಾಶಗಳಿದ್ದವು. ಭಾರತವೆಣ್ಬ ಪಂಪನಿಗಿಂತ ಒಂದು ಶತಮಾನ ಹಿಂದಿನದು. ಪಂಪ ಈ ಕಾವ್ಯವನ್ನು ಅಧ್ಯಯನ ನಡೆಸಿರಬಹುದು. ಪಂಪನು ಪೆರುನ್ದೇವನಿಂದ ಪ್ರಭಾವಿತನಾಗಿದ್ದನು. "ಇದನ್ನು ಬೆಂಬಲಿಸಲು ಅಸಂಖ್ಯಾತವಾದ ರಾಜಕೀಯ ಹಾಗೂ ಸಾಹಿತ್ಯಿಕ ಸಾಕ್ಷ್ಯಾಧಾರಗಳಿವೆ"[4] ಪೆರುನ್ದೇವನು ಕೃಷ್ಣನನ್ನು ವೈಭವೀಕರಿಸಿದರೆ, ಪಂಪನು ಅರ್ಜುನನನ್ನು ಶಾ ವೈಭವೀಕರಿಸಿದನು. ನಿರೂಪಣಾ ಶೈಲಿಯನ್ನು ಹಾಗೆಯೇ ಅನುಸರಿಸಿದನು. ಪಂಪ ಭಗವದ್ಗೀತೆ, ಸನತ್ಸುಜಾತೀಯ ಮೊದಲಾದ ಕೆಲವು ಭಾಗಗಳನ್ನು ತ್ಯಜಿಸಿದ್ದಾನೆ. ಪಂಪ ತನ್ನ ಕೃತಿಯಲ್ಲಿ ಜಾತಿಯ ವಿಚಾರವನ್ನು ಅನ್ವೇಷಿದ್ದಾನೆ. ಕುಟುಂಬದ ವಾತಾವರಣದ ಸೂಕ್ಷ್ಮತೆ, ಹೊಸದಾಗಿ ಅಪ್ಪಿಕೊಂಡ ಧರ್ಮದ ಪರಿಣಾಮ ಅವನನ್ನು ಹೆಚ್ಚು ಪ್ರಗತಿಪರನನ್ನಾಗಿಸಿರಬೇಕು. ಪಂಪ ಭಾರತ ಬರೆದು 'ಬೆಳಗುವೆನಿಲ್ಲಿ ಲೌಕಿಕಮಂ' ಎಂದನು. ಈ ಲೌಕಿಕಕ್ಕೆ ಹಲವು ಅರ್ಥಗಳಿವೆ. "ಪಂಪನ ಲೌಕಿಕವೆಂದರೆ ಜಾತ್ಯಾತೀತ ಅಂದರೆ ಆರ್ಷವಿಲ್ಲದ ಅಥವಾ ಶಾಸ್ತ್ರೀಯವಲ್ಲದ ಎಂದು ನಾನು ಭಾವಿಸುತ್ತೇನೆ."[5] ಪೆರುನ್ದೇವನು ವ್ಯಾಸರ ಅಭಿಮಾನಿಯಾಗಿದ್ದರೂ ಅವರ ಮೂಲ

ಕೃತಿಗೆ ಅವನು ನಿಷ್ಠಾವಂತನಾಗಿರಲಿಲ್ಲ. ತನ್ನದೇ ಆದ ಹಲವಾರು ಬದಲಾವಣೆಗಳನ್ನು ಮಾಡಿಕೊಂಡನು. ಹಾಗೆ ಪಂಪನೂ ಅದೇ ವಿಧಾನವನ್ನು ಅನುಸರಿಸಿದನು.

ದಕ್ಷಿಣ ಭಾರತದ ಮಹಾಭಾರತ ಕತೆಗಳ ಒಂದು ತೌಲನಿಕ ಅಧ್ಯಯನದ ಈ ಕೃತಿ ಸಂಗ್ರಹ ಯೋಗ್ಯವಾಗಿದ್ದು ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಇಂತಹ ಇನ್ನೂ ತೌಲನಿಕ ಅಧ್ಯಯನಗಳಿಗೆ ಅವಕಾಶ ಇದೆ ಎಂಬುದನ್ನು ಇದು ತಿಳಿಸುತ್ತದೆ. ಇಂತಹ ಅತ್ಯುತ್ತಮ ಕೃತಿಯನ್ನು ಆಂಗ್ಲ ಭಾಷೆಯಲ್ಲಿ ರಚಿಸಿದ ಶ್ರೀಗಳಿಗೆ ಮತ್ತು ಅದನ್ನು ಅಚ್ಚುಕಟ್ಟಾಗಿ ಅನುವಾದ ಮಾಡಿ ಕೃತಿಯ ಆನಂದವನ್ನು ಕನ್ನಡಿಗರು ಹೊಂದಲು ಉಪಕರಿಸಿದ ಪ್ರೊ. ಎಸ್ ಬಿಳಿಗಿರಿವಾಸನ್ ಅವರಿಗೆ ನಮನಪೂರ್ವಕ ಅಭಿನಂದನೆಗಳು. ಈ ಕೃತಿಯು ಅನುವಾದದಂತೆ ಅನ್ನಿಸದೆ ಸ್ವತಂತ್ರ ಕೃತಿಯಂತೆ ಭಾಸವಾಗುವ ರೀತಿಯಲ್ಲಿ ಅನುವಾದಕರು ಕಟ್ಟಿ ಕೊಟ್ಟಿದ್ದಾರೆ. ಮಹಾಭಾರತ ದರ್ಶನ ಗ್ರಂಥವು ಎಲ್ಲ ಸಾಹಿತ್ಯಾಭಿಮಾನಿಗಳು, ವಿದ್ಯಾರ್ಥಿಗಳು ಹಾಗೂ ಕನ್ನಡ ಅಧ್ಯಾಪಕರು ಅಗತ್ಯವಾಗಿ ಗಮನಿಸಬೇಕಾದ ಕೃತಿಯಾಗಿದೆ.

ಅಡಿ ಟಿಪ್ಪಣಿ:

1. ಮಹಾಭಾರತ ದರ್ಶನ, ಇಂ. ಮೂಲ ಡಾ. ಕಂಬಾಲೂರು ವೆಂಕಟೇಶಾಚಾರ್ಯ – ಕನ್ನಡಕ್ಕೆ., ಪ್ರೊ. ಎಸ್. ಬಿಳಿಗಿರಿವಾಸನ್, ಮಹಿಮಾ ಪ್ರಕಾಶನ, ಮೈಸೂರು 2025, ಪುಟ 198
2. ಅದೇ ಪುಟ 228
3. ಅದೇ ಪುಟ 191
4. ಅದೇ ಪುಟ 192
5. ಅದೇ ಪುಟ 208

ಪರಾಮರ್ಶನ ಗ್ರಂಥಗಳು:

1. ಮಹಾಭಾರತ ದರ್ಶನ, ಇಂ. ಮೂಲ ಡಾ. ಕಂಬಾಲೂರು ವೆಂಕಟೇಶಾಚಾರ್ಯ – ಕನ್ನಡಕ್ಕೆ., ಪ್ರೊ. ಎಸ್. ಬಿಳಿಗಿರಿವಾಸನ್, ಮಹಿಮಾ ಪ್ರಕಾಶನ, ಮೈಸೂರು 2025,
2. ಮಹಾಭಾರತ, ಭಾರತ ದರ್ಶನ ಮುದ್ರಣಾಲಯ,
3. ಪಂಪ ಭಾರತ, ಕೆ. ವಿ. ಪುಟ್ಟಪ್ಪ, ಜನಪ್ರಿಯ ಸಾಹಿತ್ಯ ಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ 1977

***

ಬೆಂಕಿ ಬೆಡಗು ಕೃತಿಯ ಅನನ್ಯತೆ

(ರಂಗಕಲಾವಿದೆ, ನಟಿ ಉಮಾಶ್ರೀಯವರ ಆತ್ಮಕಥೆ)

ಡಾ. ರಾಧಾ ಎಸ್. ಆರ್. [ರಾಧಾ ಆರ್. ನಾಡಿಗ್]
ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯ
ಬಸವನಗುಡಿ, ಬೆಂಗಳೂರು – 560061

ರಂಗಕಲಾವಿದೆ, ನಟಿ ಉಮಾಶ್ರೀಯವರ ಆತ್ಮಕಥೆ ಬೆಂಕಿ ಬೆಡಗು ಕನ್ನಡ ರಂಗಭೂಮಿ ಕಲಾವಿದೆಯರ ಆತ್ಮಕತೆಗಳಲ್ಲಿ ವಿಶಿಷ್ಟವಾದುದ್ದು. ಆಸಕ್ತಿ ತಾಳಿದರೆ ಉಮಾಶ್ರೀಯವರಂತಹ ಸಾಮಾನ್ಯರೂ ಕೂಡ ರಂಗದ ಎತ್ತರದ ಕಲಾವಿದೆಯಾಗಬಲ್ಲರೆಂಬುದಕ್ಕೆ ಅವರ ಬದುಕಿನ ಸಾಕ್ಷಿಯಾಗಿರುವ ವಿವರಗಳು ಅವರ ಆತ್ಮಕಥೆಯ ವಿವರಗಳಲ್ಲಿ ಮೂಡಿಬಂದಿದೆ. ರಂಗಭೂಮಿಯಲ್ಲಿ ರಂಗಕಲಾವಿದೆಯರ ನಟನೆಗೂ ಅವರ ವೈಯಕ್ತಿಕ ಬದುಕಿಗೂ ಅಜಗಜಾಂತರ ವ್ಯತ್ಯಾಸಗಳಿರುತ್ತವೆಂಬ ಸತ್ಯ ಇವರ ಆತ್ಮಕಥೆಯ ಅಧ್ಯಯನದಿಂದ ದೊರೆಯುತ್ತದೆ. ಅವರ ಬದುಕು ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ, ಹತ್ತಿರದಿಂದ ನೋಡಿದಾಗ ಅನೇಕ ಅಗ್ನಿದಿವ್ಯಗಳನ್ನು ಕಷ್ಟಗಳನ್ನು ಹಾದಿರುವ ವಿವರಗಳು ತಿಳಿಯುತ್ತವೆ. ಅನೇಕ ಕಷ್ಟಗಳು ಅವರನ್ನು ಬೆನ್ನಟ್ಟಿ ಬಂದರೂ ಅವುಗಳನ್ನೆಲ್ಲಾ ಅವರು ಧೈರ್ಯದಿಂದ ಎದುರಿಸಿದ ರೀತಿಯನ್ನು ಕಂಡು ಹೆಮ್ಮೆ ಎನಿಸುತ್ತದೆ. ರಂಗಭೂಮಿಯಲ್ಲಿ ನಾಟಕ ನೋಡುವಾಗ ಪ್ರೇಕ್ಷಕರಿಗೆ ಸ್ಟೇಜಿನ ಮೇಲಿನ ಬಣ್ಣ ಬಣ್ಣದ ಮಾಯಾಲೋಕ ಮಾತ್ರವೇ ಕಾಣುತ್ತದೆ. ಆದರೆ ಸ್ಟೇಜಿನ ಹಿಂದಿನ, ತೆರೆಮರೆಯಲ್ಲಿನ ರಂಗನಟಿಯರ ಬದುಕಿನ ಕಟುವಾಸ್ತವಗಳೇನು? ಎಂಬುದು ತಿಳಿಯುವುದಿಲ್ಲ. ಆದರೆ ರಂಗಭೂಮಿಯ ಕಲಾವಿದೆಯರ ಆತ್ಮಕಥೆಗಳು ಅವರ ಬದುಕಿನ ಕಟು ವಾಸ್ತವದ ದರ್ಶನ ಮಾಡಿಸುತ್ತವೆ.

ಅಂದಿನ ಸಮಕಾಲೀನ ರಂಗಭೂಮಿಯ ಕಲಾವಿದರಲ್ಲಿ ವಿಶೇಷವಾಗಿ ಮಹಿಳಾ ಕಲಾವಿದೆಯರು ಅನುಭವಿಸಿದ ತಲ್ಲಣಗಳು, ಹೆಣ್ಣು ಎಂಬ ಕಾರಣಕ್ಕಾಗಿಯೇ ಎದುರಿಸಿದ

ತೊಂದರೆಗಳು, ಸಮಾಜದ ಸಂಶಯ ದೃಷ್ಟಿಯಿಂದ ಅವರ ಸುತ್ತ ಹುಟ್ಟಿಕೊಳ್ಳುವ ಊಹಾಪೋಹಗಳು, ಇದರಿಂದ ಅಂತಹವರ ಬದುಕಿನಲ್ಲಿ ಎದುರಾಗುವ ಪಲ್ಲಟಗಳನ್ನು ಈ ಆತ್ಮಕಥೆ ಬಿತ್ತರಿಸುತ್ತಿದೆ. ಹಿಂಸೆ ತೋರಿದವರಿಗೆ, ನೋಯಿಸಿದವರಿಗೆ, ಪ್ರತೀಕಾರ ಮಾಡಿದವರಿಗೆ, ದಯೆ ತೋರಿಸಿದವರು. ನಂಬಿಸಿ ಮೋಸ ಮಾಡಿದವರನ್ನೂ ನಗೆಸೂಸಿ ಕ್ಷಮಿಸಿದವರು. ಜೀವನದ ಕಡು ಕಷ್ಟಗಳಲ್ಲಿ ಡಿ.ವಿ.ಜಿ.ಯವರು ಕಗ್ಗದಲ್ಲಿ ಹೇಳುವಂತೆ, ಸಂದರ್ಭಾನುಸಾರ ಕಲ್ಲಿನಂತೆ ಗಟ್ಟಿ ಮನಸ್ಸು ಮಾಡಿಕೊಂಡು ಬದುಕಿದವರು. ಅನೇಕರು ಪ್ರಚಾರ ಪಡೆಯದೆ, ಪ್ರಚಾರದಿಂದ ದೂರ ಉಳಿದವರು.

ಈ ಆತ್ಮಕಥೆಯಲ್ಲಿ ನಿರೂಪಿತವಾಗಿರುವ ಅವರ ವೈಯಕ್ತಿಕ ಬದುಕಿನ ವಿವರಗಳನ್ನು ಸ್ಥೂಲವಾಗಿ ಗಮನಿಸಿದರೆ ಹಲವು ಇವರ ಬಾಳಿನಲ್ಲಿ ಬೆಲ್ಲಕ್ಕಿಂತಾ ಬೇವಿನ ಅಂಶಗಳೇ ಹೆಚ್ಚಾಗಿವೆ. ಅವರ ಬದುಕಿನಲ್ಲಿ ಬೆಲ್ಲದ ಅಂಶಗಳು ಇಲ್ಲವೇ ಇಲ್ಲ ಎಂದರ್ಥವಲ್ಲ. ಆದರೆ ಅವರ ಬದುಕಿನ ಕಹಿ ಘಟನೆಗಳಿಗೆ, ನೋವುಗಳಿಗೆ ಹೋಲಿಸಿದರೆ ಸಿಹಿಯ ಕಡಿಮೆಯಾಗಿವೆ ಎನಿಸುತ್ತದೆ. ರಂಗಬದುಕಿನ ಎಲ್ಲಾ ಸಾಧ್ಯತೆ ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸಿ ರಂಗಭೂಮಿಯ ಬದುಕನ್ನು ಪ್ರೀತಿಸಿದ್ದು ಇವರ ಬದುಕಿನ ಧನಾತ್ಮಕ ಅಂಶವಾಗಿದೆ. ಈ ಆತ್ಮಕಥೆಯಲ್ಲಿ ಮತ್ತೆ ಮತ್ತೆ ಕೇಳಿಬರುವ ದೀಕ್ಷಾ ಮಂತ್ರವೆಂದರೆ ತಾನು ಬಾಳಬೇಕು, ಬದುಕಬೇಕು ಎಂಬುದು. ಕನ್ನಡದ ಮಹಿಳಾ ಆತ್ಮಕಥನಗಳ ಚರಿತ್ರೆ ಅದು ಮಹಿಳಾ ಬದುಕಿನ ಹಲವು ಅದ್ಭುತ ಆಯಾಮಗಳನ್ನು ಶೋಧಿಸುತ್ತದೆ. ಈ ಆತ್ಮಕಥೆಯ ಬಹಳ ಮುಖ್ಯವಾದ ಗುಣ ಎಂದರೆ ಅದು ಪ್ರೀತಿಯ ಹಲವು ನೆಲೆಗಳನ್ನು ಶೋಧಿಸುತ್ತದೆ. ಬಹಳ ಪ್ರಾಮಾಣಿಕವಾಗಿ ಯಾವುದೇ ರೀತಿಯ ಆರೋಪ–ಪ್ರತ್ಯಾರೋಪಗಳಿಲ್ಲದೆ, ಆರೋಪ ಮಾಡಿದ ಆ ಎಲ್ಲವನ್ನೂ ಮರುನಿರ್ವಚನಕ್ಕೆ ಒಡ್ಡಿಕೊಳ್ಳತಕ್ಕಂತಹ ಸ್ಥಿತಿಯಲ್ಲಿ ಅದು ಮುಂದುವರಿಯುತ್ತವೆ. ಅದು ಇದರ ಬಹಳ ದೊಡ್ಡ ಗುಣ. ಭಾರತೀಯ ಸಮಾಜದಲ್ಲಿ ಮಹಿಳೆಯರು ಆತ್ಮಕಥೆಗಳನ್ನು ಬರೆಯುವುದೇ ಕಷ್ಟದ ಕೆಲಸ. ರಂಗನಟಿಯರು ತಮ್ಮ ಬದುಕಿನ ವಿವರಗಳನ್ನು ಹೇಳಿ ಬರೆಸಿದರೆ ಅದನ್ನು ಪ್ರಕಟಿಸುವಾಗ ಬಿಕ್ಕಟ್ಟನ್ನು ಅನುಭವಿಸುವುದುಂಟು. ಉಮಾಶ್ರೀ ಅವರ 'ಬೆಂಕಿ ಬೆಡಗು' ಕೃತಿ ಕೂಡ ಬಿಕ್ಕಟ್ಟನ್ನು ಎದುರಿಸಿದ್ದರಿಂದ ಅದು ಮತ್ತೆ ಮರುಮುದ್ರಣಗೊಂಡಿಲ್ಲ.

ಬಹುತೇಕ ರಂಗಕಲಾವಿದೆಯರು ಬದುಕಿನಲ್ಲಿ ಎದುರಿಸಿದ ಆಕಸ್ಮಿಕಗಳಿಂದ ಹೊಟ್ಟೆ ಪಾಡಿಗಾಗಿ ಬಣ್ಣ ಬಳಿದುಕೊಂಡವರು. ಆದರೆ ರಂಗಭೂಮಿಗೆ ಬಂದ ನಂತರ ಸಾಧಿಸಿದ ಕಾರ್ಯ ಮಾತ್ರ ಬೆಟ್ಟದಷ್ಟು ಎಂಬುದನ್ನು ಅವರ ಆತ್ಮಕಥೆಗಳು ತಿಳಿಸುತ್ತವೆ. ಬಣ್ಣ ಬಳಿದ ಅನೇಕ ಕಲಾವಿದೆಯರು ಆರಂಭದಲ್ಲಿ ಕಲೆಯ ಸಾಧನಾ ಪಥದಲ್ಲಿ ಸಿದ್ಧಿಯನ್ನು ಕಾಣಬೇಕೆಂದು ಬಂದವರಲ್ಲ. ಆಗ ಈ ರಂಗಕಲಾವಿದೆಯರಿಗೆ ಹೊಟ್ಟೆ ತುಂಬಿಸಿಕೊಳ್ಳಲು ರಂಗಭೂಮಿಯನ್ನು ಹೊರತುಪಡಿಸಿದರೆ ಅನ್ಯ ದಾರಿಗಳಿರಲಿಲ್ಲ. ರಂಗಭೂಮಿಗೆ ಇವರು ಪ್ರವೇಶಿಸುವುದನ್ನು ಯಾರೂ ಪ್ರೋತ್ಸಾಹಿಸಲಿ, ಬಿಡಲಿ ತಮ್ಮ ಕುಟುಂಬದವರ ಅನ್ನದ ಅವಶ್ಯಕತೆಯನ್ನು

ಅರಿತುಕೊಂಡು ತಮ್ಮೆಲ್ಲಾ ಕನಸುಗಳಿಗೆ ತಿಲಾಂಜಲಿಯಿತ್ತು, ತಮ್ಮ ಸುಖವನ್ನು ಕೊಂದುಕೊಂಡು ತಮ್ಮ ಮಕ್ಕಳ ಜವಾಬ್ದಾರಿಯನ್ನು ಹೊತ್ತ ವಿವರಗಳು ಪದರು ಪದರಾಗಿ ಇವರ ಆತ್ಮಕಥೆಯಲ್ಲಿ ತೆರೆದುಕೊಳ್ಳುತ್ತವೆ. ಬದುಕಿನ ಪ್ರತಿಯೊಂದು ಹಂತದಲ್ಲೂ ತಮ್ಮ ಸುಖಗಳನ್ನು ತ್ಯಜಿಸಿ ಮಕ್ಕಳಿಗೋಸ್ಕರ ತ್ಯಾಗದಲ್ಲೇ ತಮ್ಮ ಏಳಿಗೆಯನ್ನು ಕಂಡಿದ್ದಾರೆ.

ಇವರ ಆರಂಭದ ಬದುಕು ಬಡತನದಿಂದ, ಜಂಜಾಟಗಳಿಂದ ಕೂಡಿದ್ದರೂ ಇಚ್ಛಾಶಕ್ತಿಯಿಂದ, ಇತ್ಯಾತ್ಮಕ ಸಂಕಲ್ಪದಿಂದ ಮತ್ತು ಪ್ರಯತ್ನದ ಫಲದಿಂದ ಧನಾತ್ಮಕವಾಗಿ ಪರಿವರ್ತಿಸಿಕೊಳ್ಳಬಲ್ಲರೆಂಬುದನ್ನು ಈ ಆತ್ಮಕಥೆ ದಾಖಲಿಸುತ್ತದೆ. ತಮ್ಮನ್ನು ಕೆಟ್ಟದಾಗಿ ನಡೆಸಿಕೊಂಡ ಜನಗಳ ಬಗ್ಗೆ, ವ್ಯವಸ್ಥೆಯ ಬಗ್ಗೆ ಸ್ವಲ್ಪ ಮಾತ್ರವು ಕಹಿಭಾವನೆಗಳನ್ನು ತಾಳದಿರುವುದು ರಂಗಕಲಾವಿದೆಯರ ಬಹುದೊಡ್ಡ ಗುಣ. ಈ ಗುಣ ಮಹಿಳಾ ಆತ್ಮಕಥೆಗಳ ಶಕ್ತಿಯೂ ಹೌದು. ಅನನ್ಯತೆಯೂ ಹೌದು. ತಮ್ಮ ಕಷ್ಟ ಕಾಲದಲ್ಲಿ ಸಹಾಯಕ್ಕೆ ಬಾರದ ಜನರಿಗೂ, ಕುಟುಂಬಗಳಿಗೂ ಒಳಿತನ್ನು ಮಾಡಿ, ಸಹಾಯಮಾಡಿ ಧನ್ಯರಾಗಿದ್ದಾರೆ. ತಮ್ಮನ್ನು ಹಿಂಸೆಗೆ ಒಳಪಡಿಸಿದವರನ್ನು ಪ್ರತಿಯಾಗಿ ಹಿಂಸೆಗೆ ಒಳಪಡಿಸದೆ ಸಮಾಧಾನವನ್ನೇ ಸಾರಿದ್ದಾರೆ. ಅಪಾರ ಕಷ್ಟ–ಕಾರ್ಪಣ್ಯಗಳನ್ನು ಅನುಭವಿಸಿ, ಮದುವೆ, ದಾಂಪತ್ಯ, ಸಂಸಾರವೆಂಬುದು ಇವರಿಗೆ ನರಕ ಸದೃಶ್ಯವಾದರೂ ಕಲಾಸೇವೆ ಮಾಡಿದ್ದಾರೆ. ಹೆಣ್ಣುಮಕ್ಕಳಿಗೆ ಜೀವನದಲ್ಲಿ ಆದಂತಹ ದುರಂತಗಳು, ಕಷ್ಟ–ನಷ್ಟಗಳು, ಅವಮಾನಗಳೇ ಎದುರಾದರೂ ಅವರು ದುಡುಕಿ ತಪ್ಪು ಹಾದಿಯನ್ನು ತುಳಿಯಬಾರದು, ಸ್ವಾಭಿಮಾನದಿಂದ ಬದುಕುವ ಎಲ್ಲಾ ಸಾಧ್ಯತೆಗಳು ಇಲ್ಲಿವೆ, ಆದರೆ ಸ್ವಲ್ಪ ಸಹನೆ ಬೇಕು, ಧೈರ್ಯ ಬೇಕು, ಬೆಂಕಿಯನ್ನು ಎದುರಿಸುವ ಎದೆಗಾರಿಕೆ ಬೇಕು ಎಂಬ ಧನಾತ್ಮಕ ನಿಲುವನ್ನು ಈ ಆತ್ಮಕಥೆಗಳು ಬಿತ್ತರಿಸುತ್ತದೆ. ಉಮಾಶ್ರೀಯವರು ತಮ್ಮ ಗಂಡನ ಸಂಸಾರಕ್ಕೆ ತಾವು ತಿರಸ್ಕೃತಳಾದ ನಂತರವೂ ತಮ್ಮ ಕರ್ತವ್ಯ ಪ್ರಜ್ಞೆಯಿಂದ ಸಲ್ಲಬೇಕಾದ ಸೇವೆಯನ್ನು, ಸಹಾಯವನ್ನು ಆ ಗಂಡನ ಕುಟುಂಬದವರಿಗೆ ಸಲ್ಲಿಸುತ್ತಲೇ ಬಂದಿದ್ದಾರೆ. ಮಹಿಳೆಯರ ಬದುಕು ಎಂದಿಗೂ ಅದು ಕಟ್ಟುವ ಕ್ರಿಯೆ, ಕೆಡಿಸುವುದಲ್ಲ. ಅದಕ್ಕಾಗಿ ಅವಳು ಎಲ್ಲವನ್ನೂ ಸಹಿಸಿಕೊಳ್ಳುತ್ತಾಳೆ. ಅದಕ್ಕೆ ತುಂಬಾ ಸಹನೆ ಬೇಕು. ಬಹಳಷ್ಟು ತ್ಯಾಗ ಮಾಡಬೇಕಾಗುತ್ತದೆ ಎಂಬ ಮೌಲ್ಯಗಳನ್ನು ಈ ಆತ್ಮಕಥೆ ಪ್ರಸ್ತುತಪಡಿಸುತ್ತದೆ.

ಕನ್ನಡದ ಮಹಿಳಾ ಆತ್ಮಕಥನಗಳನ್ನು ನಾಲ್ಕು ಘಟ್ಟಗಳಲ್ಲಿ ಗುರುತಿಸಬಹುದು ಮೊದಲನೆಯ ಘಟ್ಟದ 'ಶೋಧ' ದ ಮಾದರಿಯವು. ಎರಡನೆಯ ಘಟ್ಟದ್ದು 'ಅಸ್ತಿತ್ವ' ದ ಮಾದರಿ. ಮತ್ತು ಮೂರನೆಯ ಘಟ್ಟದವು 'ಅಸ್ಮಿತೆಯ' ಮಾದರಿ. ನಾಲ್ಕನೆಯ ಘಟ್ಟವು 'ಸ್ವಾಯತ್ತತೆ' ಯ ಮಾದರಿ ಎನ್ನುತ್ತಾರೆ ಲೇಖಕಿ ಎಂ.ಎಸ್.ಆಶಾದೇವಿ. ಪ್ರೇಮಾ ಕಾರಂತರ ಆತ್ಮಕಥೆ 'ಸೋಲಿಸಬೇಡ ಗೆಲ್ಲಿಸಯ್ಯಾ', ಭಾರ್ಗವಿ ನಾರಾಯಣ್‌ರವರ 'ನಾನು, ಭಾರ್ಗವಿ', ವಿಜಯಮ್ಮರ 'ಕುದಿಎಸರು', ಬಿ.ಜಯಶ್ರೀಯವರ 'ಕಣ್ಣಾ ಮುಚ್ಚೇ... ಕಾಡೇ ಗೂಡೇ...' ಉಮಾಶ್ರೀಯವರ 'ಬೆಂಕಿ ಬೆಡಗು' ಈ ರಂಗಭೂಮಿ ಕಲಾವಿದೆಯರ ಆತ್ಮಕಥನಗಳು ಎಂ.ಎಸ್.ಆಶಾದೇವಿಯವರು ಗುರ್ತಿಸುವಂತೆ ನಾಲ್ಕನೆಯ ಘಟ್ಟದಲ್ಲಿ ಮೂಡಿ ಬಂದ

ಹೊಸ ದಿಕ್ಕಿನ ಪಯಣದತ್ತ ಸಾಗುವ ವಿಶಿಷ್ಟ ಆತ್ಮಕಥನಗಳು,"ಮೊದಲ ಮೂರು ಘಟ್ಟಗಳ ಆತ್ಮಕಥನಗಳಲ್ಲಿ ಅವು ಹೆಣ್ಣಿನ ಆತ್ಮಕಥನಗಳಾಗಿದ್ದರೂ ಗಂಡಿನ ಕಣ್ಣನ್ನು ಎದುರಿಗಿಟ್ಟುಕೊಂಡೇ ಬರೆದವಾಗಿದ್ದವು. ಆದರೆ ಈ ಘಟ್ಟದ ನಿರೂಪಣೆಗಳು ತಮ್ಮೆದುರಿಗೇ ತಮ್ಮನ್ನೇ ಇರಿಸಿಕೊಂಡಿವೆ. ಗಂಡು, ಲೋಕ ಆಮೇಲಿನದು. ಮೊದಲಿಗೆ ಈ ನನ್ನ ಬದುಕನ್ನು ನಾನು ಬದುಕಿದ ಬಗೆಯನ್ನು ತಾವೇ ಹಿನ್ನೋಟದಲ್ಲಿ ನೋಡಲು ಹೊರಡುವುದೇ ಈ ಆತ್ಮಕಥನಗಳ ವಿಶೇಷ ಶಕ್ತಿ. ನನ್ನ ಕಣ್ಣಿನಲ್ಲಿ ನಾನು ಮಾಡಿದ್ದು ಸರಿ ಎಂದಾದ ಮೇಲೆ ಲೋಕದ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ ಎನ್ನುವ ನಂಬಿಕೆಯಲ್ಲಿ ಬರೆದವು. ಎದುರಿನವರು ನನಗೆ ನೊ ಆಬ್ಜೆಕ್ಷನ್ ಸರ್ಟಿಫಿಕೇಟ್ ಕೊಡಲಿ ಎಂದು ಆಶಿಸುವ ಮನಸ್ಥಿತಿಯಿಂದ ಹೊರಬಂದವು."[1] ಉಮಾಶ್ರೀ ಮತ್ತು ವಿಜಯಮ್ಮರವರ ಆತ್ಮಕಥೆಗಳನ್ನು ಗಮನಿಸಿದರೆ ಅವರು ತಮ್ಮ ಬದುಕಿನಲ್ಲಿ ಹಾದು ಬಂದ ಅಗ್ನಿ ದಿವ್ಯದ ಅನಾವರಣದ ಅರಿವಾಗುತ್ತದೆ. ತಮ್ಮ ಬದುಕಿಗೆ ಬೇರೆಲ್ಲಾ ಅವಕಾಶಗಳು ದೊರೆಯದಿದ್ದಾಗ ಇವರು ತಮ್ಮ ಬದುಕನ್ನು ಮತ್ತೆ ಸ್ವತಹ ಅವರೇ ಹೊಸದಾಗಿ ಕಟ್ಟಿಕೊಳ್ಳುತ್ತಾರೆ, ಮಾತ್ರವಲ್ಲ ಗೆಲ್ಲುತ್ತಾರೆ. ರಂಗಕಲಾವಿದೆಯರ ಆತ್ಮಕಥೆಗಳು ಮಹಿಳಾ ಆತ್ಮಕಥೆಗಳ ಸಾಲಿನಲ್ಲಿ ಸ್ತ್ರೀ ಚೈತನ್ಯಕ್ಕೆ ಬರೆದ ಭಾಷ್ಯದಂತಿವೆ.

ರಂಗಕಲಾವಿದೆ ಉಮಾಶ್ರೀ ಹುಟ್ಟಿದ್ದು ನೊಣವಿನಕೆರೆಯ ಒಂದು ನೇಕಾರ ಕುಟುಂಬದಲ್ಲಿ. ತಂದೆ ತಾಯಿಯರು ತೀರಿಕೊಂಡ ನಂತರ ಸಂಬಂಧಿಕರ ಮನೆಯಲ್ಲಿದ್ದು ಬದುಕು ನಡೆಸಿದರು. ಸಾಕು ತಾಯಿಯ ಮನೆಯಲ್ಲಿ ಆಶ್ರಯ ಪಡೆದರೂ ಅಲ್ಲಿಯೂ ಅವರಿಗೆ ಸುಖ ಸಿಗಲಿಲ್ಲ. ಸಮಾಜನಿಂದನೆ, ಬಡತನ, ಹಸಿವುಗಳ ನಿವಾರಣೆಗಾಗಿಯೇ ನಡೆದ ಅನಿರೀಕ್ಷಿತ ಘಟನೆಗಳು ಅವರನ್ನು ಅಭಿನಯ ವೃತ್ತಿಗೆ ತಳ್ಳಿದವು. ಉಮಾಶ್ರೀಯವರು ತಮ್ಮ ಬದುಕಿನಲ್ಲಿ ಎದುರಿಸಿದ ನೋವು, ಹತಾಶೆ, ಏಕಾಂಗಿತನ, ಬಡತನ, ಹಸಿವು, ಆಘಾತ, ಅವಮಾನಗಳಿಂದ ನೊಂದವರು. ತಮ್ಮ ಸುಂದರ ಕನಸುಗಳೆಲ್ಲ ನುಚ್ಚು ನೂರಾದ ಕಾರಣ ಏಕಾಂಗಿಯಾಗಿ ಹೋರಾಡಿ ತನ್ನೆರಡು ಮಕ್ಕಳ ಭವಿಷ್ಯವನ್ನೇ ಗಮನದಲ್ಲಿರಿಸಿಕೊಂಡು ಬಂದದನ್ನೆಲ್ಲಾ ಸ್ವೀಕರಿಸುತ್ತಾ ಕೇವಲ ರಂಗಭೂಮಿಯ ಅಭಿನಯ ಕಲೆಯೊಂದರ ಆಧಾರದಿಂದಲೇ ಬದುಕು ಮತ್ತು ಭವಿಷ್ಯವನ್ನು ಕಂಡುಕೊಂಡವರು. ಆದರೆ ಸಿನಿಮಾ ಕ್ಷೇತ್ರ ಪ್ರವೇಶಿಸಿದ ನಂತರ ತಮ್ಮ ಮುಗ್ಧತನ, ಪೆದ್ದುತನದಿಂದಾಗಿ ಚಿತ್ರರಂಗದ ಒಳಸುಳಿಗಳ ಅರಿವಿಲ್ಲದೆ ಈ ಗಾಂಧೀನಗರದ ದುಷ್ಟಕೂಟಗಳ ದ್ವಂದ್ವಾರ್ಥದ ಪಾತ್ರಸಂಭಾಷಣೆಗೆ ಬಲಿಯಾದರು. ಇದು ಅವರಿಗೆ ಅರಿವಿಗೆ ಬರುವಷ್ಟರಲ್ಲಿ ಚಿತ್ರರಂಗವನ್ನೇ ಕೆಡಿಸಿದ ನಟಿ, ಸೆಕ್ಸ್‌ಬಾಂಬ್ ಎಂಬ ಬಿರುದು ಅವರಿಗೆ ಅಂಟಿತ್ತು. ಚಿತ್ರರಂಗದಲ್ಲಿ ತಮಗಾದ ಅಸಹನೆಯಿಂದ ಚಿತ್ರರಂಗದ ತಳುಕು ಬಳುಕು ಬೇಡವೇ ಬೇಡ, ರಂಗಭೂಮಿಯೇ ವಾಸಿ ಎಂದುಕೊಂಡರು. "ನನ್ನ ಬಾಳ್ವೆಯ ಕಟು ವಾಸ್ತವದ ಝಳದ ಮಧ್ಯೆ ಆ ದಿನಗಳಲ್ಲಿ ನನ್ನ ಅಭಿನಯದ ಅಪೇಕ್ಷೆ–ನಿರಪೇಕ್ಷೆಗಳ ಮಧ್ಯೆ ಗೆರೆ ಎಳೆದುಕೊಳ್ಳಲಾರದಷ್ಟು ಅಸಹಾಯಕಳಾಗಿ ಬಿಟ್ಟಿದ್ದೆ. ನಾನಂದು ಒಪ್ಪಿ ಮಾಡುತ್ತಿದ್ದ ಪಾತ್ರಗಳ ತೂಕ, ಅದರ ಭಾಷೆ, ಭಾವಗಳ ಸಾಮಾಜಿಕ

ಪರಿಣಾಮ ಯಾವುದನ್ನೂ ಯೋಚಿಸದಷ್ಟೂ ಮುಗ್ಧೆಯಾಗಿದ್ದೆ. ಇನ್ನೊಂದು ಪಾತ್ರ ಬಿಟ್ಟು ಕೊಟ್ಟರೆ ಬೀದಿ ಪಾಲಾಗಿಬಿಡುತ್ತೇನೇನೋ ಅನ್ನುವ ಗಾಢ ಭಯದಲ್ಲಿದ್ದೆ. ನನ್ನ ಮಕ್ಕಳು, ಅವರ ಸುಖ, ಭವಿಷ್ಯ ಅಷ್ಟೇ ನನ್ನ ಕಣ್ಣೆದುರಿಗಿದ್ದದ್ದು. ದುಡಿಯಲೇ ಬೇಕಿತ್ತು. ಬದುಕಲು ಹಣ ಬೇಕಿತ್ತು. ಹೀಗಾಗಿ ಬಂದ ಅವಕಾಶಗಳಿಗೆಲ್ಲಾ ಪಾತ್ರಗಳಾಗುತ್ತಾ ಹೋದೆ"[2]

ಉಮಾಶ್ರೀಯವರು ರಂಗಭೂಮಿಗೆ ಮತ್ತು ಚಿತ್ರರಂಗಕ್ಕೆ ಕಾಲಿಟ್ಟಿದ್ದು ನಟಿಯಾಗಿ ಹೆಸರು ಮಾಡಬೇಕು ಎಂಬ ಹಂಬಲದಿಂದಲ್ಲ. ತನ್ನ ಕೌಟುಂಬಿಕ ಕರ್ತವ್ಯ ಪೂರೈಕೆಯ ನಿರೀಕ್ಷಿತ ಗುರಿ ಮುಟ್ಟುವ ತವಕದಿಂದ. ತನ್ನ ಕಹಿ ಅನುಭವ, ನೋವು, ನರಕ ತಮ್ಮ ಮಕ್ಕಳಿಗೆ ಬರಬಾರದು, ತಾವು ತಮ್ಮ ಬದುಕಿನಲ್ಲಿ ವಂಚನೆಗೆ ಒಳಗಾದ ರೀತಿಯಲ್ಲಿ ತಮ್ಮ ಮಕ್ಕಳು ವಂಚನೆಗೊಳಗಾಗಬಾರದು. ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ತಂದೆಯಾದವನು ಮಾಡಬೇಕಾಗಿದ್ದ ಕರ್ತವ್ಯಗಳನ್ನು ಉಮಾಶ್ರೀಯವರು ಏಕಾಂಗಿ ಹೆಣ್ಣಾಗಿ ತಾವೊಬ್ಬರೇ ಅದನ್ನೆಲ್ಲಾ ಮಾಡಬೇಕಾದ ಸವಾಲು ಇವರಿಗಿತ್ತು. ಆ ಸವಾಲನ್ನು ಸ್ವೀಕರಿಸಿ ಆಕೆ ತನ್ನ ಅನಿವಾರ್ಯತೆಗಾಗಿ ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟರು. ನಾಟಕದ ಅಭಿನಯದಲ್ಲಿ ಐದುನೂರು ಅಥವಾ ಸಾವಿರ ಸಿಗುತ್ತಿದ್ದರೆ, ಸಿನಿಮಾ ನಟನೆಯಲ್ಲಿ ಅದಕ್ಕಿಂತ ಹೆಚ್ಚು ಹಣ ಅವರಿಗೆ ಸಿಗುತ್ತಿತ್ತು. ತಮ್ಮ ಮಕ್ಕಳಿಗೆ ಒಳ್ಳೆ ಶಿಕ್ಷಣ ಕೊಡಿಸಬೇಕು, ಅವರ ಭವಿಷ್ಯ ಸುಧಾರಿಸಬೇಕೆಂದು ಅದಕ್ಕಾಗಿ ಹಣವನ್ನು ಸಿನಿಮಾ ಪಾತ್ರಗಳು ಪೂರೈಸುತ್ತವೆಂಬ ಕಾರಣದಿಂದ ರಂಗಭೂಮಿಗೆ ಮತ್ತು ಸಿನಿಮಾ ಕ್ಷೇತ್ರಕ್ಕೆ ಪ್ರವೇಶಿಸಿದರೇ ಹೊರತು ಇಲ್ಲಿನ ರಂಗು ರಂಗಿನ ಗುಂಗಿಗೆ ಮನಸೋತು ಬಂದವರಲ್ಲ. ತಮ್ಮ ಬಡತನದ ಹಸಿವಿನ ಬದುಕನ್ನು ಕಟ್ಟಲು ಅದನ್ನು ಗೆಲ್ಲಲು ತಾವು ಈ ಕ್ಷೇತ್ರಕ್ಕೆ ಬಂದೆನೆಂಬುದನ್ನು ಅವರು ಆತ್ಮಕಥೆಯಲ್ಲಿ ಪ್ರಸ್ತಾಪಿಸುತ್ತಾರೆ.

ಯೌವ್ವನದಲ್ಲಿ ಉಮಾಶ್ರೀಯವರು ಅವರಿಗರಿವಿಲ್ಲದಂತೆ ಆಕೆಗಿಂತಲೂ ಹತ್ತು ವರ್ಷ ದೊಡ್ಡವನಾದ ಮತ್ತು ಅವಿದ್ಯಾವಂತನನ್ನು ಪ್ರೀತಿಸಿ ಮದುವೆಯಾದರು. ಆದರೆ ಅವರ ತಂದೆ ತಾಯಿಗೆ ವಿಷಯ ತಿಳಿದಾಗ ಉಮಾಶ್ರೀಯವರಿಗೆ ಹೊಡೆದು ಬಡಿದರು. ಕೊನೆಗೆ ಉಮಾಶ್ರೀಯವರ ಹಠಕ್ಕೆ ಮಣಿದು ಬಂಧು ಬಾಂಧವರೆದುರು ಮದುವೆ ಮಾಡಿದರು. ಮದುವೆಯಾದ ಕೆಲವು ದಿನ ಎಲ್ಲವೂ ಚೆನ್ನಾಗಿತ್ತು ತಿಂಗಳಾಗುತ್ತಾ ಬರುವಾಗ ಅವರಿಗೆ ತಮ್ಮ ಗಂಡನ ನಿಜ ರೂಪದ ದರ್ಶನ ಆಗಲು ಆರಂಭವಾಯಿತು. ಬೇಜವಾಬ್ದಾರಿತನ, ದುಡಿಯದೆ ಇರುವ ಸೋಂಬೇರಿತನ, ಅಲ್ಪ ಸ್ವಲ್ಪ ದುಡಿದರೂ ಅಷ್ಟನ್ನು ಗೆಳೆಯರೆಂಬ ಪೋಕರಿಗಳ ಕೂಟದಲ್ಲಿ ಮಜಾ ಮಾಡುವ ಅಭ್ಯಾಸ, ವಿಪರೀತ ಕುಡಿತ ಇವುಗಳ ಸ್ವರೂಪದ ದರ್ಶನ ಉಮಾಶ್ರೀಯವರಿಗಾಯಿತು. ಬೆಂಗಳೂರಿನಲ್ಲಿ ಮನೆ ಒಂದು ಸ್ವಂತದ್ದು ಬಿಟ್ಟರೆ ಉಳಿದಿದ್ದೆಲ್ಲವನ್ನು ಅಂಗಡಿಯಿಂದ ಕೊಂಡು ತಂದೇ ತಿನ್ನಬೇಕಾದ ಸ್ಥಿತಿಯಿರುವಾಗ ಸಂಸಾರ ನಿಭಾಯಿಸುವುದು ಉಮಾಶ್ರೀಯವರಿಗೆ ಕಷ್ಟವಾಯಿತು. ಇದರಿಂದ ಸಹಜವಾಗಿ ಗಂಡ ಹೆಂಡತಿಯ ನಡುವೆ ಕಿತ್ತಾಟ ಆರಂಭವಾಗಿ ಉಮಾಶ್ರೀಯವರಿಗೆ ಸಹನೆಯ ಕಟ್ಟೆ ಒಡೆಯಲು

ಆರಂಭವಾಯಿತು. ಸಂಸಾರದ ಬಗ್ಗೆ ದಿವ್ಯ ನಿರ್ಲಕ್ಷ್ಯ, ಹೆಂಡತಿಯ ಆಸೆ ಆಕಾಂಕ್ಷೆಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳುವ ಹೃದಯವಂತಿಕೆ, ಕರ್ತವ್ಯ ಪ್ರಜ್ಞೆ ಇಲ್ಲದ ತನ್ನ ಪತಿಯಿಂದ ಉಮಾಶ್ರೀ, ಏನನ್ನೂ ನಿರೀಕ್ಷಿಸುವಂತಿರಲಿಲ್ಲ. “ನನಗೆ ಅಲ್ಲಿ ಆದ ಮೊದಲ ಆಘಾತ ಅಥವಾ ನೋವು–ಹಸಿವು. ನನಗೆಂದೂ ಹಸಿವಿನ ಜ್ಞಾನವೇ ಆಗಿರಲಿಲ್ಲ; ಹಸಿವು ಅಂದರೆ ಏನು ಅಂತಲೂ ಗೊತ್ತಿರಲಿಲ್ಲ. ಅಪ್ಪ–ಅಮ್ಮನ ಮನೆಯಲ್ಲಿ ಕಂಡು ಕೇಳದ ಆ ಹಸಿವು, ನನಗೆ ತೀವ್ರವಾಗಿ ಕಾಡಲಾರಂಭಿಸಿತು. ಹೊಟ್ಟೆಗೆ ಒಂದು ಹಿಡಿ ಅನ್ನವೂ ಸಿಗದ ದಿನಚರಿ ಮಾಮೂಲಾದವು. ಇದನ್ನಾದರೂ ಸಹಿಸಬಹುದಿತ್ತು. ಗಂಡನ ಪ್ರೀತಿ, ವಾತ್ಸಲ್ಯ, ಅಕ್ಕರೆ, ಸಾಮೀಪ್ಯದ ಭಾಗ್ಯ ಸಿಕ್ಕಿದ್ದರೆ; ಅದೂ ಇಲ್ಲ. ಪ್ರೀತಿಯಿಂದಲೂ ವಂಚನೆ. ಇವೆರಡರ ಅಸಹನೀಯತೆಯ ಮಧ್ಯೆ ಕುಡಿತ. ನನಗೆ ವಾಸನೆ ಕಂಡರೆ ಆಗ್ತಿರಲಿಲ್ಲ. ಇವೆಲ್ಲದರ ಆಚೆ ನನಗೂ ಎಲ್ಲರಂತೆ ಬದುಕಬೇಕು, ಮನೆ, ವಸ್ತ್ರ, ಒಡವೆ, ಇನ್ನೇನೇನೋ... ಒಬ್ಬ ಸಾಮಾನ್ಯ ಹೆಣ್ಣು ಮಗಳಿಗಿರುವಂಥ ಆ ಕನಸುಗಳು ಈಡೇರದೇ ಹೋದ ಅಳಲು. ಎಷ್ಟೋ ಸಾರಿ ಬುದ್ಧಿ ಹೇಳಲು ಯತ್ನಿಸಿದ್ದೆಲ್ಲವೂ ವ್ಯರ್ಥ. ಬರ್ತಾ ಬರ್ತಾ ಕಂದಕ ಹೆಚ್ಚಾಗ್ತಾ ಹೋಯಿತು. ಅವರ–ನನ್ನ ನಿಲುವು, ರೀತಿ, ನೀತಿ ವಿರುದ್ಧ ಧ್ರುವಗಳಾಗ್ತಾ ಹೋದ್ವು... ಎಳೇ ವಯಸ್ಸು, ಎಳೇ ಮನಸ್ಸು. ಅವನದನ್ನು ಹೇಗೆ ಕಾಪಾಡಿಕೊಳ್ಳಬೇಕಿತ್ತು ಅಥವಾ ಅಂಥಾ ಮನಸ್ಸು, ವಯಸ್ಸಿನ ನನ್ನ ಮೇಲೆ ಅವನ ರೌದ್ರಾವತಾರ, ಆ ಒರಟುತನ ಎಂಥಾ ಪರಿಣಾಮ ಮಾಡಿರಬಹುದು ಅಂತ ಯೋಚಿಸಿ, ನನ್ನ ಹದಿಹರೆಯ ಸುಂದರ ಸುಕೋಮಲ ನನ್ನೆದೆಯ ಆ ಸೂಕ್ಷ್ಮ ವೀಣೆಯನ್ನು ಅವನೆಂದೂ ಶ್ರುತಿ ಮಾಡಲೇ ಇಲ್ಲ. ಹದವಾದ ರಿದಂನಿಂದ ಮೀಟಲು ಯತ್ನಿಸಲೇ ಇಲ್ಲ. ಬದಲಾಗಿ ಆ ಸೂಕ್ಷ್ಮ ತಂತಿಗಳನ್ನು ಎಳೆದು ಹರಿದು ಇನ್ನೆಂದೂ ನಾದ ಹೊಮ್ಮದಂತೆ ಹೊಸಕಿ ಬಿಟ್ಟಿದ್ದ. ಜೊತೆಗೆ ಆತ ನನ್ನನ್ನು ಮದುವೆಯಾಗಲು ಕಾರಣ; ಒಬ್ಬಳೇ ಮಗಳು, ಆಸ್ತಿ ಇದೆ, ಆ ಆಸ್ತಿಯನ್ನು ಮುಂದೊಂದು ದಿನ ತನ್ನದಾಗಿಸಿಕೊಳ್ಳ ಬಹುದೆಂಬ ಬಯಕೆ.”[3]

ಹೀಗೆ ಮದುವೆಯಾದವನು ಅವರನ್ನು ಸರಿಯಾಗಿ ನಡೆಸಿಕೊಳ್ಳದ್ದರಿಂದ ಉಮಾಶ್ರೀಯವರು ಹೊಟ್ಟೆಗಿಲ್ಲದೆ ಹಸಿವಿನಿಂದ ಚಡಪಡಿಸುತ್ತಿದ್ದರು. ಕಿತ್ತು ತಿನ್ನುವ ಹಸಿವು, ಜೊತೆಗೆ ಗರ್ಭಿಣಿಯಾಗಿದ್ದರಿಂದ ಏನೇನೋ ತಿನ್ನಬೇಕೆಂಬ ಹಪಹಪಿಕೆ ಅವರಿಗಿತ್ತು. ಆ ಹೊತ್ತಿಗೆ ಗಂಡ ಕೊಡುವ ಮಾನಸಿಕ ಹಿಂಸೆಗಿಂತ ಮಿಗಿಲಾಗಿ ಕಾಡುತ್ತಿದ್ದುದು ಅದೆಷ್ಟೋ ದಿವಸಗಳಿಂದ ಅನ್ನದ ಮುಖವನ್ನು ಕಾಣದ ತನ್ನ ಹಸಿವಿನ ಬಗ್ಗೆ ಉಮಾಶ್ರೀ ತಮ್ಮ ಆತ್ಮಕಥೆಯಲ್ಲಿ ದಾಖಲಿಸುತ್ತಾರೆ. ಉಮಾಶ್ರೀಯವರನ್ನು ಸಾಕಿದ ಅಪ್ಪ ಅಮ್ಮ ಶ್ರೀಮಂತರೇನೂ ಆಗಿರದಿದ್ದರೂ ಉಮಾಶ್ರೀಯವರನ್ನು ಸುಖವಾಗಿಯೇ ಸಾಕಿದ್ದರು. ಹೀಗಾಗಿ ಗಂಡನ ಮನೆಯಲ್ಲಿ ತುತ್ತು ಅನ್ನಕ್ಕೂ ಪರಿತಪಿಸಬೇಕಾಗಿ ಬಂದುದು ಅವರಿಗೆ ಶಾಪವೆನಿಸಿತು. ಈ ನಡುವೆ ಉಮಾಶ್ರೀಯವರ ಸಾಕು ತಾಯಿಗೆ ತೀವ್ರ ಅನಾರೋಗ್ಯವಾದಾಗ ಅವರನ್ನು ನೋಡಿಕೊಳ್ಳಲು ಯಾರೂ ಇರಲಿಲ್ಲ. ವಿಷಯ ತಿಳಿದ ಉಮಾಶ್ರೀಯವರು ತಾಯಿಯನ್ನು

ನೋಡಲು ಹೋಗುವೆ, ಕಳಿಸಿಕೊಡಿ ಎಂದಾಗ ಗಂಡನ ಮನೆಯವರಾರೂ ಒಪ್ಪಲಿಲ್ಲ. ಉಮಾಶ್ರೀ, ತನ್ನ ತಾಯಿಯವರನ್ನು ನೋಡಲು ಹೋಗಲೇಬೇಕೆಂದು ಹಠ ಹಿಡಿದಾಗ ಅವರ ಗಂಡ ಮನೆಯ ಹೊರಗೆ ಕಾಲಿಟ್ಟರೆ ಕಾಲು ಕತ್ತರಿಸುವೆನೆಂದು ಆರ್ಭಟಿಸಿದ. ಅಂದು ರಾತ್ರಿ ಉಮಾಶ್ರೀ ಒಂದು ದಿಟ್ಟ ತೀರ್ಮಾನವನ್ನು ತೆಗೆದುಕೊಂಡರು. ಗಂಡನ ಮನೆಯವರಿಗೆ ಹೇಳದೆ ತಾಯಿಯನ್ನು ನೋಡಲು ತನ್ನ ತಾಯಿ ಮನೆಗೆ ಬಂದರು. ತಾಯಿಯೊಂದಿಗೆ ಒಂದು ದಿನವಿದ್ದು ಮರುದಿನ ಗಂಡನ ಮನೆಗೆ ವಾಪಾಸ್ಸು ಹೋದಾಗ ಉಮಾಶ್ರೀಯವರನ್ನು ಯಾರೂ ಮನೆ ಒಳಗೆ ಕರೆದುಕೊಳ್ಳಲಿಲ್ಲ. ಉಮಾಶ್ರೀಯವರೊಂದಿಗೆ ಅವರ ಸಾಕು ತಾಯಿಯೂ ಬಂದು ನನಗೆ ಹುಷಾರಿಲ್ಲ ಅಂತ ತಿಳಿದ ತಕ್ಷಣ ನನ್ನನ್ನು ನೋಡಲು ಬಂದಿದ್ದಾಳೆ. ಮುಂದೆ ಈ ರೀತಿ ಆಗುವುದಿಲ್ಲ. ನಿಮ್ಮನ್ನು ತುಂಬಾ ಕೇಳಿದರೂ ನೀವು ಒಪ್ಪಿಗೆ ಕೊಡದ ಕಾರಣ ಅವಳು ಒಬ್ಬಳೇ ನನ್ನನ್ನು ನೋಡಲು ಬಂದಿದ್ದಳು. ನೀವೇ ಒಪ್ಪಿ ಕಳಿಸಬಹುದಿತ್ತು ಈಗ ಏನೋ ಆಗೋಯ್ತು. ಈಗ ಆದದ್ದನ್ನೆಲ್ಲಾ ಮರೆತು ಒಳಗೆ ಕರೆದುಕೊಳ್ಳಿ ಎಂದು ವಿನಂತಿಸಿದರೂ, ಅಂಗಲಾಚಿದರೂ ಪ್ರಯೋಜನವಾಗಲಿಲ್ಲ. ಉಮಾಶ್ರೀಯವರ ಗಂಡ 'ಅವಳು ಹ್ಯಾಗೆ ಹೋಗಿದ್ಲೋ ಹಾಗೇನೇ ಹೊರಟು ಹೋಗ್ಲಿ, ನನಗವಳು ಬೇಡ' ಎಂದು ತಿರಸ್ಕರಿಸಿದರು. ಆಗಲೇ ಉಮಾಶ್ರೀ ತನ್ನ ಜೀವನದಲ್ಲಿ ಗಟ್ಟಿಯಾದ ನಿರ್ಧಾರ ತೆಗೆದುಕೊಂಡರು. "ಮನಸ್ಸಿನ ಸಹನೆಗೂ ಒಂದು ಮಿತಿಯಿದೆ.

ಅದು ಎಲ್ಲಿಯವರೆಗೆ ಸಹಿಸುತ್ತೋ ಅಲ್ಲಿಯವರೆಗೆ ನಿರ್ಧಾರ ಬರಲ್ಲ. ಎಲ್ಲಿ ಸಹನೆಯೇ ಅಸಾಧ್ಯವಾಗುತ್ತೋ ಆಗ ನಿರ್ಧಾರ ತಂತಾನೆ ಬರುತ್ತೆ. ಮನಸ್ಸಿನ ಮೇಲೆ ಮೇಲಿಂದ ಮೇಲೆ ಪೆಟ್ಟು ಬೀಳ್ತಾ ಬೀಳ್ತಾ ಹೋದಂತೆ ಮನಸ್ಸು ಕಲ್ಲಾಗ್ತಾ ಹೋಗುತ್ತೆ. ಅಹಲ್ಯೆ ಕಲ್ಲಾದ ಕತೆಯೂ ಇಂಥ ಒಂದು ಕಠೋರ ಸನ್ನಿವೇಶದ ಪ್ರತೀಕವೂ, ಪ್ರತಿಮೆಯೂ ಆಗಿರಬಹುದೇನೋ... ನನ್ನ ಸ್ಥಿತಿನೂ ಹಾಗೆ ಆಯ್ತು. ಮಗಳನ್ನು ಎತ್ತಿ ಕಂಕುಳಿಗೆ ಹಾಕ್ಕೊಂಡೆ. ಬಕೆಟ್‌ನಲ್ಲಿದ್ದ ಹಸಿ ಬಟ್ಟೆಯನ್ನು ಹಾಗೇ ಎತ್ತಿಕೊಂಡೆ ನೇರ ಬಂದ್ವಿ, ಅಮ್ಮನ ಮನೆಗೆ ಬಂದ್ವು.,"[4] ಹೀಗೆ ತನ್ನ ಬದುಕಿನಲ್ಲಿ ಉಮಾಶ್ರೀ ಅನಿವಾರ್ಯವಾಗಿ ಕಠಿಣ ನಿರ್ಧಾರ ತೆಗೆದು ಕೊಂಡರು. ತವರು ಮನೆಗೆ ಬಂದು ಮೂರು ತಿಂಗಳು ಕಳೆದರೂ ಗಂಡನ ಮನೆಯವರಿಂದ ಸುದ್ದಿ ಇಲ್ಲ. ಹೀಗೆ ದಿನ ಕಳೆಯುವಾಗ ಗಂಡ ಎನಿಸಿಕೊಂಡವನು ಉಮಾಶ್ರೀಯವರಿದ್ದ ಮನೆಗೆ ಬಂದು ಜಗಳವಾಡಿ ಹೋಗುತ್ತಿದ್ದ. ಕಡೆಗೆ ಉಮಾಶ್ರೀಯವರ ಬಂಧುಗಳು ಕುಲಬಾಂಧವರು ಗಂಡ–ಹೆಂಡತಿಯ ನಡುವೆ ನ್ಯಾಯ ಪಂಚಾಯ್ತಿ ಮಾಡಲು ಬಂದಾಗ ಅವನು ತನ್ನನ್ನು ಸಾಕುವುದಿಲ್ಲ, ಹೆಂಡತಿ, ಮಗಳು, ಸಂಸಾರ, ದಾಂಪತ್ಯ ಅನ್ನುವ ಯಾವ ಪದಗಳ ಕಿಂಚಿತ್ ಸಂವೇದನೆಯ ಅರಿವೂ ಇಲ್ಲದ ಅವನೊಂದಿಗೆ ಪುನಃ ಬಾಳ್ವೆ ಮಾಡುವುದು ಸಾಧ್ಯವಿಲ್ಲವೆಂಬುದರ ಖಚಿತವಾದ ಅರಿವಿದ್ದ ಉಮಾಶ್ರೀಯವರು ಹಿರಿಯರೆಲ್ಲಾ ಒತ್ತಾಯ ಮಾಡಿದಾಗಲೂ ಅವನೊಂದಿಗೆ ಪುನಃ ಹೋಗುವುದಿಲ್ಲವೆಂಬ ಧೃಢ ನಿರ್ಧಾರಕ್ಕೆ ಬಂದರು. ಇದು ಅವರು ಜೀವನದಲ್ಲಿ ತಳೆದ ಪ್ರತಿಭಟನೆಯ ಮೆಟ್ಟಿಲಾಗಿತ್ತು.

ಸಮಾಜದ ಹಿರಿಯರು, ಕುಲಬಾಂಧವರು, ಮುಖಂಡರು ತೀರ್ಮಾನ ಮಾಡಲು ಅಂದರೆ ಗಂಡ–ಹೆಂಡತಿಯನ್ನು ಒಂದು ಮಾಡಲು ಪ್ರಯತ್ನಿಸಿ ಬುದ್ಧಿ ಹೇಳಿದಾಗ "ನೋಡ್ರಣ್ಣಾ ನೀವೆಲ್ಲಾ ಇಲ್ಲಿಯವರೆಗೆ ಬಂದು ಇಷ್ಟೆಲ್ಲಾ ಮಾತಾಡ್ತೀರಲ್ಲ ನನಗೆ ಗೊತ್ತು ನನ್ನ ಗಂಡ ಅಂದ್ರೆ ಎಂಥವನು, ಅವನ ಸಂಪಾದನೆ ಎಷ್ಟು, ಅವನ ನಡವಳಿಕೆ ಏನು, ಅವನು ಕೊಟ್ಟ ಹಿಂಸೆ ಏನು ಅವನು ಈಗ ನನಗೆ ಏಕೆ ಇಷ್ಟವಾಗ್ತಾ ಇಲ್ಲ ಅನ್ನೋದೆಲ್ಲಾ ನನಗೆ ಗೊತ್ತು. ಅದು ನಿಮಗೆ ಗೊತ್ತಿರಲು ಅಸಾಧ್ಯ. ನೀವು ಅವನನ್ನು ಇಷ್ಟು ವಹಿಸಿಕೊಂಡು ಮಾತಾಡ್ತಾ ಇದ್ದೀರ, ಸರಿ ನಾನು ಅಲ್ಲಿಗೆ ಹೋಗ್ತೇನೆ. ಆದರೆ ಒಂದು ಕಂಡೀಶನ್ನು, ಅವನು ಪುನಃ ನನಗೆ ಅದೇ ರೀತಿಯ ಪರಿಸ್ಥಿತಿಯನ್ನು ತಂದು ಹಾಕಿದರೆ ನೀವೆಲ್ಲಾ ಸೇರಿ ತಿಂಗಳಿಗೆ ಇಂತಿಷ್ಟು ಅಂತ ವಂತಿಗೆ ಹಾಕಿ ನನ್ನ ಸಂಸಾರವನ್ನು ನಡೆಸಿಕೊಡ್ತೇವೆ ಅಂತ ಒಂದು ಅಗ್ರಿಮೆಂಟ್ ಮಾಡಿಕೊಡಿ, ನಾನು ಮರುಮಾತಾಡದೆ ಹೋಗ್ತೇನೆ"5 ಎಂದು ಪಂಚಾಯ್ತಿ ಮಾಡಲು ಬಂದ ಮುಖಂಡರಿಗೆ ವಿನಂತಿಸಿದರು. ಉಮಾಶ್ರೀಯವರು ಹೀಗೆ ಇಷ್ಟು ಗಟ್ಟಿಯಾಗಿ ದೃಢವಾಗಿ ಮಾತನಾಡಲು ಅವರ ಜೀವನದ ವಾಸ್ತವದ ಕಟು ಕಹಿ ಸತ್ಯಗಳೇ ಕಾರಣವಾಗಿದ್ದವು. ಅಂದು ಉಮಾಶ್ರೀಯವರು ಆಡಿದ ಅನುಭವದ ನೋವಿನ ಮಾತುಗಳು ರಾಜಿ ಮಾಡಿಸಲು ಬಂದವರಿಗೆ ಅಸಭ್ಯವಾಗಿ ಕಂಡಿರುತ್ತದೆ. ಉಮಾಶ್ರೀಯವರ ಗಂಡನಿಗೆ ಉಮಾಶ್ರೀಯೊಂದಿಗೆ ಬದುಕುವುದು ಇಷ್ಟವಿರಲಿಲ್ಲ. ಬದುಕಿನ ಈ ಕಮಿಟ್‌ಮೆಂಟ್‌ಗೆ ಒಗ್ಗುವ ಅಸಾಮಿ ಅವನಾಗಿರಲಿಲ್ಲ. ಆದರಿಂದಲೇ ಉಮಾಶ್ರೀಯವರ ಸಾಕುತಾಯಿಯ ನಡವಳಿಕೆ, ಸರಿಯಿಲ್ಲವೆಂದು ಸುಳ್ಳು ಕಥೆ ಹೇಳಿ ಉಮಾಶ್ರೀಯನ್ನು ಮತ್ತು ಆಕೆಯ ಮಗಳನ್ನು ನಡುನೀರಲ್ಲಿ ನಿಲ್ಲಿಸಿ ಕೈ ಬಿಟ್ಟಿದ್ದ.

ಉಮಾಶ್ರೀ ತನ್ನ ಗಂಡನ ಸಂಬಂಧದಿಂದ ಸಂಪೂರ್ಣವಾಗಿ ಬಿಡಿಸಿಕೊಳ್ಳುತ್ತಿರುವುದನ್ನು ಆಕೆಯ ಸಾಕು ತಾಯಿ ಸಹಿಸಿಕೊಳ್ಳಲಿಲ್ಲ. ಅದನ್ನು ಆಕೆ ಅರಗಿಸಿಕೊಳ್ಳಲಿಲ್ಲ. "ನಾನು ಸೈಟು ಮಾರಿ ಮದುವೆ ಮಾಡ್ದೆ, ಅದು ಮಾಡಿದೆ, ಇದು ಮಾಡಿದೆ, ಅಷ್ಟು ಕಷ್ಟಪಟ್ಟು ಓದಿಸಿದೆ, ಬೆಳೆಸಿದೆ, ಆದ್ರೆ ಕೊನೆಗೂ ಹೀಗಾಯ್ತು. ನೀನು ಮದುವೇನೇ ಮಾಡಿಕೊಳ್ಳದೆ ಇದ್ರೂ ಸೈಟಾದ್ರೂ ಉಳೀತಿತ್ತು. ಗಂಡನ ಬಿಟ್ಟವಳು, ಹೊಂದಿಕೊಂಡು ಬದುಕಲಾಗದವಳು ಏನೇನೋ ಬಾಯಿಗೆ ಬಂದಂತೆ ಮಾತಾಡಲು ಶುರು ಮಾಡಿದ್ಲು, ಬೆಳಗ್ಗೆ ಎದ್ದಾಗಲೂ ಅದೇ ಹಾಡು, ರಾತ್ರಿ ಮಲಗುವವರೆಗೂ ಗಂಡನ ಬಿಟ್ಟವಳೆಂಬ ಹಾಡು. ಹೊರಗೆ ಹೋಗಾಂಗಿಲ್ಲ. ಗಂಡ ಬಿಟ್ಟವಳನ್ನು ಮನೇಲಿ ಇಟ್ಕಂಡಿದ್ದಾಳೆ ಎಂಬ ದೂರು. ನನ್ನ ಮಾನ ಮರ್ಯಾದೆಯನ್ನೆಲ್ಲಾ ಹರಾಜು ಹಾಕ್ದೆ–ಮುಂತಾಗಿ ಅಮ್ಮನ ಕಿರಿಕಿರಿ, ಮೂದಲಿಕೆ. ಅತಿ ಹೆಚ್ಚು ಅವಾಚ್ಯ ಶಬ್ದ ಬಳಕೆ, ರೋಸಿ ಹೋಗಿದ್ದ ನಾನು, ಅವರ ಮಾತು, ಮಟ್ಟ ಮತ್ತು ಸಂಸ್ಕಾರದ ಸಮಾನತೆ ಕಾಯ್ದುಕೊಂಡಿದ್ದೆ – ಮುಗ್ಧ ಉಮಾ ಸತ್ತು ದೊಡ್ಡ ಬಾಯಿಯ ಬಾಯಾಡಿ ಉಮಾ ಹುಟ್ಟಿದಳು."6 ಉಮಾಶ್ರೀಯ ಸಾಕು ತಾಯಿ ಮತ್ತೊಂದು ಹೆಣ್ಣಿನ ನೋವನ್ನು ಅರ್ಥೈಸಿಕೊಳ್ಳಲಾಗದ ಸ್ಥಿತಿಯಲ್ಲಿ

ಉಮಾಶ್ರೀಗೂ ಅವರ ಸಾಕು ತಾಯಿಗೂ ಜಗಳ ನಡೆದು ಹೊಂದಾಣಿಕೆಯ ಹಂತ ಮೀರಿ ಪರಿಸ್ಥಿತಿ ಬಿಗಡಾಯಿಸಿತು. ಆಗ ಉಮಾಶ್ರೀ ಅದೇ ಮನೆಯಲ್ಲಿ ಪ್ರತ್ಯೇಕವಾಗಿದ್ದ ಬಚ್ಚಲು ಮನೆಯಲ್ಲಿ ಪ್ರತ್ಯೇಕವಾಗಿ ಉಳಿದುಕೊಳ್ಳುವುದಕ್ಕೆ ಆರಂಭಿಸಿದರು. ಕಡೆಗೂ ಅಲ್ಲಿದ್ದರೂ ಕೂಡ ತಾಯಿ ಮತ್ತು ಮಗಳಿಗೆ ಹೊಂದಾಣಿಕೆಯಾಗದೆ ಜಗಳ ಮಿತಿ ಮೀರಿ ಬೆಳೆಯುತ್ತಿತ್ತು.

ಜಗಳ ವಿಕೋಪಕ್ಕೆ ಹೋದಾಗ ಅವರ ಸಾಕು ತಾಯಿ ಊರೋರೆಲ್ಲಾ ಗಂಡ ಬಿಟ್ಟ ಮಗಳನ್ನು ಮನೆಯಲ್ಲಿ ಇಟ್ಟು ಕೊಂಡಿದ್ದಾರೆ ಎಂದು ನನ್ನನ್ನು ಹಂಗಿಸುತ್ತಾರೆ, ಒಂದೋ ನೀನು ಗಂಡನ ಮನೆಗೆ ಹೋಗು, ಅಥವಾ ಎಲ್ಲಾದರೂ ಹೋಗಿ ಸಾಯಿ, ಅಂತೂ ನನ್ನ ಮನೇಲಿ ನೀನು ಇರಕೂಡದೆಂದು ಆರ್ಭಟಿಸಿದರು. ಆಗ ಉಮಾಶ್ರೀ ತಮ್ಮಲ್ಲಿ ಕೂಡಿಟ್ಟಿದ್ದ 15 ರಿಂದ 20ರೂ ತೆಗೆದುಕೊಂಡು ಸೂಟ್‌ಕೇಸ್ನಲ್ಲಿ ಎರಡು ಸೀರೆ ತೆಗೆದುಕೊಂಡು ನಾಟಕ ಕಂಪನಿಯಲ್ಲಿ ಕೆಲಸ ಮಾಡುವ ತಮ್ಮ ಬಂಧುಗಳೊಬ್ಬರ ಮನೆಗೆ ಆಶ್ರಯವನ್ನರಿಸಿ ತುಮಕೂರಿಗೆ ಹೋದರು. ಆದರೆ ಆ ಸಂಬಂಧಿಕರ ಮನೆಯಲ್ಲಿ ಹೆಚ್ಚು ದಿನ ಆಶ್ರಯ ಸಿಗಲಿಲ್ಲ. ಅಲ್ಲಿಂದ ದಿಕ್ಕೆಟ್ಟು ಉಮಾಶ್ರೀ ಮುಂದೇನೆಂದು ಯೋಚಿಸುತ್ತಾ ಅಲೆದಾಡುತ್ತಿರುವಾಗ ಆ ಕಾಲದಲ್ಲಿ ನಾಟಕದವರಿಗೆಲ್ಲಾ ಬಹಳ ಪರಿಚಯವಾಗಿದ್ದ ಮೂರ್ತಿ ಅಣ್ಣ ಎಂಬಾತ ಉಮಾಶ್ರೀಯನ್ನು ಏಕೆ ಅಳುತ್ತಿರುವೆ ಎಂದು ಕಾರಣ ವಿಚಾರಿಸಿದ. ಮೂರ್ತಿಯವರು ಆಗಿನ ಕಾಲಕ್ಕೆ ಪೌರಾಣಿಕ ನಾಟಕದ ಡ್ರೆಸ್ಸು, ಮೇಕಪ್ಪು ಎಲ್ಲಾ ಇಟ್ಟುಕೊಂಡು ಊರಿಂದ ಊರಿಗೆ ಅದನ್ನು ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲದೆ ನಾಟಕಕ್ಕೆ ಕಲಾವಿದರನ್ನು ಹುಡುಕಿ ಕೊಡುತ್ತಿದ್ದರು. ಆಗ ಉಮಾಶ್ರೀ ಅವರಿಗೆ ನೋಡಣ್ಣಾ ನನ್ನಿಂದ ಬದುಕಲು ಸಾಧ್ಯವಿಲ್ಲ, ಸಾಯಬೇಕು ಎನಿಸುತ್ತಿದೆ ಎಂದು ಅತ್ತಾಗ, ಉಮಾಶ್ರೀಯವರ ಪರಿಸ್ಥಿತಿಯನ್ನರಿತ ಮೂರ್ತಿಯವರು ನಾನೀಗ ನಾಟಕಕ್ಕೆ ಮಧುಗಿರಿಗೆ ಹೊರಟಿದ್ದೀನಿ, ನೀನೂ ನನ್ನೊಂದಿಗೆ ಬಾ. ಮುಂದಿನದು ಮತ್ತೆ ನೋಡೋಣವೆಂದು ಅವರನ್ನು ಕರೆದುಕೊಂಡು ಹೋದರು.

ಅಲ್ಲಿ ನಾಟಕ ನೋಡಿ ಆ ದಿನ ಕಳೆದರು. ಮರುದಿನ ಮಧುಗಿರಿಯಿಂದಾಚೆ ಪುರವರದ ಹಳ್ಳಿಯವರು ಮಾರ್ತಿಯವರನ್ನು ನೋಡಲು ಬಂದಿದ್ದರು. ಅವರಾಡುವ ನಾಟಕಕ್ಕೆ ರುಕ್ಮಿಣಿ ಪಾತ್ರಕ್ಕೆ ಒಂದು ಕಲಾವಿದೆ ಬೇಕಾಗಿತ್ತು. ಕೊನೆಗೆ ಅದೇ ಮಾರ್ತಿ ಅಣ್ಣ ಉಮಾಶ್ರೀಯವರನ್ನು ತೋರಿಸಿ ಈ ಹುಡುಗಿಯನ್ನು ಕರೆದುಕೊಂಡು ಹೋಗಿ, ಈಕೆ ರುಕ್ಮಿಣಿ ಪಾತ್ರ ಮಾಡುತ್ತಾರೆ ಎಂದರು. ಉಮಾಶ್ರೀಗೆ ನಾಟಕ ಅಂದರೆ ಏನೆಂದೂ ಗೊತ್ತಿರಲಿಲ್ಲ. ಹೋಗಮ್ಮ ಇವರೊಂದಿಗೆ ಪಾರ್ಟು ಕಲಿ ನಾಲ್ಕು ಕಾಸೂ ಸಿಗುತ್ತದೆ. ಹೇಗಾದರೂ ಬದುಕ ಬಹುದು ಎಲ್ಲಾ ಸರಿ ಹೋಗುತ್ತದೆಂದು ಪುರವರದ ಹಳ್ಳಿಯ ಜನರೊಂದಿಗೆ ನಾಟಕಕ್ಕೆ ಕಳಿಸಿದರು. ಆಗ "ನಾ ಒಲ್ಲೆ ಹೋಗಲ್ಲ ಅಂದು ಬಿಡಲೋ, ಹಾಗೊಮ್ಮೆ ಹೇಳಿದ್ರೆ ಇನ್ನೆಲ್ಲಿಗೆ ಹೋಗಲಿ. ವಾಪಸ್ಸು ತುಮಕೂರಿಗೆ ಹೋದರೆ ಮಾಡುವುದೇನನ್ನು? ಉಳಿಯಲಿಕ್ಕೆ ಆಶ್ರಯವಿಲ್ಲ, ನಿಲ್ಲಲು ನೆರಳಿಲ್ಲ, ಉಡಲು ಬಟ್ಟೆ ಇಲ್ಲ. ಊಟ ಮಾಡಲು ಕೂಳಿಲ್ಲ. ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಪಾಲಿಗೆ ಬಂದಿದ್ದು, ಎಂದು ಒಲ್ಲದ ಮನಸ್ಸಿನಿಂದಲೇ

ಪುರವರಕ್ಕೆ ಹೊರಟೆ, ಮುಂದಿನ ಒಂದು 15 ದಿನಗಳ ಹೊಟ್ಟೆ ಪಾಡು ಆಯ್ತಲ್ಲ–ಮುಂದಿನದು ಮತ್ತೆ ಗಾಳಿ ಬಂದಂತೆ ತೂರಿಕೊಳ್ಳುವುದೊಂದೇ ದಾರಿ. ನನ್ನ ಮನಸ್ಸಿನ ಮಿಡಿತಕ್ಕಾಗಲೀ, ಹೃದಯದ ತುಡಿತಕ್ಕಾಗಲೀ ಆ ಹೊತ್ತಿನಲ್ಲಿ ಬೆಲೆಯೂ ಇರಲಿಲ್ಲ. ಆಯ್ಕೆಯ ಅವಕಾಶವೂ ಇದ್ದಿರಲಿಲ್ಲ."[7] ಪುರವರದಿಂದ ನಾಟಕ ಮುಗಿಸಿಕೊಂಡು ದೇವದಾಸಿ ನಾಟಕ ಪ್ರದರ್ಶನಕ್ಕೆ ಚೇರ್ ಮನ್ ನಂಜಪ್ಪನವರೊಂದಿಗೆ ಸಿದ್ನಳ್ಳಿ ತಲುಪಿದರು. ಅಲ್ಲಿ ನಾಟಕ ಮುಗಿಸುವ ಹೊತ್ತಿಗೆ ಉಮಾಶ್ರೀಯವರು ಎರಡನೇ ಮಗುವಿಗೆ ಗರ್ಭಿಣಿಯಾಗಿ ದಿನ ತುಂಬಿತ್ತು. ಆಗ ಉಮಾಶ್ರೀಯವರನ್ನು ಕರೆಯಲು ಅವರ ಸಾಕು ತಾಯಿ, ತಂದೆ ಬಂದಿದ್ದರು. ಕಡೆಗೆ ಚೇರ್‌ಮನ್ ನಂಜಪ್ಪನವರು ಉಮಾಶ್ರೀಯವರಿಗೆ ನೀನು ಹೋಗಮ್ಮ ಮನೆಗೆ ನಿನಗೂ ದಿನ ತುಂಬಿದೆ, ಈವರೆಗೆ ಏನೋ ಆಯಿತು. ಇನ್ನು ಹೆರಿಗೆ, ಬಾಣಂತನ ಯಾರು ನೋಡುತ್ತಾರೆ ಎಂದು ಬುದ್ಧಿ ಹೇಳಿದರು. ಆಗ ಉಮಾಶ್ರೀ ಸಾಕು ತಾಯಿಯ ಮನೆಗೆ ವಾಪಸ್ಸು ಬಂದರು.

ವಾಪಸ್ಸು ತಾಯಿ ಮನೆಗೆ ಬಂದರೆ ಬೆಳಗ್ಗೆಯಿಂದ ರಾತ್ರಿಯವರೆಗೂ ಮತ್ತೆ ತಾಯಿ ಮಗಳಿಗೆ ರಣರಂಗ. ಮೈ ತುಂಬಾ ಕೆಲಸ, ಎರಡನೆಯ ಹೆರಿಗೆಯಾದ ನಂತರ ಉಮಾಶ್ರೀಗೆ ಅವರ ತಾಯಿ ಈಗ ಎಲ್ಲಿಗೆ ಹೋಗಬೇಕು ಅಂತ ಮಾಡಿದ್ದಿ? ಎಂದಾಗ ಉಮಾಶ್ರೀಗೆ ಆಘಾತವಾಯಿತು. ಸದ್ಯಕ್ಕೆ ಮನೆಗೆ ಹೋಗೋಣ ಮುಂದೆ ನೋಡಿಕೊಳ್ಳುತ್ತೇನೆ ಎಂದರು. ಮನೆಗೆ ಬಂದ ಮೇಲೆ ಹೆರಿಗೆಯಾದ ಒಂಭತ್ತು ದಿನಗಳಲ್ಲೇ ಕೆಲಸ ಮಾಡಲು ತೊಡಗಿದರು. ತಾಯಿಯ ತಿರಸ್ಕಾರದಿಂದ ಇವರಿಗೆ ಸರಿಯಾದ ಬಾಣಂತನ ಆಗಲಿಲ್ಲ. ಜೊತೆಗೆ ಸಾಕುತಾಯಿಯ ಬಯ್ಗುಳ, ನಿಷ್ಕರುಣೆ, ಮೂದಲಿಕೆ ಮುಂದುವರಿದಿತ್ತು. ಆದರೂ ಇವರು ತಮ್ಮ ಎರಡು ಕಂದಮ್ಮಗಳಿಗಾಗಿ ಮೌನವಾಗಿದ್ದು ಎಲ್ಲವನ್ನೂ ಸಹಿಸಿಕೊಂಡರು. ನಂತರದಲ್ಲಿ ನರ್ಸರಿ ಟೀಚರ್ ಟ್ರೈನಿಂಗ್ ಮಾಡಲು ಅನುಮತಿ ಕೇಳಿದಾಗ ಮನೆಕೆಲಸ ಮಾಡುವುದು ಯಾರು? ನಿನ್ನ ಮಕ್ಕಳನ್ನು ನೋಡಿಕೊಳ್ಳೋದು ಯಾರು ಎಂದು ಸಾಕುತಾಯಿ ಪ್ರಶ್ನಿಸಿದರು. ಕಡೆಗೆ ಬೆಳಗ್ಗೆ ಬೇಗ ಎದ್ದು ಎಲ್ಲ ಕೆಲಸ ಮುಗಿಸಿ ಮಕ್ಕಳನ್ನು ರೆಡಿ ಮಾಡಿಕೊಂಡು ತರಬೇತಿಗೆ ಹೋಗುತ್ತಿದ್ದರು. ದಾರಿಯಲ್ಲಿ ಮಕ್ಕಳನ್ನು ಕರೆದುಕೊಂಡು ನಡೆದುಕೊಂಡು ಬರುವಾಗ ಚಾಮರಾಜಪೇಟೆಯ ವಿಲ್ಸನ್‌ಗಾರ್ಡನ್ ಬಳಿ ಒಂದು ನಾಟಕದ ರಿಹರ್ಸಲ್ ನಡೆಯುತ್ತಿತ್ತು. ಅದನ್ನು ನೋಡುತ್ತಾ ಉಮಾಶ್ರೀ ಅಲ್ಲಿ ನಿಲ್ಲುತ್ತಿದ್ದರು. ಈ ಹಿಂದೆ ಅವರಿಗಿದ್ದ ನಾಟಕದ ಪೂರ್ವಾನುಭವದಿಂದ ಇವರು ಪಾರ್ಟುಕೊಟ್ಟರೆ ಉಮಾಶ್ರೀಯವರು ಪಾರ್ಟ್ ಮಾಡಬಹುದಲ್ಲವೇ ಎಂದುಕೊಂಡರು. ಒಂದು ದಿನ ನೇರವಾಗಿ ಹೋಗಿ ಕೇಳಿಬಿಟ್ಟರು. ಆಗ ಮೈಕೋ ಚಂದ್ರು ಎನ್ನುವವರ ಸಹಾಯದಿಂದ 'ರಂಗ ಸಂಪದ'ಕ್ಕೆ ನಟಿಸುವ ಅವಕಾಶ ಉಮಾಶ್ರೀಯವರಿಗೆ ದೊರೆಯಿತು. ನರ್ಸರಿ, ಟ್ರೈನಿಂಗ್ ಮಾಡಿದ್ದರಿಂದ ಇವರಿಗೆ ಒಂದು ನರ್ಸರಿ ಸ್ಕೂಲ್ಲಲ್ಲಿ ಕೆಲಸವೂ ಸಿಕ್ಕಿತು. ಇದರ ಜೊತೆ ಜೊತೆಗೆ ಹವ್ಯಾಸಿ ರಂಗಭೂಮಿ ಮತ್ತು ಗ್ರಾಮೀಣ ರಂಗಭೂಮಿಗೆ ಉಮಾಶ್ರೀ ತೆರಳಿದರು. ನಂತರ ಕ್ರಮೇಣವಾಗಿ ಚಿಕ್ಕ ಚಿಕ್ಕ ಪಾತ್ರಗಳಿಂದ ಆರಂಭಿಸಿ ನಾಟಕದಲ್ಲಿ ತಮ್ಮನ್ನು ಶ್ರದ್ಧೆಯಿಂದ ಉಮಾಶ್ರೀ

ತೊಡಗಿಸಿಕೊಂಡರು. ನಾಟಕಗಳು, ಅನಂತರ ಕೈಗಾರಿಕಾ ನಾಟಕಗಳಿಗೆ ಉಮಾಶ್ರೀ ತಮ್ಮನ್ನು ತೊಡಗಿಸಿಕೊಂಡರು. ಸ್ಪರ್ಧಾ ನಾಟಕಗಳಲ್ಲಿ ಅಭಿನಯಿಸಲು ಆರಂಭಿಸಿದರು. ಕೈಗಾರಿಕಾ ನಾಟಕ, ಐಟಿಐ, ಎಚ್.ಎ.ಎಲ್, ಎನ್.ಜಿ.ಎಫ್, ಬಿ.ಇ.ಎಲ್ ಹೀಗೆ ವಿವಿಧ ಕೈಗಾರಿಕಾ ನಾಟಕಗಳಲ್ಲಿ ತೊಡಗಿಸಿಕೊಂಡರು. ಹವ್ಯಾಸಿ ರಂಗಭೂಮಿಯಲ್ಲಿ ರಂಗಸಂಪದ, ಬೆನಕ ಸಮುದಾಯ, ನಾಟ್ಯರಂಗ, ನಟನಾರಂಗ, ಯುವರಂಗ ಹೀಗೆ ಬೇರೆ ಬೇರೆ ತಂಡಗಳಿಗೆ ಅನಿವಾರ್ಯವಾದ ಪುರುಸೊತ್ತಿಲ್ಲದ ನಟಿಯಾದರು. “ನಾನಿಲ್ಲಿಗೆ ಬಂದದ್ದು ಕಲಾ ಸೇವೆಗಲ್ಲ. ಒಬ್ಬ ಕಲಾವಿದೆಯಾಗಿ ನನ್ನ ನಂಬಿದವರ ಹೊಟ್ಟೆಗಳಿಗೆ ಅನ್ನ, ಆಶ್ರಯ, ವಿದ್ಯೆ ಮತ್ತು ಭವಿಷ್ಯ ಕಲ್ಪಿಸಿಕೊಳ್ಳಲು.”[8] ಉಮಾಶ್ರೀಯವರು ಮುಂದೆ ಚಲನಚಿತ್ರ ರಂಗ ಪ್ರವೇಶಿಸಿ ಕಾಶೀನಾಥರ ‘ಅನುಭವ’ ಸಿನಿಮಾದಲ್ಲಿ ಅಭಿನಯಿಸಿದರು. ಆದರೆ ‘ಅನುಭವ’ ಸಿನಿಮಾ ಬಿಡುಗಡೆಯಾದ ನಂತರ ಸಾಮಾಜಿಕ ಬದುಕಿನಲ್ಲಿ ಉಂಟಾದ ವ್ಯತಿರಿಕ್ತ ಪ್ರಕ್ರಿಯೆಗಳನ್ನು ಗಮನಿಸಿ ಮುಂದೆ ಅಂತಹ ಪಾತ್ರ ಮಾಡಬಾರದೆಂದುಕೊಂಡರು. “ನಾಟಕದಲ್ಲಿ ಐನೂರೋ ಸಾವಿರವೋ, ಸಿಗುತ್ತಿತ್ತು ಅಂತ. ಆದ್ರೆ ಸಿನಿಮಾದಲ್ಲಿ ಅದಕ್ಕಿಂತ ಹೆಚ್ಚು ಸಿಗ್ತಿತ್ತು. ಅದಕ್ಕೆ ನಾಟಕಕ್ಕಿಂತ ಸಿನಿಮಾವನ್ನು ನೆಚ್ಚಿಕೊಳ್ಳಲು ಯತ್ನಿಸಿದೆ. ನಾನು ಆ ಪಾತ್ರ ಮಾಡಲ್ಲ, ಇದನ್ನು ಒಪ್ಕೊಳಲ್ಲ ಅಂತಿದ್ರೆ ಪಾತ್ರ ಸಿಗುತ್ತಿರಲಿಲ್ಲ! ಆಮೇಲೆ ಬಂದ ಪಾತ್ರಗಳನ್ನೆಲ್ಲಾ ಒಪ್ಪುತ್ತಾ ಹೋದೆ. ಕಾಮರೂಪೀ ಪಾತ್ರಗಳೇ ಬಂದ್ವು, ಬೇಕು ಬೇಕುಂತ್ಲೆ ಸೆರಗು ಜಾರ್ಸೋ ಹಾಡು, ಏನೇನೋ ಅರ್ಥ ಬರೋ ರೀತಿ ನಾಲಿಗೆ ತಿರುಚಿ ಮಾತಾಡಿಸೋದು, ಮೊಣಕಾಲಿನಿಂದ ಗಂಟಿನವರೆಗೆ ಸೀರೆ ಎಳೆಸೋದು ಎಲ್ಲಾ ಮಾಡಿಸ್ತಾನೆ ಹೋದ್ರು.”[9]

ಹೊಟ್ಟೆ ಪಾಡಿಗಾಗಿ ರಂಗಭೂಮಿಗೆ ಬಂದ ಉಮಾಶ್ರೀ ರಂಗಭೂಮಿಯಲ್ಲಿ ಗಟ್ಟಿಯಾಗಿ ನಿಂತರು. ನಂತರ ಹೊಟ್ಟೆ ಪಾಡಿನ ಅನಿವಾರ್ಯತೆಗಾಗಿ ಚಿತ್ರರಂಗವನ್ನು ಪ್ರವೇಶಿಸಿದ ಆರಂಭದಲ್ಲಿ ರಂಗಭೂಮಿಯ ಗಟ್ಟಿ ನಟಿಯಾಗಿದ್ದರೂ ಕೂಡ ಚಿತ್ರರಂಗದಲ್ಲಿ ಸೋತಿದ್ದರು.

ಕೊನೆ ಟಿಪ್ಪಣಿಗಳು

1. ನೋಡಿ, : ಮಯೂರ ಸಂಪುಟ : 54 :ಸಂಚಿಕೆ : 03 ಮಾರ್ಚ್, 2021 : ಪುಟ 124
2. ಗಣಪತಿ ಬಿ. : ನಿರೂಪಣೆ : ಬೆಂಕಿ ಬೆಡಗು : 2013 : ಪುಟ 5
3. ಅದೇ, ಪುಟ 9
4. ಅದೇ, ಪುಟ 12
5. ಅದೇ, ಪುಟ 13
6. ಅದೇ, ಪುಟ 14
7. ಅದೇ, ಪುಟ 17
8. ಅದೇ, ಪುಟ 34
9. ಅದೇ, ಪುಟ 34

***

ಸ್ತ್ರೀ ವ್ಯಕ್ತಿ ಪ್ರಜ್ಞೆಯ ಅಭಿವ್ಯಕ್ತಿಯ ಪ್ರತಿಫಲನ : ಮಾನವಿ

1 ಷಣ್ಮುಖಪ್ಪ ಕೆ ಎಚ್
ಸಹಾಯಕ ಪ್ರಾಧ್ಯಾಪಕರು
ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚನ್ನಗಿರಿ – 577213
shanukh007@gmail.com

ಯುವ ಕಾದಂಬರಿಕಾರ ಗೊರವಿನಕಲ್ಲು ನಾಗರಾಜು ಅವರು ಅನುವಾದಿಸಿರುವ 'ಮಾನವಿ' ಕಾದಂಬರಿ ಕನ್ನಡ ಅನುವಾದ ಸಾಹಿತ್ಯಕ್ಕೆ ಸ್ತ್ರೀವಾದಿ ಚಿಂತನೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ತೆಲಗು ಸಾಹಿತ್ಯದಲ್ಲಿ 'ಓಲ್ಗಾ' ಕಾವ್ಯನಾಮದಿಂದ ಗುರುತಿಸಿಕೊಂಡಿರುವ ಪೋಪುರಿ ಲಲಿತಾ ಕುಮಾರಿ ಅವರು 1980ರ ದಶಕದಲ್ಲಿ ಬರೆದ ಈ ಕಾದಂಬರಿ ಸಮಾಜದಲ್ಲಿ ಸ್ತ್ರೀಯ ಬದುಕು ಪುರಷಕೇಂದ್ರಿತವಾದ ಸಾಮಾಜಿಕ ಬದುಕಿನ ಮಾದರಿಗಳನ್ನು ಪ್ರತಿಭಟಿಸಿ, ಸ್ತ್ರೀ ಕೂಡ ಪುರುಷನಂತೆ ಮನುಷ್ಯಳು ಎಂಬ ಪ್ರತಿಪಾದನೆಯನ್ನು ಜೀವಪರ ಹಾಗೂ ಮಾನವೀಯ ನೆಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಆ ಕಾದಂಬರಿಯನ್ನು ಕನ್ನಡಕ್ಕೆ ಅಷ್ಟೇ ಸಮರ್ಥವಾಗಿ ಲೇಖಕರು ಅನುವಾದ ಮಾಡಿದ್ದಾರೆ. ಈ ಕಾದಂಬರಿಯ ಮೂಲಕ ಅದು ನಿರೂಪಿತವಾಗಿದೆ.

ಮಾನವಿ ಕಾದಂಬರಿ ಕನ್ನಡಕ್ಕೆ ಸಿಕ್ಕ ಒಂದು ಉತ್ತಮ ಕಾದಂಬರಿ. ಈ ಕಾದಂಬರಿಯಲ್ಲಿ ಮುಖ್ಯಪಾತ್ರವಾಗಿ ಕಾಣಿಸಿಕೊಳ್ಳುವ ವಸಂತಳ ಪಾತ್ರ ಭಾರತೀಯ ಸಮಾಜದ ಮೇಲ್ವರ್ಗದ ಮಹಿಳೆ, ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದೂ, ಹೇಗೆ ಪುರಷನಿರ್ಮಿತ ಜೀವನದ ಮಾದರಿಗಳನ್ನು ಅನುಸರಿಸುವ ಸಮರ್ಥ ಅಭಿವ್ಯಕ್ತಿಯಾಗಿ ಜೀವನ ನಡೆಸುತ್ತಾ ಆ ಜೀವನವೇ ಬದುಕಿನ ಶ್ರೇಷ್ಠ ಮಾದರಿ ಎಂದು ಭಾವಿಸಿರುವ

ಕೋಟ್ಯಂತರ ಭಾರತೀಯರ ಮಹಿಳೆಯರ ಧ್ವನಿಯಾಗಿ ಬದುಕುತ್ತಿರುವಾಗ, ತನ್ನ ವೈಯಕ್ತಿಕ ಬದುಕಿನಲ್ಲಿ ಆದ ಬದಲಾವಣೆ ಆಕೆಯನ್ನು ಸ್ತ್ರೀ ಕೂಡ ಪುರಷನಂತೆ ಮನುಷ್ಯಳು, ಈ ಸಮಾಜದಲ್ಲಿ ತಾನು ಕೂಡ ಪುರುಷನಂತೆ ಒಬ್ಬ ವ್ಯಕ್ತಿ ಎನ್ನುವ ವ್ಯಕ್ತಿಪ್ರಜ್ಞೆ ಯನ್ನು ಪಡೆದುಕೊಳ್ಳುತ್ತಾಳೆ.

ಸ್ತ್ರೀ ಕೇಂದ್ರಿತ ಚಿಂತನೆಗೆ ವ್ಯಾಪಕವಾಗಿ, ಶಾಸ್ತ್ರೀಯವಾಗಿ ಹಾಗೂ ಪ್ರಭಾವಶಾಲಿಯಾದ ಪ್ರತಿನಿಧಿಯಾಗಿ ಕೆಲಸಮಾಡಿದ ಫ್ರಾನ್ಸನ ಸಿಮೋನ್ ದ ಬೋವಾ ಅವರು ತನ್ನ ಕೃತಿಯಾದ 'ದ್ವಿತೀಯ ಲಿಂಗ' (ದ ಸೆಕೆಂಡ್ ಸೆಕ್ಸ್) ಕೃತಿಯಲ್ಲಿ 'ಇಂದು ಸ್ತ್ರೀಯು' ಎಂಬ ಎರಡನೆ ಭಾಗದಲ್ಲಿ ಸ್ತ್ರೀಯ ಪಾಲನೆ, ಅವಳಿಗೆ ನೀಡುವ ಶಿಕ್ಷಣ, ಅವಳ ಸಾಮಾಜಿಕ ಪರಿಸ್ಥಿತಿ, ಇವೆಲ್ಲವೂ ಹೇಗೆ ಸ್ತ್ರೀಯನ್ನು ಪೂರ್ವನಿರ್ಧಾರಿತ ಪ್ರಕಾರದಲ್ಲಿ ನಿಯಂತ್ರಿಸಿ ಸ್ವತ: ಅವಳೇ ತನ್ನ ಪರಾದೀನ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತವೆ ಎಂಬುದನ್ನು ವಿವರಿಸಿದ್ದಾರೆ. ಹಾಗೂ ಆ ಕೃತಿಯ ಕೊನೆಯ ಭಾಗದಲ್ಲಿ ಸ್ತ್ರೀ ತನ್ನ ಪರಾಧೀನ ಸ್ಥಿತಿಯಿಂದ ಹೊರಬರಬೇಕಾದರೆ ಮಾಡಬೇಕಾದ ಸಾಮಾಜಿಕ–ವೈಚಾರಿಕ ಪರಿವರ್ತನೆಗಳ ಚರ್ಚೆಯಿದೆ. ಸಿಮೋನ್ ದ ಬೋವಾ ಅವರ ಸ್ತ್ರೀಪರವಾದ ಚಿಂತನೆಯ ಪ್ರತಿಫಲನ ಎನ್ನುವಂತೆ ಈ ಮಾನವಿ ಕಾದಂಬರಿ ಆಶಯ ಅಭಿವ್ಯಕ್ತವಾಗಿದೆ.

ಈ ಕಾದಂಬರಿಯಲ್ಲಿನ ಮೂವರು ಸ್ನೇಹಿತೆಯರ ಪಾತ್ರಗಳು ಗೃಹಿಣಿ ವಸಂತ, ವೈದ್ಯೆ ರೋಹಿಣಿ, ಪ್ರಾಂಶುಪಾಲಳಾದ ಶಾಂತ. ವಸಂತಳು ಸುರೇಶನ ಹೆಂಡತಿ ಭಾರತೀಯ ಸಮಾಜದ ಸಂಪ್ರದಾಯಬದ್ಧ ಜೀವನಶೈಲಿಯನ್ನು ರೂಡಿಸಿಕೊಂಡು ಆ ಜೀವನಶೈಲಿಯೇ ಮಾನವ ಬದುಕಿನ ಮಾದರಿಯ ಸ್ವರೂಪ ಎಂಬದನ್ನು ಅನುಸರಿಸಿಕೊಂಡು ಹೋಗುವ ಪಾತ್ರ, ಆಕೆಯ ಗಂಡ ಸುರೇಶ ವೃತ್ತಿಯಿಂದ ವೈದ್ಯನಾಗಿದ್ದು ಕಳೆದ ಇಪ್ಪತ್ತು ವರ್ಷದಿಂದ ಸಹಜೀವನ ನಡೆಸುತ್ತಿದ್ದು, ಸ್ನೇಹಿತೆ ನೀಲಿಮಾ ಮೇಲೆ ಮೂಡಿದ ಅನುರಾಗವು ಸಾವಯವವಾಗಿದ್ದು, ತನ್ನ ಹೆಂಡತಿಯ ಜೊತೆಗಿನ ಬದುಕು ಸಮಾಜದ ಸಂಪ್ರದಾಯಬದ್ಧ ಒತ್ತಾಯದ ಬದುಕಿಗೆ ತಿರಸ್ಕಾರ ತೋರಿಸುತ್ತಾ, ಆದರೆ ಮಗಳ ವೈಯಕ್ತಿಕ ಬದುಕಿಗೆ ಸ್ವಾತಂತ್ರ್ಯ ನೀಡುವ ಆಕೆಯನ್ನು ಸ್ವಾವಲಂಬಿಯಾಗಿ ಬದುಕಲು ಮಾರ್ಗದರ್ಶಕನಾಗಿ, ಪುರುಷನಲ್ಲಿರಬಹುದಾದ ಸ್ತ್ರೀ ಸಂವೇದನಾಶೀಲ ಪ್ರಜ್ಞೆಯಿರುವ ವ್ಯಕ್ತಿಯಾಗಿಯೂ, ವಸಂತಳು ಪೂರ್ವನಿರ್ಧಾರದ ಸಂಪ್ರದಾಯಬದ್ದ ಜೀವನ ದೃಷ್ಟಿಕೋನದಿಂದ ವಿಶಾಲಪ್ರಜ್ಞೆಯಾಗಿ ಸ್ತ್ರೀ ಸಂವೇದನಾ ವ್ಯಕ್ತಿಯಾಗಿ ಬದಲಾಗುವಲ್ಲಿ ಸುರೇಶನ ಪಾತ್ರ ಜೀವಪರವಾಗಿ ಮೂಡಿಬಂದಿದೆ. ಆಕೆಗೆ ಇಬ್ಬರು ಹೆಣ್ಣು ಮಕ್ಕಳು ಹಿರಿಯವಳು ಲಾವಣ್ಯ ಮದುವೆಯಾಗಿದ್ದು ತನ್ನ ತಾಯಿಯ ಕೌಟಂಬಿಕ ಮಾದರಿಯನ್ನು ಅನುಸರಿಸುವಳು. ಆ ಕಾರಣಕ್ಕೆ ತಾಯಿಗೆ

ಆರಂಭದಲ್ಲಿ ಅಚ್ಚುಮೆಚ್ಚು, ನಂತರ ನವತಳು ತಾಯಿಯ ಸ್ವಾವಲಂಬನೆಯ ಬದುಕಿನಲ್ಲಿ ಬಹುಮುಖ್ಯ ಪಾತ್ರವಹಿಸುವಳು. ಕಿರಿಯವಳು ನವತಳು ಆಕೆಯು ಈ ಸಮಾಜದಲ್ಲಿ ಹೆಣ್ಣಾಗಿ ಹುಟ್ಟಿದ್ದು ಸಮಾಜದ ಸಿದ್ದಮಾದರಿಯ ಸ್ತ್ರೀಯ ಎಲ್ಲಾ ಮಾದರಿಗಳನ್ನು ಮುರಿದು ವ್ಯಕ್ತಿಯಾಗಿ ಪ್ರತಿಫಲನವಾಗುವ ಪ್ರಗತಿಪರ, ಮಾನವೀಯಪರ, ಜೀವಪರ ಕಾಳಜಿಯ ಹೋರಾಟದ ಕೆಚ್ಚು ತಂಬಿರುವ ಪಾತ್ರವಾಗಿ ತಂದೆಯ ನೆಚ್ಚಿನ ಮಗಳು. ರೋಹಿಣಿ ವೃದ್ಯೆಯಾಗಿ ವಸಂತ ಮತ್ತು ಶಾಂತಳ ಸ್ನೇಹದಲ್ಲಿ ಪರಿಪಕ್ವವಾದ ಚಿಂತನೆ ಮತ್ತು ವರ್ತನೆಯನ್ನು ಹೊಂದಿದ ವ್ಯಕ್ತಿಯಾಗಿ ಪ್ರತಿಫಲನವಾಗಿದ್ದಾರೆ. ಶಾಂತಳ ಪಾತ್ರ ಸ್ತ್ರೀಯು ಈ ಸಮಾಜದ ವ್ಯಕ್ತಿಯಾಗಿ ಬದುಕುವ ಮಾದರಿಯಾಗಿ, ವಸಂತಳು ಸಿದ್ಧಮಾದರಿಯ ಸ್ತ್ರೀ ಸಂವೇದನೆಯಿಂದ ಜೀವನದಿಂದ ವ್ಯಕ್ತಿ ಮಾದರಿ ಜೀವನಕ್ಕೆ ಪರಿವರ್ತನೆಯಾಗುವಲ್ಲಿ ನೈತಿಕವಾಗಿ ಬೆಂಬಲವಾಗಿ ಶಾಂತಳ ಪಾತ್ರ ಪರಿಪಕ್ವವಾಗಿ ಮೂಡಿ ಬಂದಿದೆ.

ಈ ಕಾದಂಬರಿಯಲ್ಲಿ ವಸಂತಳ ಎರಡನೆ ಮಗಳಾದ ನವತಳ ಪಾತ್ರವು ಆಧುನಿಕ ಶಿಕ್ಷಿತ ಮಹಿಳೆ ಬದುಕನ್ನು ಹೇಗೆ ಸ್ವಿಕರಿಸಬೇಕು ಹಾಗೂ ಕುಡುಂಬದಲ್ಲಿನ ನೈತಿಕ ಅಮೂರ್ತ ಸ್ವರೂಪಗಳಾದ ಗೌರವ, ಮಾನ, ಮರ್ಯಾದೆ, ಭಯ, ಅಂಜಿಕೆ, ನಾಚಿಕೆ ಈ ಸಿದ್ಧ ಮಾದರಿಯ ಸ್ವಭಾವಗಳಿಗೆ ಸಾವಯವ ಜೀವಂತಿಕೆ ಇಲ್ಲ, ಕುಟುಂಬದಲ್ಲಿ ಪರಸ್ಪರ ಸ್ನೇಹ, ಸಂವಾದ, ಪ್ರೀತಿ, ಮಮತೆ, ಮೈತ್ರಿ ತ್ಯಾಗಗಳು ಬದುಕನ್ನು ಪ್ರೀತಿಸುವಂತೆ ಮಾಡುತ್ತವೆ. ಅಷ್ಟೇ ಅಲ್ಲ ಹೆಣ್ಣು ಮದುವೆಯಾಗದೇ ಬದುಕುವುದು ಸಾಧ್ಯ ಎಂಬುದನ್ನು ಪ್ರತಿಪಾದಿಸಿದ್ದಾರೆ. ಸ್ತ್ರೀ ಬದುಕಿಗೆ ಹೊಸ ಸಂವೇದನೆಯ ಚಿಂತನೆಗಳು ಬದುಕನ್ನು ಈ ಹೊಸ ದಾರಿಯಲ್ಲಿ ನೊಡುವುದಕ್ಕೂ ಪ್ರೇರೆಪಿಸುತ್ತದೆ. ಅದಕ್ಕೆ ಆಕೆಯ ಪಾತ್ರ ಉತ್ತಮ ಉದಾಹರಣೆ. ವಿಶಾಖಪಟ್ಟಣದಲ್ಲಿ ಶಿಕ್ಷಣ ಪಡೆಯುತ್ತಿರುವಾಗ ಸ್ನೇಹಿತರು ಕೇವಲ ಮೋಜು ಮಸ್ತಿಗಾಗಿ ಜೀವನವನ್ನು ನೋಡುವ ಬದಲಾಗಿ, ಸಿದ್ಧಾಂತವನ್ನು ನಂಬಿ ಹೋರಾಟ ಮಾಡುವ, ಕಾಲೇಜಿನ ಅವ್ಯವಸ್ಥಿತ ನಿಯಮಗಳ ವಿರುದ್ಧ ಪ್ರತಿಭಟಿಸುವ, ಸ್ನೇಹಿತೆಯ ವಿವಾಹಪೂರ್ವ ಲೈಂಗಿಕ ಸಂಬಂಧಕ್ಕೆ ಭಾವನಾತ್ಮಕ, ಮಾನಸಿಕವಾಗಿ ಹಾಗೂ ನೈತಿಕ ಪ್ರಜ್ಞೆಯ ಭಾಗವಾಗಿ ಆಕೆಗೆ ಬದುಕಿನ ಹೊಸ ಸಾಧ್ಯತೆಗಳ ಬಗ್ಗೆ ಸ್ಪಷ್ಟ ನಿರ್ಧಾರವನ್ನು ರೂಪಿಸಿವಲ್ಲಿ ಸಮರ್ಥ ವ್ಯಕ್ತಿಯಾಗಿ ಈ ಸಮಸಮಾಜದ ಕನಸಿಗೆ ರೂಪಕವಾಗಿ ಕಂಡುಬಂದಿದ್ದಾರೆ.

ಭಾರತದಂತಹ ಸಂಕೀರ್ಣ ಸಮಾಜದಲ್ಲಿ ಒಂದು ಹೋರಾಟವನ್ನು ರೂಪಿಸಿ ಅದಕ್ಕೆ ಸದಸ್ಯರನ್ನು ಕಟ್ಟಿಕೊಂಡು ಶತಮಾನಗಳಿಂದ ವಂಚಿತರಾದ ಸಮೂಹಗಳಿಗೆ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ನ್ಯಾಯವನ್ನು ಕೊಡಿಸಬೇಕು ಎಂದು ನಡೆದ ಹೋರಾಟಗಳು ಹಾಗೂ ಹೋರಾಟಗಾರರು ಹಲವಾರು ಹಾಗೂ ಅವರು ನಂಬಿರುವ

ತತ್ವ ಸಿದ್ಧಾಂತಗಳು ಈ ದೇಶದ ಜನರ ಆಶೋತ್ತರಗಳನ್ನು ತಕ್ಕಮಟ್ಟಿಗೆ ಮುಖಾಮುಖಿಯಾಗಿವೆ. ಈ ಹೋರಾಟಗಳು ಕೆಲವು ಭಾರಿ ಯಶಸ್ವಿಯು ಕೂಡ ಆಗುತ್ತವೆ. ಆದರೆ ಸಾಕಷ್ಟು ಸಲ ಹೋರಾಟಗಾರರ ಚಿಂತನೆಗಳನ್ನು ಜಾರಿ ಮಾಡುವಲ್ಲಿ ಉಂಟಾಗುವ ಪ್ರರೂಪಗಳ ಕಾರಣ ಹೋರಾಟಗಳಿಗೆ ಹಿನ್ನಡೆಯಾಗುತ್ತವೆ ಹಾಗೂ ಸೋಲುತ್ತವೆ. ಅದಕ್ಕೆ ಉದಾಹರಣೆ ಎಂಬಂತೆ ನವತ ಹಾಗೂ ಅವರ ಸ್ನೇಹಿತರ ಹೋರಾಟವನ್ನು ಕಟ್ಟಿಕೊಡಲಾಗಿದೆ.

ಲೈಂಗಿಕತೆಯ ವಿಷಯ ಪುರುಷನಿಗೆ ಮಾತ್ರ ಸೀಮಿತ, ಆತನಿಗೆ ಮಾತ್ರ ಅದನ್ನು ಮುಕ್ತವಾಗಿ ಮಾತನಾಡುವ, ಹಂಚಿಕೊಳ್ಳುವ, ಒಂದಕ್ಕಿಂತ ಹೆಚ್ಚು ಸ್ನೇಹ ಸಂಬಂಧಗಳನ್ನು ಹೊಂದುವ ಅವಕಾಶ ಇದೆ ಎನ್ನುವ ಪುರುಷಕೇಂದ್ರಿತ ಸಂಬಂಧಗಳನ್ನು ಪರಾಮರ್ಶೆ ಮಾಡುತ್ತಾ, ಹೆಣ್ಣು ಕೂಡ ಅತ್ಯಂತ ಸಹಜವಾಗಿರುವ ಕಾಮವನ್ನು ಪುರುಷ ಮತ್ತು ಮಹಿಳೆಯ ಇಚ್ಚಾಪೂರ್ವಕವಾಗಿ ನಡೆದಾಗ ಅದನ್ನು ಸಹಜವಾಗಿ ಸ್ವಿಕರಿಸಬೇಕು ಅದನ್ನು ಕುರಿತಾದ ಅತಿಯಾದ ಮಡಿವಂತಿಕೆ ಅಥವಾ ಹೇವರಿಕೆಯ ಭಾವನೆ ಅನಾವಶ್ಯಕ. ಅದರಲ್ಲೂ ವಿವಾಹಪೂರ್ವ ಲೈಂಗಿಕತೆ ಅದರಿಂದ ವಂಚನೆಗೆ ಒಳಗಾಗುವ ಸನ್ನಿವೇಶಗಳು ಮಾನಸಿಕವಾಗಿ ಕುಗ್ಗಿಸುತ್ತವೆ ಆ ಸನ್ನಿವೇಶದಲ್ಲಿ ಹೆಚ್ಚು ಭಾವನಾತ್ಮಕವಾಗಿ ವರ್ತಿಸದೆ, ವೈಚಾರಿಕವಾಗಿ ಜೀವನವನ್ನು ಸ್ವೀಕರಿಸುವ ಸ್ತ್ರೀ ಜೀವಪರ ಚಿಂತನೆಯನ್ನು ನವತಳ ಮೂಲಕ ಪ್ರತಿಪಾದಿಸುತ್ತದೆ. ಇದು ಸಿಮೋನ್ ದ ಬೋವಾ ಅವರು ತಮ್ಮ 'ದ್ವಿತೀಯ ಲಿಂಗ' ಕೃತಿಯಲ್ಲಿ 'ಎಂದಿನವರೆಗೆ ಪುರುಷನಿರ್ಮಿತ ಮಾನಸಿಕ–ವೈಚಾರಿಕ ಚೌಕಟ್ಟುಗಳಲ್ಲಿಯೇ ಸ್ತ್ರೀ ಬದುಕಬೇಕಾಗುತ್ತದೆಯೋ ಅಲ್ಲಿಯವರೆಗೆ ನಿಜವಾದ ಅರ್ಥದಲ್ಲಿ ಸ್ತ್ರೀ ಸ್ವತಂತ್ರಳಾಗುವುದಿಲ್ಲ'. ಇಲ್ಲಿ ಸಿಮೋನ್ ದ ಬೋವಾ ಅವರ ಆಲೋಚನೆಗಳನ್ನು ಅನುಷ್ಠಾನವನ್ನು ಗಮನಿಸಬಹುದು.

ಈ ಕಾದಂಬರಿಯ ವಿಶೇಷವಾಗಿ ಆಕರ್ಷಿಸುವುದು ವಸಂತಳ ಪಾತ್ರದ ಪರಿವರ್ತನೆಯ ಮೂಲಕ ಸಿದ್ಧ ಮಾದರಿಯ ಭಾರತೀಯ ಕೌಟುಂಬಿಕ ಹೆಣ್ಣಾಗಿ, ಸ್ವತ: ತನ್ನ ಸ್ನೇಹಿತೆ ಶಾಂತಳು ಮದುವೆಯಾಗದೆ ಮದುವೆಯಾದ ಪುರುಷನ ಜೊತೆ ಇರುವ ಸ್ನೇಹ ಸಂಬಂಧವನ್ನು ಒಪ್ಪಿಕೊಳ್ಳದವಳಾಗಿ ಆ ಕಾರಣಕ್ಕಾಗಿ ಆಕೆಯನ್ನು ನಿಷ್ಠುರವಾಗಿ ಟೀಕಿಸುವ, ಸಂಪ್ರದಾಯಬದ್ಧ ಗೃಹಿಣಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದು ಜೀವನದ ಸಾರ್ಥಕತೆ ಎಂದು ಪರಿಭಾವವಿಸಿ ಜೀವನ ನಡೆಸುತ್ತಿದ್ದ ಮಹಿಳೆ ಆದರೆ ಆಕೆಯ ಗಂಡ ಇಪ್ಪತ್ತು ವರ್ಷ ಸಂಸಾರದ ಬಳಿಕ, ಆಕೆಯ ಬಳಿ ನನಗೆ ನೀಲಿಮಾಳ ಮೇಲೆ ಪ್ರೀತಿಯಿದೆ ನಿನ್ನ ಮೇಲೆ ಇಲ್ಲ ಎಂದಾಗ ವಿಚಲಿತಳಾಗಿ ಆತ್ಮಹತ್ಯೆ ಪ್ರಯತ್ನ ಮಾಡಿ, ತಾನು ಇಷ್ಟಪಡುವ ಮಗಳು ಆಸ್ತಿಯನ್ನು ಇಷ್ಟಪಟ್ಟು ಅದನ್ನು ಪಡೆದುಕೊಂಡು, ಆಕೆಯು ತನ್ನ ಪತಿಯ ಮನೆಗೆ ಹೋದ ಬಳಿಕ ಕಿರಿಯ ಮಗಳಾದ ನವತಳು ತಾಯಿಯನ್ನು

ಮನುಷ್ಯಳಾಗಿ ನೋಡಿಕೊಂಡು, ಮನುಷ್ಯನಲ್ಲಿ ಸಹಜವಾಗಿ ಉಂಟಾಗುವ ಸ್ನೇಹ, ಪ್ರೀತಿ, ಮಮತೆ ಇವುಗಳನ್ನು ಸಹಜವಾಗಿ ಬದುಕಿನಲ್ಲಿ ಸಹಜವಾಗಿ ಸ್ವಿಕರಿಸಬೇಕು ತಂದೆಯಾಗಲಿ, ತಾಯಿ, ಅಕ್ಕ ಇವರ ಜೊತೆ ಇರಬೇಕಾದ ಸ್ನೇಹದ ಮೌಲ್ಯವನ್ನು ತಿಳಿಸಿ ತನಗೆ ತನ್ನ ಗಂಡನಿಂದ ಆಗಿರುವುದು ಅನ್ಯಾಯವಲ್ಲ ಆತನನ್ನು ಸಹಜವಾಗಿ ಒಪ್ಪಿಕೊಳ್ಳಬೇಕು. ಮಾನವೀಯವಾದ ಯಾವುದೇ ನಡವಳಿಕೆ ತಪ್ಪಲ್ಲ ಅದಕ್ಕೆ ಅನವಶ್ಯಕ ಬೇಲಿ ಹಾಕಬಾರದು. ಮನುಷ್ಯ ಸಂಬಂಧಗಳನ್ನು ಪಂಜರದಲ್ಲಿ ಇಟ್ಟು ನೋಡಬಾರದು ಅದು ಆತ್ಯಂತಿಕವಾಗಿ ಇರಬೇಕು ಎನ್ನುವ ಪರಿಪಕ್ವತೆಗೆ ಬರುತ್ತಾರೆ. ತಾಯಿಯನ್ನು ಕೇವಲ ಆಸ್ತಿಗಾಗಿ ಕೆಲಸದ ಕಾರಣಕ್ಕಾಗಿ ನೋಡಿದ ಹಿರಿಯ ಮಗಳಿಗೆ ಜೀವನಮೌಲ್ಯವನ್ನು ತಿಳಿಸಿ, ನವತಳ ಹೋರಾಟ ಮಾರ್ಗದರ್ಶಕರಾದ ರಾಮಮೂರ್ತಿಯವರು ಅನಾರೋಗ್ಯರಾದಾಗ ಅವರ ಶೂಶ್ರಷೆಯನ್ನು ಮನ:ಪೂರ್ವಕವಾಗಿ ಮಾಡುತ್ತಾಳೆ. ನವತಳ ಸ್ನೇಹಿತೆಯಾದ ಸುಂದರಿಗೆ ಬಾಣಂತನ ಮಾಡುವ ವಿಶಾಲಮೂರ್ತಿಯಾಗಿ ವಸಂತಳು ಪರಿಪಕ್ವಳಾಗುತ್ತಾಳೆ. ಸ್ವತ: ಆಕೆಯ ಗಂಡ ಸುರೇಶ ಆಕೆಯ ಗಂಡ ಮನೆಗೆ ಬಂದಾಗ ಯಾವುದೇ ಉದ್ವೇಗಕ್ಕೆ ಒಳಗಾಗದೇ ಆತನೊಂದಿಗೆ ಸಂವಾದ ಮಾಡುತ್ತಾರೆ. ನವತಳು ತನ್ನ ಸ್ನೇಹಿತೆಯ ಜೊತೆ ಸೈದ್ಧಾಂತಿಕವಾಗಿ ಬೇರೆಯಾದಾಗ ವಸಂತಳು ಸೈಂದ್ಧಾಂತಿಕ ಭಿನ್ನತೆ ಬೇರೆ ಆದರೆ ವೈಯಕ್ತಿಕವಾಗಿ ಮಾತನಾಡಿಸದೇ ಇರುವ ಅಪರಿಪಕ್ವತೆ ಸರಿಯಲ್ಲ ಎನ್ನುತ್ತಾರೆ.

ಕಾದಂಬರಿಯ ಕೊನೆಯಲ್ಲಿ ಮಗಳಾದ ಲಾವಣ್ಯಳಿಗೆ ಹೇಳುವ ಮಾತುಗಳು ಕೇವಲ ಲಾವಣ್ಯಳಿಗೆ ಹೇಳುವ ಮಾತುಗಳಾಗಿ ಉಳಿಯುವುದಿಲ್ಲ. ಮಗು ಹೆಣ್ಣಿಗೆ ಜೀವನದಲ್ಲಿ ಒಂದು ದಿನ ಮನುಷ್ಯಳಂತೆ ಮಾನವ ಸ್ತ್ರೀಯಂತೆ ಬದಲಾಗುವ ದಿನ ಬಂದು ತೀರುತ್ತದೆ. ಮನುಷ್ಯನಂತೆ ಬದಲಾಗುವ ಆ ದಿನ ಸಮೀಪಿಸಿದಾಗ ಹಾಗೆ ಮಾರ್ಪಡುವ ಶಕ್ತಿ ಇಲ್ಲವಾದರೆ, ಬದಲಾಗುವುದಕ್ಕೆ ಯಾವ ಆಧಾರವೂ ಸಿಗದೆ ಹೋದರೆ ನಾವು ಸರ್ವನಾಶವಾಗುತ್ತೆವೆ. ನಾವಂತೂ ಉಳಿಯುವುದಿಲ್ಲ ಅದಕ್ಕಾಗಿ ನಮ್ಮ ಪ್ರಾಣವನ್ನು ಧಾರೆಯೆರೆದಾದರೂ ಸರಿಯೇ ಮನುಷ್ಯರಂತೆ ಬದಲಾಗುವುದಕ್ಕೆ ಬೇಕಾಗುವ ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕು.

ಲಿಂಗಭೇದವು ಜೈವಿಕವಾಗಿ ನಿರ್ಧರಿಸಲ್ಪಟ್ಟಿದ್ದರೆ, ಲಿಂಗಪ್ರಜ್ಞೆಯನ್ನು ಶಿಕ್ಷಣ, ಸಂಸ್ಕೃತಿ, ಮತ–ಧರ್ಮಾಚರಣೆಗಳು, ಮತ್ತು ನಂಬಿಕೆಗಳು ರೂಪಿಸುತ್ತವೆ. ಎಂದು ಸ್ತ್ರೀವಾದಿ ಚಿಂತಕಿ ಮಿಲೆಟ್ ಪ್ರತಿಪಾದಿಸುತ್ತಾಳೆ. ಭಾರತೀಯ ಶ್ರೇಣಿಕೃತ ಸಮಾಜದೊಳಗೆ ಸ್ತ್ರೀಯ ಶೋಷಣೆಯು ಕೂಡ ಏಣಿಶ್ರೇಣಿಯನ್ನು ಒಳಗೊಂಡಿದೆ. ಮಾನವಿ ಕಾದಂಬರಿ ಭಾರತೀಯ ಸಮಾಜದ ಶಿಕ್ಷಿತ ವರ್ಗದ ಮಹಿಳೆಯರು ತಮಗೆ ಸಿಗಬೇಕಾದ ಸಮಾನ ಅವಕಾಶಗಳನ್ನು ಪಡೆಯುವ ಮಾರ್ಗವನ್ನು ಸಾಕಾರಗೊಳಿಸುವ ರೂಪಕವಾಗಿದೆ. ಆದರೆ ದೇಶದಲ್ಲಿನ ಬಹುಸಂಖ್ಯಾತ

ಮಹಿಳೆಯರು ಸಾಮಾನ್ಯ ಶಿಕ್ಷಣ ಅಂದರೆ ಓದು, ಬರಹ ಕಲಿತ ವರ್ಗದವರ ಹಾಗೂ ಈಗಲೂ ಇರುವ ಅನಕ್ಷರಸ್ಥರ ಪ್ರಾತಿನಿಧ್ಯ ಕಾಣೆಯಾಗಿದೆ. ಭಾರತದ ಬಹುಸಂಖ್ಯಾತ ಮಹಿಳೆಯರ ಬದುಕನ್ನು ಸಂಪ್ರದಾಯ, ನಂಬಿಕೆ, ಆಚರಣೆಗಳು ನಿಯಂತ್ರಿಸುತ್ತವೆ ಆದರೆ ಅವುಗಳನ್ನು ಕುರಿತು ವಿಮರ್ಶಿಸುವ ವೈಚಾರಿಕತೆ ಈ ವರ್ಗದವರಿಗಿಲ್ಲ. ಎಂಬುದನ್ನು ಸೃಜನಶೀಲರು ಮರೆಯಬಾರದು. ಮಾನವಿ ಕಾದಂಬರಿ ಉತ್ತಮ ಶಿಕ್ಷಿತ ವರ್ಗದವರು ತಮ್ಮ ಸ್ತ್ರೀ ಸಂವೇದನೆಯಿಂದ ವ್ಯಕ್ತಿಕೇಂದ್ರಿತ ಜೀವನ ರೂಪಿಸುಕೊಳ್ಳುವಲ್ಲಿ ಯಶಸ್ವಿಯಾಗಿರುವುದನ್ನು ಸಮರ್ಥವಾಗಿ ಧ್ವನಿಸುತ್ತದೆ.

ಯುವಮಿತ್ರ ಗೊರವಿನಕಲ್ಲು ನಾಗರಾಜು ಅವರು ತಮ್ಮ ಅನುವಾದಿತ ಕಾದಂಬರಿಯಾದ ಮಾನವಿ ಕಾದಂಬರಿಯನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಈ ಕಾದಂಬರಿ ಸ್ತ್ರೀವಾದಿ ಚಿಂತನೆಗಳು ಸ್ತ್ರೀಯರಿಗೆ ಮಾತ್ರ ಸೀಮಿತವಲ್ಲ, ಅದು ಲಿಂಗಸೂಚಕವಲ್ಲ, ಅದು ಭಾವನಾತ್ಮಕವಾದುದು ಎಂಬುದು ನಿರೂಪಿತವಾಗುವಂತೆ ಕನ್ನಡಕ್ಕೆ ತಂದಿದ್ದಾರೆ. ಸ್ತ್ರೀವಾದಿ ಚಿಂತನೆಗಳು ಹೃದಯದಲ್ಲಿ ಸಾವಯವವಾಗಿ ಅಂತರ್ಗತವಾಗಿ ಧ್ವನಿಸಿದರೆ ಮಾತ್ರ ಮಾನವಿ ಕಾದಂಬರಿ ರಚಿಸುವುದಕ್ಕೆ ಸಾಧ್ಯ ಎನ್ನುವಂತಿದೆ. ಕನ್ನಡದ ಉತ್ತಮ ಕಾದಂಬರಿಗಳ ಸಾಲಿಗೆ ಸೇರುವುದರಲ್ಲಿ ಯಾವುದೇ ಅನುಮಾನವಿಲ್ಲ, ಈ ಕೃತಿಯನ್ನು ಸಹೃದಯರು ಓದಿ ಉಪಕರಿಸಲಿ ಎಂದು ಹಾರೈಸುವೆ.

ಆಕರ ಗ್ರಂಥ:

1. ಸಾಹಿತ್ಯ ವಿಮರ್ಶೆ, ಡಾ ಸಿ ಎನ್ ರಾಮಚಂದ್ರನ್ 2010, ಪುಟ 86
2. ಸಾಹಿತ್ಯ ವಿಮರ್ಶೆ, ಡಾ ಸಿ ಎನ್ ರಾಮಚಂದ್ರನ್ 2010,ಪುಟ 87
3. ಮಾನವಿ: ಗೊರವಿನಕಲ್ಲು ನಾಗರಾಜು(ಅನು)
4. ಸಾಹಿತ್ಯ ವಿಮರ್ಶೆ, ಡಾ ಸಿ ಎನ್ ರಾಮಚಂದ್ರನ್ 2010,ಪುಟ 88

ಪರಾಮರ್ಶನ ಗ್ರಂಥಗಳು

1. ಸಾಹಿತ್ಯ ವಿಮರ್ಶೆ: ಡಾ ಸಿ ಎನ್ ರಾಮಚಂದ್ರನ್, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, 2010
2. ಮಾನವಿ : ಗೊರವಿನಕಲ್ಲು ನಾಗರಾಜು (ಅನು): ಅಕ್ಷರ ಮಂಟಪ, 2025

***

ಶಿಶುನಾಳ ಶರೀಫರ ಎಲ್ಲಮ್ಮ ಕುರಿತ ಕಾವ್ಯ ಮೀಮಾಂಸೆ

1 ಡಾ. ರವಿಶಂಕರ್ ಎ.ಕೆ

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ

ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಬೆಂಗಳೂರು.

ravishankar@kristujayanti.com

ಹೆಣ್ಣು ಮತ್ತು ಭೂಮಿ ಈ ಹಿಂದಿನ ಸಾಹಿತ್ಯ ಪರಂಪರೆಯಲ್ಲಿ ಭವಿಷ್ಯದ ಚಿಕಿತ್ಸೆಗಳಾಗಿ ಗೋಚರಿಸಲ್ಪಟ್ಟಿದ್ದವು. ಈ ಹಾದಿಯ ದಿಕ್ಸೂಚಿಗಳಾದ ತತ್ವಪದ ಪರಂಪರೆಯು ಅತ್ಯಂತ ವಿಶಿಷ್ಟವಾದ ಹಾಗೂ ಜನಮುಖಿಯಾದ ಸಾಂಸ್ಕೃತಿಕ ಆಂದೋಲನವಾಗಿದೆ. ವೇದ, ಉಪನಿಷತ್ತು ಹಾಗೂ ಶರಣ ದರ್ಶನಗಳ ಕಠಿಣವಾದ ತಾತ್ವಿಕ ಸತ್ಯಗಳನ್ನು ಹಳ್ಳಿಗರ ಆಡುಭಾಷೆಯಲ್ಲಿ, ಅವರ ದಿನನಿತ್ಯದ ಕಾಯಕದ ರೂಪಕಗಳ ಮೂಲಕ ಜನಸಾಮಾನ್ಯರ ಅಂತರಂಗಕ್ಕೆ ತಲುಪಿಸಿದ ಕೀರ್ತಿ ತತ್ವಪದಕಾರರಿಗೆ ಸಲ್ಲುತ್ತದೆ. ಇಂತಹ ಪ್ರಖರ ಪರಂಪರೆಯಲ್ಲಿ ಜಗದ್ಗುರು ಎಂದೇ ಖ್ಯಾತರಾದ ಸಂತ ಶಿಶುನಾಳ ಶರೀಫರ ಕೊಡುಗೆ ಅನನ್ಯವಾದುದು ಮತ್ತು ಐತಿಹಾಸಿಕವಾದುದು. ಶರೀಫರು ಕೇವಲ ಒಬ್ಬ ಪದಕಾರ, ಅಂದಿನ ಅದೆಷ್ಟೋ ಮನತುಂಬಿ ಈ ಸಮಾಜದ ಕಣ್ಣು ತೆರೆಸಲು ಬಂದ ಕ್ರಾಂತಿಕಾರಿ ದಾರ್ಶನಿಕ, ಧರ್ಮಗಳ ಸಾಮರಸ್ಯದ ಮೂರ್ತಿ ಮತ್ತು ಅಂತರಂಗದ ಯೋಗ ವಿಜ್ಞಾನವನ್ನು ಕರಗತ ಮಾಡಿಕೊಂಡಿದ್ದ ಸಿದ್ಧಪುರುಷ ಎನ್ನಬಹುದು.

ಪ್ರಮುಖ ಪದಗಳು : ಎಲ್ಲಮ್ಮ ಕಾವ್ಯ, ಸಮನ್ವಯ, ಯೋಗದರ್ಶನ, ತತ್ವಪದ, ಸೂಫಿ

ಶರೀಫರ ಬದುಕು ಮತ್ತು ಬರಹಗಳು ಭಾರತೀಯ ಸಾಂಸ್ಕೃತಿಕ ಸಾಮರಸ್ಯದ ಪರಮೋಚ್ಚ ಶಿಖರಗಳಾಗಿವೆ. ಮುಸ್ಲಿಂ ಹಿನ್ನೆಲೆಯ ಸೂಫಿ ಸಂತ ಪರಿಸರದಲ್ಲಿ ಜನಿಸಿದ ಶರೀಫರು, ತಮ್ಮ ಸದ್ಗುರುಗಳಾದ ಶ್ರೀ ಗೋವಿಂದ ಭಟ್ಟರ ಪಾದಗಳಿಗೆ ಶರಣಾಗಿ ವೇದಾಂತ ಹಾಗೂ ಶರಣ ಸಿದ್ಧಾಂತಗಳ ದಿವ್ಯ ದೀಕ್ಷೆಯನ್ನು ಪಡೆದರು. ಇವರ ಈ ಹಿನ್ನೆಲೆಯಿಂದಾಗಿ,

ಇವರ ತತ್ವಪದಗಳಲ್ಲಿ ಇಸ್ಲಾಮಿನ ಸೂಫಿ ಸಿದ್ಧಾಂತದ 'ಇಶ್ಕ್' ಮತ್ತು ಸನಾತನ ಧರ್ಮದ ಅದ್ವೈತ ವೇದಾಂತ ಹಾಗೂ ವಚನ ಚಳವಳಿಯ ಶರತ್ಕಾಲದ ಜ್ಞಾನಮಾರ್ಗಗಳು ಪರಸ್ಪರ ಹದವಾಗಿ ಬೆರೆತಿವೆ. ಸಮಾಜದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಧರ್ಮದ ಹೆಸರಿನಲ್ಲಿ ಮನುಷ್ಯ ಮನುಷ್ಯರ ನಡುವೆ ನಿರ್ಮಾಣವಾಗಿದ್ದ ಮನೋವೈಷಮ್ಯಗಳನ್ನು ಕಳಚಿದ ಸರಳ ಸಾಮಾನ್ಯ ಸಂತ ಈ ಶರೀಫರು.

ಪ್ರಸ್ತುತ ನಮ್ಮ ಸುದೀರ್ಘ ವಿಶ್ಲೇಷಣೆಗೆ ಒಳಪಡುತ್ತಿರುವ ಶರೀಫರ ಮೂರು ಪ್ರಮುಖ ತತ್ವಪದಗಳಾದ 'ಸರಿಗಾಣೆನು ಧರಣಿಯೊಳಗಮ್ಮ ಕರುಣೆ ಎಲ್ಲಮ್ಮ', 'ಎಲ್ಲಿ ಕಾಣೆ ಎಲ್ಲಿ ಕಾಣೆ ಎಲ್ಲಮ್ಮನಂಥಾಕಿನ' ಮತ್ತು 'ಎಲ್ಲಮ್ಮನ ಜಾತ್ರೆಗೆ ಬಲ್ಲವರು ಹೋಗಿ ನೋಡಲಿಬೇಕು' ಇವು ಕನ್ನಡ ಶಾಕ್ತೇಯ ಕಾವ್ಯ ಮೀಮಾಂಸೆಯ ಅತ್ಯುನ್ನತ ಮೈಲಿಗಲ್ಲುಗಳಾಗಿವೆ. ಮೇಲ್ನೋಟಕ್ಕೆ ಇವು ಉತ್ತರ ಕರ್ನಾಟಕದ ಸಾಂಸ್ಕೃತಿಕ ಲೋಕದಲ್ಲಿ ಅತ್ಯಂತ ಪ್ರಸಿದ್ಧವಾಗಿರುವ 'ಸೌದತ್ತಿ ರೇಣುಕಾ ಎಲ್ಲಮ್ಮ' ಎಂಬ ಪ್ರಾದೇಶಿಕ ಲೋಕದೇವತೆಯ ಆರಾಧನೆಯ ಕೀರ್ತನೆಗಳಂತೆ ಕಂಡುಬಂದರೂ, ಇವುಗಳ ಅಂತರಾಳಕ್ಕೆ ಇಳಿದಾಗ ನಮಗೆ ದಕ್ಕುವುದು ಭೇದ–ಭಾವಗಳನ್ನು ನಿರಾಕರಿಸುವ ಸಾಮಾಜಿಕ ಸಹಬಾಳ್ವೆಯ ಮಹಾಪ್ರಣಾಳಿಕೆ, ಮಾನವೀಯ ಪ್ರಜ್ಞೆಯ ವಿಕಾಸ ಹಾಗೂ ಅಂತರಂಗದ ಕುಂಡಲಿನಿ ಯೋಗದ ರಹಸ್ಯಗಳು. ಶರೀಫರು ಇಲ್ಲಿ ಎಲ್ಲಮ್ಮನನ್ನು ಕೇವಲ ಮಣ್ಣಿನ ಅಥವಾ ಕಲ್ಲಿನ ಮೂರ್ತಿಯಾಗಿ ನೋಡದೆ, ಇಡೀ ವಿಶ್ವವನ್ನು ಮುನ್ನಡೆಸುವ 'ಆದಿಶಕ್ತಿ' ಅಥವಾ 'ಮಹಾಮಾಯೆ' ಎಂದು ಸಾಕ್ಷಾತ್ಕರಿಸಿಕೊಂಡಿದ್ದಾರೆ. ಈ ಮೂರೂ ಕೃತಿಗಳು ಒಟ್ಟಾಗಿ ಮನುಷ್ಯನನ್ನು ಬಾಹ್ಯದ ಮೂಢಾಚರಣೆಗಳಿಂದ ಬಿಡುಗಡೆಗೊಳಿಸಿ, ಅಂತರಂಗದ ಸಾಕ್ಷಿ ಪ್ರಜ್ಞೆಯೆಡೆಗೆ ಕೊಂಡೊಯ್ಯುವ ಜ್ಞಾನ ಮತ್ತು ಸಮನ್ವಯದ ದಿವ್ಯ ಮಾರ್ಗವನ್ನು ಅನಾವರಣಗೊಳಿಸುತ್ತವೆ.

ಸರಿಗಾಣೆನು ಧರಣಿಯೊಳಗಮ್ಮ ಕರುಣೆ ಎಲ್ಲಮ್ಮ ॥ ಪ ॥

ಏನು ಹೇಳಲಿ ನಿನ್ನ ಕೌತುಕವ ನೀನಾದಿಯಲ್ಲಿ

ತುಂಬಿ ತುಳುಕಿದಿ ಏಕೆಂಬ ಭಾವ ॥ 1 ॥ [1]

ಶರೀಫರ ಈ ತತ್ವಪದವು ಜಗನ್ಮಾತೆಯ 'ಕಾರುಣ್ಯದ ಅನನ್ಯತೆ'ಯನ್ನು ಸ್ಥಾಪಿಸುವ ಮೂಲಕ ಆರಂಭವಾಗುತ್ತದೆ. ಪಲ್ಲವಿಯಲ್ಲಿ ಬರುವ 'ಸರಿಗಾಣೆನು ಧರಣಿಯೊಳಗಮ್ಮ ಕರುಣೆ ಎಲ್ಲಮ್ಮ' ಎಂಬ ಸಾಲು ಇಡೀ ವಿಶ್ವದ ಅಸ್ತಿತ್ವಕ್ಕೆ ಆ ತಾಯಿಯ ಕರುಣೆಯೇ ಆಧಾರ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಶರೀಫರು ಬಳಸುವ 'ಕರುಣೆ' ಎಂಬ ಪದ ಧಾರ್ಮಿಕ ಪರಿಕಲ್ಪನೆಯಾಗಿ, ಅದು ಸಮಾಜದ ಪ್ರತಿಯೊಂದು ಜೀವಿಯನ್ನೂ ಪ್ರೀತಿಸುವ, ಆಧರಿಸುವ 'ವಿಶ್ವಪ್ರೇಮ'ದ ಸಂಕೇತವಾಗಿದೆ. ಸೃಷ್ಟಿಯ ಆದಿಕಾಲದಲ್ಲಿ ಈ ಜಗತ್ತಿನ ತುಂಬೆಲ್ಲಾ

ಶಕ್ತಿಯಾಗಿ ಏಕೆ ತುಂಬಿ ತುಳುಕಿದೆ ಎಂಬ ಪ್ರಶ್ನೆಯ ಮೂಲಕ, ಶಏಪಖಉ ಶಾಕ್ತೇಯ ಸಿದ್ಧಾಂತದ 'ಆದಿಶಕ್ತಿ' ತತ್ವವನ್ನು ಮಂಡಿಸುತ್ತಾರೆ. ಭಗವಂತನು ಎಲ್ಲೋ ದೂರದಲ್ಲಿದ್ದಾನೆ ಅಥವಾ ಸ್ವರ್ಗದಲ್ಲಿದ್ದಾನೆ ಎಂಬ ಭ್ರಮೆಯನ್ನು ನಿರಾಕರಿಸುವ ಶರೀಫರು, ಪ್ರಕೃತಿಯ ಪ್ರತಿ ಕಣದಲ್ಲೂ ಆ ತಾಯಿಯ ಕೌತುಕ ಅಡಗಿದೆ ಎನ್ನುತ್ತಾರೆ.

ಈ ತತ್ವಪದದ ಅತ್ಯಂತ ಪ್ರಮುಖವಾದ ಸಾಂಸ್ಕೃತಿಕ ವಿನ್ಯಾಸವೆಂದರೆ, ಶಏಪಖಉ ದೇವಿಯ ಶಕ್ತಿಯನ್ನು ನಾಲ್ಕು ಯುಗಗಳ ಐತಿಹಾಸಿಕ ಹಾಗೂ ಪೌರಾಣಿಕ ಚೌಕಟ್ಟಿನಲ್ಲಿ ತಂದು ನಿಲ್ಲಿಸಿರುವುದು. ಪ್ರತಿಯೊಂದು ಯುಗದಲ್ಲೂ ಸಮಾಜಕ್ಕೆ ಬಂದ ಕಷ್ಟಗಳನ್ನು ದೇವಿಯು ಹೇಗೆ ನಿವಾರಿಸಿದಳು ಎಂಬುದನ್ನು ವಿವರಿಸುವ ಮೂಲಕ, ಶರೀಫರು ಜಗತ್ತಿನ ನೈತಿಕ ಮತ್ತು ಸಾಮಾಜಿಕ ಸಮತೋಲನವನ್ನು ಕಾಪಾಡುವ ಶಕ್ತಿಯಾಗಿ ದೇವಿಯನ್ನು ಚಿತ್ರಿಸಿದ್ದಾರೆ.

ಪ್ರಥಮ ಕೃತಯುಗದಲ್ಲಿ ಆಕೆ ಪರಶಿವನ ಅರ್ಧಾಂಗಿನಿಯಾಗಿ, ಕೈಲಾಸ ಪರ್ವತದಲ್ಲಿ (ರಜತಗಿರಿ) ಶಾಂತ ಸ್ವರೂಪಿಣಿಯಾದ ಪಾರ್ವತಿಯಾಗಿ ನೆಲೆಸಿದ್ದಳು. ಆದರೆ ಪ್ರಪಂಚಕ್ಕೆ ಸಂಕಟ ಬಂದಾಗ ಮಹಾವಿಷ್ಣುವಿನ ಯೋಗನಿದ್ರೆಯ ಮಹಾಮಾಯೆಯಾಗಿ ಎದ್ದು ಬಂದು, ಕಪಟಿಗಳಾದ 'ಮಧು ಮತ್ತು ಕೈಟಭ'ರೆಂಬ ರಕ್ಕಸರನ್ನು ಭೀಕರ ಯುದ್ಧದಲ್ಲಿ ಸಂಹರಿಸಿದಳು. ತಾತ್ವಿಕವಾಗಿ, ಮಧು ಮತ್ತು ಕೈಟಭರು ಮಾನವನ ಅಂತರಂಗದಲ್ಲಿರುವ 'ತಮೋಗುಣ' ಮತ್ತು 'ರಜೋಗುಣ'ಗಳ ಸಂಕೇತವಾಗಿದ್ದಾರೆ. ಸಮಾಜದಲ್ಲಿ ಜಡತ್ವ ಮತ್ತು ಸ್ವಾರ್ಥ ಹೆಚ್ಚಾದಾಗ, ಈ ದುಷ್ಟ ಪ್ರವೃತ್ತಿಗಳನ್ನು ನಾಶಮಾಡಿ ದೇವತೆಗಳಿಗೆ ಹಿತವನ್ನು ಕರುಣಿಸುವ ಜಗನ್ಮಾತೆಯ ಮಹಾತ್ಮೆ ಇಲ್ಲಿ ಅನನ್ಯವಾಗಿ ಮೂಡಿಬಂದಿದೆ.

ಮುಂದಿನ ತ್ರೇತಾಯುಗ ಬಂದಾಗ ಆ ಆದಿಶಕ್ತಿಯು ಭೂಮಿಯಲ್ಲಿ ಜನಕರಾಜನ ಮಗಳಾಗಿ (ಸೀತೆಯಾಗಿ) ಜನಿಸಿ, ರಘುವಂಶದ ಶ್ರೀರಾಮನ ಪತ್ನಿಯಾದಳು. ಇಲ್ಲಿ ಶರೀಫರು ಸೀತೆಯನ್ನು ಕೇವಲ ಒಬ್ಬ ಅಸಹಾಯಕ, ಅರಣ್ಯವಾಸ ಅನುಭವಿಸಿದ ಸ್ತ್ರೀಯನ್ನಾಗಿ ನೋಡದೆ, ರಾವಣನ ವಿನಾಶಕ್ಕೆ ಕಾರಣವಾದ ಮಹಾಶಕ್ತಿಯನ್ನಾಗಿ ಸಾಕ್ಷಾತ್ಕರಿಸಿಕೊಂಡಿದ್ದಾರೆ. "ಕೋತಿ ಬಳಗವ ಕೂಡಿಕೊಂಡು ಸೇತುಬಂಧನ ಕಟ್ಟಿ ಕಲಹದಿ, ಪಾತಕಿ ರಾವಣನ ಕುಲವನು ನಾಶಮಾಡಿಸಿದೆಲ್ಲ ತತ್ವದಿ" ಎಂಬ ಸಾಲು ಅತ್ಯಂತ ಮಾರ್ಮಿಕವಾಗಿದೆ. ಇಲ್ಲಿ ಸೀತೆ ವಾನರ ಸೇನೆಯನ್ನು (ಕೋತಿ ಬಳಗವ) ಒಟ್ಟುಗೂಡಿಸಿ, ಅತಿವಿಶಿಷ್ಟ ತತ್ವಗಳ ಆಧಾರದ ಮೇಲೆ ಅಹಂಕಾರದ ಪ್ರತೀಕವಾದ ರಾವಣನ ಕುಲವನ್ನು ನಿರ್ನಾಮ ಮಾಡಿದಳು. ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟ, ಶಕ್ತಿಹೀನರಾದ ಸಾಮಾನ್ಯ ಜನರನ್ನು (ವಾನರರನ್ನು) ಒಗ್ಗೂಡಿಸಿ ಅತ್ಯುನ್ನತ ಸಾಮಾಜಿಕ ನ್ಯಾಯ ಮತ್ತು ಧರ್ಮವನ್ನು ಸ್ಥಾಪಿಸುವುದು ಈ

ಯುಗದ ಮುಖ್ಯ ಸಂದೇಶವಾಗಿದೆ.

ದ್ವಾಪರಯುಗದಲ್ಲಿ ಅದೇ ಶಕ್ತಿಯು ದೃಪದ ಮಹಾರಾಜನ ಯಜ್ಞಕುಂಡದಿಂದ ದ್ರೌಪದಿಯಾಗಿ ಮೂಡಿಬಂದು, ಪಂಚಪಾಂಡವರ ಧರ್ಮಪತ್ನಿಯಾದಳು. ದುಷ್ಟರಾದ ಕೌರವ, ಕರ್ಣ ಮತ್ತು ದುಶ್ಯಾಸನರು ಭರತಸಭೆಯಲ್ಲಿ ಆಕೆಯ ಶೀಲಕ್ಕೆ ಧಕ್ಕೆ ತಂದು, ಸ್ತ್ರೀಕುಲಕ್ಕೇ ಅಪಮಾನ ಮಾಡಿದಾಗ, ಆಕೆ ಸೌಮ್ಯರೂಪವನ್ನು ಬಿಟ್ಟು ಮಹಾಕಾಳಿಯಂತೆ ಕೋಪದ ಜ್ವಾಲೆಯನ್ನು ಧರಿಸಿದಳು. ದ್ರೌಪದಿಯ ಮುಕ್ತ ಕೇಶದ ಆ ಭೀಕರ ಶಪಥವೇ ಮಹಾಭಾರತ ಯುದ್ಧವಾಗಿ ಪರಿಣಮಿಸಿ, ಇಡೀ ಕುರುಕುಲವನ್ನು ನರಕದ ಹಳ್ಳಕ್ಕೆ (ಕೂಪದೊಳು) ತಳ್ಳಿ ಸರ್ವನಾಶ ಮಾಡಿತು. ಇದು ಸಮಾಜದಲ್ಲಿ ಸ್ತ್ರೀಶಕ್ತಿಯನ್ನು ಕಡೆಗಣಿಸಿದರೆ ಅಥವಾ ಆಕೆಗೆ ಅನ್ಯಾಯ ಮಾಡಿದರೆ ಇಡೀ ಸಾಮ್ರಾಜ್ಯವೇ ವಿನಾಶದ ಹಾದಿ ಹಿಡಿಯುತ್ತದೆ ಎಂಬ ತೀಕ್ಷ್ಣ ಸಾಮಾಜಿಕ ಎಚ್ಚರಿಕೆಯಾಗಿದೆ.

ಪ್ರಸ್ತುತ ಕಲಿಯುಗದ ಸಂದರ್ಭಕ್ಕೆ ಬರುತ್ತಾರೆ. ಕಲಿಯುಗದಲ್ಲಿ ಆ ಆದಿಶಕ್ತಿಯು ಸುಲಭವಾಗಿ, ಸುಲಲಿತವಾಗಿ ಜಮದಗ್ನಿ ಮಹರ್ಷಿಯ ಪತ್ನಿಯಾದ ರೇಣುಕಾ–ಎಲ್ಲಮ್ಮನಾಗಿ ಅವತರಿಸಿದಳು. ಸಾಧು–ಸಂತರಿಗೆ ಮತ್ತು ಸಾಮಾನ್ಯ ಜನರಿಗೆ ತೊಂದರೆ ಕೊಡುತ್ತಿದ್ದ, ಜಮದಗ್ನಿಯ ಆಶ್ರಮದ ಕಾಮಧೇನುವನ್ನು ಅಪಹರಿಸಿದ ಅಹಂಕಾರಿ ಹಾಗೂ ಕಲಹಕಾರಿಯಾದ ಕಾರ್ತವೀರ್ಯಾರ್ಜುನನ ತಲೆಯನ್ನು ಆಕೆ ನಿನ್ನ ಮಗನಾದ ಪರಶುರಾಮನ ಶಕ್ತಿಯಾಗಿ ನಿಂತು ಕತ್ತರಿಸಿ ಹಾಕಿದಳು.

ಈ ಸುದೀರ್ಘ ಯುಗಾಂತರ ಪ್ರಕ್ರಿಯೆಯನ್ನು ವರ್ಣಿಸಿದ ನಂತರ ಶರೀಫರು ತತ್ವಪದದ ಕೊನೆಯಲ್ಲಿ ಭಾವನಾತ್ಮಕ ಮುಕ್ತಾಯ ಅತ್ಯಂತ ಶ್ರೇಷ್ಠವಾದುದು. ಇಂತಹ ಪವಿತ್ರಳಾದ ಜಗನ್ಮಾತೆಯು, ತಮ್ಮ ತಂದೆಯಾದ 'ಖಲಿಂದರ' (ಇಮಾಮ್ ಸಾಹೇಬರ ಮನೆತನದ ಹೆಸರು) ಪುತ್ರನಾದ ಈ ಶಿಶುನಾಳಾಧೀಶನಿಗೆ ಪ್ರೀತಿಯ ತಾಯಿಯಾಗಿ (ಪ್ರಿಯ ಮಾತೆಯಾದ) ಒಲಿದು ಬಂದಿದ್ದಾಳೆ ಎಂದು ಘೋಷಿಸುತ್ತಾರೆ. ಒಬ್ಬ ಮುಸ್ಲಿಂ ಹಿನ್ನೆಲೆಯ ಸೂಫಿ ಸಂತನು ದೇವಿಯನ್ನು ತನ್ನ ಸ್ವಂತ ತಾಯಿ ಎಂದು ಕರೆದುಕೊಳ್ಳುವಲ್ಲಿ, ಸಾಂಪ್ರದಾಯಿಕ ಧರ್ಮಗಳ ಕಟ್ಟುಪಾಡುಗಳು ಕರಗಿ ಹೋಗುತ್ತವೆ. ಇದು ಕೇವಲ ಒಂದು ಧಾರ್ಮಿಕ ಸ್ತುತಿಯಾಗಿ ಉಳಿಯದೆ, ಮಾನವೀಯ ಪ್ರಜ್ಞೆಯನ್ನು ವಿಶ್ವಾತ್ಮಕ ಪ್ರಜ್ಞೆಯಾಗಿ ವಿಸ್ತರಿಸುವ ಮತ್ತು ಸಮಾಜದ ಸರ್ವ ಧರ್ಮಗಳ ಸಹಬಾಳ್ವೆಯನ್ನು ಎತ್ತಿಹಿಡಿಯುವ ದಿವ್ಯ ಮಾರ್ಗದರ್ಶಿಯಾಗಿದೆ.

ಎಲ್ಲಿ ಕಾಣೆ ಎಲ್ಲಿ ಕಾಣೆ

ಎಲ್ಲಮ್ಮನಂಥಾಕಿನ ಎಲ್ಲೀ ಕಾಣೆ ॥ ಪ ॥

ಎಲ್ಲಿ ಕಾಣೆನು ಶಿವನೊಲ್ಲಭಿ ಎನಿಸಿದಿ
ಕಲ್ಲಿನೊಳಗೆ ಪುಟ್ಟಿ ಉಗುರುಗೊಳ್ಳಕೆ ಇಳದಿ ॥ 1 ॥ [2]

ಈ ಮೊದಲನೆಯ ತತ್ವಪದದಲ್ಲಿ ಎಲ್ಲಮ್ಮನನ್ನು ಕರುಣಾಮಯಿ ತಾಯಿಯಾಗಿ ನೋಡಿದ್ದ ಶರೀಫರು, ಈ ಎರಡನೆಯ ಪದದಲ್ಲಿ ಆಕೆಯ 'ರೌದ್ರ ವೈರಾಗ್ಯ'ದ ಮತ್ತು 'ಮಾಯಾ ಸ್ವರೂಪ'ದ ಭೀಕರ ಮುಖವನ್ನು ಅನಾವರಣಗೊಳಿಸುತ್ತಾರೆ. ಸಮಾಜದಲ್ಲಿ ಸಹಬಾಳ್ವೆಗೆ ಮತ್ತು ಮಾನವೀಯತೆಗೆ ಅತ್ಯಂತ ದೊಡ್ಡ ಶತ್ರುವೆಂದರೆ ಅದು ಮನುಷ್ಯನಲ್ಲಿರುವ ಅಹಂಕಾರ. ತಾನು ಶ್ರೀಮಂತ, ತಾನು ಮೇಲ್ಜಾತಿಯವನು, ತಾನು ಮಹಾನ್ ಜ್ಞಾನಿ ಎಂಬ ಅಹಂಭಾವದಿಂದ ಬದುಕುವ ಮನುಷ್ಯನನ್ನು ಸರಿಹಾದಿಗೆ ತರಲು ದೇವಿಯು ಬಳಸುವ ತಂತ್ರಗಳನ್ನು ಶರೀಫರು ಇಲ್ಲಿ ಅತ್ಯಂತ ಕಟುವಾಗಿ ವರ್ಣಿಸಿದ್ದಾರೆ.

ಪಲ್ಲವಿಯಲ್ಲೇ ಶಏಪಖಉ "ಎಲ್ಲಿ ಕಾಣೆ ಎಲ್ಲಮ್ಮನಂಥಾಕಿನ ಎಲ್ಲೀ ಕಾಣೆ" ಎನ್ನುತ್ತಾ, ಆಕೆಯನ್ನು ಶಿವನ ಅರ್ಧಾಂಗಿ (ಶಿವನೊಲ್ಲಭಿ) ಎಂದು ಗುರುತಿಸುತ್ತಾರೆ. ಆಕೆ ಕಲ್ಲಿನೊಳಗೆ (ಜಡ ಪ್ರಕೃತಿಯೊಳಗೆ) ಹುಟ್ಟಿ, ಕೊನೆಗೆ ಭಕ್ತರ ರಕ್ಷಣೆಗಾಗಿ 'ಉಗುರುಗೊಳ್ಳ'ಕ್ಕೆ ಇಳಿದು ಬಂದಿದ್ದಾಳೆ. ಇದು ಜಡ ಪ್ರಪಂಚದ ಪ್ರತಿ ವಸ್ತುವಿನಲ್ಲೂ ಅಡಗಿರುವ ಚೇತನ ಶಕ್ತಿಯನ್ನು ಧ್ವನಿಸುತ್ತದೆ.

'ಬಾಳ ಮಂದಿ ಬತ್ತಲ ಮಾಡಿದಿ ನೀ ಎಂಥಾಕವ್ವಾ ಬೇವನುಡಿಸಿ ಮೋಜ ನೋಡಿದಿ' ಎಂಬ ಸಾಲು ಅತ್ಯಂತ ಕ್ರಾಂತಿಕಾರಿಯಾದುದು. ಸೌದತ್ತಿ ಎಲ್ಲಮ್ಮನ ಜಾತ್ರೆಯಲ್ಲಿ ಭಕ್ತರು ತಮ್ಮ ಲೌಕಿಕ ಬಟ್ಟೆಗಳನ್ನು ಕಳಚಿ, ಬೇವಿನ ಎಲೆಗಳನ್ನು ಉಟ್ಟುಕೊಂಡು ಪೂಜೆ ಮಾಡುವುದು ಒಂದು ಪ್ರಸಿದ್ಧ ಆಚರಣೆ. ಶರೀಫರು ಈ ಆಚರಣೆಯನ್ನು ಅತ್ಯುನ್ನತ ಆಧ್ಯಾತ್ಮಿಕ ರೂಪಕವನ್ನಾಗಿ ಪರಿವರ್ತಿಸಿದ್ದಾರೆ. ಮನುಷ್ಯನು ಸಮಾಜದಲ್ಲಿ ಧರಿಸಿರುವ ಅಹಂಕಾರ, ಜಾತೀಯತೆ, ಅಂತಸ್ತು ಮತ್ತು ಸಂಪತ್ತು ಎಂಬ ಕೃತಕ ಉಡುಪುಗಳನ್ನು ದೇವಿಯು ಕಳಚಿ (ಬತ್ತಲ ಮಾಡಿ), ಪ್ರಕೃತಿಯ ಮೂಲ ಸ್ವರೂಪವಾದ ಬೇವಿನ ಎಲೆಯನ್ನು ಉಡಿಸಿ (ಬೇವಿನ ಕಹಿ ಜ್ಞಾನವನ್ನು ಉಣಿಸಿ) ಮೋಜು ನೋಡುತ್ತಾಳೆ. ತಾಳ, ಜಾಗಟಿ, ಗೆಜ್ಜೆಗಳನ್ನು ನುಡಿಸುತ್ತಾ, ಕಾಲಿಗೆ ಕಂಚಿನ ಕೊಳಗಳನ್ನು ಹಾಕಿ ಇಡೀ ಜಗತ್ತನ್ನೇ ಆಕೆ ಕುಣಿಸುತ್ತಾಳೆ. ಇಡೀ ಮಾನವಕುಲಕ್ಕೆ ಸಂಸಾರದ 'ಜೋಳಿಗೆ'ಯನ್ನು ಹೆಗಲಿಗೇರಿಸಿ, ಭಿಕ್ಷುಕರನ್ನಾಗಿ ಮಾಡಿ ಬೀದಿಯಲ್ಲಿ ಆಡಿಸುವ ಆಕೆಯ ಲೀಲೆ ಅದ್ಭುತವಾದುದು. ಆಕೆ ಕೇವಲ ಸಜ್ಜನರಿಗಷ್ಟೇ ಅಲ್ಲ, 'ಕಳ್ಳ ಸುಳ್ಳರಿಗೂ ಒಲಿಯಬಲ್ಲಳು'. ಏಕೆಂದರೆ, ತಪ್ಪು ಮಾಡಿದವರನ್ನು ತಿದ್ದಿ, ಅವರ ಕರ್ಮವನ್ನು ಕರಗಿಸಿ ಕಾಲವನ್ನು ಗೆಲ್ಲುವ ಶಕ್ತಿ ಆಕೆಗಿದೆ. ಆಕೆಯೇ ಮನುಷ್ಯನ ದೇಹದ ಸಪ್ತಚಕ್ರಗಳಾದ 'ಏಳುಕೊಳ್ಳ'ಗಳನ್ನು ಆಳುವ ಮಹಾ ಶರಣೆ.

ಮುಂದಿನ ನುಡಿಯಲ್ಲಿ ಶರೀಫರು ವರ್ಣಿಸುವ ದೃಶ್ಯಗಳು ವೈರಾಗ್ಯದ ಉತ್ತುಂಗ ಸ್ಥಿತಿಯನ್ನು ತೋರಿಸುತ್ತವೆ. "ಬಲ್ಲಿದವರನೆಲ್ಲ ಹಿಡಿದು ಬೆನ್ನಿಲೆ ಸೀಳಿ ಬಾಯಿಗೆ ಬೀಗ ಜಡಿದು... ಉಧೋ ಎಂಬುದೊಳ್ಳೆದವ್ವ ನಿನ್ನ ಬಿರುದು" ಎನ್ನುವ ಮೂಲಕ, ತಾನು ಎಲ್ಲವನ್ನೂ ಬಲ್ಲೆ ಎಂಬ ಅಹಂ ಹೊಂದಿದ ಪಂಡಿತರ ಮತ್ತು ಜ್ಞಾನಿಗಳ ಬಾಯಿಗೆ ಮೂಕತನದ ಬೀಗ ಜಡಿದು, ಕೇವಲ ತನ್ನ ಇಚ್ಛೆಯಂತೆ 'ಉಧೋ ಉಧೋ' ಎಂದು ಮಾತ್ರ ಜಯಘೋಷ ಮಾಡುವಂತೆ ಮಾಡುತ್ತಾಳೆ. ಸುಂದರ ಸ್ತ್ರೀಯರ ಆಕರ್ಷಣೆಯ ಸೀರೆಯನ್ನು ಸೆಳೆದು (ಲೌಕಿಕ ಕಾಮ ಮತ್ತು ಮೋಹದ ಆವರಣವನ್ನು ಕಳಚಿ), ಅವರಿಗೆ ವೈರಾಗ್ಯದ ಚಲ್ಲಣ ತೊಡಿಸಿ, ಬುಟ್ಟಿ ತುಂಬಾ ಅರಳನ್ನು (ಶುದ್ಧ ಜ್ಞಾನದ ಸಂಕೇತ) ತುಂಬಿಸುತ್ತಾಳೆ. ಕೈಯಲ್ಲಿ ಜ್ಞಾನದ 'ಕೋಲುದೀವಟಿಗೆ'ಯನ್ನು ಹಿಡಿದು ಇಡೀ ಜಗತ್ತನ್ನೇ ಬೆಳಗುವ ಆಕೆಯ ಮಾಯಾಜಾಲಕ್ಕೆ ಈ ಭೂಲೋಕದಲ್ಲಿ ಯಾರೂ ಸಾಟಿಯಿಲ್ಲ.

ಮೂರನೆಯ ನುಡಿಯಲ್ಲಿ ಶರೀಫರು ರೇಣುಕಾದೇವಿಯ ಪುರಾಣದ ಅತ್ಯಂತ ಗಹನವಾದ ಭಾಗವನ್ನು ಯೋಗ ವಿಜ್ಞಾನಕ್ಕೆ ಜೋಡಿಸುತ್ತಾರೆ. ರೇಣುಕೆಯು ನಿತ್ಯವೂ ತನ್ನ ಪತಿವ್ರತಾ ಶಕ್ತಿಯಿಂದ ಹರಿಯುವ ನೀರಿನಲ್ಲೇ ಮಳಲಿನ ಕೊಡವನ್ನು ಮಾಡಿ ನೀರು ತರುತ್ತಿದ್ದಳು ಮತ್ತು ಹಾವನ್ನೇ ಸಿಂಬಿ (ತಲೆಯ ಮೇಲಿನ ಸೀರುಂಡೆ) ಯಾಗಿ ಇಟ್ಟುಕೊಳ್ಳುತ್ತಿದ್ದಳು. ಒಮ್ಮೆ ಆಕೆ ಆಕಾಶದಲ್ಲಿ ಹಾರುತ್ತಿದ್ದ ಗಂಧರ್ವನ ರೂಪವನ್ನು ನೋಡಿ ಕ್ಷಣಕಾಲ ಮೋಹಗೊಂಡಾಗ ಆ ಮಳಲಿನ ಕೊಡ ಕರಗಿಹೋಗುತ್ತದೆ. ಇದರಿಂದ ಕೋಪಗೊಂಡ ಜಮದಗ್ನಿ ಮುನಿಯು ಆಕೆಯ ತಲೆಯನ್ನು ಕತ್ತರಿಸಲು ಆಜ್ಞಾಪಿಸುತ್ತಾನೆ. ಶರೀಫರು ಇದನ್ನು ಕೇವಲ ಒಂದು ಕಥೆಯಾಗಿ ನೋಡದೆ ಅತ್ಯಂತ ಆಳವಾದ ಯೋಗಿಕ ದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ. 'ಮಳಲಿನ ಕೊಡ' ಎಂದರೆ ಮನುಷ್ಯನ ಅಸ್ಥಿರವಾದ, ಮಣ್ಣಿನಿಂದಾದ ಭೌತಿಕ ಶರೀರ. 'ದುಂಡ ಹಾವು' ಎಂದರೆ ಬೆನ್ನುಮೂಳೆಯ ಮೂಲಾಧಾರದಲ್ಲಿ ಸುರುಳಿ ಸುತ್ತಿಕೊಂಡಿರುವ ಕುಂಡಲಿನಿ ಶಕ್ತಿ. ಸಾಧಕನ ಮನಸ್ಸು ಲೌಕಿಕ ಕಾಮ ಮತ್ತು ಆಸೆಗಳ ಕಡೆಗೆ ಹರಿದಾಗ ಯೋಗಿಕ ಸಾಧನೆ ಕರಗಿಹೋಗುತ್ತದೆ (ಕೊಡ ಒಡೆಯುತ್ತದೆ). ಜಮದಗ್ನಿಯ ಕೋಪವು ತೀವ್ರ ವೈರಾಗ್ಯದ ಸಂಕೇತ. ಆಕೆ ಸಂಸಾರದ ಗಂಡ–ಹೆಂಡತಿ ಎಂಬ ಮೋಹದ ಬಂಧನ ಬಿಡಿಸಿ, ಹಣೆ ತುಂಬಾ ಭಂಡಾರ (ಜ್ಞಾನದ ವಿಭೂತಿ) ಹೊರಿಸಿ, ಲೌಕಿಕ ಆಸೆಗಳ ಅಂತ್ಯವನ್ನು ಹಾಡಿ ಜ್ಞಾನದ 'ರಾಜ ಮುದಿ' (ಪರಮ ಹಿರಿಯ ಸ್ಥಿತಿ) ಆಗುತ್ತಾಳೆ.

ತತ್ವಪದದ ಕೊನೆಯಲ್ಲಿ ಶರೀಫರು ಈ ಸಮಗ್ರ ಮಾಯಾ ಶಕ್ತಿಯ ಭೀಕರತೆಯನ್ನು

ತಮ್ಮ ಸದ್ಗುರುಗಳಾದ ಶ್ರೀ ಗೋವಿಂದ ಭಟ್ಟರ ಚರಣಗಳಿಗೆ ತಂದು ಒಪ್ಪಿಸುತ್ತಾರೆ. ಚಿಕ್ಕ ಹಳ್ಳಿಯ (ಸೂಕ್ಷ್ಮ ನೆಲೆಯ) ದುರದುಂಡಿಯಾದ ಆಕೆ, ಕಕ್ಕಯ್ಯನಂತಹ ಪರಮ ಶರಣರಿಗೆ ಒಪ್ಪುವ ರಾಜಮಿಂಡಿ. ಸೊಕ್ಕಿದ ಜನರ ಮನಸ್ಸನ್ನು ಮುರಿದು, ಭಕ್ತರು ನೀಡುವ ಕರ್ಪೂರದ ಕಾಣಿಕೆಯನ್ನು ಸ್ವೀಕರಿಸುವವಳು. ಅಂತಿಮವಾಗಿ ಆಕೆ ಶಿಶುನಾಳದ ಮುಕ್ಕಣ್ಣನಾದ ಶಿವನೊಂದಿಗೆ ಒಂದಾಗಿ, ಅತ್ಯಂತ ಪ್ರೀತಿಯಿಂದ (ಅಕ್ಕರದಲಿ) ಗೋವಿಂದ ಭಟ್ಟರಿಗೆ ಒಲಿದು ನಿಂತಿದ್ದಾಳೆ. ಯಾವ ಮಾಯೆ ಇಡೀ ಜಗತ್ತನ್ನು ಕಾಡುತ್ತದೆಯೋ, ಆ ಮಾಯೆಯು ಸದ್ಗುರುವಿನ ಅಧೀನದಲ್ಲಿರುತ್ತದೆ. ಆದ್ದರಿಂದ ಗುರುವಿಗೆ ಶರಣಾದಾಗ ಆ ಮಾಯೆಯೇ ಮುಕ್ತಿಗೆ ದಾರಿಯಾಗುತ್ತದೆ ಎಂಬ ವೇದಾಂತ ಸತ್ಯ ಇಲ್ಲಿ ಅನಾವರಣಗೊಂಡಿದೆ.

ಎಲ್ಲಮ್ಮನ ಜಾತ್ರೆಗೆ ಬಲ್ಲವರು ಹೋಗಿ ನೋಡಲಿಬೇಕು
ಅಲ್ಲಮಪ್ರಭುವಿನ ಮೇಲಡಿ ದಟ್ಟಿನ ಚಳ್ಳುಗುರ್ಕೊಳ್ಳದ
ಕಲ್ಲೊಳು ಜನಿಸಿ ಬಲು ಚಲುವೆ ಎನಿಸಿ ಕಲಿಯುಗದೊಳು ಮೆರದ
ಸಲ್ಲಲಿತದಿ ಶರ್ವಾಣಿಯ ಜಾತ್ರೆಗೆ ॥ ಪ ॥
ಏಳುಕೊಳ್ಳ ಸರೋವರ ಒಂದು ಅಲ್ಲಿಳಿದಳೊ ಬಂದು
ತಾಳ ಜಾಗುಟಿ ಗೋಳಿಡುತಲಿ ಚೌಡಿಕೆ
ಮೇಳ ಸಹಿತ ಉಧೋ ಎಂಬುವ ಗಾನಕೆ
ಬಾಳ ವಿಲಾಸದಿ ಮೈಮೇಲೆ ರೋಮಾಂಚನವೇಳುವ ಮಹಾಂ
ಕಾಳಿಯ ಜಾತ್ರೆಗೆ ಬಲ್ಲವರು ಹೋಗಿ ನೋಡಲಿಬೇಕು ॥ 1 ॥ [3]

ಶರೀಫರ ಮೂರನೆಯ ತತ್ವಪದವಾದ 'ಎಲ್ಲಮ್ಮನ ಜಾತ್ರೆ'ಯು ಅವರ ಇಡೀ ಶಾಕ್ತ-ಯೋಗ ಸಿದ್ಧಾಂತದ ಮುಕುಟಮಣಿಯಾಗಿದೆ. ಶರೀಫರು ಬಾಹ್ಯವಾಗಿ ನಡೆಯುವ ಜಾತ್ರೆಯ ಉತ್ಸವವನ್ನು ಸಂಪೂರ್ಣವಾಗಿ ಅಂತರಂಗದಲ್ಲಿ ನಡೆಯುವ ಕುಂಡಲಿನಿ ಜಾಗೃತಿ ಮತ್ತು ಶಿವ-ಶಕ್ತಿ ಐಕ್ಯತೆಯ ಮಹಾಪ್ರಕ್ರಿಯೆಗೆ ಸಮೀಕರಿಸಿದ್ದಾರೆ.

ಶರೀಫರು ಪಲ್ಲವಿಯಲ್ಲೇ ಒಂದು ಪ್ರಬಲವಾದ ಶರತ್ತನ್ನು ವಿಧಿಸುತ್ತಾರೆ. "ಎಲ್ಲಮ್ಮನ ಜಾತ್ರೆಗೆ ಬಲ್ಲವರು ಹೋಗಿ ನೋಡಲಿಬೇಕು". ಇಲ್ಲಿ 'ಬಲ್ಲವರು' ಎಂದರೆ ಕಣ್ಣಿದ್ದವರೆಲ್ಲಾ ಅಲ್ಲ; ಅಧ್ಯಾತ್ಮಿಕ ಮತ್ತು ಯೋಗಿಕ ರಹಸ್ಯವನ್ನರಿತ ಪ್ರಬುದ್ಧ ಜ್ಞಾನಿಗಳು ಮಾತ್ರ. ಈ ಜಾತ್ರೆ ಕಣ್ಣಿಗೆ ಕಾಣುವ ಮನುಷ್ಯರ ಸಂತೆ ಅಲ್ಲ, ಇದು ಅಂತರಂಗದ ಪ್ರಜ್ಞೆಯ ವಿಕಾಸದ ಹಬ್ಬ.

ಶರೀಫರು ಎಲ್ಲಮ್ಮನ ಪ್ರಸಿದ್ಧ ಕ್ಷೇತ್ರವಾದ 'ಚಳ್ಳುಗುರ್ಕೊಳ್ಳ'ವನ್ನು (ಚುಳಚಿ-ಗುಡ್ಡ ಅಥವಾ ಉಗುರುಗೊಳ್ಳ) ಶೂನ್ಯಪೀಠಾಧೀಶರಾದ ಅಲ್ಲಮಪ್ರಭುಗಳ 'ಮೇಲಡಿ ದಟ್ಟು' (ಪರಮ ಜ್ಞಾನದ ಹೆಜ್ಜೆಗುರುತು) ಇರುವ ಕ್ಷೇತ್ರಕ್ಕೆ ಸಮೀಕರಿಸುತ್ತಾರೆ. ಇದು ಶೂನ್ಯ

ಸಂಪಾದನೆಯ ಜ್ಞಾನಮಾರ್ಗಕ್ಕೂ ಮತ್ತು ಶಾಕ್ತೇಯ ಸಿದ್ಧಾಂತದ ಶಕ್ತಿಮಾರ್ಗಕ್ಕೂ ಇರುವ ಅದ್ಭುತ ಸಮನ್ವಯತೆಯಾಗಿದೆ. ಶರ್ವಾಣಿ (ಪಾರ್ವತಿ/ಆದಿಶಕ್ತಿ) ಕಲ್ಲಿನಲ್ಲಿ ಮೂರ್ತಿಯಾಗಿ ಜನಿಸಿ, ಕಲಿಯುಗದಲ್ಲಿ ಮೆರೆಯುತ್ತಿರುವುದು ಕೇವಲ ಕಥೆಯಲ್ಲ; ಜಡವಾದ ಶರೀರದಲ್ಲೇ ಚೈತನ್ಯದ ಚಲುವಾಗಿ ಆಕೆ ಪ್ರಕಟಗೊಂಡಿದ್ದಾಳೆ ಎಂಬುದನ್ನು ಜ್ಞಾನಿಗಳು ಮಾತ್ರ ಅರಿಯಬಲ್ಲರು.

ಮೊದಲನೆಯ ನುಡಿಯಲ್ಲಿ ಬರುವ 'ಏಳುಕೊಳ್ಳ ಸರೋವರ ಒಂದು ಅಲ್ಲಿಳಿದಳೊ ಬಂದು' ಎಂಬ ಸಾಲು ಸಂಪೂರ್ಣವಾಗಿ ಯೋಗಶಾಸ್ತ್ರದ ರಹಸ್ಯವಾಗಿದೆ. ಎಲ್ಲಮ್ಮನ ಆರಾಧನೆಯಲ್ಲಿ 'ಏಳುಕೊಳ್ಳ' (ಸೌದತ್ತಿಯ ಕ್ಷೇತ್ರ) ಅತ್ಯಂತ ಪವಿತ್ರವಾದದ್ದು. ಶರೀಫರ ಯೋಗದೃಷ್ಟಿಯಲ್ಲಿ ಈ ಏಳುಕೊಳ್ಳಗಳು ಮನುಷ್ಯನ ದೇಹದಲ್ಲಿರುವ ಸಪ್ತ ಚಕ್ರಗಳ (ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಮತ್ತು ಸಹಸ್ರಾರ) ಸಂಕೇತವಾಗಿವೆ. ಆದಿಶಕ್ತಿಯಾದ ಕುಂಡಲಿನಿಯು ಮೂಲಾಧಾರದಿಂದ ಹೊರಟು ಈ 'ಏಳುಕೊಳ್ಳ'ಗಳೆಂಬ ಸರೋವರಗಳನ್ನು ದಾಟುತ್ತಾ ಮೇಲೆ ಏರುತ್ತದೆ. ತಾಳ, ಜಾಗುಟೆ, ಚೌಡಿಕೆಗಳ ಮೇಳದೊಂದಿಗೆ 'ಉಧೋ ಉಧೋ' ಎಂದು ಹಾಡುವಾಗ ಸಾಧಕನಿಗೆ ಉಂಟಾಗುವ 'ಮೈಮೇಲೆ ರೋಮಾಂಚನ'ವು ಕೇವಲ ಆವೇಶವಲ್ಲ; ಅದು ಕುಂಡಲಿನಿ ಶಕ್ತಿಯು ಸಹಸ್ರಾರವನ್ನು ಮುಟ್ಟಿದಾಗ ಶರೀರದಲ್ಲಿ ಉಂಟಾಗುವ ಪರಮಾನಂದದ ದಿವ್ಯ ಸ್ಪಂದನವಾಗಿದೆ. ಇಲ್ಲಿ 'ಉಧೋ' ಎಂದರೆ 'ಉತ್–ಭವಿಸು', ಎಂದರೆ ಎಲೈ ತಾಯಿಯೇ ನನ್ನೊಳಗೆ ಮೇಲೆ ಏಳು ಎಂಬ ಯೋಗಿಕ ಕರೆಯಾಗಿದೆ.

ಎರಡನೆಯ ನುಡಿಯಲ್ಲಿ ದೇವಿಯ ಬ್ರಹ್ಮಾಂಡ ವ್ಯಾಪಕತೆಯನ್ನು ಶರೀಫರು ವರ್ಣಿಸುತ್ತಾರೆ. ಆಕೆ ಕೇವಲ ತಲೆಯ ಮೇಲೆ ಜಗನ್ನಾಥನ ಮಂಡಲವನ್ನು (ಪೂಜೆಯ ಬುಟ್ಟಿ) ಹೊತ್ತವಳಲ್ಲ; ಆಕೆಯ ಶಕ್ತಿ ಇಡೀ ಬ್ರಹ್ಮಾಂಡಕ್ಕೆ, ನವಖಂಡಗಳಿಗೆ ತಾಕಿ ನಿಂತಿದೆ. ಆಕೆ ಶಿವನ 'ಸುಖ ತಾಂಡವ'ದ ತೇಜಸ್ಸನ್ನು ತನ್ನೊಳಗೆ ಅಡಗಿಸಿಕೊಂಡಿರುವ ಪವಿತ್ರ ಭರಣಿ (ಕರಂಡ). ಎಲ್ಲಮ್ಮನ ಪೂಜೆಯಲ್ಲಿ 'ಮುದಿ ಹುಣ್ಣಿಮೆ' (ಮಾರ್ಗಶಿರ ಮಾಸದ ಹಿರಿಯ ಹುಣ್ಣಿಮೆ) ಅತ್ಯಂತ ಶ್ರೇಷ್ಠವಾದುದು. ಅಧ್ಯಾತ್ಮದಲ್ಲಿ 'ಹುಣ್ಣಿಮೆ' ಎಂದರೆ ಚಂದ್ರನು ಸಂಪೂರ್ಣನಾಗುವ ಸ್ಥಿತಿ, ಅಂದರೆ ಸಾಧಕನ ಮನಸ್ಸು ಜ್ಞಾನದಿಂದ ಸಂಪೂರ್ಣವಾಗಿ ಪ್ರಕಾಶಮಾನವಾಗುವ 'ಸಹಸ್ರಾರ ಸ್ಥಿತಿ'. ಈ ಸ್ಥಿತಿಯನ್ನು ತಲುಪಿದಾಗ ಲೌಕಿಕ ಮಾಯೆಯು 'ಮುದಿ'ಯಾಗುತ್ತದೆ (ಶಕ್ತಿ ಕಳೆದುಕೊಳ್ಳುತ್ತದೆ) ಮತ್ತು ಕೇವಲ ಆನಂದದ ತೇಜಸ್ಸು ಮಾತ್ರ ಉಳಿಯುತ್ತದೆ.

ಮೂರನೆಯ ನುಡಿಯಲ್ಲಿ ತಾಯಿಯ ಆಜ್ಞೆಯಂತೆ ಮಗ ಪರಶುರಾಮನು ತಾಯಿಯ 'ಗೋಣು' (ಕುತ್ತಿಗೆ) ಕತ್ತರಿಸಿದ ಕಥೆಯನ್ನು ಶರೀಫರು ಅಹಂಕಾರದ ನಾಶಕ್ಕೆ ಹೋಲಿಸುತ್ತಾರೆ. 'ಗೋಣು ಕೊಯ್ಯುವುದು' ಎಂದರೆ ತಲೆಯಲ್ಲಿರುವ ಲೌಕಿಕ ಆಲೋಚನೆಗಳನ್ನು, ಅಹಂಭಾವವನ್ನು ನಿಲ್ಲಿಸಿ, ಉನ್ಮನಿ ಅಥವಾ ಅಮನಸ್ಕ ಸ್ಥಿತಿಗೆ ಹೋಗುವುದು. ಈ ಅದ್ಭುತ ಯೋಗಿಕ ಕ್ರಿಯೆಯ ಮೂಲಕ ಆಕೆ ಅಹಂಕಾರದ 'ಬಣ' ಹೂಡಿದ್ದ ಮುನಿಗಳನ್ನೆಲ್ಲಾ ದಿಗ್ಭ್ರಮೆಗೊಳಿಸಿ 'ಮೌನ' ಸ್ಥಿತಿಗೆ (ಸಮಾಧಿ ಸ್ಥಿತಿಗೆ) ತಳ್ಳಿದ ಜಾಣೆಯಾಗಿದ್ದಾಳೆ.

ಕೊನೆಯ ನುಡಿಯಲ್ಲಿ ಬರುವ "ಋಷಿಗಳಿಗೆಲ್ಲ ಬಂಗಿ ಡಿ ರಸವನು ಕುಡಿಸಿ ಜಗವನು ಸಲುಹಿದ" ಎಂಬ ಸಾಲು ಅತ್ಯಂತ ಗಹನವಾದ ರಹಸ್ಯವನ್ನು ಹೊಂದಿದೆ. ತತ್ವಪದಗಳಲ್ಲಿ 'ಬಂಗಿ' ಅಥವಾ 'ಕಳ್ಳು' ಎಂದರೆ ಲೌಕಿಕ ಮಾದಕ ವಸ್ತುವಲ್ಲ; ಅದು ಸಹಸ್ರಾರ ಕಮಲದಿಂದ ಸ್ರವಿಸುವ 'ಅಮೃತ ರಸ'. ಯೋಗಿಗಳು ತೀವ್ರ ಧ್ಯಾನಸ್ಥರಾದಾಗ ಅವರ ತಲೆಯಿಂದ ಸ್ರವಿಸುವ ಈ ಆನಂದದ ರಸವನ್ನು ಕುಡಿದು ಅವರು ಬಾಹ್ಯ ಪ್ರಪಂಚದ ಅರಿವಿಲ್ಲದೆ ಮೈಮರೆಯುತ್ತಾರೆ. ದೇವಿಯು ತನ್ನ ಸಾಧಕರಿಗೆ ಈ ಬ್ರಹ್ಮಾನಂದದ ರಸವನ್ನು ಉಣಿಸಿ ಜಗತ್ತನ್ನು ಸಲಹುತ್ತಿದ್ದಾಳೆ. ಆಕೆ ಬೇರೆ ಯಾರೂ ಅಲ್ಲ, ಇಡೀ ಜಗತ್ತಿನ ಒಡೆಯನಾದ ಶಿಶುನಾಳಾಧೀಶನ (ಪರಶಿವನ) ಪ್ರೀತಿಯ ಮಡದಿಯಾಗಿದ್ದಾಳೆ. ಈ ಮೂಲಕ ಶರೀಫರು ಇಡೀ ಯೋಗ ಸಾಧನೆಯನ್ನು ಜನಸಾಮಾನ್ಯರ ಹಬ್ಬದ ರೂಪದಲ್ಲಿ ಮಂಡಿಸಿದ್ದಾರೆ.

ಸಂತ ಶಿಶುನಾಳ ಶರೀಫರ ಈ ಮೂರೂ ತತ್ವಪದಗಳನ್ನು ಒಟ್ಟಾಗಿ ಸಮನ್ವಯ ಮತ್ತು ಸಮಾಜದ ಸಹಬಾಳ್ವೆಯ ದೃಷ್ಟಿಯಿಂದ ಅವಲೋಕಿಸಿದಾಗ, ನಮಗೆ ಅವರೊಬ್ಬ ಜಾಗತಿಕ ಮಟ್ಟದ ವಿಶ್ವಮಾನವನಾಗಿ ಕಂಗೊಳಿಸುತ್ತಾರೆ. ಅವರ ಕಾವ್ಯ ಮೀಮಾಂಸೆ ಕೇವಲ ವೈಯಕ್ತಿಕ ಮುಕ್ತಿಗಾಗಿಯೋ ಅಥವಾ ಒಂದು ನಿರ್ದಿಷ್ಟ ಪೂಜಾ ಪದ್ಧತಿಯನ್ನು ಎತ್ತಿಹಿಡಿಯುವುದಕ್ಕಾಗಿಯೋ ಸೀಮಿತವಾದುದಲ್ಲ; ಬದಲಿಗೆ ಅದು ಸಮಾಜದ ಕಣ್ಣು ತೆರೆಸುವ, ಭೇದ–ಭಾವಗಳ ಗೋಡೆಗಳನ್ನು ಉರುಳಿಸುವ ಮತ್ತು ಸಾಂಸ್ಕೃತಿಕ ಸಾಮರಸ್ಯವನ್ನು ಬಿತ್ತಿ ಬೆಳೆಸುವ ಸಾಮಾಜಿಕ ಸಹಬಾಳ್ವೆಯ ಮಹಾಪ್ರಣಾಳಿಕೆಯಾಗಿದೆ.

ಶರೀಫರ ಅಂತರಂಗದಲ್ಲಿದ್ದ ಸೂಫಿ ಸಂತತ್ವ ಮತ್ತು ಅವರ ಸದ್ಗುರು ಗೋವಿಂದ ಭಟ್ಟರಿಂದ ದಕ್ಕಿದ ಶರಣ ಹಾಗೂ ವೇದಾಂತ ತತ್ವಗಳ ದಿವ್ಯ ಸಂಗಮವು ಪ್ರಸ್ತುತ ಮೂರೂ ಕೃತಿಗಳಲ್ಲಿ ಪ್ರಖರವಾದ ಸಾಮಾಜಿಕ ಸಮನ್ವಯದ ರೂಪದಲ್ಲಿ ಅನಾವರಣಗೊಂಡಿದೆ. ಈ ಮೂರು ತತ್ವಪದಗಳು ಮೇಲ್ನೋಟಕ್ಕೆ ಒಬ್ಬ ಪ್ರಾದೇಶಿಕ ದೇವತೆಯ ಆರಾಧನೆಯಂತೆ ಕಂಡರೂ, ಆಳಕ್ಕೆ ಇಳಿದಾಗ ಅವು ಮನುಷ್ಯನಲ್ಲಿರುವ ಜಾತಿ, ವರ್ಗ, ಲಿಂಗ ಮತ್ತು ಅಹಂಕಾರದ ಮಿತಿಗಳನ್ನು ಮೀರಿದ ವಿಶ್ವಮಾನವ ಪ್ರಜ್ಞೆಯನ್ನು ಜಾಗೃತಗೊಳಿಸುತ್ತವೆ.

ಮೊದಲನೆಯ ತತ್ವಪದದಲ್ಲಿ ಶರೀಫರು ಸೃಷ್ಟಿಯ ಆದಿಶಕ್ತಿಯಾದ ಎಲ್ಲಮ್ಮನನ್ನು ನಾಲ್ಕು ಯುಗಗಳ ಐತಿಹಾಸಿಕ ವಿನ್ಯಾಸದಲ್ಲಿ ತಂದು ನಿಲ್ಲಿಸುತ್ತಾರೆ. ಕೃತಯುಗದ ಪಾರ್ವತಿಯಾಗಿ, ತ್ರೇತಾಯುಗದ ಸೀತೆಯಾಗಿ, ದ್ವಾಪರದ ದ್ರೌಪದಿಯಾಗಿ ಮತ್ತು ಕಲಿಯುಗದ ರೇಣುಕೆಯಾಗಿ ಆ ತಾಯಿ ವಿರಾಜಮಾನಳಾಗಿದ್ದಾಳೆ ಎಂದು ವರ್ಣಿಸುವ ಮೂಲಕ, ಶರೀಫರು ಇಡೀ ಜಗತ್ತಿನ ವೈವಿಧ್ಯತೆಯು ಒಂದೇ ತಾಯಿಯ ಗರ್ಭದಿಂದ ಮೂಡಿಬಂದಿದೆ ಎಂಬ ಏಕತ್ವದ ತತ್ವವನ್ನು ಸಾರುತ್ತಾರೆ. ಒಬ್ಬ ಮುಸ್ಲಿಂ ಹಿನ್ನೆಲೆಯ ಸೂಫಿ ಸಂತನು ದೇವಿಯನ್ನು ತನ್ನ 'ಪ್ರಿಯ ಮಾತೆ' ಎಂದು ಅಪ್ಪಿಕೊಳ್ಳುವಲ್ಲಿಯೇ ಭಾರತೀಯ ಅಧ್ಯಾತ್ಮ ಲೋಕದ ಪರಮೋಚ್ಚ ಸಹಬಾಳ್ವೆಯ ದರ್ಶನವಿದೆ. ಈ ತತ್ವಪದವು ಧರ್ಮಗಳ ನಡುವಿನ ಕೃತಕ ಗೋಡೆಗಳನ್ನು ಕಳಚಿ, ಪರಮಾತ್ಮನ ಕರುಣೆ ಇಡೀ ಧರಣಿಯಲ್ಲಿ ವಿಸ್ತರಿಸಿದೆ ಎಂಬುದನ್ನು ಸಾರುವ ಮೂಲಕ ಸಮಾಜಕ್ಕೆ ಪ್ರೇಮ ಮತ್ತು ಕಾರುಣ್ಯದ ಮಹತ್ವವನ್ನು ಬೋಧಿಸುತ್ತದೆ. ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಮೊದಲು ಪರಸ್ಪರರ ನಂಬಿಕೆಗಳ ಬಗ್ಗೆ ಗೌರವ ಮತ್ತು ಕರುಣೆ ಇರಬೇಕು ಎಂಬುದು ಶರೀಫರ ಮೂಲ ಆಶಯವಾಗಿದೆ.

ಆದರೆ, ಕೇವಲ ಕರುಣೆಯ ಮಾತಿನಿಂದಷ್ಟೇ ಸಮಾಜದ ತಾರತಮ್ಯಗಳು ದೂರವಾಗುವುದಿಲ್ಲ ಎಂಬುದನ್ನು ಅರಿತಿದ್ದ ಶರೀಫರು, ತಮ್ಮ ಎರಡನೆಯ ತತ್ವಪದದಲ್ಲಿ ಮಾಯೆಯ ರೌದ್ರ ರೂಪವನ್ನು ಅನಾವರಣಗೊಳಿಸುತ್ತಾರೆ. ಸಮಾಜದಲ್ಲಿ ಸಹಬಾಳ್ವೆಗೆ ಅತ್ಯಂತ ದೊಡ್ಡ ಕಂಟಕವೆಂದರೆ ಅದು ಮನುಷ್ಯನ ಅಧಿಕಾರ, ಸಂಪತ್ತು, ಜಾತಿ ಮತ್ತು ಲಿಂಗದ ಅಹಂಕಾರ. ಈ ಅಹಂಕಾರವನ್ನು ಮುರಿಯಲು ಶರೀಫರು ದೇವಿಯನ್ನು 'ಬೇವನುಡಿಸುವ', 'ಬಾಳ ಮಂದಿ ಬತ್ತಲ ಮಾಡುವ' ಮತ್ತು 'ಬಲ್ಲಿದವರ ಬೆನ್ನಿಲೆ ಸೀಳಿ ಬಾಯಿಗೆ ಬೀಗ ಜಡಿಯುವ' ಉಗ್ರ ಭೈರವಿಯನ್ನಾಗಿ ಚಿತ್ರಿಸುತ್ತಾರೆ. ಮನುಷ್ಯನು ತಾನು ಗಳಿಸಿದ ಸುಳ್ಳು ಅಂತಸ್ತುಗಳ ಉಡುಪನ್ನು ಕಳಚಿ ಬೇವನುಟ್ಟು ನಿಂತಾಗ ಮಾತ್ರ ಅವನಿಗೆ ಸಹಜ ಮಾನವೀಯತೆಯ ದರ್ಶನವಾಗುತ್ತದೆ. ಶ್ರೇಷ್ಠ ಹಾಗೂ ಕಿರೀಟಧಾರಿಗಳಾಗಿದ್ದ ಬಲ್ಲಿದವರನ್ನು ಭಿಕ್ಷುಕರನ್ನಾಗಿ ಮಾಡುವ ದೇವಿಯ ಈ ಲೀಲೆಯು, ಪ್ರಕೃತಿಯ ಮತ್ತು ದೈವತ್ವದ ಮುಂದೆ ಎಲ್ಲರೂ ಸಮಾನರು ಎಂಬ ಕಟು ಸಾಮಾಜಿಕ ಸತ್ಯವನ್ನು ಎತ್ತಿಹಿಡಿಯುತ್ತದೆ. ಸುಂದರ ಸ್ತ್ರೀಯರ ಆಕರ್ಷಣೆಯ ಸೀರೆಯನ್ನು ಸೆಳೆದು ಅವರಿಗೆ ವೈರಾಗ್ಯದ ಚಲ್ಲಣ ತೊಡಿಸುವುದು ಹಾಗೂ ಮಳಲಿನ ಕೊಡದಲ್ಲಿ ನೀರು ತರುವ ರೂಪಕಗಳು ಈ ಭೌತಿಕ ಶರೀರದ ಮತ್ತು ಸಾಮಾಜಿಕ ಸುಖಗಳ ನಶ್ವರತೆಯನ್ನು ನೆನಪಿಸುತ್ತವೆ. ದೇಹವೇ ನಶ್ವರವಾಗಿರುವಾಗ, ಅದರ ಮೇಲೊಂದು ಜಾತಿ ಮತ್ತು ವರ್ಗದ ಹಣೆಪಟ್ಟಿ ಹಚ್ಚಿ ಸಹೋದರ ಮಾನವರನ್ನು ದೂರವಿಡುವುದು ಎಷ್ಟು ದೊಡ್ಡ ಮೂರ್ಖತನ ಎಂಬುದನ್ನು

ಶರೀಫರು ಇಲ್ಲಿ ಮಾರ್ಮಿಕವಾಗಿ ಪ್ರಶ್ನಿಸುತ್ತಾರೆ. ಅಹಂಕಾರದ ಸೊಕ್ಕನ್ನು ಮುರಿದು, ಕಳ್ಳ–ಸುಳ್ಳರಿಗೂ ಒಲಿಯುವ ದೇವಿಯ ಈ ಗುಣವು, ಸಮಾಜದಲ್ಲಿ ಪತಿತರಾದವರನ್ನು ಮತ್ತು ಅಂಚಿಗೆ ತಳ್ಳಲ್ಪಟ್ಟವರನ್ನು ಮುಖ್ಯವಾಹಿನಿಗೆ ತರುವ 'ಸಾಮಾಜಿಕ ಸಮಾನತೆ'ಯ ಸಂಕೇತವಾಗಿದೆ.

ಈ ಸಮನ್ವಯತೆಯ ಪರಮಾವಧಿ ನಮಗೆ ದಕ್ಕುವುದು ಮೂರನೆಯ ತತ್ವಪದವಾದ 'ಎಲ್ಲಮ್ಮನ ಜಾತ್ರೆ'ಯಲ್ಲಿ. ಶರೀಫರು ಇಲ್ಲಿ ಲೌಕಿಕವಾಗಿ ನಡೆಯುವ ಜಾತ್ರೆಯ ಆಚರಣೆಗಳನ್ನು ಸಂಪೂರ್ಣವಾಗಿ ಅಂತರಂಗದ ಕುಂಡಲಿನಿ ಯೋಗ ಮತ್ತು ಶೂನ್ಯ ಸಿದ್ಧಾಂತಕ್ಕೆ ಸಮೀಕರಿಸುತ್ತಾರೆ. ಜಾತ್ರೆಯ ಆರಂಭದಲ್ಲೇ ಅವರು ಜಗದ್ಗುರು ಅಲ್ಲಮಪ್ರಭುಗಳ 'ಮೇಲಡಿದಟ್ಟಿ'ಯನ್ನು ಚಳ್ಳುಗುರ್ಕೊಳ್ಳದ ಕ್ಷೇತ್ರಕ್ಕೆ ಜೋಡಿಸುವ ಮೂಲಕ ಶಾಕ್ತೇಯ ಶಕ್ತಿಮಾರ್ಗ ಹಾಗೂ ವೀರಶೈವದ ಜ್ಞಾನಮಾರ್ಗಗಳ ನಡುವೆ ಅಪೂರ್ವ ಸಮನ್ವಯತೆಯನ್ನು ಸಾಧಿಸುತ್ತಾರೆ. ಜಾತ್ರೆ ಎನ್ನುವುದು ಸಮಾಜದ ಎಲ್ಲಾ ವರ್ಗದ ಜನರೂ ಯಾವುದೇ ಭೇದವಿಲ್ಲದೆ ಒಂದೆಡೆ ಸೇರುವ ಸಾಂಸ್ಕೃತಿಕ ನೆಲೆ. ಆದರೆ ಶರೀಫರು ಇದನ್ನು 'ಬಲ್ಲವರು ಹೋಗಿ ನೋಡಲಿಬೇಕು' ಎನ್ನುತ್ತಾರೆ. ಅಂದರೆ, ಕೇವಲ ಬಾಹ್ಯದ ಆಚರಣೆ, ಮೂಢನಂಬಿಕೆ ಮತ್ತು ಪ್ರಾಣಿಬಲಿಗಳಿಗೆ ಸೀಮಿತವಾಗದೆ, ಜಾತ್ರೆಯ ಹಿಂದಿರುವ ಅಂತರಂಗದ ಶುದ್ಧೀಕರಣವನ್ನು ಜ್ಞಾನಿಗಳು ಅರ್ಥಮಾಡಿಕೊಳ್ಳಬೇಕು. ದೇಹದ ಸಪ್ತಚಕ್ರಗಳೆಂಬ 'ಏಳುಕೊಳ್ಳ'ಗಳನ್ನು ದಾಟಿ ಪ್ರಜ್ಞೆ ಎದ್ದಾಗ ಉಂಟಾಗುವ ರೋಮಾಂಚನ ಮತ್ತು ಸಹಸ್ರಾರದಲ್ಲಿ ಮೂಡುವ 'ಮುದಿಹುಣ್ಣಿಮೆ'ಯ ಪ್ರಕಾಶವು ಮನುಷ್ಯನೊಳಗಿನ ಅಜ್ಞಾನದ ಕತ್ತಲೆಯನ್ನು ಸುಟ್ಟು ಹಾಕುತ್ತದೆ. ಜಮದಗ್ನಿಯ ಆಜ್ಞೆಯಂತೆ ರೇಣುಕೆಯ 'ಗೋಣು ಕೊಯ್ಯುವ' ಪ್ರಸಂಗವನ್ನು ಶರೀಫರು ಅಹಂಕಾರದ ಶಿರಚ್ಛೇದನಕ್ಕೆ ಹೋಲಿಸುತ್ತಾರೆ. ಸಮಾಜದಲ್ಲಿ ಯಾವಾಗ ವೈಯಕ್ತಿಕ ಅಹಂ ಕರಗಿಹೋಗುತ್ತದೆಯೋ, ಆಗ ಭಿನ್ನಾಭಿಪ್ರಾಯಗಳೆಲ್ಲವೂ ಮುಗಿದು ಮೌನ ಹಾಗೂ ಶಾಂತಿ ನೆಲೆಸುತ್ತದೆ.

ತತ್ವಪದದ ಕೊನೆಯಲ್ಲಿ ಬರುವ ಋಷಿಗಳಿಗೆಲ್ಲಾ 'ಬಂಗಿ ರಸ' ಉಣಿಸುವ ರೂಪಕವು ಲೌಕಿಕ ಭೇದಗಳನ್ನು ಮರೆಸುವ ಬ್ರಹ್ಮಾನಂದದ ಸಂಕೇತವಾಗಿದೆ. ಈ ಆನಂದದ ರಸವನ್ನು ಸವಿದ ಸಾಧಕನಿಗೆ ತಾನು, ತನ್ನ ಧರ್ಮ, ತನ್ನ ಜಾತಿ ಎಂಬ ಸಣ್ಣತನದ ಅರಿವಿರುವುದಿಲ್ಲ; ಅವನು ಇಡೀ ಜಗತ್ತನ್ನು ತನ್ನದಾಗಿಸಿಕೊಳ್ಳುತ್ತಾನೆ. ಈ ಮೂರೂ ಪದಗಳ ಸಮನ್ವಯ ನೋಟವು ನಮಗೆ ಕಲಿಸುವುದೇನೆಂದರೆ, ಸೃಷ್ಟಿಯ ಮೂಲಶಕ್ತಿಯು ಒಂದೇ ಆಗಿದ್ದು, ಲೌಕಿಕದ ಅಹಂಕಾರಗಳನ್ನು ಕಳಚಿಹಾಕಿದಾಗ ಮಾತ್ರ ಮನುಷ್ಯನು ಅಂತರಂಗದ ಮಹಾಜಾತ್ರೆಯಲ್ಲಿ ಪಾಲ್ಗೊಳ್ಳಲು ಸಾಧ್ಯ. ಶರೀಫರು ತಮ್ಮ ಕಾವ್ಯದುದ್ದಕ್ಕೂ ಹೆಣೆದಿರುವ

ಈ ದಾರ್ಶನಿಕ ಎಳೆಗಳು ಇಂದಿನ ಧಾರ್ಮಿಕ ಅಸಹಿಷ್ಣುತೆ ಮತ್ತು ಸಾಮಾಜಿಕ ಕಂದಕಗಳಿಂದ ತತ್ತರಿಸುತ್ತಿರುವ ಆಧುನಿಕ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿವೆ. ಕಣ್ಣಿಗೆ ಕಾಣುವ ಪ್ರಕೃತಿಯೇ ದೇವಿಯ ಸ್ವರೂಪ ಮತ್ತು ನಮ್ಮೊಳಗಿರುವ ಆತ್ಮನೇ ಆಕೆಯ ಚೈತನ್ಯ ಎಂದು ಭಾವಿಸಿದಾಗ ಸಮಾಜದಲ್ಲಿ ಹಿಂಸೆ ಅಳಿದು, ಪರಸ್ಪರ ಪ್ರೇಮ, ಸಾಮರಸ್ಯ ಹಾಗೂ ಸಹಬಾಳ್ವೆಯ ದಿವ್ಯ ಸಾಮ್ರಾಜ್ಯವು ಉದಯಿಸುತ್ತದೆ ಎಂಬ ಉದಾತ್ತ ಸಂದೇಶವನ್ನು ಸಂತ ಶಿಶುನಾಳ ಶರೀಫರು ಅತ್ಯಂತ ಕಲಾತ್ಮಕವಾಗಿ ಜಗತ್ತಿಗೆ ಉಣಿಸಿದ್ದಾರೆ.

ಸಂತ ಶಿಶುನಾಳ ಶರೀಫರ ಎಲ್ಲಮ್ಮ ಕಾವ್ಯ ಮೀಮಾಂಸೆಯ ಈ ಸುದೀರ್ಘ ಅಧ್ಯಯನವು ನಮಗೆ ಕೇವಲ ಒಂದು ಧಾರ್ಮಿಕ ವಿಶ್ಲೇಷಣೆಯನ್ನು ನೀಡದೆ, ಆಧುನಿಕ ಸಮಾಜದ ಮರುರಚನೆಗೆ ಬೇಕಾದ ದಿವ್ಯ ದರ್ಶನವನ್ನು ಒದಗಿಸುತ್ತದೆ. ಶರೀಫರು ತಮ್ಮ ಮೂರು ತತ್ವಪದಗಳ ಮೂಲಕ ಕಟ್ಟಿಕೊಟ್ಟಿರುವ ವೈಚಾರಿಕ ಲೋಕವು ಇಂದಿನ ಪರಿಸರ ನಾಶ, ಜಾತೀಯತೆ, ಧಾರ್ಮಿಕ ಅಂಧಶ್ರದ್ಧೆ ಮತ್ತು ಮಾನಸಿಕ ಕ್ಲೇಶಗಳಿಂದ ತತ್ತರಿಸುತ್ತಿರುವ ಮನುಕುಲಕ್ಕೆ ಅತ್ಯಂತ ಪ್ರಸ್ತುತವಾಗಿದೆ.

ಮೊದಲನೆಯ ತತ್ವಪದದಲ್ಲಿ ಅವರು ಸಾರಿದ 'ವಿಶ್ವ ಕಾರುಣ್ಯ'ದ ತತ್ವವು ಪರಿಸರ ಪ್ರಜ್ಞೆಗೂ ಅನ್ವಯವಾಗುತ್ತದೆ. ಪ್ರಕೃತಿಯ ಪ್ರತಿ ಕಣದಲ್ಲೂ, ಮಣ್ಣಿನಲ್ಲಿ, ನೀರಿನಲ್ಲಿ ದೇವಿಯ ಅಸ್ತಿತ್ವವಿದೆ ಎಂದು ಭಾವಿಸಿದಾಗ ಪರಿಸರದ ಮೇಲಿನ ದೌರ್ಜನ್ಯ ನಿಲ್ಲುತ್ತದೆ. ಎರಡನೆಯ ತತ್ವಪದದಲ್ಲಿ ಅವರು ಸಾರಿದ 'ಅಹಂಕಾರ ಭಂಗ'ದ ತತ್ವವು ಮನುಷ್ಯನನ್ನು ತನ್ನ ಮಿತಿಗಳ ಕಡೆಗೆ ಮುಖಮಾಡುವಂತೆ ಮಾಡುತ್ತದೆ. ತಾನು ಗಳಿಸಿದ ಅಧಿಕಾರ ಮತ್ತು ಸಂಪತ್ತು ಕೇವಲ ತಾತ್ಕಾಲಿಕ, ದೇವಿಯ ಮಾಯೆಯ ಮುಂದೆ ಇವೆಲ್ಲವೂ ತೃಣ ಸಮಾನ ಎಂದು ಅರಿತಾಗ ಸಮಾಜದಲ್ಲಿ ಶೋಷಣೆ ತಾನಾಗಿಯೇ ಕಡಿಮೆಯಾಗುತ್ತದೆ. ಮೂರನೆಯ ತತ್ವಪದದಲ್ಲಿ ಅವರು ಚಿತ್ರಿಸಿದ 'ಅಂತರಂಗದ ಜಾತ್ರೆ'ಯು ಬಾಹ್ಯದ ಆಡಂಬರಗಳಿಗಿಂತ ಅಂತರಂಗದ ಶುದ್ಧೀಕರಣವೇ ಶ್ರೇಷ್ಠವಾದುದು ಎಂಬುದನ್ನು ಸಾಬೀತುಪಡಿಸುತ್ತದೆ.

ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಮನುಷ್ಯರನ್ನು ಒಡೆಯುವ ಇಂದಿನ ರಾಜಕಾರಣಕ್ಕೆ ಶರೀಫರ ಬದುಕು ಮತ್ತು ಕಾವ್ಯವೇ ಅತ್ಯಂತ ಪ್ರಬಲವಾದ ಉತ್ತರವಾಗಿದೆ. ಒಬ್ಬ ಸೂಫಿ ಮುಸ್ಲಿಂ ಸಂತನು ಶೈವ ಮತ್ತು ಶಾಕ್ತೇಯ ದರ್ಶನದ ಪರಮೋಚ್ಚ ರಹಸ್ಯಗಳನ್ನು ತನ್ನದಾಗಿಸಿಕೊಂಡು, ಜಗದಂಬೆಯನ್ನು ತನ್ನ ತಾಯಿ ಎಂದು ಆರಾಧಿಸಿದ್ದು ಜಾಗತಿಕ ಸಾಹಿತ್ಯ ಲೋಕದಲ್ಲೇ ಒಂದು ವಿಸ್ಮಯಕರ ಸಂಗತಿಯಾಗಿದೆ. ಶರೀಫರ ಈ ತತ್ವಪದಗಳು ಕೇವಲ ಹಾಡಿ ನಲಿಯುವ ಕೀರ್ತನೆಗಳಾಗಿ ಉಳಿಯದೆ, ಮಾನವನ ಪ್ರಜ್ಞೆಯನ್ನು ಭೇದ–ಭಾವಗಳಿಂದ ಮುಕ್ತಗೊಳಿಸಿ, ವಿಶ್ವಾತ್ಮಕ ಸಹೋದರತ್ವದ ಮತ್ತು ಸಹಬಾಳ್ವೆಯ ದಾರಿಯಲ್ಲಿ

ಮುನ್ನಡೆಸುವ ದಿವ್ಯ ಮಾರ್ಗದರ್ಶಿಗಳಾಗಿವೆ. ಅವರ ಈ ಕಾವ್ಯದ ಆಳವನ್ನು ಅರಿತು ಅಳವಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ನಿಜವಾದ ಸಾಮರಸ್ಯದ ಮಹಾಜಾತ್ರೆ ಸಿದ್ಧವಾಗುತ್ತದೆ.

ಆಕರಗಳು :

1. https://kagapa.com/kannada-tattvapada/ 30
2. https://kagapa.com/kannada-tattvapada/ 29
3. https://kagapa.com/kannada-tattvapada/ 28

ಅಧ್ಯಯನ ಕೃತಿಗಳು :

1. ತತ್ವಪದ ಸಾಹಿತ್ಯ, ಸುರೇಶ ಹನಗಂಡಿ., ಕರ್ನಾಟಕ ಸಾಹಿತ್ಯ ಅಕಾಡೆಮಿ., ಬೆಂಗಳೂರು, 2022.
2. ತತ್ವಪದ ಸಾಹಿತ್ಯದ ಭಾಷೆ: ಒಂದು ಅಧ್ಯಯನ., ವಿಪ್ಲವಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.
3. ಚಿಕ್ಕಣ್ಣ ಕಾ.ತ.., ನಟರಾಜ ಬೂದಾಳು (ಪ್ರ.ಸಂ)., ಕರ್ನಾಟಕ ಸಮಗ್ರ ತತ್ವಪದ ಸಾಹಿತ್ಯದ ಜನಪ್ರಿಯ ಸಂಪುಟ ಮಾಲೆ., ಸಂಪುಟ 1ರಿಂದ 33., ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ., ಕನ್ನಡ ಭವನ, ಕರ್ನಾಟಕ ಸರ್ಕಾರ., ಬೆಂಗಳೂರು., 2017.

***